ಡಿ ಎಸ್ ಲಿಂಗರಾಜು

ತುಮಕೂರು ಜಿಲ್ಲೆ ತುರುವೇಕೆರೆ ತಾಲೂಕು, ಮಾಯಸಂದ್ರ ಗ್ರಾಮದವರು. ತಂದೆ : ಡಿ ಎಸ್ ಶಿವರಾಜೇಗೌಡ, ತಾಯಿ : ಬಿ ಕೆ ಜಯಮ್ಮ. ಮಾಯಸಂದ್ರ, ತುರುವೇಕೆರೆ, ಕೋಲಾರ ಮತ್ತು ಚುಂಚನಗಿರಿಯಲ್ಲಿ ವಿದ್ಯಾಭ್ಯಾಸ. ಮೈಸೂರು ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ ಎ ಪದವಿ (1985). ಕೆಲಕಾಲ ಕುಣಿಗಲ್ ತಾಲೂಕು ಎಡೆಯೂರಿನ ಕಾಲೇಜೊಂದರಲ್ಲಿ (1985–1991) ಇಂಗ್ಲಿಷ್ ಉಪನ್ಯಾಸಕರಾಗಿ ಸೇವೆ. ನಂತರ ಕೆಎಎಸ್ ಗೆಜೆಟೆಡ್ ಪರೀಕ್ಷೆಯಲ್ಲಿ ಆಯ್ಕೆಯಾಗಿ 1991 ರಿಂದ ಕರ್ನಾಟಕ ಸರ್ಕಾರದ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕಾರ್ಯ ನಿರ್ವಹಣೆ. ಪ್ರಸ್ತುತ ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತರಾಗಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ತುಷಾರ ಮಾಸ ಪತ್ರಿಕೆಯಲ್ಲಿ ದೇಶ–ವಿದೇಶಗಳ ಪರಿಚಯ ಮಾಲೆಯಲ್ಲಿ ವಿವಿಧ ದೇಶಗಳ ಮತ್ತು ನಾಗರೀಕತೆಗಳ ಕುರಿತ ಸುಮಾರು 40ಕ್ಕೂ ಹೆಚ್ಚು ವಿಸ್ತೃತ ಲೇಖನಗಳು ಪ್ರಕಟಗೊಂಡಿವೆ. ತರಂಗ ಮತ್ತು ಕರ್ಮವೀರ ಸಾಪ್ತಾಹಿಕಗಳಲ್ಲಿ ನಿಯಮಿತವಾಗಿ ವಿವಿಧ ವಿಷಯಗಳ ಬಗ್ಗೆ ಮುಖಪುಟ ಲೇಖನಗಳು ಪ್ರಕಟವಾಗುತ್ತಿವೆ.

‘ಮಾಯಾಲೋಕಕ್ಕೊಂದು ಪಯಣ’ (2013), ‘ಮಾತೃದೇವತೆಗಳು ಮತ್ತು ಮಹಾಶಕ್ತಿ ಪೀಠಗಳು’ (2014), ‘ಸಾವು–ಒಂದು ಹುಡುಕಾಟ’ (2017), ವಿಶ್ವದರ್ಶನ ಮಾಲೆಯ – ‘ರಷ್ಯಾ ಸುತ್ತ–ಮುತ್ತ, ಅಪೂರ್ವ ಅರಬ್, ವಿದೇಶ ಸಂಚಾರ, ವಿದೇಶ ವಿಹಾರ’, (2017) ಇವರ ಪ್ರಕಟಿತ ಕೃತಿಗಳು. ಇವರ ಈಚಿನ ಕೃತಿ – ‘ಬಹುಮುಖಿ ಕಥನ’ (2018).

ಬಹುಮುಖಿ ಕಥನ

ವೈವಿಧ್ಯಮಯ ವಿಷಯ ಪ್ರಪಂಚ

ಡಿ ಎಸ್ ಲಿಂಗರಾಜು

ಸಿವಿಜಿ ಪಬ್ಲಿಕೇಷನ್ಸ್
ಬೆಂಗಳೂರು

Bhahumukhi Kathana
Articles on Different subjects

Written by
D.S. Lingaraju
No. 42, IInd Cross
ISEC Main Road
Nagarabhavi
Bengaluru -560 072
Mob : 93438 16218

Published by
CVG Publications
No. 277 , 5th cross
Vidhanasoudha Layout
Laggere, Bengaluru - 560 058

[KB-1022]

First Impression : 2018
Price : Rs. 200/-
Pages : iv + xii + 212 = 228
1/8th Demmy
80 GSM Maplitho

ಮುಖಪುಟ ವಿನ್ಯಾಸ : ಅರುಣ್‌ಕುಮಾರ್ ಜಿ.

Printed By
Shakthi Printers & Publishers
Bengaluru- 560 058

ಅರ್ಪಣೆ

27 ವರ್ಷಗಳ ಕಾಲ
ಅತ್ಯುನ್ನತ ಸ್ಥಾನ ನೀಡಿ ಪೊರೆದ
ಕರ್ನಾಟಕ ವಾಣಿಜ್ಯ ತೆರಿಗೆ ಇಲಾಖೆಗೆ

20 ವರ್ಷಗಳ ಕಾಲ ನನ್ನನ್ನು ಬೆಳೆಸಿದ
ಕರ್ನಾಟಕ ವಾಣಿಜ್ಯ ತೆರಿಗೆ ಇಲಾಖಾ
ಅಧಿಕಾರಿಗಳ ಸಂಘಕ್ಕೆ

ಮೂರು ದಶಕಗಳಲ್ಲಿ
ನನಗೆ ಸದಾ ಬೆಂಬಲವಾಗಿ ನಿಂತ
ಎಲ್ಲಾ ಸಹೋದ್ಯೋಗಿಗಳಿಗೆ
ಪ್ರೀತಿಯಿಂದ

ನಿಮ್ಮೊಂದಿಗೆ...

ಕೆಲವೊಮ್ಮೆ ಆತಂಕವಾಗುತ್ತದೆ! ಕೆಲವು ತಿಂಗಳ ಹಿಂದಷ್ಟೇ ಒಟ್ಟಿಗೆ ನನ್ನ ಐದು ಪುಸ್ತಕಗಳು ಬಿಡುಗಡೆಯಾದವು. ಅವುಗಳಲ್ಲಿ ಒಂದೆರಡಕ್ಕೆ ಉತ್ತಮ ಪ್ರತಿಕ್ರಿಯೆ ಬಂದಿದ್ದು ಖುಷಿ ಕೊಟ್ಟಿದೆ. 'ಸಾವು' ಪುಸ್ತಕಕ್ಕೆ ಸಾಹಿತ್ಯ ಪರಿಷತ್ತಿನ ದತ್ತಿ ಬಹುಮಾನ ದೊರಕಿದ್ದು ಸ್ವಲ್ಪ ಆತ್ಮವಿಶ್ವಾಸ ಹೆಚ್ಚಿಸಿದೆ. ಇನ್ನು ಆ ಸಂಭ್ರಮದ ಹಸಿಮೈನ ಅರಿಷಿಣ ಕೂಡಾ ಮಾಸಿಲ್ಲ, ಆಗಲೆ ಮತ್ತೊಂದು ಪುಸ್ತಕಕ್ಕೆ ಸಿದ್ಧತೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಒದಗಿಬಂದಿದೆ.

ಕೆಲವು ವಾರಗಳ ಹಿಂದೆ ಕಚೇರಿಯಲ್ಲಿದ್ದಾಗ ನಮ್ಮ ವಾಣಿಜ್ಯ ತೆರಿಗೆಗಳ ಇಲಾಖೆಯ ಅಧಿಕಾರಿಗಳ ಸಂಘದ ಸನ್ಮಾನ್ಯ ಅಧ್ಯಕ್ಷರಾದ ಸಿ.ಎನ್.ಶಿವಪ್ರಕಾಶ್ ಅವರು ಚಹಾಕ್ಕಾಗಿ ಕರೆದಿದ್ದರು. ನನ್ನ ನಿವೃತ್ತಿಯ ಸಮಯ ಹತ್ತಿರದಲ್ಲೇ ಇತ್ತು (31 ಮಾರ್ಚ್, 2018). "ಬೀಳ್ಕೊಡುಗೆಯ ದಿನ ನಿಮ್ಮ ಒಂದು ಪುಸ್ತಕ ಬಿಡುಗಡೆ ಮಾಡಿದರೆ ತುಂಬಾ ಖುಷಿಯಾಗುತ್ತದೆ, ಸಹಕರಿಸಿ' ಎನ್ನುವ ಬೇಡಿಕೆ ಇಟ್ಟರು. ಇದು ನಿಜಕ್ಕೂ ಒಂದು ಪ್ಲೆಸೆಂಟ್ ಸರ್ಪ್ರೈಸ್ ಆಗಿತ್ತು. ಇಲಾಖೆಯಲ್ಲಿ ಸುದೀರ್ಘ ಕಾಲ ದುಡಿದು ನಿವೃತ್ತನಾಗುತ್ತಿರುವ ಅಧಿಕಾರಿಗೆ ಆತನ ಆಸಕ್ತಿಯ ಕ್ಷೇತ್ರದ ಪುಸ್ತಕ ಗೌರವದೊಂದಿಗೆ ಇಲಾಖೆಗೆ ವಿದಾಯ ಹೇಳುವುದು ಒಂದು ಸೌಭಾಗ್ಯವೇ ಸರಿ. ಈ ಪ್ರೇರಣೆಗೆ ಕಾರಣರಾದ ಸಿ.ಎನ್.ಶಿವಪ್ರಕಾಶ್‌ರವರನ್ನು ಹೃದಯಾಂತರಾಳ ದಿಂದ ನೆನೆಯುತ್ತೇನೆ.

ಪುಸ್ತಕ ಸಿದ್ಧಪಡಿಸಲು ಒಪ್ಪಿಕೊಂಡ ನಂತರ ಹಲವಾರು ರಾತ್ರಿಗಳು ನಿದ್ದೆಗೆಟ್ಟು ಸ್ಕ್ರಿಪ್ಟ್ ಸಿದ್ಧ ಮಾಡಿದ್ದಾಯ್ತು. ಆದರೆ ಆರ್ಥಿಕ ವರ್ಷಾಂತ್ಯದ ಮಾರ್ಚ್ ತಿಂಗಳ ಒತ್ತಡದಲ್ಲಿ ಪುಸ್ತಕದ ವಿನ್ಯಾಸ, ಚಿತ್ರಗಳ ಅಳವಡಿಕೆ ಮುಂತಾದ ಮುದ್ರಣ ಪೂರ್ವ ಸಿದ್ಧತೆಗಳಲ್ಲಿ ತೊಡಗಲು ಸಮಯವೇ ಇಲ್ಲದ ಪರಿಸ್ಥಿತಿಯಲ್ಲಿ ತಾಪತ್ರಯ ಪಡುತ್ತಿರುವಾಗ ಆಸರೆಯಾದವರು ನನ್ನ ಮಾನಸಗುರುಗಳಾದ ಡಾ.ಮೀರಾಸಾಬಿಹಳ್ಳಿ ಶಿವಣ್ಣನವರು. 'ನಾನಿದ್ದೇನೆ ನಿಮ್ಮ ಕಚೇರಿ ಕೆಲಸ ನೀವು ಮಾಡಿಕೊಳ್ಳಿ, ಉಳಿದದ್ದು ನನಗೆ ಬಿಡಿ' ಎಂದು ಮುಂದೆ ನಿಂತು ಪುಸ್ತಕವನ್ನು ಸರ್ವಾಂಗ ಸುಂದರವಾಗಿ ವಿನ್ಯಾಸಗೊಳಿಸಿದ ಅವರ ವಾತ್ಸಲ್ಯ-ಪ್ರೀತಿಗೆ ನಾನು ಮೂಕನಾಗಿದ್ದೇನೆ. 'ಮುಡಿಯಿಡುವೆ ನಿನ್ನಡಿಯೊಳೆನ್ನನು ಕಾಯ್ದುಕೊಳ್ಳೈ' ಎಂದು ಕೃತಿಯನ್ನು ಒಪ್ಪಿಸಿ ಸುಮ್ಮನಾಗಿ ಬಿಟ್ಟೆ. ಈ ಕೃತಿ ಕೂಸುಗೆ ನಾಮಕರಣ ಮಾಡಿದವರೂ 'ಬೆನ್ನುಡಿ'ಯ ಮೂಲಕ ಬೆನ್ನು ತಟ್ಟಿದವರೂ ಅವರೇ. ಅರವತ್ತಾರರ ಗಡಿ ದಾಟಿದ ಅವರ ಎನರ್ಜಿ ಲೆವೆಲ್ ನೋಡಿದಾಗ ನಿಜಕ್ಕೂ ಆಶ್ಚರ್ಯವಾಗುತ್ತದೆ. ಗುರುಗಳ ಸೂಲಗಿತ್ತಿ ಕೆಲಸಕ್ಕೆ ಸಾಕ್ಷಿ ನಿಮ್ಮ ಮುಂದಿದೆ.

ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳ ಸಂಘದಲ್ಲಿ 20 ವರ್ಷಗಳ ಕಾಲ ಉಪಾಧ್ಯಕ್ಷ, ಕಾರ್ಯದರ್ಶಿ ಮತ್ತು ಸದಸ್ಯನಾಗಿ ಕೆಲಸ ಮಾಡಿ ಸಂಘಕ್ಕೆ ಒಂದು ನೆಲೆ ಕಲ್ಪಿಸಿಕೊಡಲು ಪ್ರಯತ್ನ ಮಾಡಿದ್ದೇನೆ. ಇದನ್ನೇ ತುಂಬು ಅಭಿಮಾನದಿಂದ ಕಂಡ ಸಹೋದ್ಯೋಗಿಗಳು ಮತ್ತು ಸಿಬ್ಬಂದಿಗಳು ನನ್ನ ಮೇಲೆ ಅಪಾರವಾದ ಪ್ರೀತಿಯನ್ನಿಟ್ಟು ಬದುಕು ಸಹನೀಯವಾಗಿಸಿದ್ದಾರೆ. ಹಿರಿಯ ಅಧಿಕಾರಿಗಳು ನನ್ನ ಪ್ರವೃತ್ತಿಗೆ ಎಂದೂ ಅಡ್ಡಿ ಮಾಡದೇ ತಮ್ಮ ಘನತೆ ಮೆರೆದಿದ್ದಾರೆ. ಎಲ್ಲಾ ಹಿರಿಯ ಅಧಿಕಾರಿಗಳಿಗೂ, ಗೆಳೆಯರಿಗೂ ಕೃತಜ್ಞತೆಗಳು.

ಪುಸ್ತಕದಲ್ಲಿಯ ಲೇಖನಗಳನ್ನು ವಿಷಯದ ಅಂತರಾಳಕ್ಕೆ ಹೊಕ್ಕು ವಿಸ್ತೃತವಾಗಿ ಬರೆದಿದ್ದೇನೆ. ಯಾವುದೇ ಒಂದು ವಿಷಯದ

ಬಗ್ಗೆ ಬರೆದಾಗ ಅದರ ಸಂಪೂರ್ಣ ಕವರೇಜ್ ಮಾಡುವ ಪ್ರಯತ್ನ ಮಾಡಿದ್ದೇನೆ. ಯುದ್ಧ ಕಲೆಯ ಬಗ್ಗೆ ಹಾಗೂ ನಾಥ ಪಂಥದ ಬಗ್ಗೆ ಬರೆದ ಲೇಖನಗಳನ್ನು ಆಯಾಯ ಕ್ಷೇತ್ರದ ಪರಿಣತರು ಒಪ್ಪಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹುಬ್ಬಳ್ಳಿಯ ಅಖಿಲಭಾರತ ನಾಥಪಂಥ ರಾವಳ ಧರ್ಮ ಪ್ರಚಾರ ಸಮಿತಿ ಲೇಖನದ ಬಗ್ಗೆ ಮೆಚ್ಚುಗೆ ಸೂಚಿಸಿದೆ. ಸರ್ಕಸ್ ಲೇಖನವಂತೂ ಅನೇಕ ಸರ್ಕಸ್ ಕಂಪನಿಗಳ ಮಾಲೀಕರಿಗೆ, ಮ್ಯಾನೇಜರುಗಳಿಗೆ ಅತಿ ಪ್ರಿಯವಾಯ್ತು. ಇವರೆಲ್ಲರ ಮೆಚ್ಚುಗೆಗಳು ಲೇಖಕನಿಗೆ ಪ್ರಾಣವಾಯು ಇದ್ದಂತೆ. ಇದೆಲ್ಲದಕ್ಕೆ ಮಾರ್ಕ್ಸ್ ಹಾಕಬೇಕಾದವರು ನೀವ, ಒಪ್ಪಿಸಿಕೊಳ್ಳಿ.

ಇಲ್ಲಿ ಪ್ರಕಟವಾಗುತ್ತಿರುವ ಲೇಖನಗಳು ಈ ಮುಂಚೆ ತರಂಗ ಮತ್ತು ಕರ್ಮವೀರ ವಾರಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಇವನ್ನು ಅಕ್ಕರಾಸ್ಥೆಯಿಂದ ಬರೆಯಿಸಿದ ತರಂಗದ ವ್ಯವಸ್ಥಾಪಕ ಸಂಪಾದಕರಾದ ಡಾ.ಸಂಧ್ಯಾ ಎಸ್.ಪೈ ಮತ್ತು ಕರ್ಮವೀರದ ಸಂಪಾದಕರಾದ ಅನಿಲ್ ಕುಮಾರ್ ಅವರು ಪ್ರೇರಕ ಶಕ್ತಿಯಾಗಿದ್ದಾರೆ.

ತಮ್ಮ ಅತೀ ಕೆಲಸದ ಒತ್ತಡದ ನಡುವೆಯೂ ಪ್ರಕಾಶಕರಾದ ಸಿವಿಜಿ ಚಂದ್ರು ಅವರು ನನ್ನ ಮೇಲಿನ ಅತೀವ ಪ್ರೀತಿಯಿಂದ ಈ ಪುಸ್ತಕವನ್ನು ಅಲ್ಪಕಾಲದಲ್ಲೇ ಅದ್ಭುತವಾಗಿ ಮುದ್ರಿಸಿದ್ದಾರೆ. ಚಂದ್ರು ಮತ್ತು ಗಿರಿಜಾ ದಂಪತಿಗಳ ಪ್ರೀತಿಗೆ ಅದೆಷ್ಟು ಕೃತಜ್ಞತೆಗಳನ್ನು ಹೇಳಿದರೂ ಸಾಲದಾಗುತ್ತದೆ. ಹಾಗೂ ಈ ಕೃತಿಯ ಬಗ್ಗೆ ವಿಶೇಷ ಪ್ರೀತಿ ತೋರಿ ಮುದ್ರಣಕ್ಕೆ ಅಣಿ ಮಾಡಿದ ಕಂಪ್ಯೂಟರ್ ಸಿಬ್ಬಂದಿ ಶ್ರೀಮತಿ ಮಂಜುಳಾ ಜಿ.ಎಸ್. ಹಾಗೂ ಶ್ರೀಮತಿ ಲತಾ ಆರ್.ಎಸ್ ಅವರನ್ನು ವಿಶ್ವಾಸದಿಂದ ನೆನೆಯುತ್ತೇನೆ. ಎಂದಿನಂತೆ ತಮ್ಮ ಸೃಜನಶೀಲ ಮುಖಪುಟಗಳ ಮೂಲಕ ಕೃತಿಯನ್ನು ಕುಂದಣದ ಬೊಂಬೆಯಂತೆ ರೂಪಿಸಿದ ಕಲಾವಿದ ಅರುಣ್ ಕುಮಾರ್ ಜಿ ಅವರಿಗೆ ನನ್ನ ನೆನಕೆಗಳು ಸಲ್ಲುತ್ತವೆ.

ನನ್ನ ಸಾಹಿತ್ಯ ಯಾತ್ರೆಯ ಉದ್ದಕ್ಕೂ ಜೊತೆ ಜೊತೆಗೆ ಹೆಜ್ಜೆ ಹಾಕುತ್ತಾ, ಕೈಹಿಡಿದು ನಡೆಸುತ್ತಾ ಬಂದ ನನ್ನ ಬಾಳಸಂಗಾತಿ ವನಜಾಕ್ಷಿ ಹೆಚ್. ಕೆ. ಹಾಗೂ ನೆನೆಯಲೇಬೇಕಾದ ಬಳಗ ಬಹಳ ದೊಡ್ಡದಿದೆ. ನನ್ನ ಜೀವದ

ಗೆಳೆಯ ಪ್ರೊ. ಎಂ.ಜಿ.ರಂಗಸ್ವಾಮಿ, ಸಾಹಿತ್ಯ ಮಾರ್ಗದರ್ಶಿಗಳಾದ ಡಾ.ಜಿ.ವಿ.ಆನಂದಮೂರ್ತಿ, ನನ್ನ ಕೃತಿಗಳ ಅಭಿಮಾನಿ ವಿಮರ್ಶಕರಾದ ಪ್ರೊ.ಡಿ.ಅಂಜನಪ್ಪ ಚಳ್ಳಕೆರೆ, ನನಗೆ ಸದಾ ಶುಭ ಹಾರೈಸುವ ಸನ್ಮಿತ್ರರಾದ ಡಾ.ವೂಡೇ ಪಿ. ಕೃಷ್ಣ, ಸ್ವ್ಯಾನ್ ಕೃಷ್ಣಮೂರ್ತಿ ಮತ್ತು ಡಾ.ಬೈರಮಂಗಲ ರಾಮೇಗೌಡ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಈ ಕೃತಿಯನ್ನು ನಿಮ್ಮ ಮಡಿಲಿಗೆ ಒಪ್ಪಿಸುತ್ತಿದ್ದೇನೆ.

31–3–2018 **– ಡಿ.ಎಸ್.ಲಿಂಗರಾಜು**

ಬೆಂಗಳೂರು

ಪರಿವಿಡಿ



1. ಅಶ್ವಗಳ ಇತಿಹಾಸ

ರಾಮಾಯಣಕ್ಕಿಂತಾ ಮೊದಲು ಋಗ್ವೇದದ ಪೂರ್ವ ಕಾಲದ ಒಂದು ರಾಜ್ಯ. ಅದಕ್ಕೊಬ್ಬ ಅರಸನಿದ್ದ ಆತನ ಕಾಲದ ಕಾಲ್ಪನಿಕ ಕಥೆ ಇದು. ಆ ದಿನ ಅರಸನ ಮಂತ್ರಿಮಂಡಲದ ಸಭೆಯನ್ನು ತುರ್ತಾಗಿ ಕರೆಯಲಾಗಿತ್ತು. ಎಲ್ಲರಲ್ಲೂ ಉದ್ವಿಗ್ನತೆ, ಗಾಬರಿ ಕಾಣುತ್ತಿದ್ದವು. ಅದಕ್ಕೆ ಕಾರಣ ಆದಿನ ಸಿಕ್ಕಿದ್ದ ಗುಪ್ತಚಾರ ವರದಿ. ರಾಜ್ಯದ ಮೇಲೆ ನೆರೆಯ ರಾಜ್ಯದ ರಾಜ ದಾಳಿ ಮಾಡಲು ಸನ್ನಾಹ ನಡೆಸುತ್ತಿದ್ದ. ಪರಿಸ್ಥಿತಿಯ ನಿವಾರಣೆಗೆ ರಾಜ ತನ್ನ ಮಂತ್ರಿಗಳ ಸಲಹೆ ಕೇಳೀದಾಗ ಪುಂಖಾನುಪುಂಖ ಸಲಹೆಗಳು ಬಂದವು. ಈ ಸಲಹೆಗಳು ಯಾವುವೂ ರಾಜನಿಗೆ ಒಪ್ಪಿಗೆಯಾಗಲಿಲ್ಲ. ದೂರದಲ್ಲಿ ಕುಳಿತಿದ್ದ ಯುವ ಸೈನ್ಯಾಧಿಕಾರಿಯೊಬ್ಬ ಅದೇನನ್ನೋ ಹೇಳಲು ತವಕಿಸುತ್ತಿದ್ದ. ಆತನ ಚಲನವಲನ ರಾಜನ ಕಣ್ಣಿಗೆ ಬಿದ್ದು ಮಾತನಾಡಲು ಸೂಚಿಸಿದ. ಯುವ ಸೈನ್ಯಾಧಿಕಾರಿ ಅಂದ 'ಮಹಾಪ್ರಭು ನೆರೆಯ ರಾಜ್ಯದ ರಾಜನ ಸೈನ್ಯ ಕೇವಲ ಗಜಪಡೆ, ಕಾಲಾಳುಗಳಿಂದ ಮಾತ್ರಾ ಕೂಡಿದೆ. ನಾವು ಭಿನ್ನವಾಗಿ ಯುದ್ಧ ಮಾಡಬೇಕು' ಅಂದ. ಆತನ ಮಾತು ಯಾರಿಗೂ ಅರ್ಥವಾಗಲಿಲ್ಲ.

'ಭಿನ್ನವಾಗಿ ಯುದ್ಧ ಮಾಡುವುದೆಂದರೇನು ? ವಿವರಿಸಿ ಹೇಳು' ಅಂದ ರಾಜ.

'ಮಹಾಪ್ರಭು ನಮ್ಮ ರಾಜ್ಯದ ಕಾಡಿನಲ್ಲಿ ದರೋಡೆಕಾರರಿದ್ದಾರೆ ಅವರು ಈವರೆಗು ನಮಗೆ ಸೆರೆಸಿಕ್ಕಿಲ್ಲ. ಒಡವೆ-ವಸ್ತ್ರಗಳನ್ನು ಕದ್ದು ಕಾಡುಪ್ರಾಣಿಯೊಂದರ ಮೇಲೆ ಕುಳಿತು ಕಣ್ಮರೆಯಾಗುತ್ತಾರೆ. ಅವರು ಸವಾರಿ ಮಾಡುವ ವಾಹನ ಬಹಳ ಬಲವಾಗಿದ್ದು ವೇಗವಾಗಿ ಓಡಬಲ್ಲದು ಭಾರವನ್ನು ಎಳೇಯಬಲ್ಲದು..' ಅಂದ. ಆತನ ಮಾತನ್ನು ತುಂಡರಿಸಿದ ಮಹಾಮಂತ್ರಿ ' ನಾವೇನು ಆ ದರೋಡೆಕಾರರನ್ನು

ಅವರ ವಾಹನ ಕೊಡಿ ಎಂದು ಬೇಡಬೇಕೆ ! ಸರಿಯಾದ ಸಲಹೆ ಕೊಡಿ' ಅಂತ ಆಕ್ಷೇಪಣೆ ಮಾಡಿದ.

'ಇರಲಿ ಆತ ಏನು ಹೇಳುತ್ತಾನೆ ಹೇಳಲಿ 'ಅಂದ ರಾಜ.

'ಮಹಾಪ್ರಭು ಸಧ್ಯಕ್ಕೆ ಯುದ್ಧ ಮುಂದೂಡುವ ಯೋಜನೆ ಮಾಡಿದರೆ ಆ ಕಾಡು ಪ್ರಾಣಿಗಳನ್ನು ನಾವೂ ಹಿಡಿತಂದು ಪಳಗಿಸಿ ಯುದ್ಧದಲ್ಲಿ ಬಳಸಿಕೊಂಡು ಸುಲಭವಾಗಿ ಯುದ್ಧವನ್ನು ಗೆಲ್ಲಬಹುದು' ಅಂದ ಯುವ ಸೈನ್ಯಾಧಿಕಾರಿ. ಆತನ ಸಲಹೆ ಯಾರಿಗೂ ರುಚಿಸಲಿಲ್ಲ. ಆದರೆ ರಾಜನಿಗೆ ಇದೇನೋ ವಿಶೇಷವಾಗಿದೆ ಅನ್ನಿಸಿ ಯುವ ಸೈನ್ಯಾಧಿಕಾರಿಗೆ ಒಂದು ತಿಂಗಳಲ್ಲಿ ಆದಷ್ಟು ಪ್ರಾಣಿಗಳನ್ನು ಹಿಡಿತಂದು ಪಳಗಿಸಿ ಸೈನಿಕರಿಗೆ ತರಬೇತಿ ನೀಡುವ ಹೊಣೆಯನ್ನು ವಹಿಸಲಾಯ್ತು. ತಪ್ಪಿದರೆ ಆತನ ತಲೆದಂಡವಾಗುತ್ತದೆ ಎಂಬ ಎಚ್ಚರಿಕೆ ಸಹಾ ನೀಡಲಾಯ್ತು.

ಯುವ ಸೈನ್ಯಾಧಿಕಾರಿ ಕಾಡಿನಿಂದ ಆ ಬಲವಾದ ಪ್ರಾಣಿಗಳನ್ನು ಹಿಡಿತಂದು ಪಳಗಿಸಿ ತರಬೇತಿ ಕೊಟ್ಟ. ಸೈನಿಕರು ಅದರ ಮೇಲೆ ಕುಳಿತು ಯುದ್ಧಮಾಡುವ ಕಲೆಯನ್ನು ಕಲಿತರು. ರಾಜನಿಗೆ ತೃಪ್ತಿಯಾಯಿತು.

ಯುದ್ಧ ಪ್ರಾರಂಭವಾದಾಗ ಮುಂಚೂಣಿಯಲ್ಲಿ ಗಜಪಡೆಗಳನ್ನು ನಿಲ್ಲಿಸಲಾಗಿತ್ತು. ಶತ್ರು ಸೈನ್ಯ ತನ್ನ ಅರ್ಧದಷ್ಟಿದ್ದ ನಮ್ಮ ರಾಜನ ಪಡೆಯನ್ನು ನೋಡಿ ಹುಮ್ಮಸ್ಸಿನಿಂದ ಮುನ್ನುಗ್ಗಿತು. ಅನೆಗಳು ಗುದ್ದಾಡಿ ಅವನ್ನು ದಾಟಿ ಮುಂದೆ ಬಂದ ಸೈನಕ್ಕೆ ಕಾದಿತ್ತು ಅಚ್ಚರಿ. ಯಾವುದೋ ಪ್ರಾಣಿಗಳ ಮೇಲೆ ಕವಚಧರಿಸಿ ಕುಳಿತಿದ್ದ ಸೈನಿಕರು ಹರಹರ ಮಹಾದೇವ ಎನ್ನುತ್ತಾ ಮುನ್ನುಗ್ಗಿದರು. ಆ ಪ್ರಾಣಿಗಳ ಚುರುಕು ಚಲನೆ, ಸೈನಿಕರ ವೀರಾವೇಶ ಶತ್ರು ಸೈನ್ಯವನ್ನು ಎದೆಗೆಡಿಸಿ ಹಿಮ್ಮೆಟ್ಟಿ ಓಡಿದರು. ನಮ್ಮ ರಾಜನಿಗೆ ಯುದ್ಧದಲ್ಲಿ ಗೆಲುವಾಯ್ತು. ಅರಸ ಯುವ ಸೈನ್ಯಾಧಿಕಾರಿಗೆ ಅಭಿನಂದನೆ ಸಲ್ಲಿಸಿ ಆತನನ್ನೇ ಸೈನ್ಯದ ಮುಖ್ಯಸ್ಥನನ್ನಾಗಿ ಮಾಡಿದ. ರಾಜನ ಮನಸ್ಸಲ್ಲಿ ಒಂದು ಪ್ರಶ್ನೆ ಇತ್ತು. ಯಾವುದೀ ಪ್ರಾಣಿ ?

ಅದೇ ಕುದುರೆ !

ಹೀಗೆ ಕುದುರೆಯನ್ನು ಯಶಸ್ವಿಯಾಗಿ ಬಳಸಿಕೊಂಡವ ಋಗ್ವೇದ ಕಾಲದ ಅರಸ ದಿವೋದಾಸ ಎಂದು ಕಾಲ್ಪನಿಕ ಕಥೆಯೊಂದು ಹೇಳುತ್ತದೆ. ಕಥೆ ಸತ್ಯವೋ ಸುಳ್ಳೋ ಅಪ್ರಸ್ತುತ. ಆದರೆ ಅಶ್ವಗಳು ಮಾನವನ ಬದುಕಿನ ದಿಕ್ಕನ್ನು ನಾನಾ ಕೋನಗಳಿಂದ ಬದಲಿಸಿದ್ದಂತೂ ಸತ್ಯ !

ಹೀಗೆ ಸಹಸ್ರಾರು ವರ್ಷಗಳ ಹಿಂದೆ ಕಾಡುಪ್ರಾಣಿಯಾಗಿದ್ದ ಕುದುರೆಗಳು ರಣರಂಗವನ್ನೂ ಪ್ರವೇಶ ಮಾಡಿ ಮಾನವನ ಜೀವನದ ಅವಿಭಾಜ್ಯ ಅಂಗವಾದುವು. ಕುದುರೆಯಿಲ್ಲದೇ ಯುದ್ಧವಷ್ಟೇ ಏಕೆ ಸಾಮಾನ್ಯ ಬದುಕೂ ನಡೆಯದಾಯ್ತು. ವೇದಗಳ ಕಾಲದಲ್ಲಿ ಅಶ್ವಗಳ ಸವಾರಿ ಅಸ್ತಿತ್ವದಲ್ಲಿತ್ತಾದರೂ ಅವನ್ನು ಅಶ್ವದಳವಾಗಿ ಯುದ್ಧಗಳಲ್ಲಿ ಯಾವಾಗಿನಿಂದ ಬಳಸಿಕೊಳ್ಳಲಾಯ್ತು ಎಂಬ ಬಗ್ಗೆ ಸ್ಪಷ್ಟ ಉಲ್ಲೇಖಗಳಿಲ್ಲ. ಆದರೂ ಸುಮಾರು ಕ್ರಿ.ಪೂ. 3000–4000 ವರ್ಷಗಳ ಹಿಂದೆ ಅಶ್ವಗಳು ಮಾನವನ ಬದುಕಿಗೆ ಪ್ರವೇಶ ಮಾಡಿದವು ಎಂದು ಪುರಾತತ್ವ ಶಾಸ್ತ್ರಜ್ಞರು ಹೇಳುತ್ತಾರೆ. ಅಶ್ವಗಳು ಒಂಟಿಯಾಗಿ ಜೀವಿಸುವುದಿಲ್ಲ. ಮಾನವನೊಂದಿಗೆ ಉತ್ತಮ ಸಂಬಂಧ ಬೆಳೆಸಿಕೊಳ್ಳಬಲ್ಲವು. ಸಸ್ತನಿ ವರ್ಗಕ್ಕೆ ಸೇರಿದ ಅಶ್ವಗಳು ಹೇಳೀದ್ದನ್ನು ಕಲಿಯುವ ಶಕ್ತಿ ಹೊಂದಿವೆ. ಸವಾರನ ಕಾಲಿನ, ಕೈನ, ಮತ್ತು ಮಾತಿನ ಇಶಾರೆಗಳನ್ನು ಅರ್ಥ ಮಾಡಿಕೊಳ್ಳಬಲ್ಲ ಶಕ್ತಿ ಇವುಗಳಿಗಿದೆ.

ಕಳೆದ 5000 ವರ್ಷಗಳಲ್ಲಿ ಭಾರತದ ಇತಿಹಾಸವನ್ನು ಬದಲಿಸಿದ್ದು ಆರ್ಯರ, ಗ್ರೀಕರ, ಮುಸ್ಲೀಮರ ಮತ್ತು ಬ್ರಿಟೀಷರ ದಾಳಿಗಳಲ್ಲ. ಅಶ್ವಗಳು ಭಾರತೀಯರ ಬದುಕಿಗೆ ಕಾಲಿಟ್ಟು ಪುರಾತನ ಭಾರತದ ಇತಿಹಾಸವನ್ನೇ ಮಾರ್ಪಡಿಸಿದವು. ಕ್ರೋ ಮ್ಯಾಗ್ನನ್ ಮಾನವನ ತನ್ನ ಕಾಲದಲ್ಲಿ ಪೋನಿಯಂತಹ ಸಣ್ಣ ಕುದುರೆಗಳನ್ನು ಬಳಸುತ್ತಿದ್ದ ಎನ್ನಲಾಗಿದೆ.

ಕುದುರೆ ಎಂದರೇನು ?

ಜೀವಿ ವರ್ಗೀಕರಣ ಶಾಸ್ತ್ರದಲ್ಲಿ ಈಕ್ವಿಡೇ ಕುಟುಂಬಕ್ಕೆ ಸೇರಿ ಈಕ್ವಸ್ ಫೆರಸ್ ಕ್ಯಾಬಲಸ್ ಮತ್ತು ಈಕ್ವಸ್ ಫೆರಸ್ (Equus ferus caballus & Equus Ferus) ಎಂಬ ವೈಜ್ಞಾನಿಕ ಹೆಸರನ್ನು ಹೊಂದಿದ ಅಶ್ವಗಳ ಇತಿಹಾಸ ಬಹಳ ಸುದೀರ್ಘವಾದುದು. ಇವು ಮಮ್ಮಾಲಿಯ ವರ್ಗಕ್ಕೆ ಸೇರಿದವು. ಅಶ್ವಗಳು, ಜ಼ೀಬ್ರಾಗಳು ಮತ್ತು ಕತ್ತೆಗಳು ಒಂದೇ ಕುಲಕ್ಕೆ ಸೇರಿದವು.

ಕುದುರೆಗಳನ್ನು ಅವುಗಳ ಮನೋಧರ್ಮಗಳ ಆಧಾರದ ಮೇಲೆ ಮುಖ್ಯವಾಗಿ ಮೂರು ವರ್ಗಗಳಾಗಿ ವಿಂಗಡಿಸಲಾಗುತ್ತದೆ. ಅವುಗಳೆಂದರೆ ಮೊದಲನೆಯದಾಗಿ ಹುರುಪಿನ ಬಿಸಿ ರಕ್ತದವು (ಹಾಟ್ ಬ್ಲಡ್), ಎರಡನೆಯದಾಗಿ ಅವುಗಳ ವೇಗ ಮತ್ತು ತಾಳಿಕೆಯ ಶಕ್ತಿಯ ಆಧಾರದ ಮೇಲೆ ತಂಪು ರಕ್ತದವು (ಕೋಲ್ಡ್ ಬ್ಲಡ್) ಮತ್ತು ಮೂರನೆಯದಾಗಿ ದೈಹಿಕ ಶ್ರಮದ ಕೆಲಸ ಮಾಡುವ ಪೋನಿಗಳು

ಮುಂತಾದ ಬೆಚ್ಚಗಿನ ರಕ್ತದವು (ವಾರ್ಮ್ ಬ್ಲಡ್). ಈ ಮೂರು ಮನೋಧರ್ಮದ ಅಶ್ವಗಳನ್ನು ವಿವಿಧ ಕ್ಷೇತ್ರಗಳಲ್ಲಿ ಬಳಸಲಾಗುತ್ತಿದೆ.

ಹಾಟ್, ಕೋಲ್ಡ್ ಮತ್ತು ವಾರ್ಮ್ ಎಂಬುದು ದೇಹದ ಬಿಸಿಯ ಮೇಲೆ ಆಧರಿಸಿಲ್ಲ ಎಂಬುದನ್ನು ನೆನಪಿಡಬೇಕು. ಹಾಟ್ ಬ್ಲಡ್ ವರ್ಗದಲ್ಲಿ ರೇಸ್ ಕುದುರೆಗಳು ಮತ್ತು ಸವಾರಿಯ ಕುದುರೆಗಳಿವೆ. ಉದ್ದ ಕಾಲಿನ, ತೆಳು ಚರ್ಮದ ಧೈರ್ಯವಂತ ಅರೇಬಿಯನ್ ಮತ್ತು ಪರ್ಶಿಯನ್ ಕುದುರೆಗಳನ್ನು ಈ ವರ್ಗದಲ್ಲಿ ನೋಡಬಹುದು. ಕೋಲ್ಡ್ ಬ್ಲಡ್ ವರ್ಗದಲ್ಲಿ ಡ್ರಾಫ್ಟ್ ಬ್ರೀಡ್ ಎಂದು ಕರೆಯಲಾಗುವ ಶಾಂತ ಮನೋಭಾವದ ಕೆಲಸಗಾರ ಕುದುರೆಗಳಿರುತ್ತವೆ. ಜನರನ್ನು ಹೊತ್ತು ಸಾಗಿಸಬಲ್ಲ, ಹೊಲ ಉಳಬಲ್ಲ ಬೆಲ್ಜಿಯನ್ ಕುದುರೆಗಳು ಈ ವರ್ಗದಲ್ಲಿವೆ. ವಾರ್ಮ್ ಬ್ಲಡ್ ವಿಭಾಗದಲ್ಲಿ ಪೋನಿಗಳು ಮತ್ತು ಸವಾರಿಯ ಕುದುರೆಗಳಿರುತ್ತವೆ. ಇವನ್ನು ಶೋ ಜಂಪಿಂಗ್ ಆಟಗಳಲ್ಲಿ ಬಳಸುತ್ತಾರೆ.

ಅಶ್ವಗಳ ಇತಿಹಾಸ

ಅಶ್ವಗಳ ಇತಿಹಾಸ ನೋಡಿದಾಗ ಅವು ಮೊದಲು ಬೇರೆ ರೂಪದಲ್ಲಿದ್ದು ನಂತರ ವಿಕಾಸಗೊಂಡು ಈಗಿನ ರೂಪ ಧರಿಸಿದವು ಎಂದು ತಿಳಿದು ಬರುತ್ತದೆ. ಸುಮಾರು 50 ಮಿಲಿಯನ್ ವರ್ಷಗಳ ಹಿಂದೆ ಅಶ್ವಗಳು ಸಣ್ಣ ಗಾತ್ರದ ನಾಯಿಯ ಆಕಾರದಲ್ಲಿದ್ದವು. ಆಗ ಇವನ್ನು ಓರೋಹಿಪ್ಪಸ್ (ಲಿಟಲ್ ಹಾರ್ಸ್) ಪ್ರಾಣಿಗಳ ಜೊತೆಗೆ ಗುರುತಿಸಲಾಗುತ್ತಿತ್ತು. ನಂತರ ಸುಮಾರು 37–32 ಮಿಲಿಯನ್ ವರ್ಷಗಳ ನಂತರ ಅಶ್ವಗಳನ್ನು ಮೆಸೊಹಿಪ್ಪಸ್ (ಮಿಡ್ಲ್ ಹಾರ್ಸ್) ಎಂದು ಕರೆಯಲಾಯ್ತು. ನಂತರ ಮಿಯೊಹಿಪ್ಪಸ್ (25 ಮಿಲಿಯನ್ ವರ್ಷ), ಪ್ಯಾರ ಹಿಪ್ಪಸ್ (17ಮಿಲಿಯನ್ ವರ್ಷ), ಮೆರಿಚಿಪ್ಪಸ್ (11ಮಿಲಿಯನ್ ವರ್ಷ) ರೂಪಗಳನ್ನು ಗುರುತಿಸಲಾಗಿದೆ. ನಂತರ 6 ಮಿಲಿಯನ್ ವರ್ಷಗಳ ಹಿಂದಿನ ಅಶ್ವಗಳನ್ನು ಆಧುನಿಕ ಅಶ್ವಗಳ ಪಿತಾಮಹ ಅಥವಾ ಪ್ಲಿಯೋಹಿಪ್ಪಸ್ ಎನ್ನಲಾಗುತ್ತದೆ. ಮುಂದಿನ ರೂಪ ಡಿನೋಹಿಪ್ಪಸ್ ಈಗಿನ ಅಶ್ವಗಳ, ಕತ್ತೆಗಳ ಮತ್ತು ಜೀಬ್ರಾಗಳ ಮೂಲರೂಪ Equus=Modern Horses ಎನ್ನಲಾಗಿದೆ.

ಅಶ್ವಗಳ ಮಾಹಿತಿ ನಮಗೆ ದೊರೆತಿರುವುದು 15,000 ವರ್ಷಗಳಿಂದ ಈಚಿನ ಪಳೆಯುಳಿಕೆಗಳ ಮೂಲಕ. ಉತ್ತರ ಅಮೇರಿಕಾ, ಯುರೋಪ್, ಯುರೇಷಿಯಾಗಳಲ್ಲಿ ಕಂಡ ಅಶ್ವಗಳ ಅಸ್ತಿತ್ವ ಇದ್ದಕ್ಕಿದ್ದಂತೆ ಅಮೇರಿಕಾ ನಾಡಿನಿಂದ

ಮರೆಯಾಯಿತು. ಬಹುಶಃ ಪ್ರಕೃತಿಯಲ್ಲಾದ ಬದಲಾವಣೆಗಳಿಂದ ಮೊದೆ ಸಸ್ಯಗಳು ಹೆಚ್ಚಾಗಿ ಅಶ್ವಗಳಿಗೆ ಬೇಕಾದ ಹುಲ್ಲು ದೊರೆಯದೇ ಅವುಗಳ ಅಸ್ತಿತ್ವ ಕೊನೆಯಾಗಿರಬಹುದೆಂದು ಊಹಿಸಲಾಗಿದೆ. ವಿಶ್ವದ ಕೆಲವೆಡೆ ಗುಹೆಗಳಲ್ಲಿ ಬಿಡಿಸಲಾದ ಇತಿಹಾಸ ಪೂರ್ವ ಕಾಲದ ಚಿತ್ರಗಳಲ್ಲಿ ಅಶ್ವಗಳು ಕಂಡು ಬರುತ್ತಿರುವುದು ಅವುಗಳ ಬಳಕೆಯ ಬಗ್ಗೆ ಮಾಹಿತಿ ನೀಡಿವೆ.

ಕ್ರಿ.ಪೂ. 4000–3500 ರ ಸುಮಾರಿಗೆ ಮಧ್ಯ ಏಷ್ಯಾದಲ್ಲಿ ವಾಸ ಮಾಡುತ್ತಿದ್ದ ಆದಿವಾಸಿ ಮನುಷ್ಯ ಅಶ್ವಗಳನ್ನು ತನ್ನ ಅಗತ್ಯಗಳಿಗೆ ಒಗ್ಗಿಸಿಕೊಂಡ ಎನ್ನಲಾಗುತ್ತದೆ. ಇದಕ್ಕೆ ಪ್ಯಾಲಿಯೋಲಾಜಿಕಲ್ ಮತ್ತು ಪುರಾತತ್ವಶಾಸ್ತ್ರದ ಆಧಾರಗಳನ್ನು ಪರಿಶೀಲಿಸಲಾಗಿದೆ. ಇದುವರೆಗೆ ದೊರೆತಿರುವ ಅತೀ ಪುರಾತನ ಅಶ್ವದ ಪಳೆಯುಳಿಕೆ ಕ್ರಿ.ಪೂ. 3500–4000 ರ ಸುಮಾರಿನಲ್ಲಿ ಉಕ್ರೇನ್‌ನಲ್ಲಿ ದೊರೆತಿದೆ. ಕಝಾಕ್‌ಸ್ತಾನದ ಬೋತೈ ಎಂಬಲ್ಲಿನ ಆದಿವಾಸ್ಯೆ ಜನಾಂಗ ಅಶ್ವಗಳನ್ನು ಪಳಗಿಸಿಕೊಂಡಿದ್ದರು ಎಂದು ಅಲ್ಲಿ ದೊರೆತಿರುವ ಆವೆ ಮಣ್ಣಿನ ಮಡಿಕೆ–ಕುಡಿಕೆಗಳ ಮೇಲೆ ಚಿತ್ರಿಸಲಾಗಿರುವ ಉಬ್ಬು ಶಿಲ್ಪಗಳಿಂದ ಮತ್ತು ಅವರ ಬೋತೈ ಸಂಸ್ಕೃತಿಯಿಂದ ತಿಳೀದುಬರುತ್ತದೆ. ಬೋತೈ ಜನ ಅಶ್ವಗಳ ಹಾಲು ಕೆರೆದು, ಅವುಗಳ ಮೇಲೆ ಸವಾರಿ ಮಾಡುತ್ತಾ ತಮ್ಮ ಕುರಿಗಳನ್ನು ಕಾಯುತ್ತಿದ್ದರು. ಮಾಂಸದ ಅಗತ್ಯ ಬಿದ್ದಾಗ ಅಶ್ವಗಳನ್ನು ಕೊಲ್ಲಲಾಗುತ್ತಿತ್ತು.

ಅಶ್ವಗಳಲ್ಲಿ ಪ್ರೆಸಾವಲ್ಸ್ಕಿ ಎಂಬ ಕಾಡು ಕುದುರೆ ಜಾತಿ ಪುರಾತನವಾದುದಾಗಿದ್ದು ಇತ್ತೀಚೆಗೆ ಅದರ ಸಂತತಿ ನಶಿಸಿ ಹೋಗಿದೆ ಎನ್ನಲಾಗಿದೆ. ಮಂಗೋಲಿಯಾದಲ್ಲಿ ಇದರ ಕೊನೆಯ ಸಂತತಿ ಇತ್ತೆಂಬುದರ ದಾಖಲೆಗಳಿವೆ. ಈ ಸಂತತಿಯನ್ನು ರಷ್ಯನ್ ಸಂಶೋಧಕ ನಿಕೋಲಾಯ್ ಪ್ರೆಸ್ವಲ್‌ಸ್ಕಿ ಎಂಬಾತ ಗುರುತಿಸಿದ ಎಂಬ ಕಾರಣಕ್ಕೆ ಆತನ ಹೆಸರನ್ನೇ ಈ ಜಾತಿಗೆ ಇಡಲಾಗಿದೆ.

ಅಶ್ವಗಳನ್ನು ಆಹಾರಕ್ಕಾಗಿ, ದನಗಾಹಿಗಳ ವಾಹನವಾಗಿ, ಯುದ್ಧಗಳಲ್ಲಿ, ಸರಕು ಸಾಗಣೆಯಲ್ಲಿ, ಸಂವಹನ ಮಾಧ್ಯಮವಾಗಿ, ಕೃಷಿಯಲ್ಲಿ, ವ್ಯಾಪಾರದ ಸರಕು ಸಾಗಣೆಯಲ್ಲಿ, ಖುಷಿಗಾಗಿ, ಕ್ರೀಡೆಗಳಲ್ಲಿ, ಧಾರ್ಮಿಕ ಆಚರಣೆಗಳಲ್ಲಿ, ಸಾಮಾಜಿಕ ಅಂತಸ್ತಿನ ದ್ಯೋತಕವಾಗಿ, ಕೊಡುಗೆ ನೀಡಲು, ಸ್ಪರ್ಧೆಗಳಲ್ಲಿ ಮತ್ತು ಔಷಧ ತಯಾರಿಕೆಗಳಲ್ಲಿ ಬಳಸಲಾರಂಭಿಸಿದ ಮಾನವ ಅಶ್ವಗಳಿಂದ ಗರಿಷ್ಠ ಉಪಯೋಗ ಪಡೆಯುವಲ್ಲಿ ಯಶಸ್ವಿಯಾದ.

ಮಾನವನ ಇತಿಹಾಸದಲ್ಲಿ ಚಕ್ರಗಳ ಸಂಶೋಧನೆ ಮಹತ್ವದ ಹೆಜ್ಜೆಯಾಗಿ ಪರಿಣಮಿಸಿತು. ಇದರಿಂದ ರಥಗಳಂತಹ ವಾಹನಗಳು ಅಸ್ತಿತ್ವಕ್ಕೆ ಬಂದವು. ಅಶ್ವಗಳಂತಹಾ ಶಕ್ತಿಯುತ ಪ್ರಾಣಿಗಳನ್ನು ಇದಕ್ಕೆ ಬಳಸಿಕೊಳ್ಳಬಹುದು ಎಂಬುದನ್ನು ಕಂಡುಕೊಂಡ ಮಾನವ ಅಶ್ವಗಳ ಎಳೆಯುವ ಶಕ್ತಿ– ಪುಲ್ಲಿಂಗ್ ಪವರ್– ಯನ್ನು ಹಾರ್ಸ್ ಪವರ್ ಎಂದೇ ಗುರುತಿಸಲು ಆರಂಭಿಸಿದ. ಡಾ. ವ್ಯಾಟ್ಸನ್ ಈ ನಿಟ್ಟಿನಲ್ಲಿ ಮಹತ್ವದ ಸಂಶೋಧನೆಗಳನ್ನು ಮಾಡಿದರು.

ಕುದುರೆಗಳ ಬಳಕೆ–ಎಲ್ಲಿ ? ಹೇಗೆ ?

ಆಹಾರದ ಬಳಕೆಗೆ ಕ್ರಿ.ಪೂ.50,000 ಕ್ಕೆ ಮುನ್ನಾ

ಸಾಮಾಜಿಕ ಅಂತಸ್ತಿನ ಕುರುಹಾಗಿ ಕ್ರಿ.ಪೂ.4000–1900

ದನಗಾಹಿಗಳ ಸಹಾಯದಲ್ಲಿ ಕ್ರಿ.ಪೂ.3500 ರಿಂದ

ರಥಗಳ ಬಳಕೆಗೆ ಕ್ರಿ.ಪೂ. 1700 ರಿಂದ

ಸೈನದಲ್ಲಿ ಬಳಕೆ ಕ್ರಿ.ಪೂ. 700 ರಿಂದ

ಕೃಷಿಯಲ್ಲಿ ಕ್ರಿ.ಶ. 900 ರಿಂದ


ಸರಕು ಸಾಗಣೆಯಲ್ಲಿ ಕ್ರಿ.ಶ. 1700

ವಿರಾಮದ ಕಾಲ ಕ್ರಿ.ಶ. 1900 ರಿಂದ

ಭಾರತದಲ್ಲಿ ಅಶ್ವಗಳು

ಭಾರತಕ್ಕೆ ಕುದುರೆಗಳನ್ನು ಆರ್ಯರು ಕ್ರಿ.ಪೂ. 1500 ರಲ್ಲಿ ಪರಿಚಯಿಸಿದರು ಎನ್ನಲಾಗುತ್ತದೆ. ವೇದಗಳಲ್ಲಿ 200 ಬಾರಿ ಅಶ್ವ ಎಂಬ ಬಳಕೆಯಾಗಿದ್ದು ಇದು ಅಶ್ವಗಳು ಮತ್ತು ರಥಗಳು ಅಂದು ಬಳಕೆಯಲ್ಲಿದ್ದವು ಎನ್ನಲು ಯೋಗ್ಯ ಉದಾಹರಣೆ ಎಂಬ ವಾದವಿದೆ. ಅರಸರಿಗೆ ಸರ್ವ ಲಕ್ಷಣಗಳನ್ನು ಹೊಂದಿದ ಅಶ್ವವೊಂದು ಪಟ್ಟದ ಕುದುರೆಯಾಗಿ ಆಯ್ಕೆ ಮಾಡಲಪಡುತ್ತಿತ್ತು. ವಿಶೇಷ ಸಂದರ್ಭಗಳಲ್ಲಿ ಅದರ ಮೇಲೆ ಅರಸ ಕುಳಿತು ಪ್ರಜೆಗಳಿಗೆ ದರ್ಶನ ನೀಡುತ್ತಿದ್ದ.

ತಕ್ಷಶಿಲಾ, ಹಸ್ತಿನಾಪುರಗಳಲ್ಲಿ ಕುದುರೆಗಳ ಮೂಳೆಗಳ ಪಳೆಯುಳಿಕೆ ದೊರೆತಿದೆ. ಆದರೆ ನಾಶಿಕ್, ನಾಗದಾ, ಸಾರಾನಾಥ, ಅರಿಕಮೇಡು, ಬ್ರಹ್ಮಗಿರಿ, ನಾಗಾರ್ಜುನಕೊಂಡಗಳಲ್ಲಿ ದೊರೆತಿರುವ ಪಳೆಯುಳಿಕೆಗಳಲ್ಲಿ ಕುದುರೆ ಮತ್ತು ಅಂತಹಾ ಪ್ರಾಣಿಗಳ ಮೂಳೆಗಳು ದೊರೆತಿಲ್ಲದಿರುವುದು ಅಂದು ಅಶ್ವಗಳ ಅಸ್ತಿತ್ವದ ಬಗ್ಗೆಯೇ ಅನುಮಾನಿಸುವಂತಾಗಿದೆ. ಪುರಾತನ ಕಾಲದಲ್ಲಿ ದಸ್ಯುಗಳಿಗೆ (ಸ್ಥಳೀಯರು) ಅಶ್ವಗಳ ಮತ್ತು ರಥಗಳ ಬಳಕೆಯ ಬಗ್ಗೆ ಅರಿವಿರಲಿಲ್ಲ ಎಂಬ ಹೇಳಿಕೆಗಳಿವೆ.




ಭಾರತೀಯರಿಗೆ ಅಶ್ವಗಳು ದೈವದ ಸಂಕೇತವಾಗಿದ್ದವು. ಅಶ್ವಗಳ ಶಿರಸ್ಸನ್ನು ಹೊಂದಿದವ ಹಯಗ್ರೀವ. ವೇದಗಳು ಅಶ್ವಿನಿಕುಮಾರರನ್ನು ದೇವತೆಗಳ ವೈದ್ಯರು ಎಂದು ಗುರುತಿಸುತ್ತದೆ. ಅಲ್ಲದೇ ದೇಹವನ್ನು ರಥಕ್ಕೂ ಅಶ್ವವನ್ನು ಪ್ರಾಣಕ್ಕೂ ಹೋಲಿಸುತ್ತದೆ. ದೇಹವನ್ನು ನಿಯಂತ್ರಿಸುವ ಶಕ್ತಿ ಇದಕ್ಕಿದೆ ಎಂಬ ನಂಬಿಕೆ ಇತ್ತು. ಹಾಗೆಂದೇ ಅಶ್ವಗಳನ್ನು ಯಜ್ಞ–ಯಾಗಾದಿಗಳಲ್ಲಿ ಮತ್ತು ಚಿಕಿತ್ಸೆಗಳಲ್ಲಿ ಬಳಸಲಾಗುತ್ತಿತ್ತು.

ಭಾರತೀಯ ಗಿಡ ಮೂಲಿಕೆಗಳಲ್ಲಿ ಅಶ್ವಗಂಧ ಪ್ರಮುಖವಾದುದು. ಥೈರಾಯ್ಡ್ ಹಾರ್ಮೋನುಗಳ ಚಿಕಿತ್ಸೆಗೆ ಇದು ರಾಮಬಾಣ ಇದ್ದಂತೆ. ಯೋಗದಲ್ಲಿ ಅಶ್ವ ಸಂಚಲನಾಸನ ಎಂಬ ಭಂಗಿಯೊಂದಿದೆ.

ಮಹಾಭಾರತದಲ್ಲಿ ಅಶ್ವತ್ಥಾಮನ ಪಾತ್ರ ಹಿರಿದು. ಈತನನ್ನು ರಣರಂಗದಿಂದ ದೂರವಿಡಲು ಕೃಷ್ಣ ಉಪಯವನ್ನು ಹೂಡಿದ್ದ. ಅಶ್ವತ್ಥಾಮ ಎಂದರೆ ಅಶ್ವದ ಧ್ವನಿಯುಳ್ಳವನು ಎಂದರ್ಥ. ಈತ ಹುಟ್ಟಿದಾಗ ಅವನ ಅಳು ಅಶ್ವದ ಧ್ವನಿಯನ್ನು ಹೋಲುತ್ತಿತ್ತಂತೆ ಆದುದರಿಂದ ಆತನಿಗೆ ಅಶ್ವತ್ಥಾಮ ಎಂಬ ಹೆಸರಿಡಲಾಯ್ತು. ಅಶ್ವ (ಸಂಸ್ಕೃತ) ಎಂದು ಕರೆಯಲಾಗುವ ಹೂವೊಂದಿದೆ. ಇದನ್ನು ಕ್ಲೆಮಾಟಿಸ್ ವರ್ಗಕ್ಕೆ ಸೇರಿಸಲಾಗಿದೆ.

ವಿಶ್ವದಲ್ಲಿ ಅಶ್ವಗಳು

ಕುದುರೆಗಳನ್ನು ಮಾನವನ ಹೆಮ್ಮೆಯ ಸಂಕೇತ ಎನ್ನುತ್ತಾನೆ ಫ್ರೆಂಚ್ ಪ್ರಾಣಿಶಾಸ್ತ್ರಜ್ಞ ಜಾರ್ಜಸ್ ಲೂಯಿಸ್. ಕುದುರೆಗಳನ್ನು ಪಳಗಿಸಿ ದಿನ ಬಳಕೆಗೆ ಒಗ್ಗಿಸಿಕೊಂಡ ನಂತರ ಮಾನವನ ಕೆಲಸಗಳು ಎಷ್ಟೋ ಕಡಮೆಯಾಗಿದ್ದವು. ಕುದುರೆಗಳನ್ನು ಬಹಳ ಹಿಂದಿನ ಕಾಲದಿಂದಲೂ ದೈಹಿಕ ಶಕ್ತಿಯ ಸಂಕೇತವಾಗಿ ಬಳಸಲಾಗುತ್ತಿತ್ತು. ಅಲ್ಲದೇ ಕುದುರೆಗಳ ಮಾಲೀಕರಾಗಿರುವುದು ಪುರಾತನ ಗ್ರೀಕರಿಗೆ ಸಮಾಜದಲ್ಲಿ ಉನ್ನತ ಸ್ಥಾನವನ್ನು ಒದಗಿಸುತ್ತಿತ್ತು. ಗ್ರೀಕ್ ಪುರಾಣಗಳ ಪ್ರಕಾರ ಸೆಂಟಾರ್ ಮಾನವನ ತಲೆ ಮತ್ತು ಎದೆ ಹಾಗೂ ಕುದುರೆಯ ದೇಹ ಹೊಂದಿದ ಪ್ರಾಣಿಯಾಗಿದ್ದು ನಾಗರೀಕತೆ ಮತ್ತು ಮಾನವತ್ವವನ್ನು ಮರೆತ ಜೀವದ ರೂಪಕಾಲಂಕಾರವಾಗಿ ಬಳಸಲಾಗುತ್ತದೆ.



ಯಾವುದೇ ದೇಶ-ಸಂಸ್ಕೃತಿಯ ಪುರಾಣಗಳಲ್ಲೂ ದೇವತೆಗಳು, ಅರಸರು ಕುದುರೆಗಳ ಮೇಲೆ ಕುಳಿತು ದರ್ಶನ ನೀಡುವದನ್ನು ನಾವು ಗಮನಿಸಬಹುದು. ಚಿತ್ರಕಲೆಯಲ್ಲೂ ಕೂಡ ಅಶ್ವಗಳು ಮಹತ್ವದ ಸ್ಥಾನ ಗಳಿಸಿವೆ. ಚೀನಾದ ತಂಗ್ ಅರಸರ ಸಮಾಧಿಗಳಲ್ಲಿ ಕುದುರೆಗಳ ಚಿತ್ರ ಬಿಡಿಸಿಡಲಾಗಿದೆ. ಲಿಯೋನಾರ್ಡೋ ಡ ವಿಂಚಿ, ಭಾರತದ ಎಂ.ಎಫ್.ಹುಸೇನ್ ಅಶ್ವಗಳನ್ನು ಹೆಚ್ಚಾಗಿ ಪೌರುಷತ್ವಕ್ಕೆ ಸಂವಾದಿಯಾಗಿ ತಮ್ಮ ಚಿತ್ರಕಲೆಗಳಲ್ಲಿ ಬಳಸುತ್ತಿದ್ದರು.

ಕುದುರೆಗಳ ತಳಿ

ಅಶ್ವಗಳನ್ನು ಜಾಗತಿಕವಾಗಿ DAD-IS (Domestic Animal Diversity Information System) ಎಂಬ ಡಾಟಾಬೇಸ್ ಮೇಲೆ ವರ್ಗೀಕರಿಸಲಾಗುತ್ತದೆ. ಇದರ ಪ್ರಕಾರ ಸುಮಾರು 200 ದೇಶಗಳ 1400 ಅಶ್ವಜಾತಿಗಳನ್ನು ಆಯಾ ದೇಶಗಳ ಹೆಸರಿನಲ್ಲೇ ನಮೂದಿಸಿಕೊಳ್ಳಲಾಗಿದೆ.

ಈ ಪಟ್ಟಿಯಲ್ಲಿ ಭಾರತದ ಅರಬ್, ಭೋತಿಯಾ ಪೋನಿ, ಚುಮ್ಮಾರ್ತಿ, ಡೆಕ್ಕನಿ, ಕಾಥಿಯಾವಾರಿ, ಮನಿಪುರಿ, ಮಾರ್ವಾರಿ, ಸ್ಪಿತಿ ಮತ್ತು ಝನ್ಸ್‌ಕಾರಿ ವರ್ಗಗಳನ್ನು ನಮೂದಿಸಲಾಗಿದೆ. ಭಾರತದ ಸರ್ಕಾರಿ ಗೆಜೆಟ್ ಮಾರ್ವಾರಿ, ಕಾಥಿಯಾವಾಡಿ, ಮಣಿಪುರಿ, ಸ್ಪಿತಿ ಮತ್ತು ಝನ್‌ಸ್ಕಾರಿ ಎಂಬ ಐದು ವಿಧಗಳ ಅಶ್ವಗಳ ಬಗ್ಗೆ ಮಾಹಿತಿ ನೀಡುತ್ತದೆ. ಮಾರ್ವಾಡಿ ಅಶ್ವಗಳ ಮೂಲರಾಜಾಸ್ಥಾನದ ಮಾರ್ವಾರ್. ಇವು ಅತ್ಯುತ್ತಮ ಅಶ್ವಗಳಾಗಿದ್ದು ರಜಪೂತ ಅರಸರು ಮಾರ್ವಾರಿ ಜಾತಿಯ ಕುದುರೆಗಳನ್ನೇ ತಮ್ಮ ಸೇನೆಯಲ್ಲಿ ಮತ್ತು ಖಾಸಗಿ ಬಳಕೆಗೆ ಉಪಯೋಗಿಸಿಕೊಳ್ಳುತ್ತಿದ್ದರು.

ಕಾಥಿಯಾವಾಡಿ ಕುದುರೆಗಳ ಮೂಲ ಗುಜರಾತ್. ಇವೂ ಕೂಡಾ ಮಾರ್ವಾರಿ ಕುದುರೆಗಳಂತೆ ಉತ್ತಮ ಜಾತಿಯ ಅಶ್ವಗಳು. ಮಣಿಪುರಿ ಅಶ್ವಗಳು ಈಶಾನ್ಯ ರಾಜ್ಯಗಳ ಮೂಲದ ಪೋನಿಗಳು. ಸ್ಪಿತಿ ಅಶ್ವಗಳು ಹಿಮಾಚಲಪ್ರದೇಶದವು. ಕಠಿಣ ಕಾರ್ಯ ನಿರ್ವಹಣೆಗೆ ಇವು ಹೆಸರುವಾಸಿಯಾಗಿವೆ. ಝನ್ಸ್‌ಕಾರಿ ಅಶ್ವಗಳು ಲಡಾಕ್ ಮೂಲದವು. ಎತ್ತರದ ಪ್ರದೇಶಗಳ ವಾಸಿಸಬಲ್ಲ ಇವು ದೈಹಿಕ ಶ್ರಮದ ಕಾರ್ಯಗಳನ್ನು ಮಾಡಬಲ್ಲವು.

ಅಶ್ವಗಳು ಹರಪ್ಪಾ ನಾಗರೀಕತೆಯ ಕಾಲದಲ್ಲಿ ಇದ್ದುವೇ ಇಲ್ಲವೇ ಎಂಬ ವಿಷಯದ ಬಗ್ಗೆ ದೊಡ್ಡ ಚರ್ಚೆಯೇ ನಡೆದಿತ್ತು. ಸಿಂಧೂ-ಸರಸ್ವತಿ

ನಾಗರೀಕತೆಯಲ್ಲಿ ಅಶ್ವಗಳು ವ್ಯಾಪಕವಾಗಿ ಬಳಸಲ್ಪಡುತ್ತಿದ್ದವು ಎಂದು ಇತಿಹಾಸಕಾರ ಜಿ.ಸಿ. ಪಾಂಡೆ ಅಭಿಪ್ರಾಯಪಡುತ್ತಾರೆ. ಆರ್.ಮೆಡೋ ಮತ್ತು ಎ.ಪಟೇಲ್ ಪ್ರಕಾರ ಹರಪ್ಪ-ಮೊಹೆಂಜದಾರೋ ಉತ್ಖನನಗಳಲ್ಲಿ ಅಶ್ವಗಳ ಅಸ್ತಿತ್ವದ ಬಗ್ಗೆ ಬಲವಾಗಿ ವಾದಿಸಬಲ್ಲ ಒಂದು ಉದಾಹರಣೆಯೂ ಇಲ್ಲ ಎನ್ನುತ್ತಾರೆ. ಹರಪ್ಪ ಮತ್ತು ಸರ್ಕೋಟಾಡಗಳಲ್ಲಿ ದೊರೆತಿರುವ ಸವೆದ ಅಶ್ವಗಳ ಕಾಲಿನ ಮೂಳೆಗಳು ಕುದುರೆಗಳ ಮಾಹಿತಿಯನ್ನು ಗೋಜಲಾಗಿಸಿದೆ.

ದೊರೆತಿರುವ ಅಶ್ವಗಳ ಕಾಲಿನ ಕೆಲವು ಮೂಳೆಗಳ ಆಧಾರದ ಮೇಲೆ ಕೆಲವು ಪುರಾತತ್ವಶಾಸ್ತ್ರಜ್ಞರು ಅವಕ್ಕೆ ಈಕ್ವಸ್ ಸಿವಾಲೆನ್ಸಿಸ್ ಅಥವಾ ಶಿವಾಲಿಕ್ ಹಾರ್ಸಸಸ್ ಎಂಬ ಹೆಸರಿಟ್ಟೀದ್ದಾರೆ. ಇವಕ್ಕೆ 34 ಪಕ್ಕೆಲುಬುಗಳಿದ್ದವಂತೆ ಹಾಗೂ ಇವು ಹತ್ತಾರು ಸಾವಿರ ವರ್ಷಗಳ ಪುರಾತನ ಪ್ರಾಣಿಗಳು ಎನ್ನುತ್ತಾರೆ ಬಿ.ಜೆ. ಮೆಕ್ ಫ್ಲಾಡೆನ್. ವಿರೋಧಿ ವಾದದ ಪ್ರಕಾರ ಅಶ್ವಗಳಿಗೆ 18 ರ ಎರಡು ಜೋಡಿ ಪಕ್ಕಲುಬುಗಳು ಇರಲು ಸಾಧ್ಯವೇ ಹೊರತು 17 ರ ಎರಡು ಜೋಡಿಯ ಪಕ್ಕೆಲುಬುಗಳ ಅಶ್ವಗಳು ಅಸ್ತಿತ್ವದಲ್ಲೇ ಇಲ್ಲ ಎಂಬ ವಾದವಿದೆ. ಆರ್ಯರ ಮತ್ತು ಋಗ್ವೇದದ ಕಾಲದಲ್ಲಿ ಅಶ್ವಗಳನ್ನು ರಥಗಳನ್ನು ಎಳೆಯಲು ಬಳಸಲಾಗುತ್ತಿತ್ತು.

ಸಮುದ್ರಮಥನದಲ್ಲಿ ಅಶ್ವರೂಪದ ಜನನವಾಯ್ತು ಎಂಬ ಬಗ್ಗೆ ವೇದಗಳಲ್ಲಿ ಉಲ್ಲೇಖವಿದೆ. ಇದು ಅಶ್ವವಲ್ಲ ವೇದಗಳಲ್ಲಿ ಬಳಸಲಾದ ಪದವನ್ನು ಅಕ್ಷರಶಃ ಹಾಗೆ ಅರ್ಥಮಾಡಿಕೊಳ್ಳಲಾಗುವುದಿಲ್ಲ, ಅವಕ್ಕೆ ಗೂಢಾರ್ಥವಿರುತ್ತದೆ ಅಶ್ವ ಎಂಬ ಪದ ಋಷಿಯನ್ನು ಉಲ್ಲೇಖಿಸಿ ಹೇಳಲಾದುದು ಎಂಬ ವಾದವೂ ಇದೆ. ಉದಾ: ಗೋಮತಿ ಅಶ್ವವತಿ ಎಂಬ ಪದವನ್ನು ಉಷಾಕಾಲ ಹಾಗೂ ಅದರ ಶಕ್ತಿ ಮತ್ತು ಚೈತನ್ಯಕ್ಕೆ ಅನ್ವಯಿಸಲಾಗುತ್ತದೆ. ಅಶ್ವ ಎಂದರೆ ಕುದುರೆಯೇ ಎನ್ನುವುದು ಅಸಹಜ. ಹಾಗೆಯೇ ಅಶ್ವಮೇಧ ಎಂಬುದು ಪಕ್ಷಿಗಳ ಬಲಿಗೆ ಸಂಬಂಧಿಸಿದೆ (ಸುಭಾಷ್ ಕಾಕ್-ಇತಿಹಾಸಜ್ಞ). ಎರಡೂ ಕಡೆ ಸಾಕಷ್ಟು ವಾದ-ವಿವಾದಗಳು ನಡೆದಿದ್ದು ಯಾರೊಬ್ಬರೂ ಇತರರ ವಾದವನ್ನು ಕೇಳಲು ಒಪ್ಪಲು ತಯಾರಿಲ್ಲ. ಹೀಗಾಗಿ ಭಾರತದಲ್ಲಿ ಅಶ್ವಗಳ ಅಸ್ತಿತ್ವಕ್ಕೆ ತಳಹದಿಯೇ ಇಲ್ಲ.

ವಿದೇಶಿ ತಳಿಗಳು

ಎಕ್ಯುಪಿಎಸ್ ಎಂಬ ಕುದುರೆ ಜಾತಿಯು ಫ್ರಾನ್ಸಿನ ಕುದುರೆಯಾಗಿದ್ದು ಸವಾರಿ ಮಾಡಲು ಅದನ್ನು ಬಳಸುತ್ತಾರೆ. ಬರೋಕ್ ಕುದುರೆಯು ಸದೃಢ ಮಾಂಸ

ಖಂಡಗಳನ್ನು ಹೊಂದಿದ್ದು ಕಠಿಣ ಕಾರ್ಯಗಳಿಗೆ ಬಳಸುತ್ತಾರೆ. ಕೆನಡಿಯನ್ ಕಟಿಂಗ್ ಹಾರ್ಸ್ ಕೆನಡಾದ ಮೂಲದ್ದು. ಕಾಬ್ ಹಾರ್ಸ್ ಎಂಬುದು ಸಣ್ಣ, ಬಲವಾದ ಕುದುರೆಯಾಗಿದೆ. ಕಲೋನಿಯಲ್ ಸ್ಪಾನಿಶ್ ಹಾರ್ಸ್ ಉತ್ತರ ಅಮೇರಿಕಾ ಮೂಲದ್ದು. ಡ್ರಾಫ್ಟ್ ಹಾರ್ಸ್ ಕಷ್ಟದ ಕೆಲಸಗಳಿಗೆ ಬಳಸುವಂತಹುದು. ಫೆರಲ್ ಹಾರ್ಸ್ ಎಂಬುದು ಕಾಡು ಕುದುರೆಯ ಜಾತಿಯದ್ದು. ಗೇಯ್ಟೆಡ್ ಹಾರ್ಸ್, ಗ್ರೇಡ್ ಹಾರ್ಸ್, ಹ್ಯಾಕ್, ಹಂಟರ್, ಇಬೇರಿಯನ್ ಹಾರ್ಸ್,ಇಂಡಿಯನ್ ಹಾಫ್ ಬ್ರೀಡ್, ಮೂರ್ ಲ್ಯಾಂಡ್ ಪೋನಿ ಬ್ರೀಡ್, ನ್ಯೂಜಿಲ್ಯಾಂಡ್ ವಾರ್ಮ್ ಬ್ಲಡ್, ಹೆವಿ ವಾರ್ಮ್ ಬ್ಲಡ್, ವಾರ್ಮ್ ಬ್ಲಡ್, ಓರಿಯಂಟಲ್ ಹಾರ್ಸ್, ಪಾರ್ಟ್ ಅರೇಬಿಯನ್, ಪೋಲೋ ಪೋನಿ, ಸ್ಪೋರ್ಟ್ ಹಾರ್ಸ್, ಸ್ಟಾಕ್ ಹಾರ್ಸ್, ವಿಂಡ್ಸರ್ ಗ್ರೇ ಮುಂತಾದುವು ಈಚಿನ ಅಶ್ವ ವರ್ಗಗಳು.

ಕುದುರೆಗಳ ವರ್ಗದಲ್ಲಿ ನೂರಾರು ಜಾತಿಗಳಿವೆ. ಅವೆಲ್ಲವನ್ನೂ ವೈಜ್ಞಾನಿಕವಾಗಿ ಅಶ್ವ ತಳಿ ಎಂದು ವರ್ಗೀಕರಿಸುವುದಿಲ್ಲ. ಆದರೂ ಪೋನಿಗಳನ್ನು ಒಂದು ಪ್ರತ್ಯೇಕ ವರ್ಗವಾಗಿ ಗುರುತಿಸಲಾಗಿದೆ.

ಪೋನಿಗಳು

ಮೂಲಭೂತವಾಗಿ ಕುದುರೆಗಳ ವರ್ಗಕ್ಕೆ ಸೇರಿದ್ದರು ಇವುಗಳ ಎತ್ತರ (56 ಅಂಗುಲ) ಕಡಮೆ ಇರುತ್ತದೆ. ಇವುಗಳ ಕೂದಲು ದಟ್ಟವಾಗಿದ್ದು ಒಂದೇ ರೀತಿಯ ಮೈ ಬಣ್ಣ ಇರುತ್ತದೆ. ಚಿಕ್ಕ ಕಾಲುಗಳು, ಅಗಲದ ದೇಹ, ಸಣ್ಣ ಕುತ್ತಿಗೆ ಮತ್ತು ಅಗಲವಾದ ಹಣೆ ಹೊಂದಿರುತ್ತವೆ. ಸೌಮ್ಯ ಸ್ವಭಾವದ ಇವುಗಳ ಬುದ್ಧಿ ಮಟ್ಟ ಜಾಸ್ತಿ ಇದೆ. ಪೋನಿ ಜಾತಿಯಲ್ಲಿ ಸುಮಾರು 97 ಹೆಚ್ಚು ಉಪ ವರ್ಗಗಳಿವೆ.

ವೆಲ್ಶ್, ಡಾರ್ಟ್ ಮೂರ್, ಎಕ್ಸ್ ಮೂರ್, ಕೊನೆಮಾರಾ, ನ್ಯೂ ಫಾರೆಸ್ಟ್, ಹೈಲ್ಯಾಂಡ್, ಡೇಲ್, ಫೆಲ್ ಮುಂತಾದುವು ಪೋನಿ ವರ್ಗದ ಅಶ್ವಗಳು. ಬಂಡಿಗಳನ್ನು ಎಳೆಯಲು, ಹೊಲ ಉಳಲು ಸೌಥ್ ಟೈರೋಲ್, ಹಾಫ್ಲಿಂಗರ್ ಜಾತಿಯ ಪೋನಿಗಳನ್ನು ಬಳಸಲಾಗುತ್ತದೆ.

ಅರೇಬಿಯನ್ ಕುದುರೆಗಳು

ಅರೇಬಿಯನ್ ಕುದುರೆಗಳ ಇತಿಹಾಸ ಅನೇಕ ದಂತಕಥೆಗಳಿಂದ ತುಂಬಿದ್ದು ಸತ್ಯ–ಅಸತ್ಯವನ್ನು ವರ್ಗೀಕರಿಸುವುದೇ ಶ್ರಮದಾಯಕ ಕಾರ್ಯವಾಗಿದೆ. ಕ್ರಿ.ಶ.7ನೇ

ಶತಮಾನದಲ್ಲಿ ಅರೇಬಿಯನ್ ದೇಶಗಳಲ್ಲಿ ವಿಕಾಸವಾದ ಶಕ್ತಿಶಾಲಿ ಅಶ್ವಗಳು ಇವು. ಇವುಗಳಲ್ಲಿ ಇತರೇ ವರ್ಗದ ಅಶ್ವಗಳಿಗಿಂತ ಬೆನ್ನುಹುರಿಯ ಒಂದು ಮೂಳೆ ಹೆಚ್ಚಾಗಿರುತ್ತದೆ.

ಅರೇಬಿಯನ್ ಅಶ್ವಗಳಲ್ಲಿ ಸೌದಿ ಅರೇಬಿಯಾದ ನಾಜ್ದ್ ಜಾತಿ ಶ್ರೇಷ್ಠವಾದುದು ಎನ್ನಲಾಗುತ್ತದೆ. ವಿಪರ್ಯಾಸವೆಂದರೆ ಅತ್ಯಂತ ಶಕ್ತಿಶಾಲಿ ಅರೇಬಿಯನ್ ಅಶ್ವಗಳನ್ನು ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಬ್ರೀಡ್ ಮಾಡಲಾಗುತ್ತಿದೆ.

ಏಷ್ಯಾದ ಅಶ್ವಜಾತಿಗಳು ಅರೇಬಿಯನ್ ಅಥ್ವಾ ಪರ್ಶಿಯನ್ ಬ್ರೀಡ್‌ಗಳೊಂದಿಗೆ ಸಂಕರಗೊಂಡಿವೆ. ತುರ್ಕೋಮನ್, ಅಖಾಲ್ ತೆಕೆ, ತಾರ್ತರ್, ಕಿರ್ಗಿಸ್, ಮಂಗೋಲ್ ಮತ್ತು ಕೊಸ್ಸಾಕ್ ಖ್ಯಾತ ಏಷ್ಯನ್ ಮೂಲದ ಅಶ್ವಗಳು.

ಅಮೇರಿಕನ್ ಅಶ್ವಗಳು

ವಿಶ್ವದಲ್ಲಿ ಉದ್ದ ದೇಹದ, ವೇಗ ಮತ್ತು ಬುದ್ಧಿವಂತಿಕೆಗೆ ಹೆಸರಾದ ಅಮೇರಿಕನ್ ಬ್ರೀಡ್ ಅಶ್ವಗಳು ಪ್ರಖ್ಯಾತವಾಗಿವೆ. ಇತರೆ ಅಶ್ವಗಳನ್ನು ವೇಗದಲ್ಲಿ ಕಾಲು ಮೈಲಿಗಿಂತಾ ಮೊದಲೇ ಹಿಂದೆ ಹಾಕಬಲ್ಲ ಅದ್ಭುತ ವೇಗ ಇವಕ್ಕಿದೆ. ಆದುದರಿಂದ ಇವನ್ನು ಕ್ವಾರ್ಟರ್ ಹಾರ್ಸ್ ಎಂದು ಕರೆಯುವ ಪದ್ಧತಿ ಇದೆ. ಇದೇ ವರ್ಗದಲ್ಲಿ ಅಮೇರಿಕನ್ ಕ್ವಾರ್ಟರ್ ಪೋನಿ ಕೂಡಾ ಇದೆ. ಮೋರ್ಗನ್ ಅಶ್ವಗಳು, ಅಪಲೂಸಾ, ಟೆನೆಸಿ ಅಶ್ವ, ಅಮೇರಿಕನ್ ಸ್ಯಾಡಲ್ ಬ್ರೀಡ್, ಮಿಸ್ಸೋರಿ ಫಾಕ್ಸ್, ಇಂಗ್ಲೀಷ್ ಹಾಕನಿ, ಕ್ಲೀವ್‌ಲ್ಯಾಂಡ್ ಬೇ ಕ್ಯಾರಿಯೇಜ್ ಅಮೇರಿಕದ ಅಶ್ವಗಳ ಪ್ರಮುಖ ಜಾತಿಗಳು. ಇತರೆ ಜಾಣ ಅಶ್ವಗಳ ವರ್ಗದಲ್ಲಿ ಜರ್ಮನ್ ಹೋಲ್‌ಸ್ಟೀನ್, ಹ್ಯಾನೋವೇರಿಯನ್, ಪ್ರಶ್ಯನ್, ಅಂಡಲೂಸಿಯನ್ ಜಾತಿಗಳಿವೆ.

ಇತರೇ ವರ್ಗಗಳು

ಹೊರೆಯನ್ನು ಹೊರುವ, ಕೃಷಿ ಕೆಲಸಗಾರ ಅಶ್ವಗಳು ಮಧ್ಯಕಾಲೀನ ಇತಿಹಾಸದಿಂದಲೂ ಬಳಕೆಯಲ್ಲಿವೆ. ಸಫೋಲ್ಕ್, ಕ್ಲೈಡೆಸ್ಡೇಲ್, ಫ್ರೆಂಚ್ ಪಚೆರಾನ್, ಬೆಲ್ಜಿಯನ್ ಹಾರ್ಸ್, ಜರ್ಮನ್ ನೋರಿಕರ್, ಆಸ್ಟ್ರಿಯನ್ ಪಿನ್‌ಸ್‌ಗೌರ್ ಜಾತಿಗಳಿವೆ. ಆಧುನಿಕ ಕಾಲದಲ್ಲಿ ಟ್ರಾಕ್ಟರ್ ಬಳಕೆ ಹೆಚ್ಚಿದಂತೆ ಕೃಷಿಕಾರ್ಯದಿಂದ ಇವನ್ನು ಹಿಂತೆಗೆದುಕೊಳ್ಳಲಾಗಿದೆ.

ಭಾರತದ ತಳಿಸಂವರ್ಧಕ ಕೇಂದ್ರಗಳು

ಭಾರತದಲ್ಲಿ 79 ಅಶ್ವ ತಳಿ ಸಂವರ್ಧಕ ಕೇಂದ್ರಗಳಿವೆ. ಕರ್ನಾಟಕದಲ್ಲಿ ಅಂತಹ 8 ಕೇಂದ್ರಗಳಿವೆ. ಇಲ್ಲಿ ಅಶ್ವಗಳ ತಳಿಯನ್ನು ಬೆಳೆಸುವ ಕ್ರಿಯೆಯನ್ನು ವೈಜ್ಞಾನಿಕವಾಗಿ

ನಿರ್ವಹಿಸಲಾಗುತ್ತದೆ. ಇಂತಹಾ ಕೇಂದ್ರಗಳಲ್ಲಿ ಬೆಳೆಸಿದ ಅಶ್ವಗಳನ್ನು ಆಸಕ್ತರು ದೊಡ್ಡ ಮೊತ್ತ ನೀಡಿ ಖರೀದಿಸುತ್ತಾರೆ.

ಕುದುರೆಗಳನ್ನು ಖರೀದಿಸುವವರು ಅದರ ಮುಖದ ಲಕ್ಷಣ, ಕಿವಿಗಳು, ಕಣ್ಣೂಗಳು, ಮೂಗಿನ ಹೊಳ್ಳೆಗಳು, ಬಾಯಿ, ಕುತ್ತಿಗೆ, ಅಶ್ವದ ಭುಜಗಳ ನಡುವಿನ ಸ್ಥಳ, ಬೆನ್ನು, ಪಕ್ಕೆಗಳು, ಎದೆ, ಭುಜ, ಮುಂಗಾಲು, ಮೊಣಕಾಲು, ಗೊರಸು ಮತ್ತು ಅದರ ನಡುವಿನ ಸ್ಥಳ ಮುಂತಾದ ಅಂಶಗಳ ಬಗ್ಗೆ ಕೂಲಂಕುಶವಾಗಿ ನೋಡುತ್ತಾರೆ. ಓಟವನ್ನು ಗಮನಿಸಲು ಅದರ ಮೇಲೆ ಕುಳಿತು, ದೂರದಲ್ಲಿ ನಿಂತು ಪರೀಕ್ಷಿಸಲಾಗುತ್ತದೆ. ಸಲ್ಲಕ್ಷಣಗಳನ್ನು ಹೊಂದಿದ ಕುದುರೆ ಹೆಚ್ಚಿನ ಹಣ ಗಳಿಸುತ್ತದೆ. ಕುದುರೆ ನಿಲ್ಲುವ ಭಂಗಿಯಲ್ಲಿ ಓರೆಗಾಲು, ಸೊಟ್ಟಗಾಲು, ಕತ್ತರಿ ಕಾಲು ಹೊಂದಿದ್ದರೆ ಅದು ಬಿಕರಿಯಾಗುವುದಿಲ್ಲ.

ಕುದುರೆ ಖರೀದಿಗಾರರು ಅದರ ವಂಶಾವಳಿಯನ್ನು ತಪ್ಪದೇ ನೋಡುತ್ತಾರೆ. ಅದರ ಎತ್ತರ, ದಪ್ಪ, ಉದ್ದ, ವರ್ತನೆ, ಚುರುಕುತನ, ಬಣ್ಣ, ತರಬೇತುದಾರ, ತರಬೇತಿ ಸ್ಥಳ ಕೂಡಾ ಮುಖ್ಯವಾಗುತ್ತವೆ. (ಮಾಹಿತಿ: ಪ್ರೊ.ಡಿ.ಜೆ.ಕೇಸ್– ದಿ ಹಾರ್ಸ್, ಪ್ರಕಟಣೆ 1953 ರಿಚರ್ಡ್ ಅಂಡ್ ಕಂಪನಿ, ಟೊರಾಂಟೋ)

ಒಲ್ಡ್ ಫೀಲ್ಡ್ ಹೋವೇ ಎಂಬಾತ ತನ್ನ ಗ್ರಂಥ ದಿ ಹಾರ್ಸಸ್ ಅಂಡ್ ಮಿಥ್‌ನಲ್ಲಿ (1923) ಸುಮಾರು 25 ರೀತಿಯಲ್ಲಿ ಅಶ್ವಗಳ ಸಾಂಪ್ರದಾಯಿಕ ಬಳಕೆಗಳನ್ನು ಗುರುತಿಸುತ್ತಾನೆ. ಇಲ್ಲಿ ಯಕ್ಷರ ಅಶ್ವಗಳು, ಅಪ್ಸರೆಯರ ಅಶ್ವಗಳು, ಭೂತಗಳ ಅಶ್ವಗಳು, ಪ್ರೇತಾಶ್ವಗಳು, ಬುಡಕಟ್ಟು ಜನರ ಅಶ್ವಗಳು, ಟ್ರೋಜನ್ ಅಶ್ವ, ಹವ್ಯಾಸಿ ಅಶ್ವಗಳು, ಮದುವೆಯಲ್ಲಿ ಬಳಸುವ ಅಶ್ವಗಳು, ಸೂರ್ಯನ ಕುದುರೆ, ಚಂದ್ರನ ಕುದುರೆ, ಗಾಳಿಯ ಕುದುರೆ, ಯಜ್ಞದ ಕುದುರೆ, ಬಲಿ ಕುದುರೆ ಇತ್ಯಾದಿ ವರ್ಗೀಕರಣಗಳನ್ನು ವಿವರವಾಗಿ ಪ್ರಸ್ತುತ ಪಡಿಸಲಾಗಿದೆ.

ಯುದ್ಧಗಳಲ್ಲಿ ಅಶ್ವಗಳು

ಅಂದು ಭಾರತದ ಅಶ್ವದಳವನ್ನು ಕುಲಂ ಎಂದು ಕರೆಯಲಾಗುತ್ತಿತ್ತು. ಅಂದಿನ ಬಹುತೇಕ ಅಶ್ವಗಳು ಸಿಂಧೂ ದೇಶ (ಮೊಹೆಂಜದಾರೋ), ಬಹಲಿಕ (ಆಫ್ಘಾನಿಸ್ತಾನ–ಉಜ್ಬೇಕಿಸ್ತಾನ) ಅಥವಾ ಕಾಂಭೋಜ (ಕಾಂಬೋಡಿಯಾ) ದಿಂದ ಬಂದವುಗಳಾಗಿದ್ದವು. ಕಾಂಭೋಜ ದೇಶವನ್ನು ಅಶ್ವಗಳ ನೆಲೆ ಎಂದೇ ಕರೆಯಲಾಗುತ್ತಿತ್ತು. ಗುರ್ಜರ ಪ್ರತೀಹಾರ ಅರಸ ಭೋಜನಲ್ಲಿ ಅತ್ಯುತ್ತಮ

ಅಶ್ವದಳವಿತ್ತು ಎನ್ನಲಾಗಿದೆ. ಅರಬ್ ವ್ಯಾಪಾರಿ ಸುಲೈಮಾನ್ ಎಂಬಾತ ಅಶ್ವಗಳನ್ನು ಭೋಜನಿಗೆ ತಂದು ಕೊಡುತ್ತಿದ್ದನಂತೆ.

ಅಲೆಕ್ಸಾಂಡರ್ ಭಾರತದ ಮೇಲೆ ದಂಡಯಾತ್ರೆಗೆ ಬಂದಾಗ ಆತನಲ್ಲಿದ್ದ ಅಶ್ವದಳದ ಮಾಹಿತಿಗಳು ದಾಖಲಿಸಲ್ಪಟ್ಟಿವೆ. ಬಾಣ ಕವಿ ವರ್ಣಿಸುವಂತೆ ಚಕ್ರವರ್ತಿ ಹರ್ಷನ ಸೈನ್ಯವು ವನಾಯು, ಆರತ್ತ, ಕಾಂಭೋಜ, ಭಾರದ್ವಾಜ, ಸಿಂಧ್ ಮತ್ತು ಪರ್ಶಿಯದಿಂದ ತರಿಸಲಾದ ಅಶ್ವಗಳಿಂದ ಕೂಡಿತ್ತು. ಮಾರ್ಕೊಪೋಲೋ ಹೇಳುವಂತೆ ಉತ್ತಮ ಜಾತಿಯ ಅಶ್ವಗಳ ತಳಿಯನ್ನು ಭಾರತದಲ್ಲಿ ಸೃಷ್ಟಿಸಲಾಗುತ್ತಿರಲಿಲ್ಲ.

ಮಹಾಭಾರತದಲ್ಲಿ ಕುದುರೆ ಜೀನುಗಳ ಬಗ್ಗೆ ಪಿಥಾಕ, ಪಿಥಮರ್ದ, ಖಲೀನ, ಅಶ್ವತಾರ, ಪರಿಸ್ತೋಮ ಇತ್ಯಾದಿಯಾಗಿ ಉಲ್ಲೇಖಿಸಲಾಗಿದೆ. ಅಂದಿನ ಅಶ್ವದಳ ಭರ್ಜಿ (ಸಕ್ತಿ), ಈಟಿ (ಪ್ರಾಸ), ಕಿರುಗತ್ತಿ (ರಸ್ತಿ), ಗಧೆ, ಸುತ್ತಿಗೆ (ಮುದ್ಗರ) ಮುಂತಾದುವುಗಳನ್ನು ಬಳಸುತ್ತಿದ್ದರು ಎನ್ನಲಾಗಿದೆ. ಅಜಂತಾದ ಚಿತ್ರಗಳಲ್ಲಿ ಕುದುರೆಗಳಿಗೆ ಜೀನು ತೊಡಿಸಿದ ಚಿತ್ರಗಳನ್ನು ಕಾಣಬಹುದಾಗಿದೆ. ಇತಿಹಾಸಕಾರ ಅಲ್ಬರೂನಿಯು ಭಾರತೀಯರು ಜೀನುಗಳಿಲ್ಲದೇ ಕುದುರೆ ಸವಾರಿ ಮಾಡುತ್ತಿದ್ದರು ಎನ್ನುತ್ತಾನೆ.

ವಿಶ್ವದ ಪುರಾತನ ಯುದ್ಧಗಳಲ್ಲಿ ಕುದುರೆಯ ಬಳಕೆ ವ್ಯಾಪಕವಾಗಿತ್ತು. ಕತ್ತಿ, ಭರ್ಜಿ ಹಿಡಿದ ಸೈನಿಕರು ಯುದ್ಧಗಳಲ್ಲಿ ತೊಡಗುತ್ತಿದ್ದರು. ಕಳೆದ ಶತಮಾನದವರೆಗೂ ಸೈನ್ಯದಲ್ಲಿದ್ದ ಅಶ್ವಗಳು ಇದೀಗ ರಣರಂಗ ಪ್ರವೇಶ ಮಾಡುತ್ತಿಲ್ಲ. ಕೇವಲ ಗಡಿ ರಕ್ಷಣೆ ಪಡೆಯಲ್ಲಿವೆ.

ಸಿಕ್ಕಿಂನ ಚೀನಾ ಗಡಿಯಲ್ಲಿ ಪಹರೆ ಕಾರ್ಯದಲ್ಲಿ ತೊಡಗಿದ್ದ ಹರಭಜನ್ ಸಿಂಗ್ ಎಂಬ ಭಾರತೀಯ ಸೈನಿಕ ಕಾಣೆಯಾಗಿದ್ದು (1968) ಆತನ ಆತ್ಮ ಈಗಲೂ ಕುದುರೆಯ ಮೇಲೆ ಪಹರೆ ಕಾರ್ಯ ನಡೆಸುತ್ತದೆ ಎಂಬ ಬಲವಾದ ನಂಬಿಕೆ ಈಗಲೂ ಅಲ್ಲಿನ ಸೈನಿಕರಲ್ಲಿದೆ. ಹರಭಜನ್ ಸಿಂಗ್‌ಗಾಗಿ ಮಂದಿರವೊಂದನ್ನೂ ನಾಥುಲಾ ಪಾಸ್ ಬಳಿ ನಿರ್ಮಿಸಲಾಗಿದೆ.

ವಿಶ್ವದೆಲ್ಲೆಡೆ ಕುದುರೆಯ ಮೇಲೆ ಕುಳಿತು ನಗರದ ಪಹರೆ ಕಾರ್ಯ ಮಾಡುವ ಮೌಂಟೆಡ್ ಪೋಲಿಸ್ ಬಳಕೆ ಇದೆ. ಎತ್ತರದ ಕುದುರೆಗಳು ಸವಾರನಿಗೆ ಮತ್ತು ಆತನ ಕರ್ತವ್ಯಕ್ಕೆ ಒಂದು ಗತ್ತನ್ನು ನೀಡುತ್ತವೆ. ಮೈಸೂರಿನ ರಸ್ತೆಯಲ್ಲಿ ಸಾಕಷ್ಟು ಬಾರಿ

ಮೌಂಟೆಡ್ ಪೋಲೀಸ್ ಕಾಣ ಸಿಗುತ್ತಾರೆ. ಹಾಗೆಯೇ ಮೈಸೂರಿನಲ್ಲಿ ಬಡವರ ರಥ ಕುದುರೆ ಟಾಂಗಾ ಪ್ರಯಾಣದ ಮೋಜು ಇನ್ನೆಲ್ಲೂ ದೊರೆಯದು.

ಉತ್ತಮ ಅಶ್ವದ ಲಕ್ಷಣಗಳು

ಯುದ್ಧ ಕಲೆಯ ಬಗ್ಗೆ ಇರುವ ಪುರಾತನ ಪುಸ್ತಕಗಳೆಲ್ಲಾ ಯುದ್ಧದಲ್ಲಿ ಉತ್ತಮ ಅಶ್ವಗಳ ಆಯ್ಕೆಯ ಬಗ್ಗೆಯೇ ಪ್ರಾಶಸ್ತ್ಯ ನೀಡಿವೆ. ಅರ್ಥಶಾಸ್ತ್ರದ ಪ್ರಕಾರ ಕಾಂಭೋಜ, ಸಿಂಧೂ, ಆರತ್ತಾ ಮತ್ತು ವನಾಯು ದೇಶಗಳ ಅಶ್ವಗಳು ಉತ್ತಮ ಜಾತಿಯವು. ಬಾಹಲಿಕ, ಪಾಪೇಯ, ಸೌವೀರಾ ಮತ್ತು ತೈತಲದ ಅಶ್ವಗಳು ಮಧ್ಯಮ ದರ್ಜೆಯವು. ಅಶ್ವಗಳನ್ನು ಅವುಗಳ ಪ್ರಮಾಣಬದ್ಧ ದೈಹಿಕ ಲಕ್ಷಣಗಳ ಆಧಾರದ ಮೇಲೆ ವರ್ಗೀಕರಿಸಲಾಗುತ್ತಿತ್ತು. ಕೌಟಿಲ್ಯನ ಪ್ರಕಾರ ಉತ್ತಮ ಅಶ್ವದ ಮುಖ 32 ಅಂಗುಲಗಳಿರಬೇಕು, ಅಶ್ವದ ಉದ್ದ ಅದರ ಮುಖದ ಐದುಪಟ್ಟು ಹೆಚ್ಚಾಗಿರಬೇಕು. ಅದ ಕಾಲು 20 ಅಂಗುಲಗಳಷ್ಟು ಉದ್ದವಿರಬೇಕು. ಅಶ್ವವು ಕಾಲುಗಳ ನಾಲ್ಕು ಪಟ್ಟು ಎತ್ತರವಿರಬೇಕು ಅಂದರೆ 80 ಅಂಗುಲ ಎತ್ತರವಿರಬೇಕು. ಇಂತಹ ವಿವರಣೆಗಳನ್ನು ಗರುಡಪುರಾಣ ಮತ್ತು ಶುಕ್ರನೀತಿಗಳಲ್ಲೂ ಕಾಣಬಹುದು. ಈ ಅಳತೆಯ ಲೆಕ್ಕಾಚಾರಗಳು ಅಶ್ವದ ವಯಸ್ಸಿಗೆ ತಕ್ಕಂತೆ ಬದಲಾಗುತ್ತ ಹೋಗುತ್ತವೆ.

ಅಶ್ವಗಳನ್ನು ಅವುಗಳ ಬಣ್ಣ ಮತ್ತು ಸುಳಿಗಳ ಆಧಾರಗಳ ಮೇಲೂ ವರ್ಗೀಕರಿಸಲಾಗುತ್ತಿತ್ತು. ಇತಿಹಾಸಕಾರ ಮೆಗಾಸ್ಥನೀಸ್ ಹೇಳುವಂತೆ ಭಾರತದಲ್ಲಿ ಕ್ರಿ.ಪೂ. 4 ನೇ ಶತಮಾನದಲ್ಲೇ ಅಶ್ವಗಳ ತರಪೇತುದಾರರಿದ್ದರು. ಇವರು ಅಶ್ವಗಳನ್ನು ಅವುಗಳ ವೃತ್ತಾಕಾರ ಚಲನೆ, ಮುಖ ಮತ್ತು ಕಿವಿಗಳ ಚಲನೆ, ನೆಗೆತ, ಓಟ, ಸೂಚನೆಗಳನ್ನು ಪಾಲಿಸುವ ಚುರುಕುತನದ ಐದು ಗುಣಗಳನ್ನು ಕಲಿಸುತ್ತಿದ್ದರು. ಜೊತೆಗೆ ಅವುಗಳ ಶಕ್ತಿ (ವಿಕ್ರಮ), ಉತ್ತಮ ಶ್ವಾಸ (ಭದ್ರ ಶ್ವಾಸ), ಹೊರೆಯನ್ನು ಹೊತ್ತು ಓಡುವ ಗುಣ (ಭಾರವಾಹ್ಯ) ಮುಂತಾದುವುಗಳು ಮೂರು ಲಕ್ಷಣಗಳು (ಮಾರ್ಗ).

ಅಶ್ವಗಳು ಸುತ್ತಲ 350 ಡಿಗ್ರಿಗಳವರೆಗೆ ನೋಡಬಲ್ಲವು. ಕತ್ತಲು ಮತ್ತು ಬೆಳಕಿನಲ್ಲೂ ನೋಡಬಲ್ಲ ವಿಶೇಷ ಶಕ್ತಿ ಇವುಗಳಿಗಿದೆ. ಅಶ್ವಗಳಿಗೆ ಎರಡು ಘ್ರಾಣ ಸಂಬಂಧೀ ಅಂಗಗಳಿವೆ. ಇವು ಕುದುರೆಗಳ ಮೂಗಿನ ಹೊಳ್ಳೆ ಮತ್ತು ಮೂಗಿನ

ಕುಳಿಗಳಲ್ಲಿದೆ. ಎರಡನೆಯ ಅಂಗವನ್ನು ಜಾಕೋಬ್‌ಸನ್ಸ್ ಆರ್ಗನ್ ಎಂದು ಕರೆಯಲಾಗುತ್ತದೆ. ಮೂಗಿನಿಂದ ನೇರವಾಗಿ ಇವು ಮೆದುಳಿಗೆ ಸಂಪರ್ಕ ಕಲ್ಪಿಸುತ್ತವೆ. ಅಶ್ವಗಳ ಶ್ರವಣ ಶಕ್ತಿ ಕೂಡಾ ಉತ್ತಮವಾಗಿರುತ್ತದೆ. ಅವುಗಳ ಸೂಕ್ಷ್ಮ ಅಂಗಗಳೆಂದರೆ ಕಣ್ಣು, ಕಿವಿ ಮತ್ತು ಮೂಗು. ಇಲ್ಲಿ ಮುಟ್ಟುವುದರಿಂದ ಸವಾರರು ಅಶ್ವಗಳೊಂದಿಗೆ ಉತ್ತಮ ಸಂಬಂಧ ರೂಢಿಸಿಕೊಳ್ಳುತ್ತಾರೆ.

ಅಶ್ವಗಳ ಚಲನೆಯನ್ನು ಬೀಟ್ ಎಂದು ಅಳೆಯುತ್ತಾರೆ. ನಡೆಯುವ ಕುದುರೆಗಳು ಪ್ರತೀ ಗಂಟೆಗೆ 6.4 ಕಿಲೋಮೀಟರ್ ಅಥವಾ ನಾಲ್ಕು ಬೀಟ್ ದೂರ ಕ್ರಮಿಸಬಲ್ಲವು. ನಿಧಾನವಾಗಿ ಓಡುವಾಗ ಅವು ಗಂಟೆಗೆ ಸುಮಾರು 13–14 ಕಿಲೋಮೀಟರ್ (ಟೂ ಬೀಟ್ ಟ್ರಾಟ್) ಕ್ರಮಿಸುತ್ತವೆ. ಓಡುವ ಕುದುರೆಗಳು ಗಂಟೆಗೆ ಸುಮಾರು 19–24 ಕಿಲೋಮೀಟರ್ (ಥ್ರೀ ಬೀಟ್) ಕ್ರಮಿಸುತ್ತವೆ. ನಾಲ್ಕನೇ ಹಂತದ ನಾಗಾಲೋಟದಲ್ಲಿ ಸುಮಾರು 40–48 ಕಿಲೋಮೀಟರ್ (ಗ್ಯಾಲಪ್) ಕ್ರಮಿಸುತ್ತವೆ.

ಹೀಗೆ ಕುದುರೆಗಳು ನಮ್ಮೊಂದಿಗೆ ಬದುಕುತ್ತಾ ಸುಮಾರು 6000 ವರ್ಷಗಳು ಕಳೆದಿವೆ. ಈಗಿನ ಪರಿಸ್ಥಿತಿಯಲ್ಲಿ ಕುದುರೆಗಳೆಂದರೆ ಟಾಂಗಾಕ್ಕೆ ಮತ್ತು ರೇಸ್‌ಗಾಗಿ ಮಾತ್ರಾ ಎನ್ನುವಂತಾಗಿದೆ. ಈ ಹಿನ್ನೆಲೆಯಲ್ಲಿ ಕುದುರೆಗಳ ವೈಭವಪೂರ್ಣ ಇತಿಹಾಸದ ಬಗ್ಗೆ ಒಂದು ಹಿನ್ನೋಟ ಇಲ್ಲಿದೆ.

ಕುದುರೆಗಳ ವಿಶೇಷ

ಕುದುರೆಗಳ ಎತ್ತರವನ್ನು ಹ್ಯಾಂಡ್ಸ್ ಎಂಬ ಮಾನಕದಲ್ಲಿ ಅಳೆಯಲಾಗುತ್ತದೆ. ಒಂದು ಹ್ಯಾಂಡ್ ಎಂದರೆ ನಾಲ್ಕು ಅಂಗುಲ. ಅಂದರೆ ನಾಲ್ಕು ಬೆರಳುಗಳ ಉದ್ದ. ಜಗತ್ತಿನ ಅತೀ ಎತ್ತರದ ಕುದುರೆ ಬೆಲ್ಜಿಯನ್ ಜಾತಿಯದ್ದು. ಇದು ಸುಮಾರು 6 ಅಡಿ ಎತ್ತರ (18 ಊಚಿಟಿಜ) ಇರುತ್ತದೆ. ಇದರ ತೂಕ ಸುಮಾರು 1400 ಕೇಜಿಯಷ್ಟು. ಸಣ್ಣ ಕುದುರೆ ಫ಼ಲಾಬೆಲ್ಲಾ ಜಾತಿಯದ್ದು. ಇದು ಸುಮಾರು 19 ಅಂಗುಲ ಎತ್ತರವಿರುತ್ತದೆ ಹಾಗು ಸುಮಾರು 14 ಕೇಜಿ ತೂಗುತ್ತದೆ. ಕುದುರೆಗಳ ಸರಾಸರಿ ಆಯುಸ್ಸು ಸುಮಾರು 30–35 ವರ್ಷಗಳು. ಓಲ್ಡ್ ಬಿಲ್ಲಿ ಎಂಬ ಕುದುರೆ 62 ವರ್ಷಗಳವರೆಗೆ ಬದುಕಿದ ಉದಾಹರಣೆ ಇದೆ.

ಕುದುರೆಗಳು ಮತ್ತು ಪೋನಿಗಳಲ್ಲಿ 350 ತಳಿಗಳನ್ನು ಗುರುತಿಸಲಾಗಿದೆ. ಇವುಗಳಲ್ಲು ಅರೇಬಿಯನ್ ಮತ್ತು ಪರ್ಶಿಯನ್ ತಳಿಗಳು ಶ್ರೇಷ್ಠವೆಂದು ಸಾಬೀತಾಗಿದೆ. ಅರೇಬಿಯನ್ ಕುದುರೆಗಳು ತಮ್ಮ ಶಕ್ತಿ ಮತ್ತು ಬುದ್ಧಿವಂತಿಕೆಗೆ


ಹೆಸರುವಾಸಿಯಾಗಿವೆ. ಇವುಗಳಲ್ಲಿ ಇತರೆ ತಳಿಯ ಕುದುರೆಗಳಿಗಿಂತಾ ಒಂದು ಮೂಳೆ ಕಡಮೆ ಇರುತ್ತದೆ. ಕಾಡು ಕುದುರೆಯ ತಳಿಯನ್ನು ಪ್ರೆಝೆವಾಲ್‌ಸ್ಕಿ ಎಂದು ಕರೆಯಲಾಗುತ್ತದೆ. ಈ ತಳಿಯಲ್ಲಿ 66 ವರ್ಣತಂತುಗಳಿದ್ದರೆ ಇತರ ಅಶ್ವಗಳಲ್ಲಿ ಕೇವಲ 64 ವರ್ಣತಂತುಗಳಿರುತ್ತವೆ.

ಗಂಡು ಕತ್ತೆ ಮತ್ತು ಹೆಣ್ಣು ಕುದುರೆಗಳ ಸಂಗಮದಿಂದ ಹೇಸರಗತ್ತೆ ಜನಿಸುತ್ತದೆ. ಗಂಡು ಕುದುರೆ ಮತ್ತು ಹೆಣ್ಣು ಕತ್ತೆಯಿಂದ ಹಿನ್ನಿ ಎಂಬ ಕತ್ತೆಯ ವರ್ಗದ ಪ್ರಾಣಿ ಜನಿಸುತ್ತದೆ. ಗಂಡು ಕುದುರೆಗಳನ್ನು ಸ್ಟಾಲಿಯನ್ ಎಂದೂ ಹೆಣ್ಣೂ ಕುದುರೆಗಳನ್ನು ಮೇರ್ ಎಂದು ಕರೆಯುತ್ತಾರೆ. ಸಣ್ಣ ಗಂಡು ಕುದುರೆಯನ್ನು ಕೋಲ್ಟ್ ಎಂದರೆ ಸಣ್ಣ ಹೆಣ್ಣು ಕುದುರೆಯನ್ನು ಫಿಲ್ಲೀಸ್ ಎನ್ನುತ್ತಾರೆ. ಕುದುರೆಗಳು ಸಾಮಾನ್ಯವಾಗಿ ಕಂದು ಬಣ್ಣದವಾಗಿರುತ್ತವೆ. ಉಳಿದಂತೆ ಕಪ್ಪು, ಬೂದು ಕಂದು, ಕೆನೆ ಬಣ್ಣ ಮತ್ತು ಬಿಳಿ ಬಣ್ಣದ ಕುದುರೆಗಳನ್ನು ಕಾಣಬಹುದು.

ನಿಧಾನವಾಗಿ ನಡೆಯುತ್ತಿರುವ ಕುದುರೆಗಳು ಒಂದು ನಿಮಿಷಕ್ಕೆ ಒಂದು ಲೀಟರಿನಷ್ಟು ಆಮ್ಲಜನಕವನ್ನು ಬಳಸುತ್ತವೆ. ಓಡುತ್ತಿರುವ ಕುದುರೆಗಳು ಒಂದು ನಿಮಿಷಕ್ಕೆ 60 ಲೀಟರಿನಷ್ಟು ಆಮ್ಲಜನಕ ಬಳಸುತ್ತವೆ. ದಿನಕ್ಕೆ ಒಂದು ಕುದುರೆ ಕನಿಷ್ಟ 25 ಗ್ಯಾಲನ್ ನೀರು ಕುಡಿಯುತ್ತದೆ. ಪ್ರತಿದಿನ ಒಂದು ಅಶ್ವಕ್ಕೆ ಸುಮಾರು 10–12 ಕೇಜಿಗಳಷ್ಟು ಹುಲ್ಲು ಮತ್ತು ಧಾನ್ಯದ ಆಹಾರ ಅಗತ್ಯ. ಅಶ್ವಗಳ ಆಹಾರವಾಗಿ ಓಟ್ಸ್, ಜೋಳ, ಹುರುಳಿ, ಆಲೂಗಡ್ಡೇ, ಸೊಪ್ಪು ಹಸಿ ಹುಲ್ಲು ಬಳಸಲಾಗುತ್ತದೆ. ರೇಸ್ ಕುದುರೆಗಳಿಗೆ ಪ್ರೋಟೀನ್ ಮತ್ತು ಶಕ್ತಿವರ್ಧಕ ಸಪ್ಲಿಮೆಂಟುಗಳನ್ನು ನೀಡಲಾಗುತ್ತದೆ.

ಕುದುರೆಗಳ ಗರಿಷ್ಟ ಒಂದು ಗಂಟೆಗೆ 70 ಕಿಲೋಮೀಟರ್ ವೇಗದಲ್ಲಿ ಓಡಬಲ್ಲವು. ಅವು ಓಡುವಾಗ ಒಂದು ಸಮಯದಲ್ಲಿ ನಾಲ್ಕೂ ಕಾಲುಗಳು ನೆಲದ ಮೇಲಿರುವುದಿಲ್ಲ. ಅರೇಬಿಯನ್ ಕುದುರೆಗಳು ವಿಶ್ರಾಂತಿ ಪಡೆಯದೇ ಸುಮಾರು 160 ಕಿಲೋಮೀಟರುಗಳವರೆಗೆ ಓಡಬಲ್ಲವು. ಕುದುರೆಗಳ ದೇಹದಲ್ಲಿ ಅದರ ವೇಗದ ಚಲನೆಗೆ ಅನುವಾಗುವಂತೆ 205 ಮೂಳೆಗಳಿವೆ.

ಕುದುರೆಗಳ ಗರ್ಭಧಾರಣೆ ಅವಧಿ 340 ದಿನಗಳು. ಅಶ್ವಗಳು ಒಮ್ಮೆಗೇ ಎರಡು ಮರಿಗಳನ್ನು ಪ್ರಸವಿಸುವುದಿಲ್ಲ. ಮೂರು ವರ್ಷಗಳ ಹೆಣ್ಣೂ ಕುದುರೆ ಗರ್ಭ ಧರಿಸಲು ಸೂಕ್ತ. ವಯಸ್ಕ ಗಂಡು ಕುದುರೆಗೆ 40 ಮತ್ತು ಹೆಣ್ಣು ಕುದುರೆಗೆ



36 ಹಲ್ಲುಗಳಿರುತ್ತವೆ. ಕುದುರೆಗಳಿಗೆ ಆನೆಗಳಿಗಿಂತ ನೆನಪಿನ ಶಕ್ತಿ ಹೆಚ್ಚಾಗಿರುತ್ತದೆ. ಕುದುರೆಯ ಮೆದುಳಿನ ತೂಕ ಮಾನವನ ಮೆದುಳಿನ ಅರ್ಧದಷ್ಟು ಅಂದರೆ 22 ಔನ್ಸ್ ತೂಕವಿರುತ್ತದೆ.

ಕುದುರೆಗಳಿಗೆ ಪಿತ್ತಕೋಶ ಇರುವುದಿಲ್ಲ. ಕುದುರೆಗಳಿಗೆ ಬಣ್ಣಗುರುಡು ಸಮಸ್ಯೆ ಇರುವುದಿಲ್ಲ. ಕುದುರೆಗಳಿಗೆ ಜಗತ್ತಿನ ಎಲ್ಲಾ ಪ್ರಾಣಿಗಳಿಗಿಂತಾ ದೊಡ್ಡ ಕಣ್ಣುಗಳಿವೆ. ಕುದುರೆಯ ಹೃದಯ ಸುಮಾರು 10 ಪೌಂಡ್ ತೂಗುತ್ತದೆ. ಕುದುರೆಗಳಲ್ಲಿ 7 ವಿಧಗಳ ರಕ್ತದ ಮಾದರಿಗಳನ್ನು ಕಾಣಬಹುದು. ಅಶ್ವಗಳ ದೇಹದಲ್ಲಿ 64 ಕ್ರೊಮೊಸೋಮುಗಳು ಮತ್ತು 2.7 ಬಿಲಿಯನ್ ಡಿಎನ್‌ಎ ಜೋಡಿ ಇರುತ್ತವೆ.


ಫ್ರಾನ್ಸ್ ದೇಶದಲ್ಲಿ ಕುದುರೆ ಮಾಂಸ ಸೇವನೆ ಉನ್ನತ ವರ್ಗದ ಸೂಚಕವಾಗಿತ್ತು. ಅಶ್ವಗಳ ಚರ್ಮವನ್ನು ಬೂಟುಗಳು, ಕೈ ಗವಸುಗಳು, ಜ್ಯಾಕೆಟ್‌ಗಳು, ಬೇಸ್ ಬಾಲ್ ತಯಾರಿಸಲು ಬಳಸಲಾಗುತ್ತಿದೆ. ಕುದುರೆಗಳ ಗೊರಸಿನಿಂದ ಅಂಟು ತಯಾರಿಸಲಾಗುತ್ತದೆ.

ಕುದುರೆಗಳು ಮಾನವನಂತೆ ತಮ್ಮ ಕಣ್ಣು, ಮೂಗಿನ ಹೊಳ್ಳೆ, ಕಿವಿ ಮತ್ತು ಮುಖದಲ್ಲಿ ಭಾವನೆಗಳನ್ನು ವ್ಯಕ್ತಪಡಿಸಬಲ್ಲವು. ಒಂದು ಗುಂಪಿನ ಎಲ್ಲಾ ಕುದುರೆಗಳೂ ಒಮ್ಮೆಗೇ ನಿದ್ರಿಸುವುದಿಲ್ಲ. ಒಂದಲ್ಲಾ ಒಂದು ಕುದುರೆ ಎಚ್ಚರವಾಗಿದ್ದು ಗುಂಪನ್ನು ಕಾಯುತ್ತದೆ. ಅಲ್ಲದೇ ಇವು ನಿಂತೇ ನಿದ್ರಿಸಬಲ್ಲವು. ಹೆದರಿದಾಗ ಕುದುರೆಗಳು ಓಡಿ ಹೋಗುತ್ತವೆ. ಅನಿವಾರ್ಯ ಸಂದರ್ಭಗಳಲ್ಲಿ ಅಪಾಯವನ್ನು ಎದುರಿಸಿ ನಿಲ್ಲಬಲ್ಲ ಛಾತಿ ಇವುಗಳಿಗಿದೆ.

ಏಪ್ರಿಲ್ 25, 1975 ರಲ್ಲಿ ದಕ್ಷಿಣ ಆಫ್ರಿಕಾದ ಜೋಹನ್ಸ್‌ಬರ್ಗ್ ನಗರದಲ್ಲಿ ನಡೆದ ಪಂದ್ಯವೊಂದರಲ್ಲಿ ಸಂಥಿಂಗ್ ಎಂಬ ಹೆಸರಿನ ಕುದುರೆಯೊಂದು 27 ಅಡೀ ದೂರಕ್ಕೆ ಹಾರಿದ್ದು ಈವರೆಗೂ ದಾಖಲೆಯಾಗಿಯೇ ಉಳಿದಿದೆ.

1893 ರಲ್ಲಿ ಕುದುರೆಯೊಂದು 128 ಟನ್ ತೂಕದ ಮರದ ದಿಮ್ಮಿಗಳನ್ನು ಎಳೆದದ್ದು ಇಂದಿಗೂ ಮುರಿಯದ ದಾಖಲೆ. ಇಷ್ಟು ತೂಕ ಎಳೆಯಲು ಸಾಮಾನ್ಯವಾಗಿ 22 ಆಫ್ರಿಕನ್ ಆನೆಗಳು ಬೇಕಾಗುತ್ತವೆ.

ಹೆಣ್ಣು ಕುದುರೆಯ ಹಾಲನ್ನು ಮಂಗೋಲರು ಆರೋಗ್ಯ ರಕ್ಷಣೆಗೆ ಬಳಸುತ್ತಿದ್ದರಂತೆ. ಇವರಲ್ಲಿ ಕುದುರೆಯ ರಕ್ತವನ್ನು ಶಕ್ತಿ ಸಂಚಯನಕ್ಕಾಗಿ ಬಳಸುವ ಪದ್ಧತಿ ಇತ್ತು. ಮನುಷ್ಯರಲ್ಲಿ ಹಾರ್ಮೋನ್ ಬದಲಾವಣೆಯ ಚಿಕಿತ್ಸೆಯಲ್ಲಿ ಹೆಣ್ಣು



ಕುದುರೆಯ ಮೂತ್ರದಲ್ಲಿನ ಇಸ್ಟ್ರೋಜನ್ ಬಳಸಿ ಪ್ರೆಮಾರಿನ್ ಎಂಬ ಔಷಧಿ ತಯಾರಿಸಲಾಗುತ್ತಿದೆ. ಕುದುರೆಯ ಬಾಲದ ಕೂದಲನ್ನು ವಯೋಲಿನ್ ಮುಂತಾದ ವಾದ್ಯಗಳಲ್ಲಿ ಬಳಸಲಾಗುತ್ತಿದೆ.

ಜಗತ್ತಿನ ಅಶ್ವ ಲೋಕದ ಆಗುಹೋಗುಗಳ ಬಗ್ಗೆ ಅಮೇರಿಕಾದ ಹಾರ್ಸ್ ಕೌನ್ಸಿಲ್ ಸದಾ ಗಮನವಿಟ್ಟಿರುತ್ತದೆ. ಪ್ರಸ್ತುತ ವಿಶ್ವದಲ್ಲಿ ಸುಮಾರು 59 ಕೋಟಿ ಕುದುರೆಗಳಿವೆ ಎನ್ನುತ್ತದೆ ವರದಿಯೊಂದು. ಅಮೇರಿಕಾದ ಆರ್ಥಿಕತೆಗೆ ಕುದುರೆಗಳ ಕೊಡುಗೆ ಸುಮಾರು 102 ಬಿಲಿಯನ್ ಡಾಲರ್ ಎನ್ನಲಾಗಿದೆ. ಜಗತ್ತಿನಲ್ಲಿ ಮನುಷ್ಯನಿಗೆ ಪ್ರಿಯವಾದ ನಾಲ್ಕನೇ ಪ್ರಾಣಿ ಕುದುರೆಯಂತೆ.


ಉಕ್ರೇನಿನ ಉತ್ತರಭಾಗದ ಡ್ಯಾನುಬೆ ವಲಯದಲ್ಲಿ ಸುಮಾರು 4000 ವರ್ಷಗಳ ಹಿಂದೆ ಸಮಾಧಿಗಳಲ್ಲಿ ಅಶ್ವಗಳ ತಲೆಯ ಪ್ರತಿಕೃತಿ ಮತ್ತು ಅವುಗಳ ಹಲ್ಲನ್ನು ಶವಗಳೊಂದಿಗೆ ಇಡುವ ಪದ್ಧತಿ ಇತ್ತು. ಇದನ್ನು ಸುವರೋವೊ ಸಮಾಧಿಗಳು ಎಂದು ಕರೆಯುತ್ತಾರೆ.

ಹಿಂದೂಗಳಲ್ಲಿ ಕುದುರೆಯ ಲಾಳವನ್ನು ದೇವರ ಕೋಣೆಯಲ್ಲಿಟ್ಟು ಪೂಜಿಸುವ ಪದ್ಧತಿ ಇದೆ.

ಪ್ರಖ್ಯಾತ ಕುದುರೆಗಳು

ಕುರಾನ್ ಪ್ರಕಾರ ಪ್ರವಾದಿ ಮುಹಮ್ಮದರು ಅರಬ್ ಕುದುರೆಯನ್ನೇರಿ ಪ್ರವಾಸ ಮಾಡುತ್ತಿದ್ದರು. ಅವರ ಬಳಿ ಅಸ್ ಸಕ್ಬ್, ಅಲ್ ಮುರಾಜಿಜ್, ಅಲ್ ಲಹೀಫ್, ಅಲ್ ಲಿಜ್ಹಾಜ್, ಅಸ್ ಜ್ಹರೀಬ್, ಅಲ್ ವರ್ದ್ ಮತ್ತು ಸಭಾ ಎಂಬ ಏಳು ಕುದುರೆಗಳಿದ್ದವು. ಹಾಗಾಗಿಯೇ ಇಸ್ಲಾಂ ಧರ್ಮೀಯರು ತಮ್ಮ ಎಲ್ಲಾ ಪವಿತ್ರ ಸಮಾರಂಭಗಳಲ್ಲಿ ಅಶ್ವಗಳ ಹಾಜರಿಯನ್ನು ಬಯಸುತ್ತಾರೆ.

ಹಿಂದೂ ಪುರಾಣಗಳ ಪ್ರಕಾರ ಇಬ್ಬರೂ ಅಶ್ವಿನಿ ಕುಮಾರರು ಅಶ್ವಗಳ ರೂಪದಲ್ಲಿದ್ದರಂತೆ. ಸೂರ್ಯನು ತನ್ನ ರಥಕ್ಕೆ ಗಾಯತ್ರಿ, ಬೃಹತಿ, ಉಸ್ನಿಕ್, ಜಗತಿ, ದೃಸ್ತುಪ್, ಅನುಸ್ತುಪ್ ಮತ್ತು ಭಕ್ತಿ (ಪಂಕ್ತಿ) ಎಂಬ ಏಳು ಕುದುರೆಗಳನ್ನು ಕಟ್ಟುತ್ತಾನೆ ಎಂಬ ನಂಬಿಕೆ ಇದೆ. ಇವು ಏಳು ಬಣ್ಣಗಳನ್ನು ಪ್ರತಿನಿಧಿಸುತ್ತವೆ ಎನ್ನಲಾಗಿದೆ. ವಿಷ್ಣುವು ಅಶ್ವದ ಶಿರಸ್ಸನ್ನು ಧರಿಸಿದ ಹತ್ತನೆಯ ಕಲ್ಕಿ ಅವತಾರದ ಉಲ್ಲೇಖ ಪುರಾಣಗಳಲ್ಲಿದೆ. ವಿಷ್ಣು ಅಶ್ವದ ತಲೆ ತಲೆ ಧರಿಸಿದ ಹಯಗ್ರೀವನ ಉಲ್ಲೇಖ ಪುರಾಣಗಳಲ್ಲಿದೆ. ವೇದಶಾಸ್ತ್ರದಲ್ಲಿ ಅಶ್ವ ಎಂದರೆ ಪ್ರಾಣ ಎಂಬರ್ಥವಿದೆ.




ಇದು ದೇಹದ ಚೈತನ್ಯವನ್ನು ಪ್ರತಿನಿಧಿಸುತ್ತದೆ. ಪ್ರಾಣವೆಂಬ ಅಶ್ವವನ್ನು ಪ್ರಾಣಾಯಾಮವೆಂಬ ಉಸಿರಿನಲ್ಲಿ ಕಟ್ಟಿ ಹಾಕಿ ಸಿದ್ಧಿಯನ್ನು ಪಡೆಯಬಹುದು ಎನ್ನುತ್ತವೆ ಯೋಗ ಸೂತ್ರಗಳು.

ಅಲೆಕ್ಸಾಂಡರ್ ತನ್ನ ಕುದುರೆ ಬ್ಯುಸೆಫ್ಲಸ್ ಅನ್ನು ತನ್ನ ಸೋದರನಂತೆ ಪ್ರೀತಿಸುತ್ತಿದ್ದ. ಚಕ್ರವತಿ ಅಶೋಕನ ಕುದುರೆಯ ಹೆಸರು ಪವನ್, ರಾಣಾ ಪ್ರತಾಪನ ಕುದುರೆಯ ಹೆಸರು ಚೇತಕ್ ಎಂದು. ನೆಪೋಲಿಯನ್ ತನ್ನ ನೆಚ್ಚಿನ ಕುದುರೆಯನ್ನು ಮರೆಂಗೋ ಎಂದು ಕರೆಯುತ್ತಿದ್ದನಂತೆ.

ರೋಮನ್ ಚಕ್ರವರ್ತಿ ಕ್ಯಾಲಿಗುಲನಿಗೆ (ಕ್ರಿ.ಶ. 37–41) ಆತನ ಕುದುರೆ ಇನ್ಸಿಟಾಟುಸ್ ಅತ್ಯಂತ ಪ್ರಿಯವಾದುದಾಗಿತ್ತು. ಅದನ್ನು ಸದಾ ತನ್ನೊಂದಿಗೇ ಇರಿಸಿಕೊಳ್ಳುತ್ತಿದ್ದ. ಆತನ ಅಶ್ವ ಪ್ರೇಮ ಎಷ್ಟಿತ್ತೆಂದರೆ ಇನ್ಸಿಟಾಟುಸ್ ಕುದುರೆಯನ್ನು ರಾಜ್ಯದ ಕಾನ್ಸೂಲ್ ಆಗಿ ನೇಮಿಸಿದ್ದ. ನಂತರ ಅದನ್ನು ಪುರೋಹಿತನನ್ನಾಗಿ ಮಾಡಿದ್ದ.

ಪಾಶ್ಚಾತ್ಯರಲ್ಲಿ ಅದೃಷ್ಟ ತರುವ ಏಕಶೃಂಗಿ (ಒಂಟಿ ಕೊಂಬಿನ) ಕುದುರೆಗಳು ಇವೆ ಎಂಬ ಬಲವಾದ ನಂಬಿಕೆ ಇದೆ. ಜರ್ಮನಿ ದೇಶದಲ್ಲಿ ಇಂತಹ ಒಂದು ಗುಹೆ ಇದ್ದು ಅಲ್ಲಿ ತಾವು ಏಕಶೃಂಗಿ ಕುದುರೆಯನ್ನು ನೋಡಿದ್ದೇವೆ ಎನ್ನುವವರೂ ಇದ್ದಾರೆ. ಅಪ್ಸರಸಿಯರು ರೆಕ್ಕಗಳ ಕುದುಗಳನ್ನು ಏರಿ ಭೂಮಿಗೆ ಬಂದು ಹೋಗುವ ಫೇರಿ ಟೇಲ್ಸ್ ಇಂಗ್ಲೀಷ್ ಸೇರಿದಂತೆ ಎಲ್ಲಾ ಭಾಷೆಗಳಲ್ಲೂ ಇವೆ. ಕೆಲವು ಸಂಸ್ಕೃತಿಗಳಲ್ಲಿ ಬಿಳಿಯ ಕುದುರೆ ಸಾವನ್ನು ಪ್ರತಿನಿಧಿಸುತ್ತದೆ ಎಂಬ ನಂಬಿಕೆ ಇದೆ. ಕನಸಿನಲ್ಲಿ ಬಿಳಿಯ ಕುದುರೆ ಕಾಣಿಸಿಕೊಂಡರೆ ಅದೃಷ್ಟ ಎನ್ನುತ್ತಾರೆ. ಚೀನೀಯರಲ್ಲಿ ಕುದುರೆ ರಾಶಿ ಚಕ್ರವನ್ನು ಪ್ರತಿನಿಧಿಸುತ್ತದೆ.

ಜಗತ್ತಿನ ಬಹುತೇಕ ಧರ್ಮಗಳು ಬಿಳಿಯ ಕುದುರೆಗಳು ಅದೃಷ್ಟ ತರುತ್ತವೆ ಹಾಗೂ ಇವು ರೆಕ್ಕೆಗಳನ್ನು ಹೊಂದಿದ್ದು ದೇವತೆಗಳು ಇದರ ಮೇಲೆ ಸವಾರಿ ಮಾಡುತ್ತಾ ಬರುತ್ತಾರೆ ಎಂದು ನಂಬುತ್ತವೆ. ಇದಕ್ಕೆ ಹಿಂದೂ ಧರ್ಮ ಕೂಡಾ ಹೊರತಾಗಿಲ್ಲ. ವೈಟ್ ಹಾರ್ಸ್ ಪ್ರಾಫೆಸಿ ಎಂಬ ನಂಬಿಕೆ ಅಮೇರಿಕಾದ ಚರ್ಚ್‌ನಲ್ಲಿದೆ. ಇದೊಂದು ನಾಣ್ನುಡಿಯಾಗಿದ್ದು ಬುಕ್ ಆಫ್ ರಿವಿಲೇಶನ್‌ನಲ್ಲಿ ಪ್ರಾಸ್ತಾವಿತವಾಗಿದೆ. ಇದು ಸಂತರು ರಾಕಿ ಪರ್ವತಕ್ಕೆ ಹೋಗಿ ಮಹಾನ್ ವ್ಯಕ್ತಿಗಳಾಗುವ ಮತ್ತು ದೇಶವನ್ನು ಕಾಪಾಡುವ ನಂಬಿಕೆ.



ಕೈಲಾಸಪರ್ವತ, ಅಮರನಾಥ, ವೈಷ್ಣೋದೇವಿ ಯಾತ್ರೆಗಳಲ್ಲಿ, ಬೆಟ್ಟಗಳನ್ನು ಏರುವಾಗ ಅಶಕ್ತರು ಕುದುರೆಗಳ ಮೇಲೆ ಕುಳಿತು ತಮ್ಮ ಪ್ರಯಾಣವನ್ನು ಹಗುರಗೊಳಿಸಿಕೊಳ್ಳುವ ವಾಡಿಕೆ ಇದೆ. ಸಂಕ್ರಾಂತಿ ಪುರುಷ ಕುದುರೆಯ ಮೇಲೆ ಕುಳಿತು ಹೋಗುವ ಭವಿಷ್ಯವನ್ನು ಆಗಾಗ ಸಂಕ್ರಾಂತಿ ಹಬ್ಬದ ಸಮಯದಲ್ಲಿ ಕೇಳಿರುತ್ತೇವೆ.

ಭಾರತದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಆಡಳಿತ ಸೇವೆಗೆ ಗೆಜೆಟೆಡ್ ಅಧಿಕಾರಿಗಳು ಆಯ್ಕೆಯಾದಾಗ ಅವರ ತರಬೇತಿಯಲ್ಲಿ ಕುದುರೆ ಸವಾರಿ ಒಂದು ಭಾಗವಾಗಿರುತ್ತದೆ. ಹಿಂದೆಲ್ಲಾ ಸರ್ಕಾರಿ ಅಧಿಕಾರಿಗಳಿಗೆ ಕುದುರೆಯನ್ನು ದಿನ ಬಳಕೆಗೆ ನೀಡಲಾಗುತ್ತಿತ್ತು. ಈಗ ಈ ಪದ್ಧತಿ ನಿಂತಿದೆ.

ಶತಮಾನಗಳ ಹಿಂದೆ ಅಶ್ವಗಳ ಆರೈಕೆ

ಸುಮಾರು 300 ವರ್ಷಗಳ ಹಿಂದೆ ಅಮೇರಿಕನ್ ಬ್ಲಾಕ್ ಫ್ಲೂಟ್ ಜನಾಂಗಕ್ಕೆ ಅಶ್ವಗಳು ಜೀವನ ಭಾಗವಾಗಿದ್ದವು. ದನಗಾಹಿಗಳಿಗೆ, ಸರಕು ಸಾಗಣೆಗಾಗಿ ಇವನ್ನು ಬಳಸಲಾಗುತ್ತಿತ್ತು. ಅಲ್ಲದೇ ಧಾರ್ಮಿಕ ಆಚರಣೆಗಳಲ್ಲೂ ಅಶ್ವಗಳ ಪಾತ್ರವಿತ್ತು. ಇವರು ಅಶ್ವಗಳ ಆರೋಗ್ಯ ರಕ್ಷಣೆಗೂ ಹಾಗೇಯೇ ಗಮನ ನೀಡಿದ್ದರು. ಕುದುರೆ ಸವಾರಿ ಮಾಡಲು ಉಪಯೋಗಿಸುವ ವಸ್ತುಗಳಾದ ಜೀನು (ಸ್ಯಾಡಲ್), ಚರ್ಮದ ಮೂಗುದಾರ ಮುಂತಾದುವು ವ್ರಣವನ್ನುಂಟು ಮಾಡಬಹುದು. ಇದರ ನಿವಾರಣೆಗಾಗಿ ಸ್ನೇಕ್ ವೀಡ್ ಅಥವಾ ಯುಕ್ಕಾ ಎಂದು ಕರೆಯಲಾಗುವ ಮೂಲಿಕೆಯನ್ನು ನೀರಿನಲ್ಲಿ ಬೇಯಿಸಿ ಗಾಯಗಳಿಗೆ ಬಳಸುತ್ತಿತ್ತು. ಮತ್ತೊಂದು ಔಷಧಿಯೆಂದರೆ ತಂಬಾಕು, ಕಹಿ ಎಲೆ, ಪ್ರಾಣಿಗಳಕೊಬ್ಬು ಮತ್ತು ಉಪ್ಪನ್ನು ಬೆರೆಸಿ ಗಾಯಕ್ಕೆ ಹಚ್ಚಲಾಗುತ್ತಿತ್ತು.

ಅಶ್ವಗಳ ಮತ್ತೊಂದು ತೊಂದರೆಯೆಂದರೆ ಸೋರ್ ಫ್ಲೂಟ್ ಅಥವಾ ಕಾಲು ಬಾವು. ಹಿಂದೆ ಎಮ್ಮೆಯ ಚರ್ಮಗಳಿಂದ ಮಾಡಲಾದ ಕವಚವೊಂದನ್ನು ಅಶ್ವಗಳ ಕಾಲಿಗೆ ತೊಡಿಸಲಾಗುತ್ತಿತ್ತು.

ಅಶ್ವಗಳ ಆರೋಗ್ಯಕ್ಕಾಗಿ ಪರ್ವತ ಪ್ರದೇಶಗಳಲ್ಲಿ ಸಹಜವಾಗಿ ಬೆಳೆಯುವ ನಂಜು ನಿರೋಧಕ ಸಸ್ಯವೊಂದನ್ನು ಶಕ್ತಿವರ್ಧಕವಾಗಿ ಆಹಾರದ ಜೊತೆಗೆ ತಿನ್ನಿಸಲಾಗುತ್ತಿತ್ತು.

ಸುಮಾರು 1–3 ವರ್ಷಗಳ ಗಂಡು ಕುದುರೆಯ ಸಂತಾನ ಹರಣ ಮಾಡಲಾಗುತ್ತಿತ್ತು. ಈ ಕಾರ್ಯಕ್ಕಾಗಿ ಸ್ಥಳೀಯ ಪರಿಣಿತರು ಕುದುರೆಗಳ ಕಾಲು ಕಟ್ಟಿ ಹಾಕಿ ಸಾಂಪ್ರದಾಯಿಕ ವಿಧಾನದಲ್ಲಿ ತಮ್ಮ ಕರ್ತವ್ಯ ಪೂರೈಸುತ್ತಿದ್ದರು.

ಅಶ್ವಗಳ ಕಾಲಿನ ಗಂಟಿನಲ್ಲಿ ಚೆಸ್ಟ್‌ನಟ್ ಎಂದು ಕರೆಯಲಾಗುವ ಅಂಗಾಂಶವೊಂದಿರುತ್ತದೆ. ಹಿಂದೆ ದನಗಾಹಿಗಳು ಇದನ್ನು ಸತ್ತ ಕುದುರೆಯಿಂದ ಹೊರತೆಗೆದು ಸುವಾಸನಯುಕ್ತ ಸಸ್ಯದೊಂದಿಗೆ ಸೇರಿಸಿ ಪುಡಿ ಮಾಡಿ ಸುವಾಸನೆಗಾಗಿ ಬಳಸುತ್ತಿದ್ದರು. ಅಶ್ವಗಳ ಬಾಲದ ಕೂದಲನ್ನು ತಮ್ಮ ಅಂಗಿಗಳಿಗೆ ಹೊಲೆದು ಅಲಂಕಾರ ಮಾಡಿಕೊಳ್ಳುತ್ತಿದ್ದರು. ಸತ್ತ ಅಶ್ವದ ಚರ್ಮವನ್ನು ವಾದ್ಯಗಳಿಗೆ, ಔಷಧಿಗಳನ್ನು ಸುತ್ತಿಡಲು ಮತ್ತು ಚಳಿಯಿಂದ ರಕ್ಷಿಸಿಕೊಳ್ಳಲು ಓವರ್ ಕೋಟ್ ರೂಪದಲ್ಲಿ ಬಳಸುತ್ತಿದ್ದರು.

ಜನಾಂಗದ ಸದಸ್ಯರ ಆರೋಗ್ಯ ರಕ್ಷಣೆಗಾಗಿ ಸಾಂಪ್ರದಾಯಿಕ ಕುದುರೆ ಹಬ್ಬವನ್ನು ಬೇರ್ ಫ್ಲೂಟ್ ಜನಾಂಗ ಆಚರಿಸುತ್ತಿತ್ತು. ಅದಿವಾಸಿ ಹಿರಿಯ ಬಂದು ಮಂಡಲವನ್ನು ರಚಿಸಿ ಕುದುರೆಯೊಂಡನ್ನು ಬಲಿ ನೀಡಲಾಗುತ್ತಿತ್ತು. ನಂತರ ಅದರ ಚರ್ಮವನ್ನು ಸುಲಿದು ಅಕುದುರೆಯ ಆತ್ಮವನ್ನು ಚರ್ಮವೊಂದರ ತುಣೂಕಿಗೆ ಆಹ್ವಾನಿಸುತ್ತಿದ್ದ. ನಂತರ ಪೂಜಾ ಕಾರ್ಯಕ್ರಮಗಳು ನಡೆಯುತ್ತಿದ್ದವು. ಜನಾಂಗದ ಎಲ್ಲರೂ ಕುದುರೆಯ ಚರ್ಮದಿಂದ ತಯಾರಿಸಿದ ಡ್ರಂ ಸದ್ದಿಗೆ ನರ್ತಿಸುತ್ತಿದ್ದರು. ನಡುವೆ ಔಷಧ ಸಸ್ಯಗಳೊಂದಿಗೆ ಬೇಯಿಸಿದ ಅಶ್ವದ ನಾಲಗೆಯ ಸೂಪನ್ನು ಮೊದಲಿಗೆ ಖಾಯಿಲೆಯಿಂದ ನರಳುತ್ತಿದ್ದ ರೋಗಿಗೆ ಮತ್ತು ನಂತರ ಎಲ್ಲರಿಗೂ ಹಂಚಲಾಗುತ್ತಿತ್ತು. (ಮಾಹಿತಿ: ದಿ ಹಾರ್ಸ್ ಇನ್ ಬೇರ್‌ಫ್ಲೂಟ್ ಇಂಡಿಯನ್ ಕಲ್ಚರ್, ಜಾನ್ ಸಿ. ಎವೆರ್ಸ್ 1935).

ಸಾಕುಪ್ರಾಣಿಗಳು ಮತ್ತು ಮಾನವ

ಮಾನವ ಬಹುಶಃ ಸುಮಾರು 10,000 ವರ್ಷಗಳಿಂದ ಪ್ರಾಣಿಗಳೊಂದಿಗೆ ಸಹಜೀವನ ನಡೆಸುತ್ತಿದ್ದಾನೆ ಎನ್ನುತ್ತವೆ ಇತಿಹಾಸದ ದಾಖಲೆಗಳು. ಯಾವ ಪ್ರಾಣಿಗಳು ಯಾವಾಗ ನಮ್ಮ ಬದುಕಿನಲ್ಲಿ ಬಂದವು ಎನ್ನುವುದರ ಒಂದು ನೋಟ ಇಲ್ಲಿದೆ.

ನಾಯಿ : ಕ್ರಿ.ಪೂ. 10,000 . ಇಸ್ರೇಲ್ / ಇರಾಕ್
ಆಡು ಮತ್ತು ಹಂದಿ : ಕ್ರಿ.ಪೂ. 7,000 –ಇರಾನ್
ದನಕರುಗಳು : ಕ್ರಿ.ಪೂ. 6000 – ಟರ್ಕಿ
ಕೋಳಿ ; ಕ್ರಿ.ಪೂ. 6000 – ಆಗ್ನೇಯ ಏಷ್ಯ
ಅಶ್ವಗಳು : ಕ್ರಿ.ಪೂ. 4,000 – ಯುರೇಷಿಯಾ
ಕತ್ತೆಗಳು : ಕ್ರಿ.ಪೂ. 3,500 – ಉತ್ತರ ಆಫ್ರಿಕಾ.
ಮೊಲಗಳು : ಕ್ರಿ.ಶ. 1500 – ಯುರೋಪ್

ಟ್ರೋಜನ್ ಕದನ

ಪುರಾತನ ಗ್ರೀಕ್ ಅರಸರು ಸುತ್ತಲ ಎಲ್ಲಾ ಸಾಮ್ರಾಜ್ಯಗಳನ್ನೂ ಗೆದ್ದರೂ ಟ್ರೋಜನ್ ನಗರವೊಂದು ಮಾತ್ರಾ ಅಭೇದ್ಯವಾಗಿ ಉಳಿದಿತ್ತು. ಅದನ್ನು ಗೆಲ್ಲಲು ಮಾಡಿದ ಎಲ್ಲಾ ಪ್ರಯತ್ನಗಳೂ ವಿಫಲವಾಗಿದ್ದವು. ಕ್ರಿ.ಪೂ.1260 ರಲ್ಲಿ ಯೂಲಿಸಿಸ್ ತನ್ನ ಸೈನಿಕರನ್ನು ಟ್ರಾಯ್ ಕೋಟೆಯೊಳಕ್ಕೆ ಕಳುಹಿಸಲು ದೊಡ್ಡ ಮರದ ಕುದುರೆಯೊಂದನ್ನು ತಯಾರಿಸಲು ತನ್ನ ರಾಜ್ಯದ ಬಡಗಿಗಳಿಗೆ ಹೇಳುತ್ತಾನೆ. ನಿಜದ ತಲೆಯ ಮೇಲೆ ಹೊಡೆದಂತೆ ಇರುವ ಮರದ ಕುದುರೆಯ ಒಳಗೆ 40 ಸೈನಿಕರನ್ನು ಕೂರಿಸಿ ಟ್ರಾಯ್ ನಗರದ ಬಳಿಕಳುಹಿಸಲಾಗುತ್ತದೆ. ಮರದ ಕುದುರೆಯನ್ನು ಹಿಡಿದ ಸೈನಿಕನೊಬ್ಬ ಈ ಕುದುರೆಯನ್ನು ಗ್ರೀಕರು ಅಥೆನಾ ದೇವತೆಗೆ ಕೊಡುಗೆಯಾಗಿ ನೀಡಿದ್ದಾರೆ ಎಂದು ತಿಳಿಸಿ ಟ್ರಾಯ್ ನಗರದೊಳಕ್ಕೆ ಪ್ರವೇಶ ಪಡೆಯುತ್ತಾನೆ.

ಟ್ರಾಯ್ ನಗರದ ಅರಸಿ ಹೆಲೆನ್ ಇದರ ಹಿಂದೆ ಏನೋ ಮೋಸವಿರಬೇಕು ಎಂದು ಶಂಕಿಸಿ ಒಳಗಿರುವವರು ಹೊರಬನ್ನಿ ಎನ್ನುತ್ತಾಳೆ. ಆದರೆ ಒಳಗಿದ್ದ ಸೈನಿಕರು ಕದಲುವುದಿಲ್ಲ. ಇದರಿಂದ ಮೋಸ ಹೋದ ಹೆಲೆನ್ ಅಶವವನ್ನು ಒಳ ಹೋಗಲು ಬಿಡುತ್ತಾಳೆ. ನಂತರ ಒಳಗಿದ್ದ ಸೈನಿಕರು ಹೊರಬಂದು ಕೋಟೆ ಬಾಗಿಲನ್ನು ತೆರೆಯುತ್ತಾರೆ. ಪುಟ್ಟ ನಗರ ಟ್ರಾಯ್ ಮೋಸದ ಯುದ್ಧದಲ್ಲಿ ಸೋಲನ್ನಪ್ಪುತ್ತದೆ. ಈ ಕಥೆಯನ್ನು ಏನಿಯಡ್ ಕಥನದಲ್ಲಿ ವರ್ಜಿಲ್ ಅದ್ಭುತವಾಗಿ ವರ್ಣಿಸಿದ್ದಾನೆ.

ಇತ್ತೀಚೆಗೆ ಟ್ರೋಜನ್ ಹಾರ್ಸ್ ಎಂಬ ಕಂಪ್ಯೂಟರ್ ಪ್ರೋಗ್ರಾಮ್ ಒಂದು ಹ್ಯಾಕ್ ಮಾಡಿದ ಕಂಪ್ಯೂಟರುಗಳ ಪ್ರೋಗ್ರಾಮುಗಳನ್ನು ಹಾಳು ಮಾಡಿತ್ತು. ಇತರ ಯಾವುದೋ ಆಪ್ ಒಳಗೆ ಅಡಗಿದ್ದ ಇವು ಕಂಪ್ಯೂಟರ್ ಪ್ರವೇಶಿಸಿದ ತಕ್ಷಣ ಕಾರ್ಯಪ್ರವೃತ್ತವಾಗಿ ಎಲ್ಲಾ ಫೈಲುಗಳನ್ನು ಹಾಳುಗೆಡವಿದ್ದವು.

ಅಶ್ವಮೇಧ ಯಾಗ

ಅಶ್ವಮೇಧ ಎನ್ನುವುದು ಒಂದು ಪುರಾತನ ಕಾಲದ ಶ್ರೌತ ಸಂಪ್ರದಾಯದ ಯಜ್ಞವಾಗಿದ್ದು ಅದನ್ನು ರಾಜ ಮಹಾರಾಜರು ಮಾತ್ರಾ ಆಚರಿಸಲು ಸಾಧ್ಯವಾಗುತ್ತಿತ್ತು. ಅರಸನೊಬ್ಬ ತನ್ನ ಸುತ್ತ–ಮುತ್ತಲ ರಾಜ್ಯಗಳಮೇಲೆ ತನ್ನ ಅಧಿಪತ್ಯವನ್ನು ಸಾಧಿಸಲು ಬಯಸಿ ಯಜ್ಞದ ಕುದುರೆಯೊಂದಿಗೆ ದಂಡಯಾತ್ರೆ



ಪ್ರಾರಂಭಿಸುತ್ತಿದ್ದ. ಮೊದಲು ಶ್ವಾನವೊಂದರ ಬಲಿ ನೀಡಿ ಅಶ್ವದ ಕಿವಿಯಲ್ಲಿ ಮಂತ್ರಗಳನ್ನು ಹೇಳಿ ಅದನ್ನು ಸ್ವತಂತ್ರವಾಗಿ ಬಿಡಲಾಗುತ್ತಿತ್ತು. ಅದರ ಹಿಂದೆ ಅರಸನ ಸೈನ್ಯ ರಕ್ಷಣೆಗೆ ಇರುತ್ತಿತ್ತು. ಆತನ ಸೈನ್ಯದ ಶಕ್ತಿ ಮತ್ತು ಸತ್ವವನ್ನು ಅರಿತ ರಾಜರು ತಾವಾಗಿಯೇ ಬಂದು ಶರಣಾಗಿ ಮುಂದಿನ ಅನಾಹುತಗಳನ್ನು ತಪ್ಪಿಸಿಕೊಳ್ಳುತ್ತಿದ್ದರು. ಕೆಲವು ಅರಸರು ಯಜ್ಞದ ಕುದುರೆಯನ್ನು ಕಟ್ಟಿ ಹಾಕಿ ಯುದ್ಧ ನಡೆದು ಅದರ ಭೀಕರ ಪರಿಣಾಮಗಳ ಜೊತೆಗೆ ಕಪ್ಪ–ಕಾಣಿಕೆಗಳನ್ನು ಸೋತವ ತೆರಬೇಕಾಗುತ್ತಿತ್ತು. ಅಶ್ವಮೇಧ ಯಜ್ಞ ಮಾಡುತ್ತಿರುವ ಅರಸ ಸೋತರೆ ಅದು ದೊಡ್ಡ ಅಪಮಾನ ಎಂದು ಭಾವಿಸಲಾಗುತ್ತಿತ್ತು.

ತೈತ್ತಿರೀಯ ಸಂಹಿತೆಯ ಏಳನೆಯ ಕಾಂಡದಲ್ಲಿ ಅಶ್ವಮೇಧದ ಬಗ್ಗೆ ವಿವರಣೆ ನೀಡಲಾಗಿದೆ. ಮೇಧ ಎಂಬ ಪದ ಮೇಧ್ರಿ ಎಂಬುತರ ವ್ಯುತ್ಪತ್ತಿ. ಹಾಗೆಂದರೆ ಶಿದ್ಧೀಕರಣ ಎಂದರ್ಥ. ಶತಪತ ಬ್ರಾಹ್ಮಣದಲ್ಲಿ ರಾಷ್ಟ್ರದ ಕಾರ್ಯಗಳನ್ನು ನಿರ್ವಹಿಸಲು ರಾಜನಾದವನು ಆಗಾಗ ಅಶ್ವಮೇದ ಯಾಗವನ್ನು ಮಾಡಲೇ ಬೇಕು ಎನ್ನುತ್ತದೆ ಶತಪತ ಬ್ರಾಹ್ಮಣ ಗ್ರಂಥ. ಸ್ವಾಮಿ ದಯಾನಂದ ಸರಸ್ವತಿಯವರು ತಮ್ಮ 'ಅನ್ ಇಂಟ್ರೊಡಕ್ಷನ್ ಟು ವೇದಾಸ್' ಎಂಬ ಗ್ರಂಥದಲ್ಲಿ ಸಾಮ್ರಾಜ್ಯವು ಅಶ್ವವಿದ್ದಂತೆ ಪ್ರಜೆಗಳು ಇತರೆ ಪ್ರಾಣಿಗಳಂತೆ. ಅರಸ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಅಶ್ವಮೇಧ ಯಜ್ಞವನ್ನು ಮಾಡಲೇ ಬೇಕು ಎನ್ನುತ್ತಾರೆ. ನೂರು ಅಶ್ವಮೇದ ಯಾಗಗಳನ್ನು ಮಾಡಿದವ ಇಂದ್ರ ಪದವಿಗೆ ಅರ್ಹನಾಗುತ್ತಾನೆ ಎಂಬ ನಂಬಿಕೆ ಪೌರಾಣಿಕ ಕಾಲದಲ್ಲಿ ಇತ್ತು. ಆದುದರಿಂದ ಅನೇಕ ಅರಸರು ಅಶ್ವಮೇಧ ಯಾಗಕ್ಕೆ ಕೈಹಾಕುತ್ತಿದ್ದರು. ಆದರೆ ಇಂದ್ರ ಇವನ್ನೆಲ್ಲಾ ಹಾಳುಗೆಡವುತ್ತಿದ್ದ. ಅರಸ ಪೃಥುವಿನ ಕುದುರೆಯನ್ನು ಕದ್ದು ಪ್ರಹ್ಲಾದನ ಮೊಮ್ಮಗ ಬಾಲಿಯ ಯಜ್ಞಕ್ಕೆ ದೇವೇಂದ್ರ ಅಡ್ಡಿ ಉಂಟು ಮಾಡಿದ ಎಂಬ ಉಲ್ಲೇಖಗಳಿವೆ.

ಅಶ್ವ ಎನ್ನುವುದು ದೇಹದ ಇಂದ್ರಿಯಗಳನ್ನು ಪ್ರತಿನಿಧಿಸುತ್ತದೆ. ಅವನ್ನು ಕೊಂದು ದೈವಿಕ ಸ್ಥಿತಿ ಪಡೆಯುವುದು ಒಂದು ಉದ್ದೇಶ ಎನ್ನುತ್ತವೆ ಪಾರಮಾರ್ಥಿಕ ಗ್ರಂಥಗಳು. ಅಶ್ವಮೇಧ ಯಾಗವು ಫಲವತ್ತತೆಗಾಗಿ ನಡೆಸಲಾಗುತ್ತಿದ್ದ ಒಂದು ತಾಂತ್ರಿಕ ಕ್ರಿಯೆ ಎಂಬ ಅಭಿಪ್ರಾಯಗಳನ್ನು ರಾಲ್ಫ್ ಗ್ರಿಫ್ಫಿತ್ ಎಂಬ ವಿದ್ವಾಂಸರು ವ್ಯಕ್ತಪಡಿಸುತ್ತಾರೆ. (Yajur Veda 23.20, p.213. 1899 Edition)

ಅಶ್ವಮೇಧ ಯಾಗ ಮಾಡಿದ ಪ್ರಮುಖರೆಂದರೆ ಭರತ, ದಶರಥ, ಶ್ರೀ.ರಾಮ, ಯುಧಿಷ್ಠಿರ, ಪರೀಕ್ಷಿತ, ಪುಶ್ಯ ಮಿತ್ರ ಶೃಂಗ, ಸಮುದ್ರಗುಪ್ತ, ಮೊದಲನೇ ಪುಲಿಕೇಶಿ, ರಾಜಾಧಿರಾಜ ಚೋಳ ಮತ್ತು ಎರಡನೇ ಜೈಸಿಂಗ್.

ಇಂಡೋ–ಯುರೋಪಿಯನ್ ಜನರಲ್ಲಿ ಅಶ್ವ ಬಲಿ ಪದ್ಧತಿ ಇತ್ತು. ಸತ್ತ ವ್ಯಕ್ತಿಯ ನೆನಪಿನಲ್ಲಿ ಅಶ್ವವನ್ನು ಬಲಿ ನೀಡಿ ಅದನ್ನು ಸಮಾಧಿ ಮಾಡಲಾಗುತ್ತಿತ್ತು. ಈಜಿಪ್ಶಿಯನ್ ಫೆರೋಗಳೂ ಕೂಡಾ ತಮ್ಮ ಪಿರಮಿಡ್ಡುಗಳಲ್ಲಿ ಅನೇಕ ಅಶ್ವಗಳನ್ನು ಇಟ್ಟುಕೊಳ್ಳುತ್ತಿದ್ದರು.

ಕುದುರೆ ರೇಸ್

ಕುದುರೆ ರೇಸ್ ಎಂದ ಕೂಡಲೆ ನೆನಪಿಗೆ ಬರುವ ಚಿತ್ರ ತಲೆ ಕೆಡಿಸಿಕೊಂಡು ಪುಸ್ತಕವೊಂದನ್ನು ಕಯ್ಯಲ್ಲಿ ಹಿಡಿದು ಆವತ್ತಿನ ರೇಸಿನಲ್ಲಿ ಭಾಗವಹಿಸುವ ಕುದುರೆಗಳ ಅಪ್ಪ–ಅಮ್ಮ, ಅವುಗಳ ಸೋದರ ಸಂಬಂಧಿಗಳು ಅದೆಷ್ಟು ರೇಸ್ ಗೆದ್ದಿವೆ, ಜಾಕಿ ಯಾರು ಇತ್ಯಾದಿಯಾಗಿ ಅವುಗಳ ಇತಿಹಾಸವನ್ನು ಕೆದಕುತ್ತ ಕುಳಿತ ವ್ಯಕ್ತಿ. ಕೆಲವರಿಗೆ ಕುದುರೆ ರೇಸ್ ವ್ಯಸನವಾದರೆ, ಮತ್ತೆ ಕೆಲವರಿಗೆ ತೆವಲು, ಇನ್ನು ಕೆಲವರಿಗೆ ಹುಚ್ಚು. ಕುದುರೆಯ ಬಾಲಕ್ಕೆ ದುಡ್ಡು ಕಟ್ಟಿ ತಮ್ಮ ಬದುಕನ್ನೇ ಹಾಳು ಮಾಡಿಕೊಂಡವರು ಅನೇಕರಿದ್ದಾರೆ. ರೇಸ್ ನೋಡಲು ಮತ್ತು ರೇಸ್ ಆಡಲು ಹೆಚ್ಚಾಗಿ ಸೇರುವ ಜನ ಕೆಳ ಮಧ್ಯಮ ವರ್ಗದವರೆ. ಎಲೈಟ್ ವರ್ಗದ ಜನ ಲಕ್ಷ ಲಕ್ಷ ಹಣ ಖರ್ಚು ಮಾಡಿ ಕುದುರೆಗಳನ್ನು ಸಾಕಿ ರೇಸಿನಲ್ಲಿ ಗೆದ್ದಾಗ ರಾಶಿ ಹಣ ಗೆಲ್ಲುತ್ತಾರೆ.

ರೇಸ್ ಇತಿಹಾಸ

ವಿಶ್ವದಲ್ಲಿ ಕುದುರೆಗಳನ್ನು ಓಡಿಸಿ ಗೆಲ್ಲುವ ಕುದುರೆಯ ಮೇಲೆ ಪಣ ಕಟ್ಟುವ ಚಾಳಿ ಪುರಾತನ ಗ್ರೀಸ್, ರೋಂ, ಈಜಿಪ್ಟ್ ದೇಶಗಳಲ್ಲಿತ್ತು. ರಥಗಳಿಗೆ ಕುದುರೆಗಳನ್ನು ಕಟ್ಟಿ ವೇಗವಾಗಿ ದೌಡಾಯಿಸುವ ಸ್ಪರ್ದೆ ಇದು. ಬೆನ್‌ಹರ್ ಎಂಬ ದುಬಾರಿ ಬಜೆಟ್ಟಿನ ಚಲನಚಿತ್ರವೊಂದು 1959 ರಲ್ಲಿ ಬಿಡುಗಡೆಯಾಗಿ ಬಲು ಜನಪ್ರಿಯತೆ ಗಳಿಸಿತ್ತು. ಜೆರುಸಲೆಂ ವ್ಯಾಪಾರಿಯೊಬ್ಬನ ಕಥೆ ಹೇಳುವ ಇದರಲ್ಲಿನ ರಥಗಳ ಪಂದ್ಯ ಬಹಳ ರೋಮಾಂಚಕಾರಿಯಾಗಿ ಚಿತ್ರಿಸಲ್ಪಟ್ಟು ಇಂದಿಗೂ ಅದರ ರೋಚಕತೆಯನ್ನು ಸರಿಗಟ್ಟುವ ಚಲನಚಿತ್ರ ಬಂದಿಲ್ಲ.

ಭಾರತದ ಕುದುರೆ ರೇಸ್ ಇತಿಹಾಸ ಆರಂಭವಾದದ್ದು ಸುಮಾರು 240 ವರ್ಷಗಳ ಹಿಂದೆ. ಕ್ರಿ.ಶ.1777 ರಲ್ಲಿ ಅಂದಿನ ಮದ್ರಾಸ್‌ನಲ್ಲಿ ಮೊದಲ ರೇಸ್


1
LINGTON PARK
4
ARLINGTON PARK
7

ಆರಂಭವಾಯ್ತು. ಆಗ ಓಟಕ್ಕೆ ಬೇಕಾದ ಕುದುರೆಗಳನ್ನು ವಿದೇಶದಿಂದ ತರಿಸಿಕೊಳ್ಳಲಾಗಿತ್ತು ಎಂದು ದಾಖಲೆಗಳು ಹೇಳುತ್ತವೆ. ಇಂದು ಭಾರತದಲ್ಲಿ ಬೆಂಗಳೂರು, ಹೈದರಾಬಾದ್, ಕೋಲ್ಕತ್ತ, ಮುಂಬೈ ಮತ್ತು ಮೈಸೂರುಗಳಲ್ಲಿ ಅರು ಟರ್ಫ್ ಕ್ಲಬ್ಬುಗಳಿವೆ. ಇತ್ತೀಚೆಗೆ ಊಟಿ ಮತ್ತು ದೆಹಲಿಗಳ ರೇಸ್ ಕ್ಲಬ್ಬುಗಳು ಸೇರಿವೆ.

ಕುದುರೆ ರೇಸುಗಳಲ್ಲಿ ಫ್ಲಾಟ್ ರೇಸಿಂಗ್‌ನಲ್ಲಿ ಕುದುರೆ ಎರಡು ಪಾಯಿಂಟುಗಳಲ್ಲಿ ನೇರ ಅಥವಾ ಓವಲ್ ಟಾಕಿನಲ್ಲಿ ದೌಡಾಯಿಸುತ್ತದೆ. ಜಂಪ್ ರೇಸಿಂಗನ್ನು ಸ್ಟೀಫಲ್ ಚೇಸಿಂಗ್ ಎಂದೂ ಕರೆಯಲಾಗುತ್ತದೆ. ಇಲ್ಲಿ ಕುದುರೆಗಳು ಅಡ್ಡ ಪಟ್ಟಿಗಳನ್ನು ಹಾರುತ್ತಾ ಓಡುತ್ತವೆ. ಹಾರ್ನೆಸ್ ರೇಸಿಂಗಿನಲ್ಲಿ ಕುದುರೆ ರಥವನ್ನು ಎಳೆಯುತ್ತದೆ. ಎಂಡ್ಯೂರೆನ್ಸ್ ರೇಸಿಂಗ್ ಕುದುರೆಗಳನ್ನು ಸುಮಾರು 160 ಕಿಮಿ ವರೆಗೆ ಓಡಿಸಲಾಗುತ್ತದೆ.

ಪ್ರಮುಖ ರೇಸುಗಳು

ಭಾರತದಲ್ಲಿ ಐದು ಪ್ರಮುಖ ಕ್ಲಾಸಿಕ್ ರೇಸುಗಳು ನಡೆಯುತ್ತವೆ. ಇದರ ಮೂಲ ಬ್ರಿಟೀಷ್ ಕ್ಲಾಸಿಕಲ್ ರೇಸ್. ಇಂಡಿಯನ್ 1000 ಮತ್ತು 2000 ಗಿನೀಸ್ ಡಿಸೆಂಬರ್ ತಿಂಗಳಲ್ಲಿ ನಡೆಯುತ್ತವೆ. ಇಂಡಿಯನ್ ಡರ್ಬಿ ಫೆಬ್ರುವರಿ ತಿಂಗಳ ಮೊದಲ ಭಾನುವಾರದಲ್ಲಿ ನಡೆಯುತ್ತದೆ. ಇದರ ರೇಸಿಂಗ್ ಪರ್ಸ್ ಮೊತ್ತ ರೂ. 3,00,00,000–00. ಇದು ಶೇಕಡಾವಾರು ಲೆಕ್ಕದಲ್ಲಿ ಟರ್ಫ್ ಕ್ಲಬ್ಬಿಗೆ , ಕುದುರೆ ಮಾಲಿಕರಿಗೆ ಸಂದಾಯವಾಗುತ್ತದೆ. ರೇಸುಗಳಲ್ಲಿ ಒಂದೇ ಸಮನೆ ಸೋತ ಕುದುರೆಗಳಿಗೆ ಗುಂಡು ಹೊಡೆದು ಕೊಲ್ಲಲಾಗುತ್ತದೆ ಎಂದು ಹೇಳುತ್ತಾರೆ. ಪ್ರತೀ ವರ್ಷ ಹೀಗೆ ಸುಮಾರು 13,000 ರೇಸ್ ಕುದುರೆಗಳು ಕೊಲ್ಲಲ್ಪಡುತ್ತವೆ ಎನ್ನುತ್ತದೆ ವರದಿಯೊಂದು. ಓಡುವಾಗ ಕುದುರೆಗಳು ಬಿದ್ದು ಸಾಯುವ ಸಂದರ್ಭಗಳೂ ಇವೆ. ಕುದುರೆಗಳಿಗೆ ಮಾದಕ ದ್ರವ್ಯ ಅಥವಾ ರಂ ಕುಡಿಸುತ್ತಾರೆ ಎಂಬ ನಂಬಿಕೆ ಇದೆ. ಆದರೆ ಇಂತಹಾ ಅಂಶಗಳನ್ನು ಕಟ್ಟು–ನಿಟ್ಟಾಗಿ ಗಮನಿಸಲಾಗುತ್ತದೆ.

ಬೆಂಗಳೂರು ಡರ್ಬಿ ಜುಲೈ ಎರಡನೇ ಭಾನುವಾರದಂದು ಆರಂಭವಾಗುತ್ತದೆ. ಇವೆಲ್ಲಾ ಓಟಗಳಲ್ಲಿ ಪ್ರಸಿದ್ಧ ಕುದುರೆಗಳನ್ನು ಓಡಿಸಲು ಆಹ್ವಾನ ನೀಡಲಾಗುತ್ತದೆ. ಹೊರಗಿನಿಂದ ಇಂತಹಾ ಖ್ಯಾತ ಕುದುರೆಗಳೂ, ಜಾಕಿಗಳು ಬಂದಾಗ ರೇಸ್ ವ್ಯಸನಿಗಳ ಹುಚ್ಚು ತಾರಕಕ್ಕೇರುತ್ತದೆ. ಸಾಲ

ಮಾಡಿಯಾದರು ಹಣ ಕಟ್ಟೀ ಗೆಲ್ಲುವ ಹುಕಿ ಮಧ್ಯಮ ವರ್ಗದ ಬಡವನಿಗೆ ಉಕ್ಕುತ್ತದೆ.

ರೇಸುಗಳಲ್ಲಿ ಖುದ್ದಾಗಿ ಹಾಜರಾಗಿ ಬೆಟ್ ಕಟ್ಟುವ ಆನ್ ಕೋರ್ಸ್ ವಿಧಾನ ಒಂದಾದರೆ ಬೇರೆಲ್ಲೋ ನಡೆಯುವ ರೇಸ್‌ನಲ್ಲಿ ಭಾಗವಹಿಸುವ ಕುದುರೆಗಳನ್ನು ನೋಡಿ ನಿರ್ದಿಷ್ಟ ಸ್ಥಳವೊಂದರಲ್ಲಿ ಬೆಟ್ ಕಟ್ಟುವ ಆಫ್ ಕೋರ್ಸ್ ವಿಧಾನ ಇನ್ನೊಂದು. ವಿನ್, ಫ್ಲೋರ್‌ಕಾಸ್ಟ್, ಕ್ವಿನೆಲ್ಲಾ, ಜೋಡಿ, ಬಾರ್ ಬೆಟ್, ತನಲ, ಟ್ರೆಬಲ್, ಜಾಕ್‌ಪಾಟ್, ಸೂಪರ್ ಜಾಕ್‌ಪಾಟ್, ಕೆಂಚಿ ಮತ್ತು ಅಕ್ಯುಮುಲೇಟರ್ ಮುಂತಾದವು ಬೆಟ್ಟಿಂಗ್ ವಿಧಾನಗಳು. ಇದೀಗ ಕ್ರೆಡಿಟ್ ಕಾರ್ಡ್ ಬಳಸಿ ಆನ್ ಲೈನ್ ಬೆಟ್ಟಿಂಗ್ ಮಾಡಲು ಅವಕಾಶಗಳಿವೆ. ಆಸೆ ಇದ್ದವರು ಒಮ್ಮೆ ಪ್ರಯತ್ನಿಸಬಹುದು !

ಬೆಟ್ಟಿಂಗ್ ವಿಧಾನಗಳು ಹೇಗೆ ?

ಮೊದಲು ರೇಸಿಂಗ್ ಪ್ರೋಗ್ರಾಂ ಇರುವ ಪುಸ್ತಕ ಕೊಂಡುಕೊಳ್ಳೀ. ಅದರಲ್ಲಿ ರೇಸ್‌ನಲ್ಲಿ ಭಾವಹಿಸುವ ಕುದುರೆಗಳ ವಂಶಾವಳಿ, ಕುದುರೆಯ ವಯಸ್ಸು, ಅದರ ತಪ್ಪು–ಸರಿ, ಜಾಕಿಯ ವಿವರ, ತರಬೇತುದಾರರ ವಿವರಣೆ ಇರುತ್ತದೆ. ವಿವರಗಳನ್ನು ಅಭ್ಯಾಸ ಮಾಡಿ ಅದರಲ್ಲಿ ಒಂದು ಕುದುರೆಯನ್ನು ಆಯ್ಕೆ ಮಾಡಬೇಕು. ನಂತರ ಬುಕ್ಕಿಗಳ ಬಳಿ ಹೋಗಿ ಹಣ ಕಟ್ಟಬೇಕು. ನಿಮ್ಮ ಕುದುರೆ ಗೆದ್ದಲ್ಲಿ ನಿಮಗೆ ನಿಯಮಾನುಸಾರ ದೊರೆಯಬೇಕಾದ ಮೊತ್ತ ಸಿಗುತ್ತದೆ.

ರೇಸುಗಳಲ್ಲಿ ಬೆಟ್‌ಗಾಗಿ ಕುದುರೆಗಳನ್ನು ಆಯ್ಕೆ ಮಾಡಿಕೊಳ್ಳುವುದು ಒಂದು ಕಲೆ. ಭಾರಿ ವ್ಯಸನಗಾರರಿಗೆ ಕುದುರೆಯ ಇಡೀ ಇತಿಹಾಸ ತಿಳಿದಿರುತ್ತದೆ. ಅದರ ಆಧಾರದ ಮೇಲೆ ಹಣ ಕಟ್ಟಿದರೂ ಸೋಲುವುದುಂಟು. ಹಾಗಾಗಿಯೇ ಕುದುರೆ ಬಾಲಕ್ಕೆ ದುಡ್ಡು ಕಟ್ಟುವುದು ಎಂಬ ಮಾತು ನಾಣ್ಣುಡಿಯಾಗಿದೆ. ರೇಸಿನ ಚಟಕ್ಕೆ ಬಿದ್ದ ಶ್ರೀಸಾಮಾನ್ಯ ಮನೆ–ಮಠ ಮಾರಿಕೊಂಡ ಉದಾಹರಣೆಗಳಿವೆಯೇ ಹೊರತು ಉದ್ಧಾರವಾದವರು ವಿರಳ.

ಖ್ಯಾತ ತರಬೇತುದಾರರು

ಕುದುರೆಗಳನ್ನು ತರಬೇತು ಮಾಡುವುದೂ ಒಂದು ಕಲೆ. ಅದಕ್ಕೆಂದೇ ನುರಿತ ತರಬೇತುದಾರರಿದ್ದು ಅವರಿಗೆ ಇನ್ನಿಲ್ಲದ ಬೇಡಿಕೆ. ರಶೀದ್ ಬೈರಾಂಜಿ, ಎಸ್.ಎಸ್.ಅತ್ತೋಲಾಹಿ, ದಾರಾಶಾ, ಧಾರಿವಾಲ್, ಪೆಸಿ ಶರಾಫ್, ನರ್ರೇದು, ಶಾ, ಪದ್ಮನಾಭನ್, ಶೆಹಜಾದ್ ಅಬ್ಬಾಸ್, ದಲ್ಲಾಸ್ ತೋಡಿವಾಲಾ, ಎಸ್. ಗಣಪತಿ, ಇರ್ಫಾನ್ ಘಟಾಲ, ಅರ್ಜುನ್ ಮಂಗ್ಲೋರ್ಕರ್, ಮಗನ್ ಸಿಂಗ್, ವಿಜಯ್

ಸಿಂಗ್, ದೇಶಮುಖ್. ಇವರಲ್ಲಿ ಎ.ಬಿ.ಡೆವಿಡ್ ಎಂಬ ತರಬೇತುದಾರ ತಾನು ತರಬೇತಿ ನೀಡಿದ ಕುದುರೆಗಳಿಂದ 100 ರೇಸ್ ಗೆದ್ದಿದ್ದಾರಂತೆ.

ಖ್ಯಾತ ಜಾಕಿಗಳು

ಕುದುರೆಯನ್ನು ವೇಗವಾಗಿ ಓಡಿಸಿ ಮೊದಲು ಗುರಿ ತಲುಪುವುದೂ ಒಂದು ಕಲೆ. ಇದನ್ನು ಅನೇಕ ಜಾಕಿಗಳು ಮಾಡಿ ತೋರಿಸಿದ್ದಾರೆ. ಭಜರಂಗ್ ಸಿಂಗ್ ಜೋಧಾ, ಶ್ರೀಕಾಂತ್, ವಸಂತ್ ಶಿಂಧೆ, ಸೂರಜ್ ನರೇದು, ಇಮ್ರಾನ್ ಖಾನ್, ಇಮ್ರಾನ್ ಚಿಸ್ತಿ, ಸಂದೇಶ್, ಝೆರ್ವಾನ್, ತ್ರೆವೋರ್ ಪಟೇಲ್, ಶ್ರೀನಾಥ್, ಅಸ್ಲಾಂ ಖಾದರ್ ಪ್ರಮುಖರು.

ಜಾಕಿಗಳು ಪ್ರತೀ ರೇಸಿಗೆ ರೂ. 5000–10,000 ಮೊತ್ತ ಪಡೆಯುತ್ತಾರಂತೆ. ಜೊತೆಗೆ ಪ್ರಥಮ ಸ್ಥಾನ ಪಡೆದಾಗ ಶೇ. 10, ಎರಡನೇ ಸ್ಥಾನ ಪಡೆದಾಗ ಶೇ. 5 ಬಹುಮಾನದ ಮೊತ್ತ ಪಡೆಯುತ್ತಾರೆ ಎನ್ನಲಾಗಿದೆ. ಭಾರತದ ರೇಸುಗಳಲ್ಲಿ ಅತಿ ದೊಡ್ಡ ಬಹುಮಾನದ ಮೊತ್ತ ಹೊಂದಿರುವುದು ಇಂಡಿಯನ್ ಡರ್ಬಿ. ಇಲ್ಲಿ ರೂ. 30,00,00,000–00 ಬಹುಮಾನದ ಮೊತ್ತವಾಗಿದೆ. ವಿಶ್ವದಲ್ಲೇ ಹೆಚ್ಚಿನ ಮೊತ್ತದ ಬಹುಮಾನದ ಹಣ ಹೊಂದಿರುವ ರೇಸ್ ದುಬೈ ಕಪ್. ಇದರ ಬಹುಮಾನದ ಮೊತ್ತ ರೂ.63.69 ಕೋಟಿ.

ಇತ್ತೀಚೆಗೆ ಇಂಗ್ಲೆಂಡ್‌ನಲ್ಲಿ ಆನ್‌ಲೈನ್ ಮೂಲಕ ಬೆಟ್ ಕಟ್ಟಿದ ಅದೃಷ್ಟವಂತ ಪಂಟರನೊಬ್ಬ ತನ್ನ ರೂ. 1569–00 ಕ್ಕೆ ಬದಲಾಗಿ ರೂ. 6.79 ಕೋಟಿ ಗೆದ್ದ ದಾಖಲೆ ಇದೆ. ಇಂಗ್ಲೆಂಡ್ ದೇಶದಲ್ಲಿ ದೊಡ್ಡ ಪಂಟರನೊಬ್ಬ ಇದೇ ಮಾರ್ಚ್ ತಿಂಗಳಲ್ಲಿ ರೂ. 82.60 ಮೊತ್ತ ಪಣಕ್ಕಿಟ್ಟದ್ದು ಭಾರಿ ದಾಖಲೆಯಾಗಿದೆ. ದುರದೃಷ್ಟವಶಾತ್ ಆತನ ಕುದುರೆ ಸೋತು ಹೋಯಿತು.

ವಿಶ್ವದ ಶ್ರೇಷ್ಠ ಜಾಕಿಗಳಲ್ಲಿ ಮೊದಲನೆಯ ಸ್ಥಾನ ಲಫ್ಟಿತ್ ಪಿಂಕೇ ಎಂಬಾತನದ್ದು. ಈತ ತನ್ನ ಜಾಕಿ ವೃತ್ತಿಯಲ್ಲಿ 9530 ಗೆಲುವುಗಳನ್ನು ಸಾಧಿಸಿದ್ದಾನಂತೆ. ಈತನ ದಾಖಲೆಯನ್ನೂ ಇನ್ನೂ ಯಾರೂ ಸರಿಗಟ್ಟಿಲ್ಲ.

ಕುದುರೆ ಪಂದ್ಯಗಳು

ಕುದುರೆಗಳನ್ನು ಪುರಾತನ ಅರಬ್ ದೇಶಗಳಲ್ಲಿ ಬುಜಕಾಶಿ ಎಂಬ ಆಟದಲ್ಲಿ ಸವಾರಿಗಾಗಿ ಬಳಸುತ್ತಿದ್ದರು. ಕುರಿಯೊಂದನ್ನು ವೃತ್ತದೊಳಗಿಟ್ಟು ಅದನ್ನು ಯಾರು ಮೊದಲು ಹೊತ್ತೊಯ್ಯಲು ಯಶಸ್ವಿಯಾಗುತ್ತಾರೋ ಅವರನ್ನು ವಿಜಯಿ ಎಂದು ಘೋಷಿಸಿ ಕುರಿಯನ್ನು ಬಹುಮಾನವಾಗಿ ನೀಡಲಾಗುತ್ತಿತ್ತು.

ಈಕ್ವೆಸ್ಟ್ರಿಯನ್ ಜನಪ್ರಿಯ ಪಂದ್ಯ. ಇಲ್ಲಿ ಕುದುರೆ ಮತ್ತು ಸವಾರನ ಜಾಣ್ಮೆ ಮತ್ತು ಟೈಮಿಂಗ್ ಪ್ರಮುಖವಾಗಿರುತ್ತದೆ. ಕುಣಿಯುತ್ತಾ ನಡೆದು ಬರುವ ಕುದುರೆ ಶೋ ಜಂಪಿಂಗ್ ಮುಂತಾದ ಆಟಗಳನ್ನು ಪ್ರದರ್ಶಿಸಲಾಗುತ್ತದೆ.

ಅಶ್ವಗಳ ಪೋಲೋ ಮತ್ತೊಂದು ಜನಪ್ರಿಯ ಆಟ. ಬ್ಯಾಟನ್ ರಿಲೇ ರೇಸ್, ಮೌಂಟೆಡ್ ಗೇಮ್ಸ್, ಟೀಂ ಚೇಸಿಂಗ್, ಸ್ಟೀಪಲ್ ಚೇಸ್, ಹಾರ್ನೆಸ್ ರೇಸಿಂಗ್, ಪೋಲ್ ಬೆಂಡಿಂಗ್, ಬ್ಯಾರೆಲ್ ರೇಸಿಂಗ್ ಇತ್ಯಾದಿಗಳು ಅಶ್ವ ಪಂದ್ಯಾಟಗಳು.

ಅಶ್ವ ಎಂದರೆ ಅಷ್ಟೇ ಸಾಕೇ !

ಕೋಲ್ಟ್ : ನಾಲ್ಕು ವರ್ಷಗಳಿಗಿಂತಾ ಸಣ್ಣ ವಯಸ್ಸಿನ ಕುದುರೆ.

ಫಿಲ್ಲಿ : ನಾಲ್ಕು ವರ್ಷಗಳಿಗಿಂತಾ ಸಣ್ಣ ಹೆಣ್ಣು ಕುದುರೆ.

ಫೋಲ್ : ಒಂದು ವರ್ಷದ ಮರಿ ಕುದುರೆ.

ಗೆಲ್ಡಿಂಗ್ : ಬೀಜ ಹೊಡೆದ ಗಂಡು ಕುದುರೆ.

ಮೇರ್ : ನಾಲ್ಕು ವರ್ಷಕ್ಕಿಂತಾ ಹೆಚ್ಚು ವಯಸ್ಸಾದ ಹೆಣ್ಣು ಕುದುರೆ.

ಸ್ಟಾಲಿಯನ್ : ನಾಲ್ಕು ವರ್ಷಕ್ಕಿಂತಾ ವಯಸ್ಸಾದ ಗಂಡು ಕುದುರೆ.

ಇಯರ್ಲಿಂಗ್ : ಒಂದರಿಂದ ಎರಡು ವರ್ಷದೊಳಗಿನ ಮರಿ ಕುದುರೆ.

ರಂಗದ ಮೇಲೆ ಕುದುರೆಗಳು

ದಕ್ಷಿಣ ಭಾರತದಲ್ಲಿ ಕೀಲುಕುದುರೆ ನೃತ್ಯ ಬಹಳ ಜನಪ್ರಿಯವಾದ ಕಲಾಪ್ರಕಾರ. ಪಾತ್ರಧಾರಿ ಕುದುರೆಯ ದೇಹದ ಭಾಗವನ್ನು ಧರಿಸಿ ಸವಾರನ ರೀತಿ ಅಭಿನಯಿಸುತ್ತಾನೆ. ಚನ್ನಪಟ್ಟದ ಮರದ ಕುದುರೆ ಆಟಿಕೆ ನೂರಾರು ವರ್ಷಗಳಿಂದ ಬಹಳ ಜನಪ್ರಿಯವಾದುದು.

ಬೆಳ್ಳಿ ತೆರೆಯ ಮೇಲೆ ಕುದುರೆಗಳ ಬಳಕೆ ವ್ಯಾಪಕವಾಗಿ ಆಗಿದೆ. ರಾಜಕುಮಾರ್ ಕುದುರೆಯ ಮೇಲೆ ಕುಳಿತು ಹಾಡುವಾಗ ಜೊತೆಗೆ ಗುನುಗದವರಿಲ್ಲ. ಇಂಗ್ಲೀಷ್ ಕೌಬಾಯ್ ಸಿನೆಮಾಗಳಲ್ಲಿ ಕುದುರೆಯ ಮೇಲೆ ಕುಳಿತು ನಾಯಕ ಮಾಡುತ್ತಿದ್ದ ಸಾಹಸದ ಚಿತ್ರಗಳು ಜನರಿಗೆ ಹುಚ್ಚು ಹಿಡಿಸಿದ್ದವು. ಸರ್ಕಸ್‌ಗಳಲ್ಲಿ ಕುದುರೆ ಸಾಹಸ ಮೈ ರೋಮಾಂಚನಗೊಳಿಸುತ್ತಿತ್ತು.

ಸೂಪರ್‌ಮ್ಯಾನ್ ಇಂಗ್ಲೀಷ್ ಚಿತ್ರ ಸರಣಿಯ ನಾಯಕ ಕ್ರಿಸ್ಟೋಫರ್ ರೀವ್ ಕುದುರೆ ಸವಾರಿಯ ಸಮಯದಲ್ಲಿ ಜಾರಿ ಬಿದ್ದು ಕುತ್ತಿಗೆ ಮುರಿದುಕೊಂಡು ವರ್ಷಗಟ್ಟಲೆ ಕೋಮಾದಲ್ಲಿದ್ದು ನಿಧನನಾದ. ಚಂಗೇಸ್ ಖಾನ್ ಕುದುರೆಯಿಂದ ಜಾರಿ ಬಿದ್ದು ಸತ್ತ ಎನ್ನುತ್ತದೆ ಇತಿಹಾಸ.

ಸಾಹಿತ್ಯದಲ್ಲೂ ಕೂಡಾ ಅಶ್ವಗಳ ಪಾತ್ರ ಗಣನೀಯವಾಗಿದೆ. ಕನ್ನಡದಲ್ಲಿ ಕುದುರೆ ಮೊಟ್ಟೆ, ಹಯವದನ ಜನಪ್ರಿಯ ನಾಟಕಗಳು.

❖



2. ಚೀನಿ ಮತ್ತು ಭಾರತೀಯ ಯುದ್ಧಕಲೆಗಳು

ಯುದ್ಧಕ್ಕೆ ಶತಶತಮಾನಗಳ ಹಿನ್ನೆಲೆ ಇದೆ. ಇತಿಹಾಸದ ಲೆಕ್ಕಾಚಾರಕ್ಕೆ ಸಿಕ್ಕ ಪ್ರಥಮ ಯುದ್ಧವೆಂದರೆ ಮೆಸಪೊಟಾಮಿಯಾದಲ್ಲಿ ಕ್ರಿ.ಪೂ. 2700 ರಲ್ಲಿ ಸುಮೇರ್ ಮತ್ತು ಈಲಂ ರಾಜ್ಯಗಳ ನಡುವೆ ನಡೆದ ಯುದ್ಧ. ಆಗೆಲ್ಲಾ ಯುದ್ಧವೆಂದರೆ ಅದಕ್ಕೆ ಒಂದು ನಿರ್ದಿಷ್ಟ ರೂಪ ಮತ್ತು ಕ್ರಮಗಳಿರುತ್ತಿರಲಿಲ್ಲ. ಜೋರಾಗಿ ಹೊಡೆದವನೇ ಗೆದ್ದ ಬಿದ್ದವನೇ ಸೋತ ಎನ್ನುವ ಶಕ್ತಿ ಪ್ರದರ್ಶನ ಮಾತ್ರವಾಗಿತ್ತು.

ಮೂಲಭೂತವಾಗಿ ಮನುಷ್ಯ ಆಕ್ರಮಣಕಾರಿ ಮನೋಭಾವದವನು. ಸ್ವತಂತ್ರ ಮನೋಭಾವ, ರಕ್ಷಣೆ ಮತ್ತು ಅತಿಕ್ರಮಣ ಆತನ ಸ್ವಭಾವ. ಜಗತ್ತಿನ ಎಲ್ಲಾ ಯುದ್ಧಗಳು ನಡೆದಿರುವುದು ಈ ಕಾರಣಗಳಿಂದಲೇ. ಕೆಲವೊಮ್ಮೆ ದೇಶದೊಳಗೆ ಗುಂಪುಗಳ ನಡುವೆ ನಡೆಯುವ ಅಂತರ್ಯುದ್ಧ, ಸ್ವಾತಂತ್ರ್ಯ ಹೊಂದಲು ವಿಮೋಚನಾ ಯುದ್ಧ ಇತ್ಯಾದಿಗಳೂ ಇವೆ. ರಾಷ್ಟ್ರವೊಂದು ಸೈದ್ಧಾಂತಿಕ ಕಾರಣಗಳಿಗಾಗಿ ಇನ್ನೊಂದು ರಾಷ್ಟ್ರದ ಮೇಲೆ ನಡೆಸುವ ಕಾದಾಟಕ್ಕೆ ಕಲೆಯ ರೂಪ ಬಂದದ್ದು ಕೆಲವು ಶತಮಾನಗಳ ಹಿಂದೆ.

ಇತಿಹಾಸದ ಕಾಲಘಟ್ಟಗಳಲ್ಲಿ ಆಳಿದ ಅನೇಕ ಅರಸರು ತಮ್ಮವೇ ಆದ ಯುದ್ಧ ಕೌಶಲ್ಯಗಳನ್ನು ಹೊಂದಿದ್ದರು. ಯುದ್ಧ ಕೌಶಲ್ಯಗಳು ಯಾರೂ ಚರ್ಚಿಸಿ ಒಪ್ಪಿದವುಗಳಲ್ಲ. ಅನುಭವದ ಮೂಸೆಯಿಂದ ಹೊರಗೆ ಬಂದ ಅಂದಿನ ಬುದ್ಧಿವಂತಿಕೆಯ ವ್ಯೂಹಗಳು, ಅನಿರೀಕ್ಷಿತ ಸೈನ್ಯದ ನಡೆಗಳು ಆಕ್ರಮಣಕಾರಿ ಮತ್ತು ವಿನಾಶಕಾರಿ ಸ್ವರೂಪ ಪಡೆದದ್ದು ಸುಮಾರು 50 ವರ್ಷಗಳಿಂದ ಈಚೆಗೆ. ಈಗಿನ ಯುದ್ಧಗಳು ಯುದ್ಧಭೂಮಿಯ ನೆಲ-ಜಲ, ವಾಯು, ಪ್ರಾಣಿ-ಪಕ್ಷಿಗಳಿಗೂ ಹಾನಿಯುಂಟು ಮಾಡುತ್ತಿವೆ. ಈವತ್ತಿನ ಯುದ್ಧಗಳಲ್ಲಿ ಕೌಶಲ್ಯ ಮರೆಯಾಗಿ



ತಂತ್ರಜ್ಞಾನವೇ ಮುಂಚೂಣಿಗೆ ಬರುತ್ತಿದೆ. ಆದರೂ ಹಳೆಯ ಕೆಲವು ಮೌಲ್ಯಗಳು ಈಗಲೂ ಪ್ರಸ್ತುತವಾಗುತ್ತಿರುವುದು ಯುದ್ಧ ಕಲೆಯ ಹಿರಿಮೆ.

ಯುದ್ಧವೆಂದರೆ ಎದ್ದು ಕತ್ತಿ ಹಿಡಿದು ಹೊರಡುವಷ್ಟು ಸರಳವಲ್ಲ. ಅದಕ್ಕೆ ಅಗಾಧ ಸಿದ್ಧತೆಗಳು, ಯೋಜನೆ, ತರಬೇತಿ, ಸಂಘಟನಾ ಚಾತುರ್ಯ, ಹಠಾತ್ ನಿರ್ಧಾರಗಳು ಬೇಕು. ಸೈನ್ಯದೊಂದಿಗೆ ಅದರಷ್ಟೇ ಸಂಖ್ಯೆಯ ಜನ ಇತರೆ ಕೆಲಸಗಳಿಗೆ ಇರಬೇಕಾಗುತ್ತಿತ್ತು. ಹಾಗಾಗಿ ಅದೊಂದು ಚಲಿಸುವ ಮಹಾಜನಸಾಗರ. ಅದನ್ನೆಲ್ಲಾ ನಿಯಂತ್ರಿಸಬಲ್ಲ ಚತುರ ನಾಯಕ ಹೇಗಿರಬೇಕು ಎಂಬುದೇ ಯುದ್ಧ ಕೌಶಲ್ಯದ ತಿರುಳು.

ಪುರಾತನ ಯುದ್ಧಕಲೆಗಳ ಬಗ್ಗೆ ಚೀನಾದ ಸೈನ್ಯಾಧಿಕಾರಿ ಸುಂಟ್ಸುವಿನ ಗ್ರಂಥ ಯುದ್ಧ ಕಲೆ ಹಾಗೂ ಕೌಟಿಲ್ಯನ ಅರ್ಥಶಾಸ್ತ್ರ ಎರಡು ಪ್ರಮುಖ ಅಕರ ಗ್ರಂಥಗಳು. ಇವೆರಡೂ ವಿಭಿನ್ನವಾಗಿ ಒಂದೇ ವಿಷಯದ ಬಗ್ಗೆ ತಮ್ಮ ಹೇಳಿಕೆಗಳನ್ನು ದಾಖಲಿಸುತ್ತಾ ಹೋಗುತ್ತವೆ. ಈ ಹಿನ್ನೆಲೆಯಲ್ಲಿ ಅನೇಕ ಯುದ್ಧ ತರಬೇತಿ ಕೇಂದ್ರಗಳು ಇವನ್ನು ತಮ್ಮ ಪಠ್ಯವಾಗಿ ಅಳವಡಿಸಿಕೊಂಡಿವೆ ಎನ್ನುವುದೇ ಇವುಗಳ ಹೆಗ್ಗಳಿಕೆ.

ಸುಂಟ್ಸು ಎಂಬ ಚೀನಿ ದಂಡನಾಯಕ

ಯುದ್ಧದ ಕಲೆಯ ಬಗ್ಗೆ ಭಾರತ ಮತ್ತು ಚೀನಾದಲ್ಲಿ ಶತಮಾನಗಳ ಹಿಂದೆ ಪುಸ್ತಕಗಳು ರಚಿಸಲ್ಪಟ್ಟಿವೆ ಎಂದರೆ ನಿಮಗೆ ಅಚ್ಚರಿಯಾಗಬಹುದು. ಭಾರತದಲ್ಲಿ ಕೌಟಿಲ್ಯ ತನ್ನ ಗ್ರಂಥ ಅರ್ಥಶಾಸ್ತ್ರದಲ್ಲಿ ಅನೇಕ ಯುದ್ಧ ಕೌಶಲ್ಯಗಳ ಬಗ್ಗೆ ವಿವರಿಸುತ್ತಾನೆ. ಯುದ್ಧ ಮಾಡುವ ಮುನ್ನಾ ಅರಸ ಮತ್ತು ಆತನ ಸೈನ್ಯಾಧಿಕಾರಿ ಗಮನಿಸಬೇಕಾದ ಮೂಲಭೂತ ಅಂಶಗಳನ್ನು ಹೊಂದಿದ ಯುದ್ಧ ಕಲೆ ಎಂಬ ಮತ್ತೊಂದು ಪುಸ್ತಕ ಚೀನಾದಲ್ಲಿ ಸುನ್‌ಟ್ಸು ಅಥವಾ ಸುನ್‌ಝಿ ಎಂಬ ಸೈನ್ಯಾಧಿಕಾರಿಯಿಂದ ಸುಮಾರು 4–5 ನೇ ಶತಮಾನದಲ್ಲಿ ರಚಿಸಲ್ಪಟ್ಟಿತ್ತು. ಈ ಮೂಲ ಗ್ರಂಥವನ್ನು ಬಿದಿರಿನ ಹಾಳೆಗಳ ಮೇಲೆ ಬರೆಯಲಾಗಿತ್ತು. ಮುಂದೆ ಜಪಾನ್ ಮತ್ತು ಏಷ್ಯಾದ ಅರಸರು ಈ ಪುಸ್ತಕದ ಅಭ್ಯಾಸ ಮಾಡಲಾರಂಭಿಸಿದ್ದರು. ಜಪಾನ್ ಸಮುರಾಯ್‌ಗಳು ಈ ಗ್ರಂಥವನ್ನು ತಮ್ಮ ಶಿಕ್ಷಣದ ಭಾಗವಾಗಿ ಕಡ್ಡಾಯವಾಗಿ ಓದುತ್ತಿದ್ದರು.

ಕಾಲಘಟ್ಟದಲ್ಲಿ ಮರೆತೇ ಹೋಗಿದ್ದ ಚೀನಿ ಯುದ್ಧಕಲೆಗಳ ಪುಸ್ತಕ ಬೆಳಕಿಗೆ ಬಂದದ್ದು ಕ್ರಿ.ಶ. 1782 ರಲ್ಲಿ. ಫ್ರೆಂಚ್ ಪಾದ್ರಿ ಜೊಸೆಫ್ ಅಮಿಯೋಟ್



ಎಂಬಾತನಿಗೆ ಅಕಸ್ಮಾತ್ತಾಗಿ ಸುಂಟ್ಸು ರಚಿಸಿದ ಪುಸ್ತಕದ ಪ್ರತಿ ದೊರೆಯಿತು. ಅದರಿಂದ ಬಲು ಪ್ರಭಾವಿತನಾದ ಜೋಸೆಫ್ ಅಮಿಯೋಟ್ ಪುಸ್ತಕವನ್ನು ಫ್ರೆಂಚ್ ಭಾಷೆಗೆ ತರ್ಜುಮೆ ಮಾಡಿದ.ಕ್ರಿ.ಶ.1910 ರಲ್ಲಿ ಲಯೊನೆಲ್ ಗೈಸ್ ಎಂಬಾತ ಇಂಗ್ಲೀಷಿಗೆ ಆರ್ಟ್ ಆಫ್ ವಾರ್ ಗ್ರಂಥವನ್ನು ಅನುವಾದಿಸಿದ ಉಲ್ಲೇಖ ದೊರೆಯುತ್ತದೆ. 2001 ರಲ್ಲಿ ಅಮೇರಿಕಾದ ಟೀವಿ ಸಂದರ್ಶನವೊಂದರಲ್ಲಿ ಕಾರ್ಯಕ್ರಮ ನಿರೂಪಕ ಸುಂಟ್ಸುವಿನ ಆರ್ಟ್ ಆಫ್ ವಾರ್ ಬಗ್ಗೆ ಉಲ್ಲೇಖಿಸಿದ್ದನ್ನು ಕೇಳಿದ ಜನ ಆ ಪುಸ್ತಕವನ್ನು ಕೊಳ್ಳಲು ಮುಗಿಬಿದ್ದರು. ಬಂದ ಬೇಡಿಕೆಯನ್ನು ಪೂರೈಸಲು ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಹೆಚ್ಚುವರಿಯಾಗಿ 25,000 ಪ್ರತಿಗಳನ್ನು ಮುದ್ರಿಸಬೇಕಾಯ್ತು.

ದಿ ಆರ್ಟ್ ಆಫ್ ವಾರ್ ಚೀನಿ ಮಿಲಿಟರಿ ಯುದ್ಧ ಕೌಶಲ್ಯಗಳು ಹಾಗೂ ವರ್ಷವಿಡಿ ಯುದ್ಧದಲ್ಲಿ ಪಾಲ್ಗೊಳ್ಳುವಾಗ ಅನುಸರಿಸರಿಸಬೇಕಾದ ಮುಂಜಾಗ್ರತಾ ಕ್ರಮಗಳು ಮತ್ತು ಯುದ್ಧ ನೀತಿಗಳ ಬಗ್ಗೆ ಬರೆಯಲಾಗಿದೆ. ಸುಂಟ್ಸು ತನ್ನ ಕೃತಿಯಲ್ಲಿಹೇಗೆ ಯುದ್ಧವನ್ನು ಮಾಡದೇ ಅದನ್ನು ಗೆಲ್ಲುವುದು ಎಂಬ ಬಗ್ಗೆ ಮಾಹಿತಿಗಳನ್ನು ಮತ್ತು ಯುದ್ಧ ಕಲೆಯ ಒಳಸುಳಿಗಳನ್ನು ವಿವರಿಸುತ್ತಾನೆ. ಈ ಕಾರಣ ದಿಂದ ಪುಸ್ತಕವನ್ನು ಸೈನ್ಯಾಧಿಕಾರಿಗಳಿಗೆ ಮತ್ತು ಅರಸರಿಗೆ ಓದಿಸಲಾಗುತ್ತಿತ್ತು.

ಗ್ರಂಥ ರಚನೆಕಾರನನ್ನು ಮಾಸ್ಟರ್ ಸನ್ ಅಥವಾ ಸುಂಜಿ, ಸುಂಟ್ಸು ಎಂದು ಕರೆಯಲಾಗುತ್ತಿತ್ತು. ಸುಂಟ್ಸು ಬಹಳ ನಿಷ್ಠಾವಂತ ಹಾಗೂ ಕಠೋರ ಸೈನ್ಯಾಧಿಕಾರಿ. ಶಿಸ್ತನ್ನು ಪಾಲಿಸದ ಯಾರನ್ನೇ ಆಗಲಿ ಶಿಕ್ಷಿಸಲು ಹಿಂಜರಿಯುತ್ತಿರಲಿಲ್ಲ. ತನ್ನ ಅರಸ ಹೋ ಲು ನನ್ನೇ ' ಆತ ಮಾತುಗಾರನಷ್ಟೇ ಅವನ್ನು ಕೃತಿಯಲ್ಲಿ ತರಬಲ್ಲ ಜಾಣನಲ್ಲ' ಎಂದು ಟೀಕಿಸಲು ಹಿಂಜರಿಯುವುದಿಲ್ಲ. ಈತನ ಯುದ್ಧ ಕಲೆಯ ಗಟ್ಟಿತನದ ಬಗ್ಗೆ ಅನುಮಾನಿಸಿದ ಅರಸ ಸುಂಟ್ಸುವನನು ಕರೆಸಿ ಯುದ್ಧ ನೀತಿಯ ಬಗ್ಗೆ ಪ್ರಶ್ನೆಗಳ ಮಳೆ ಸುರಿಸುತ್ತಾನೆ. ಸುಂಟ್ಸುವಿನ ಖಡಕ್ ಉತ್ತರ ಮತ್ತು ಆತನ ಬುದ್ದಿವಂತಿಕೆಯನ್ನು ಅರಿತ ನಂತರ ಅರಸ ದಂಗಾಗುತ್ತಾನೆ.

ಸುಂಟ್ಸುವಿನ ಪರೀಕ್ಷೆ

ಸುಂಟ್ಸುವಿನ ಯುದ್ಧ ತಂತ್ರವನ್ನು ಒರೆಗೆ ಹಚ್ಚಲು ವು ರಾಜ್ಯದ ದೊರೆ ಒಂದು ಪರೀಕ್ಷೆ ಮಾಡಲು ಬಯಸುತ್ತಾನೆ. ಯುದ್ಧ ನೀತಿಗಳ ಸೈನಿಕ ನಿಯಂತ್ರಣದ ನಿಯಮಗಳು ಮಹಿಳೆಯರಿಗೂ ಅನ್ವಯಿಸುತ್ತವೆಯೇ ಎಂದು ಸುಂಟ್ಸುವನ್ನು



ಕೇಳಿದಾಗ ಆತ ಹೌದು ಅದು ಎಲ್ಲರಿಗೂ ಅನ್ವಯಿಸುತ್ತದೆ ಎನ್ನುತ್ತಾನೆ. ಅರಸ ತನ್ನ ಅರಮನೆಯಲ್ಲಿದ್ದ 180 ಮಂದಿ ಸೇವಕವರ್ಗದ ಮಹಿಳೆಯರನ್ನು ಕರೆಸಿ ಸಾಲಾಗಿ ನಿಲ್ಲಿಸುತ್ತಾನೆ.

ನಂತರ ಮಹಿಳೆಯರಿಗೆ ಸೂಚನೆ ನೀಡಿದ ಅರಸ. ತಾನು ಎಡಕ್ಕೆ ತಿರುಗಿ ಎಂದಾಗ ಎಡಕ್ಕೆ ನೋಡುತ್ತ ಎಡಬದಿಗೆ ತಿರುಗಬೇಕು. ಬಲಕ್ಕೆ ತಿರುಗಿ ಎಂದಾಗ ಬಲಕ್ಕೆ ನೋಡುತ್ತಾ ಬಲಗಡೆಗೆ ತಿರುಗಬೇಕು. ಹಿಂದೆ ತಿರುಗಿ ಎಂದಾಗ ಬಲಕ್ಕೆ ನೋಡುತ್ತಾ ಹಿಂದಕ್ಕೆ ತಿರುಗಬೇಕು ಅರ್ಥವಾಯಿತೇ ಎಂದಾಗ ಹೌದು ಎಂದರು ಸೇವಕಿಯರು.

ಎಡಕ್ಕೆ ತಿರುಗಿ ಎಂದ ರಾಜ. ಅರ್ಧ ಜನ ಎಡಕ್ಕೆ ನೋಡುತ್ತಾ ತಿರುಗಿದರು ಮತ್ತಷ್ಟು ಜನ ನಗುತ್ತ ಸುಮ್ಮನೆ ನಿಂತರು. ಆದೇಶವನ್ನು ಸರಿಯಾಗಿ ನೀಡದಿದ್ದಲ್ಲಿ ಹೀಗೆಯೇ ಆಗುತ್ತದೆ ಎಂದ ಸುಂಟ್ಸು.

ಸರಿ ಮತ್ತೆ ಡ್ರಿಲ್ ಆರಂಭವಾಯ್ತು. ಈ ಬಾರಿ ಬಲಕ್ಕೆ ತಿರುಗಿ ಎಂದು ಆದೇಶ ಬಂತು ಕೆಲವರು ಎಡಕ್ಕೆ ಕೆಲವರು ಬಲಕ್ಕೆ ತಿರುಗಿದರು. ಹಿಂದಕ್ಕೆ ತಿರುಗಿ ಎಂದು ಆದೇಶ ಬಂದಾಗ ಎಡದಿಂದ, ಬಲದಿಂದ ತಿರುಗಿದರು. ಇದನ್ನು ಕಂಡ ಅರಸ ಅಂದ ' ಇದೇನು ಅವ್ಯವಸ್ಥೆ ?' ಸುಂಟ್ಸು ಅಂದ ' ಆದೇಶ ಸ್ಪಷ್ಟವಾಗಿ ರವಾನೆಯಾಗದಿದ್ದರೆ ಇದೇ ಅವ್ಯವಸ್ಥೆ. ಈಗ ನೋಡಿ' ಅಂದವನೆ ಮಹಿಳೆಯರ ತಂಡದ ಇಬ್ಬರು ನಾಯಕಿಯರ ತಲೆ ಹಾರಿಸಲು ಹೇಳಿದ. ಇಬ್ಬರು ನಾಯಕಿಯರ ತಲೆ ಕತ್ತರಿಸಿ ಬಿತ್ತು. ಇಡೀ ತಂಡ ಭಯದಿಂದ ನಡುಗಹತ್ತಿತ್ತು.

ನಂತರ ಸುಂಟ್ಸು ಆದೇಶ ನೀಡಿದ

' ಈಗ ಬಲಕ್ಕೆ ತಿರುಗಿ ಎಂದಾಗ ಬಲದಿಕ್ಕಿನಿಂದ ತಿರುಗಬೇಕು. ಬಲಕ್ಕೆ...!' ಎಂದು ಆದೇಶ ನೀಡಿದ. ಭಯದ ಸುಳಿಯಲ್ಲಿದ್ದ ತಂಡದ ಎಲ್ಲಾ ಸದಸ್ಯೆಯರೂ ಶಿಸ್ತಾಗಿ ತಪ್ಪು ಮಾಡದೇ ಬಲದಿಕ್ಕಿನಿಂದ ಬಲಕ್ಕೆ ತಿರುಗಿ ನಿಂತರು. ಸುಂಟ್ಸು ಅಂದ 'ಈ ಭಯ ಹುಟ್ಟಿದರೆ ಮಾತ್ರಾ ನಾಯಕನ ಆದೇಶ ಪಾಲನೆ ಸಾಧ್ಯ '. ಇದು ಸುಂಟ್ಸು ನೀತಿ.

ಯುದ್ಧಕ್ಕೆ ಮುನ್ನುಡಿ

ಸುಂಟ್ಸುವಿನ ಅನುಭವದ ವರದಿ ಪದ್ಯಗಳ ರೂಪದಲ್ಲಿ ಇದ್ದು ಅವುಗಳಿಗೆ ಅನೇಕರು ತಾತ್ಪರ್ಯಗಳನ್ನು ಬರೆದಿದ್ದಾರೆ. ಸುಂಟ್ಸು ಪುಸ್ತಕದ ತಾತ್ಪರ್ಯ ಬರೆದ



ತುಮು ಎಂಬ ಒಬ್ಬ ಸೈನ್ಯಾಧಿಕಾರಿಯ ಪ್ರಕಾರ ಯುದ್ಧ ಎಂದರೆ ಸರ್ಕಾರದಿಂದ ನಡೆಯುವ ಶಿಕ್ಷೆಯ ಪ್ರಕ್ರಿಯೆ. ಇದನ್ನು ಅರ್ಥ ಮಾಡಿಕೊಳ್ಳಲು ಯುದ್ಧವನ್ನು ಯೋಜಿಸುವ ರೀತಿ, ಶತ್ರುವಿನ ಮೇಲೆ ಆಕ್ರಮಣ ಮಾಡುವ ವಿಧಾನ, ಹೋರಾಟದಲ್ಲಿ ಶಕ್ತಿಯನ್ನು ಕಳೆದುಕೊಳ್ಳದಿರುವಿಕೆ, ಶತ್ರುವಿನ ದುರ್ಬಲತೆಯನ್ನು ತಿಳಿದುಕೊಳ್ಳುವುದು, ಸೈನ್ಯವನ್ನು ಮುನ್ನಡೆಸುವ ವಿಧಾನ, ಯುದ್ಧದ ಒಂಬತ್ತು ಸ್ಥಿತಿಗಳು ಮತ್ತು ಆಯುಧಗಳ ಬಳಕೆಯ ಬಗ್ಗೆ ತಿಳಿದುಕೊಳ್ಳಬೇಕಾಗುತದೆ. ಸುಂಟ್ಸುವಿನ ಪುಸ್ತಕದ 13 ಅಧ್ಯಾಯಗಳು ಇವನ್ನು ಪ್ರಸ್ತುತಪಡಿಸುತ್ತವೆ.

ಸುಂಟ್ಸುವಿನ ಪುಸ್ತಕಕ್ಕೆ ಮುನ್ನುಡಿ ಬರೆದಿರುವ ಮಹಾನ್ ಸೈನ್ಯಾಧಿಕಾರಿ ತ್ಸಾವೊ ತ್ಸಾವೋ ಯುದ್ಧ ಎನ್ನುವುದು ಆಡಳಿತ ವ್ಯವಸ್ಥೆ ನಿರ್ವಹಿಸಬೇಕಾದ ಎಂಟು ಕಾರ್ಯಗಳಲ್ಲಿ ಒಂದು ಎನ್ನುತ್ತಾನೆ. ಶಾಂತಿ ಸ್ಥಾಪನೆಯೇ ಅರಸನ ರಾಜಕಾರ್ಯವಲ್ಲ, ಅದು ಸಂತನೊಬ್ಬನ ಕೆಲಸ. ಹಾಗೆಂದು ಯುದ್ಧವನ್ನು ಕೊಲ್ಲುವ ಕಾಯಕವನ್ನಾಗಿ ಮಾಡಬಾರದು. ಯಾವನು ಒಂದು ಉದ್ದೇಶಕ್ಕಾಗಿ ಒಬ್ಬನನ್ನು ಕೊಲ್ಲುತ್ತಾನೋ ಅವನು ತಾನೂ ಕೊಲ್ಲಲ್ಪಡಲು ಅರ್ಹನಾಗುತ್ತಾನೆ. ಅಗತ್ಯ ಬಿದ್ದಾಗ ಮಾತ್ರಾ ಯುದ್ಧಕ್ಕೆ ಮುಂದಾಗಬೇಕೇ ಹೊರತು ಸದಾ ಅಲ್ಲ. ಬುದ್ಧಿವಂತ ಅರಸ ತನ್ನ ಯೋಜನೆಗಳನ್ನು ಮುಂದಾಗಿಯೇ ಚಿಂತಿಸಿರುತ್ತಾನೆ, ಬುದ್ಧಿವಂತ ದಂಡನಾಯಕ ತನ್ನ ಸಂಪನ್ಮೂಲಗಳನ್ನು ಸೃಷ್ಟಿಸಿಕೊಳ್ಳುತ್ತಾನೆ ಎನ್ನುವ ಸುಂಟ್ಸುವಿನ ವಿಚಾರ ಲಹರಿ ಆಶ್ಚರ್ಯ ಹುಟ್ಟಿಸುತ್ತದೆ.

ನಿಮಗೆ ಅನುಕೂಲಕರ ಪರಿಸ್ಥಿತಿ ಇದ್ದಲ್ಲಿ ಮುಂದುವರೆಯಿರಿ ಇಲ್ಲವೇ ಇದ್ದಲ್ಲಿಯೇ ನಿಲ್ಲಿ. ನಿಮ್ಮ ಯೋಜನೆಗಳ ಅನುಷ್ಠಾನಕ್ಕೆ ಮೊದಲು ಸಾಮ್ರಾಜ್ಯದ ಅಸ್ತಿತ್ವದ ಬಗ್ಗೆ ಚಿಂತಿಸಿ. ಒಮ್ಮೆ ನಾಶವಾದ ರಾಜ್ಯ ಮತ್ತೆ ಏಳಲಾರದು. ಯಾವುದೇ ದೇಶ ಯುದ್ಧವನ್ನು ಹೂಡಿ ಲಾಭಗಳಿಸಲು ಸಾಧ್ಯವಿಲ್ಲ ಎನ್ನುವ ಸುಂಟ್ಸುವಿನ ಮಾತು ಸರ್ವಕಾಲಿಕ ಸತ್ಯವಾಗಿದೆ.

ಯುದ್ಧ ಸೂತ್ರಗಳು

ಸುಂಟ್ಸು ಪ್ರಕಾರ ಯುದ್ಧಕಲೆಯು ಐದು ಧೃಡವಾದ ಅಂಶಗಳನ್ನು ಆಧರಿಸಿರುತ್ತದೆ. ಅವುಗಳೆಂದರೆ ನೈತಿಕ ವಿಧಿಗಳು, ಸ್ವರ್ಗ, ಭೂಮಿ, ನಾಯಕತ್ವ ಮತ್ತು ಶಿಸ್ತು. ಆತನ ಸೈನ್ಯ ನಿರಂತರ ಅಭ್ಯಾಸದಲ್ಲಿರಬೇಕು. ತಂಡದಲ್ಲಿ ಯೋಗ್ಯರನ್ನು ಗುರುತಿಸಿ ಪ್ರತಿಫಲ ನೀಡಬೇಕು ಮತ್ತು ಅಸಮರ್ಥರನ್ನು



ಗುಂಪಿನಿಂದ ಹೊರಹಾಕಬೇಕು. ಅರಸನ ಆದೇಶಗಳನ್ನು ಉಲ್ಲಂಘಿಸಿದವರನ್ನು ಕೊಲ್ಲಬೇಕು. ಈ ಅಂಶಗಳ ಪರಿಶೀಲನೆಯಿಂದ ಒಂದು ಸೈನ್ಯ ಯುದ್ಧವನ್ನು ಗೆಲ್ಲುತ್ತದೋ ಇಲ್ಲವೋ ಎಂದು ಭವಿಷ್ಯ ನುಡಿಯಬಹುದು.ಯುದ್ಧವನ್ನು ಯೋಜನಾಬದ್ಧವಾಗಿ ನಡೆಸಿದರೆ ಗೆಲುವು ಖಂಡಿತ ಎನ್ನುವುದು ಸುಂಟ್ಜು ಹೇಳಿಕೆ. ಆತ ಮ್ಯಾನೇಜ್‌ಮೆಂಟ್ ಪರಿಣಿತ ಎನ್ನಲು ಆತನ ಚಿಂತನೆಯ ಗಟ್ಟಿತನವೇ ಸಾಕ್ಷಿಯಾಗಿದೆ.

ಅಗತ್ಯಕ್ಕೆ ಮತ್ತು ಸಂದರ್ಭಕ್ಕೆ ತಕ್ಕಂತೆ ತನ್ನ ಯೋಜನೆಗಳನ್ನು ಅರಸ ಬದಲಿಸುತಿರಬೇಕು. ಸುಂಟ್ಜು ಪ್ರಕಾರ ಯುದ್ಧದಲ್ಲಿ ಕಪಟ, ವಂಚನೆ ಸಾಮಾನ್ಯ. ಶತ್ರು ಸೈನ್ಯ ಹತ್ತಿರದಲ್ಲಿದ್ದಾಗ ನಾವು ದೂರದಲ್ಲಿದ್ದೇವೆ ಎಂಬಂತೆ, ತಂಡ ನಿಷ್ಕ್ರಿಯವಾದಂತೆ ತೋರಿಸಿಕೊಳ್ಳಬೇಕು. ಸಮಯ ನೋಡಿ ಪ್ರಲೋಭನೆಗಳನ್ನು ಒಡ್ಡಿ ಶತ್ರುವನ್ನು ಬಡಿದುಹಾಕಬೇಕು. ಆತ ಬಲವಾಗಿದ್ದರೆ ಓಡಿ ತಪ್ಪಿಸಿಕೊಳ್ಳಬೇಕು.

ನಿಮ್ಮ ಶತ್ರು ಶೀಘ್ರ ಕೋಪಿಯಾಗಿದ್ದರೆ ಆವನಿಗೆ ಕಿರಿಕಿರಿ ಉಂಟುಮಾಡಿ. ಇಲ್ಲವೇ ನೀವು ದುರ್ಬಲನಂತೆ ವರ್ತಿಸಿ ಅತನನ್ನು ಅಹಂಕಾರಿಯಾಗಿ ಮಾಡಿ. ಶತ್ರು ವಿಶ್ರಾಂತ ಮನೋಭಾವದವನಾಗಿದ್ದರೆ ಆತನನ್ನು ಶಾಂತಿಯಿಂದಿರಲು ಬಿಡಬೇಡಿ. ಆತನ ಸೈನ್ಯದಲ್ಲಿ ಮತ್ತು ಆಡಳಿತದ ನಡುವೆ ಒಡಕಿಲ್ಲದಿದರೆ ಅದನ್ನು ಸೃಷ್ಟಿಸಿ. ಶತ್ರು ಎಲ್ಲಿ ಸಜ್ಜಾಗಿಲ್ಲವೋ ಆಲ್ಲಿ ದಾಳಿ ಮಾಡಿ. ಆತ ನಿಮ್ಮನ್ನು ಎಲ್ಲಿ ನಿರೀಕ್ಷಿಸುವುದಿಲ್ಲವೋ ನೀವು ಅಲ್ಲಿರಿ. ಗೆಲ್ಲಲು ಏನೇನು ಸಾಧ್ಯವೋ ಅದನ್ನೆಲ್ಲಾ ಮಾಡಿ. ನಿಮ್ಮ ಲೆಕ್ಕಾಚಾರಗಳು ಜಾಸ್ತಿ ಇದ್ದರೂ ಅಡ್ಡಿಯಿಲ್ಲ.

ಯುದ್ಧ ಹೂಡುವ ಬಗೆ

ಸುಂಟ್ಜು ಈ ಅಧ್ಯಾಯದಲ್ಲಿ ಇಪ್ಪತ್ತು ಅಂಶಗಳನ್ನು ಪರಿಶೀಲಿಸುತ್ತಾನೆ. ಅದಕ್ಕೆ ಕೆಲವು ಉಪಾಖ್ಯಾನಗಳೂ ದೊರೆಯುತ್ತವೆ.

ನಿಮ್ಮ ಸೈನ್ಯದಲ್ಲಿ ರಥಗಳು, ಸೈನಿಕರು ಸಾಕಷ್ಟಿರಲಿ. ಸೈನವನ್ನು ಕೊಂಡೊಯ್ಯುವಾಗ ಒದಗುವ ವೆಚ್ಚಗಳ ಬಗ್ಗೆ ಗಮನ ಹರಿಸುವುದು ಅಗತ್ಯ. ಯುದ್ಧ ನಿಲ್ಲದೇ ನಡೆಯುತ್ತಿರಬೇಕು. ಯುದ್ಧ ನಿಂತರೆ ಆಯುಧಗಳು ಮತ್ತು ಸೈನಿಕರು ಜಡ್ಡು ಹಿಡಿಯುತ್ತಾರೆ. ಯಾವುದಾದರೂ ನಗರಕ್ಕೆ ದಿಗ್ಬಂಧನ ಹಾಕಿದಾಗ ಕ್ರಮೇಣ ನಿಮ್ಮ ಶಕ್ತಿ ಕುಂದುತ್ತಾ ಬರುತ್ತದೆ.

ನೀವು ಯುದ್ಧದಲ್ಲಿ ಕುಗ್ಗತೊಡಗಿದಾಗ ನಿಮ್ಮ ಹಣ ಅನಾವಶ್ಯಕವಾಗಿ ಖರ್ಚಾಗಲಾರಂಭಿಸುತ್ತದೆ. ಇದು ನಿಮ್ಮ ಯುದ್ಧ ದಂಡನಾಯಕರಿಗೆ ತಿಳಿದರೆ





ಅವರು ನಿಮ್ಮ ಎದುರು ಬೀಳಬಹುದು. ಯುದ್ಧಗಳ ಕೆಡುಕಿನ ಬಗ್ಗೆ ತಿಳಿದವ ಅದನ್ನು ಹೇಗೆ ಲಾಭದಾಯಕವಾಗಿ ಬದಲಿಸಿಕೊಳ್ಳಬಹುದು ಎಂದನ್ನೂ ಅರಿತಿರಬೇಕು. ಯುದ್ಧ ಆರಂಭಿಸುವ ಮುನ್ನ ಅಗತ್ಯ ಸರಕುಗಳು ಸಿದ್ಧವಾಗಿರಬೇಕು. ನಿಮ್ಮ ಸರಕು-ಸರಂಜಾಮು ನಿಮ್ಮೊಂದಿಗೇ ಬರಲಿ. ಸಾಧ್ಯವಿದ್ದಲ್ಲಿ ಶತ್ರುವಿನ ವಲಯದಲ್ಲಿ ಹೆಚ್ಚುವರಿ ಸರಕುಗಳನ್ನು ಹುಡುಕಿ ದಾಸ್ತಾನು ಮಾಡಿಕೊಳ್ಳುವುದು ಒಳ್ಳೆಯದು. ಯೋಗ್ಯ ದಂಡನಾಯಕ ತನ್ನ ಶತ್ರು ಪಾಳೆಯಕ್ಕೆ ಹೋಗುತ್ತಿರುವ ಒಂದು ಬಂಡಿ ದವಸವನ್ನು ತಾನು ವಶಪಡಿಸಿಕೊಂಡರೆ ಅದು ತನ್ನಲ್ಲಿನ ದಾಸ್ತಾನಿನ ಇಪ್ಪತ್ತು ಭಾಗಕ್ಕೆ ಸಮ.

ಸೈನ್ಯ ರಣರಂಗದಲ್ಲಿ ನಿಂತಿದ್ದಾಗ ಅಗತ್ಯ ವಸ್ತುಗಳು ದುರ್ಲಭವಾಗುತ್ತವೆ. ರೈತಾಪಿ ಜನ ತೊಂದರೆಗೊಳಗಾಗುತ್ತಾರೆ. ಪ್ರಜೆಗಳು ತಮ್ಮ ಆದಾಯದ ಬಹುಭಾಗವನ್ನು ಕಳೆದುಕೊಳ್ಳುತ್ತಾರೆ. ಯುದ್ಧದಲ್ಲಿ ಹಾನಿಗೊಳಗಾದ ರಥಗಳು, ಅಶ್ವಗಳು, ಕತ್ತಿ-ಗುರಾಣಿಗಳು, ಶಿರಸ್ತ್ರಾಣಗಳು ದುರಸ್ತಿಯಾಗಲು ದೇಶದ ಆದಾಯದ ಕಾಲುಭಾಗ ಹಣ ಖರ್ಚಾಗುತ್ತದೆ.

ರಣರಂಗದಲ್ಲಿ ಸೈನಿಕರನ್ನು ಕೋಪದಿಂದ ಹುಚ್ಚೆಬ್ಬಿಸಬೇಕು. ಇದು ಶತ್ರುವಿನ ಸೋಲಿಗೆ ದಾರಿಯಾಗುತ್ತದೆ. ಯೋಗ್ಯ ಸೈನಿಕರಿಗೆ ಸೂಕ್ತ ಪ್ರತಿಫಲ ದೊರೆಯಬೇಕು. ಯುದ್ಧ ಖೈದಿಗಳನ್ನು ಕರುಣೆಯಿಂದ ಕಾಣಬೇಕು. ರಣರಂಗದಲ್ಲಿ ನಿಮ್ಮ ಗುರಿ ಗೆಲ್ಲುವುದು ಮಾತ್ರವಾಗಿರಲಿ. ಸುದೀರ್ಘ ದಂಡಯಾತ್ರೆಯಲ್ಲ.

ಆಕ್ರಮಣದ ಕಾರ್ಯತಂತ್ರ

ಯುದ್ಧದ ಪ್ರಾಣ-ತ್ರಾಣ ಇರುವುದು ಅದರ ಕಾರ್ಯತಂತ್ರದಲ್ಲಿ. ಸುಂಟ್ಸು ತನ್ನ ಕಾರ್ಯತಂತ್ರಗಳಲ್ಲಿ 18 ಮೂಲ ತತ್ವಗಳನ್ನು ವಿವರಿಸುತ್ತಾನೆ. ಯುದ್ಧದ ವ್ಯಾವಹಾರಿಕ ಕಲೆ ಎಂದರೆ ಶತ್ರುವಿನ ದೇಶವನ್ನು ಸಂಪೂರ್ಣವಾಗಿ ಅದು ಇದ್ದಂತೆಯೇ ವಶಪಡಿಸಿಕೊಳ್ಳುವುದು. ನಗರವನ್ನು ನಾಶ ಮಾಡುವುದಾಗಲಿ, ಹಾಳುಗೆಡವುವುದಾಗಲಿ ಸರಿಯಲ್ಲ. ಹಾಗೆಯೇ ಶತ್ರು ಸೈನ್ಯವನ್ನು ನಾಶಪಡಿಸದೇ ವಶಪಡಿಸಿಕೊಳ್ಳಬೇಕು. ನಿಜವಾದ ಯುದ್ಧ ಕಲೆಯೆಂದರೆ ಹೋರಾಡದೇ ಶತ್ರುವಿನ ಪ್ರತಿಭಟನೆಯನ್ನು ಕೊನೆಗೊಳಿಸುವುದು. ಶತ್ರು ತನ್ನ ಯೋಜನೆಗಳನ್ನು





ಕಾರ್ಯಗತಗೊಳಿಸುವುದರೊಳಗೇ ಅವನ್ನು ಕೊನೆಗೊಳಿಸಬೇಕು. ಆತ ಯುದ್ಧಕ್ಕೇ ಬಾರದಂತೆ ಮಾಡಬೇಕು.

ಬಲವಾದ ಕೋಟೆ ಹೊಂದಿದ ನಗರಕ್ಕೆ ಮುತ್ತಿಗೆ ಹಾಕುವುದು ದೊಡ್ಡ ಮುಟ್ಠಾಳತನ. ಅಂತಹಾ ವಿಚಾರವನ್ನು ಸಾಧ್ಯವಾದಷ್ಟೂ ದೂರವಿಡುವುದು ಒಳಿತು. ಏಕೆಂದರೆ ಕೋಟೆಯ ಒಳಹೊಕ್ಕಲು ದಾರಿಯನ್ನು ಹುಡುಕಲು, ಕೋಟೆ ಏರಲು ಇಳಿಜಾರನ್ನು ನಿರ್ಮಿಸಲು ಮೂರು ತಿಂಗಳ ಅಮೂಲ್ಯ ಸಮಯ ವ್ಯರ್ಥವಾಗುತ್ತದೆ. ನಂತರ ತಾಳ್ಮೆ ಲುಪ್ತವಾಗಿ ಸೈನಿಕರನ್ನು ಕಳೆದುಕೊಳ್ಳಬೇಕಾಗುತ್ತದೆ.

ಉತ್ತಮ ಯುದ್ಧ ನೀತಿಯೆಂದರೆ ಶತ್ರುವಿನ ಒಬ್ಬ ಸೈನಿಕನಿಗೆ ನಮ್ಮ ಹತ್ತು ಜನ ಸೈನಿಕರು ಸಮ ಎನಿಸಿದರೆ ಅವನನ್ನು ಸುತ್ತುವರೆಯಿರಿ. ಆತ ನಮ್ಮ ಐದು ಜನಕ್ಕೆ ಸಮ ಎನಿಸಿದರೆ ಅತನ ಮೇಲೆ ದಾಳಿ ಮಾಡಿ. ಸಾಧ್ಯವಾದಷ್ಟು ಸೈನ್ಯ ವಿಭಾಗಗಳಾಗಿರಲಿ. ಶತೃವಿನ ಸೈನ್ಯ ನಮಗೆ ಸಮಾನವಾಗಿದ್ದಲ್ಲಿ ಯುದ್ಧಕ್ಕೆ ನಿಲ್ಲಿ. ಅವರ ಸಂಖ್ಯೆ ಕಡಮೆ ಇದ್ದರೆ ಕಾದು ನೋಡಿ. ಅವರ ಸಂಖ್ಯೆ ಹೆಚ್ಚಿಗೆ ಇದ್ದರೆ ನಾವು ಕಾಲ್ತೆಗೆಯುವುದು ಒಳ್ಳೆಯದು.

ದುರಾದೃಷ್ಟ ದೇಶದ ಆಡಳಿತಗಾರ ಮೂರು ರೀತಿಯಲ್ಲಿ ದೇಶಕ್ಕೆ ಹೊರೆಯಾಗಬಲ್ಲ. ಮೊದಲನೆಯದಾಗಿ ವಸ್ತುಸ್ಥಿತಿ ತಿಳಿಯದೆ ಸೈನ್ಯವನ್ನು



ಮುನ್ನಡೆಸುವ ಇಲ್ಲವೇ ಹಿಂತೆಗೆಯುವವ, ಇದು ಸೈನ್ಯದ ದುರ್ಬಳಕೆ. ಎರಡನೆಯದಾಗಿ ಯುದ್ಧದ ಚಿತ್ತವನ್ನರಿಯದೇ ಸೈನಿಕರ ಶ್ರಮದ ಅತಿಯಾದ ಬಳಕೆ ಮಾಡುವುದು. ಇದರಿಂದ ಸೈನಿಕರು ಮಾನಸಿಕ ಮತ್ತು ದೈಹಿಕವಾಗಿ ಅವಿಶ್ರಾಂತವಾಗುತ್ತಾರೆ. ಮೂರನೆಯದಾಗಿ ಸೈನ್ಯಾಧಿಕಾರಿಗಳನ್ನು ಅನಾವಶ್ಯಕವಾಗಿ ಅವರದ್ದಲ್ಲದ ಕೆಲಸಕ್ಕೆ ಹಚ್ಚುವುದು. ಸರಿಯಾದ ವ್ಯಕ್ತಿಯನ್ನು ಸರಿಯಾದ ಸ್ಥಳದಲ್ಲಿ ನಿಯೋಜಿಸಬೇಕು.

ಸೈನ್ಯ ಅವಿಶ್ರಾಂತವಾಗಿ ದುಡಿಯುತ್ತಿದ್ದರೆ ಅವರಲ್ಲಿ ಅಸಹನೆ ಮತ್ತು ಅತೃಪ್ತಿ ಹೆಚ್ಚುತ್ತದೆ. ಇದರಿಂದ ಸೈನ್ಯದಲ್ಲಿ ಅನಾಯಕತ್ವ ಉಂಟಾಗುತ್ತದೆ. ಅರಸ ಪ್ರಮುಖವಾಗಿ ಐದು ಅಂಶಗಳನ್ನು ಮರೆಯಬಾರದು. ಮೊದಲನೆಯದಾಗಿ ಯಾವಾಗ ಯುದ್ಧ ಮಾಡಬೇಕು ಮತ್ತು ಯಾವಾಗ ಯುದ್ಧ ಮಾಡಬಾರದು ಎಂಬುದು ಆತನಿಗೆ ತಿಳಿದಿರಬೇಕು. ತನಗಿಂತ ಬಲವಾದ ಮತ್ತು ನಿಶ್ಯಕ್ತವಾದ ಪಡೆಯನ್ನು ಹೇಗೆ ಕೊನೆಗೊಳಿಸಬೇಕು ಎನ್ನುವುದು ಆತನಿಗೆ ಕರಗತವಾಗಿರಬೇಕು. ಮೂರನೆಯದಾಗಿ ಯಾವನು ತನ್ನಿಡೀ ಸೈನ್ಯವನ್ನು ಎಲ್ಲ ಹಂತಗಳಲ್ಲಿ ನಿರ್ವಹಿಸಬಲ್ಲನೋ ಆತನೆ ವಿಜಯ ಸಾಧಿಸುತ್ತಾನೆ. ಯಾರು ತಾನು ಮೊದಲು ಸಿದ್ಧವಾಗಿ ಶತ್ರುವಿಗೆ ಸಿದ್ದವಾಗಲು ಸಮಯ ನೀಡುವುದಿಲ್ಲವೋ ಆತನೇ ಗೆಲ್ಲುತ್ತಾನೆ. ಯಾರು ತನ್ನ ಸೈನ್ಯವನ್ನು ಅಧಿಕಾರದಿಂದಲ್ಲದೇ ತನ್ನ ಯುದ್ಧ ಸಾಮರ್ಥ್ಯದಿಂದ ನಿರ್ವಹಿಸಬಲ್ಲನೋ ಆತನಿಗೆ ಯಶಸ್ಸು ಒಲಿಯುತ್ತದೆ.

ಸುಂಟ್ಜುವಿನ ಹೇಳಿಕೆಯಂತೆ ಯಾರು ತನ್ನನ್ನು ಮತ್ತು ತನ್ನ ಶತ್ರುವನ್ನು ಅರಿತಿದ್ದಾನೋ ಅಂತಹಾ ಸೈನ್ಯಾಧಿಕಾರಿ ನೂರು ಯುದ್ಧ ಗೆಲ್ಲಬಲ್ಲ ವೀರ. ಯಾವನು ತನ್ನನ್ನು ಅರಿತಿದ್ದು ತನ್ನ ಶತ್ರುವನ್ನು ಅರಿಯಲು ವಿಫಲನಾಗುತ್ತಾನೋ ಆತನ ಒಂದು ಗೆಲುವಿನೊಂದಿಗೆ ಒಂದು ಸೋಲು ಜೊತೆಗಿರುತ್ತದೆ. ಯಾವನು ತನ್ನನ್ನು ಮತ್ತು ತನ್ನ ಶತ್ರುವನ್ನು ಅರಿಯಲು ವಿಫಲನಾಗಿದ್ದಾನೋ ಆತ ಎಲ್ಲಾ ಯುದ್ಧಗಳಲ್ಲೂ ಸೋಲನ್ನು ಅನುಭವಿಸಬೇಕಾಗುತ್ತದೆ. ಈ ಮಾತು ಎಲ್ಲಾ ಕ್ಷೇತ್ರಗಳಲ್ಲೂ ಬಳಸಲ್ಪಡುವ ಯಶಸ್ಸಿನ ಸೂತ್ರ ಎನ್ನಬಹುದು.





ಯುದ್ಧ ತಂತ್ರದ ರೂಪಾಂತರಗಳು

ಸುಂಟ್ಜು ಯುದ್ಧ ತಂತ್ರಗಳ ಬಗ್ಗೆ ವಿವರಣೆ ನೀಡುವಾಗ ಸೂಕ್ಷ್ಮ ವಿಷಯಗಳ ಬಗ್ಗೆ ಪ್ರಸ್ತಾಪಿಸುತ್ತಾನೆ. ಆತನ ಪ್ರಕಾರ ಯುದ್ಧ ಕುಶಲಿ ಸೂಕ್ತ ಸಮಯಕ್ಕಾಗಿ ಕಾಯುತ್ತಾನೆ. ಸೋಲಿನಿಂದ ಪಾರಾಗುವ ವಿಧಾನ ನಮ್ಮ ಕೈಯ್ಯಲ್ಲೇ ಇರುತ್ತದೆ. ಆದರೆ ಸೋಲಿಸುವ ಸಾಧ್ಯತೆಯ ಅವಕಾಶ ಶತ್ರುವಿನಿಂದ ಮಾತ್ರಾ ಬರಲು ಸಾಧ್ಯ. ಹಾಗಾಗಿಯೇ ಯಾವನು ತಾನು ಹೇಗೆ ಗೆಲ್ಲಬಲ್ಲೆ ಎಂದು ತಿಳಿದಿರುತ್ತಾನೋ ಅವನೇ ಯುದ್ಧಕುಶಲಿ ಎನ್ನಬಹುದು.

ಅಶಕ್ತ ಮಾತ್ರಾ ರಕ್ಷಣಾತ್ಮಕವಾಗಿ ಯುದ್ಧ ಮಾಡುತ್ತಾನೆ. ಮಹಾರಥಿ ಯುದ್ಧ ರಂಗದಲ್ಲಿ ಮುಂಚೂಣಿಯಲ್ಲಿ ನಿಂತಿದ್ದು ತಪ್ಪುಗಳನ್ನು ಮಾಡದೇ ತನ್ನ ಸೈನ್ಯವನ್ನು ರಕ್ಷಿಸಿಕೊಂಡು ಗೆಲುವನ್ನು ಸಾಧಿಸುತ್ತಾನೆ. ಆಗ ಆತ ಯುದ್ಧ ಕೌಶಲ್ಯದ ತುತ್ತತುದಿಯಲ್ಲಿರುತ್ತಾನೆ.

ಯಾವ ನಾಯಕ ನೈತಿಕ ಮೌಲ್ಯ ಮತ್ತು ಶಿಸ್ತನ್ನು ಮೈಗೂಡಿಸಿಕೊಂಡಿರುತ್ತಾನೋ ಆತ ಗೆಲುವಿನ ರಹಸ್ಯ ಅರಿತಿದ್ದು ಶತ್ರುವಿನ ಸೇನಾಶಕ್ತಿ ಅಳತೆ, ಸೈನ್ಯದ ಗಣನೆ, ಲೆಕ್ಕಾಚಾರ, ಅವಕಾಶಗಳ ಸಮತೋಲನ ಮತ್ತು ಗೆಲ್ಲುವ ಸಾಧ್ಯತೆಗಳನ್ನು ಹೆಚ್ಚಿಸಿಕೊಳ್ಳುತ್ತಾನೆ.



ಯುದ್ಧ ಬಲ

ಯಶಸ್ವಿ ನಾಯಕ ತನ್ನ ದೊಡ್ಡ ಸೈನ್ಯ ಬಲವನ್ನು ಚಿಕ್ಕ–ಚಿಕ್ಕದಾಗಿ ವಿಭಾಗಿಸಿ ಅವುಗಳ ಮೇಲೆ ನಿಯಂತ್ರಣ ಹೊಂದಬೇಕು. ಸೈನ್ಯ ಬಲವನ್ನು ತನ್ನ ಸಂಜ್ಞೆಗಳ ಮೂಲಕವೇ ನಿಯಂತ್ರಿಸಬೇಕಾಗುತ್ತದೆ. ಇಂತಹ ಸಂಜ್ಞೆಗಳನ್ನು ಸೈನಿಕರಿಗೆ ಕಲಿಸಬೇಕಾಗುತ್ತದೆ. ದೊಡ್ಡ ಸೈನ್ಯವೊಂದನ್ನು ಎದುರುಗೊಂಡಾಗ ಗೆಲುವನ್ನು ಸಾಧಿಸಲು ಅಪರೋಕ್ಷ ದಾರಿಗಳನ್ನು ಅನುಸರಿಸಬೇಕು. ಯುದ್ಧಕ್ಕೆ ಮುನ್ನಾ ತನ್ನ ಸೈನ್ಯದ ಶಕ್ತಿಯನ್ನು ಶತ್ರುವಿನ ಮುಂದೆ ಪ್ರದರ್ಶಿಸಬಾರದು, ಆತ ನಿಮ್ಮ ಬಲವನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳುವಂತೆ ನಟಿಸಬೇಕು. ಇದರಿಂದ ಆತ ನಿಮಗೆ ಬೇಕಾದಂತೆ ವರ್ತಿಸುತ್ತಾನೆ.

ದುರ್ಬಲ ಮತ್ತು ಸಬಲ ಅಂಶಗಳು

ಯುದ್ಧಕಲೆಯಲ್ಲಿ ಶತ್ರುವಿನ ದುರ್ಬಲ ಮತ್ತು ಸಬಲ ಅಂಶಗಳನ್ನು ಪರಿಗಣಿಸಬೇಕು. ಅದಕ್ಕಾಗಿ ರಣರಂಗದಲ್ಲಿ ಮೊದಲೇ ಹಾಜರಿರಬೇಕು. ರಣರಂಗದಲ್ಲಿ ಸೂಕ್ತ ಸ್ಥಳಗಳನ್ನು ಮೊದಲೇ ಆಕ್ರಮಿಸಿಕೊಂಡು ಸಿದ್ಧರಾಗಿ ನಿಲ್ಲಬೇಕು. ಶತ್ರು ಎಲ್ಲಿಂದ ಮತ್ತು ಹೇಗೆ ಯುದ್ಧ ಆರಂಭಿಸಬೇಕು ಎಂದು ತಿಳಿಯದೇ ದಿಕ್ಕೆಡುವಂತೆ ಮಾಡುವುದು ಯೋಗ್ಯ ನಡೆ. ಶತ್ರುವಿಗೆ ಯುದ್ಧ ಮಾಡಲು ಇಚ್ಚೆ ಇಲ್ಲದೆ ಸಂಧಾನಕ್ಕೆ ಬಂದಾಗ ನಾವು ವಿಚಿತ್ರ ಮತ್ತು ಪೂರೈಸಲಾಗದ ಬೇಡಿಕೆಗಳನ್ನು ಇಡಬೇಕು. ಆತನ ದುರ್ಬಲ ಅಂಶಗಳನ್ನು ಕಂಡುಕೊಳ್ಳಬೇಕು. ಆತನ ಗಟ್ಟಿ ಅಂಶಗಳನ್ನು ನಿವಾರಿಸಿಕೊಳ್ಳಲು ದಾರಿ ಹುಡುಕಬೇಕಾಗುತ್ತದೆ. ಆಗ ಆತನನ್ನು ಸಿಟ್ಟಿಗೆಬ್ಬಿಸಿ ಆತನ ಚಟುವಟಿಕೆಗಳನ್ನು ಕಂಡುಹಿಡಿಯಿರಿ.

ಶತ್ರು ಸೈನ್ಯದೊಂದಿಗೆ ನಿಮ್ಮ ಸೈನ್ಯವನ್ನು ಹೋಲಿಸಿಕೊಳ್ಳಿ. ನಿಮ್ಮ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳು ತಿಳಿಯುತ್ತವೆ. ನಿಮ್ಮ ಗೆಲುವನ್ನು ಎಲ್ಲರೂ ಕಾಣಬಲ್ಲರು ಆದರೆ ಗೆಲುವು ಎಲ್ಲಿಂದ ಜನಿಸಿತು ಎಂಬುದು ಯಾರಿಗೂ ತಿಳಿಯುವುದಿಲ್ಲ. ಪದೇಪದೇ ಒಂದೇ ತಂತ್ರವನ್ನು ಬಳಸಬೇಡಿ. ಸಮಯ–ಸಂದರ್ಭಕ್ಕೆ ತಕ್ಕಂತಹ ತಂತ್ರಗಳು ನಿಮ್ಮಿಂದ ಬರಲಿ. ನೀರು ಪಾತ್ರೆಗೆ ತಕ್ಕಂತಹಾ ಆಕಾರವನ್ನು ಹೊಂದುತ್ತದೆ. ಹಾಗೆಯೇ ನೀವು ಶತ್ರುವಿನ ಸ್ವಭಾವಕ್ಕೆ ತಕ್ಕಂತೆ ನಿಮ್ಮ ಶೈಲಿ ಬದಲಿಸಬೇಕು.



ಯುದ್ಧ ತಂತ್ರ

ಯಾವುದೇ ಸಂದರ್ಭದಲ್ಲೂ ಬಳಸು ದಾರಿ ಹಿಡಿದು ಶತ್ರುವಿಗಿಂತ ಮುಂಚೆ ರಣರಂಗ ತಲುಪಿ ಆತನನ್ನು ಚಕಿತಗೊಳಿಸಿ. ಸೈನಿಕರಿಗೆ ಆಗಾಗ ವಿಶ್ರಾಂತಿ ನೀಡಿ. ಒತ್ತಾಯದಲ್ಲಿ ಅವರನ್ನು ಕೊಂಡೊಯ್ಯಬೇಡಿ. ಯುದ್ಧ ವೇಳೆಯಲ್ಲಿ ಅಪರಿಚಿತರೊಂದಿಗೆ ಮೈತ್ರಿ ಸೂಕ್ತವಲ್ಲ. ರಣರಂಗದಲ್ಲಿ ನಿಮ್ಮ ಪಡೆಯನ್ನು ಹೇಗೆ ಮುನ್ನಡೆಸಬೇಕು ಎಂಬುದು ಸಂದರ್ಭಕ್ಕೆ ತಕ್ಕಂತೆ ನಿರ್ಧಾರವಾಗಲಿ. ನಿಮ್ಮ ನಡೆ ಗಾಳಿಯಂತೆ ಚುರುಕಾಗಿರಬೇಕು, ಕಿಚ್ಚಿನಂತೆ ಹಬ್ಬಬೇಕು, ಪರ್ವತದಂತೆ ಅಚಲವಾಗಿರಬೇಕು, ಸಿಡಿಲಿನಂತೆ ಶತ್ರುವಿನ ಮೇಲೆ ಬೀಳಬೇಕು. ಯುದ್ಧವನ್ನು ಯಾವಾಗಲೂ ಬೆಳಗಿನ ಸಮಯದಲ್ಲಿ ಆರಂಭಿಸಬೇಕು. ನಡು ಮಧ್ಯಾಹ್ನಕ್ಕೆ ಆರಂಭವಾಗುವ ಯುದ್ಧದಲ್ಲಿ ಸೈನಿಕರು ಕಳೆಗುಂದುತ್ತಾರೆ.

ಪರ್ವತದ ಮೇಲೆ ಕುಳಿತ ಶತ್ರುವನ್ನು ಎದುರಿಸಲು ಮೇಲೆ ಹತ್ತಿ ಹೋಗಬಾರದು. ಆತ ತನ್ನ ಪಡೆಯೊಂದಿಗೆ ಕೆಳಗೆ ಬಂದ ನಂತರ ಆತನಿಗೆ ಎದುರಾಗಬಾರದು. ಶತ್ರುವಿನೊಂದಿಗೆ ಊಟಮಾಡಬಾರದು. ಶತ್ರುವನ್ನು ಸುತ್ತುವರೆದ ನಂತರ ಒಂದು ದಾರಿಯನ್ನು ಹಾಗೇ ಬಿಟ್ಟಿರಬೇಕು. ಆಗ ಆತನಿಗೆ ತಪ್ಪಿಸಿಕೊಂಡು ಓಡಬೇಕೆಂಬ ಭಾವನೆ ಉದ್ಭವವಾಗುತ್ತದೆ. ಸೋತ ಶತ್ರುವನ್ನು ಹೆಚ್ಚು ಶೋಷಿಸಬೇಡಿ.

ವಿಭಿನ್ನ ಕಾರ್ಯತಂತ್ರಗಳು

ಸೈನ್ಯದ ಶಿಬಿರವನ್ನು ದುರ್ಗಮ ಸ್ಥಳಗಳಲ್ಲಿ ಹೂಡಬೇಡಿ. ಹೆದ್ದಾರಿಗಳು ಸೇರುವಲ್ಲಿ ನಿಮ್ಮ ಗೆಳೆಯರೊಂದಿಗೆ ಕೈಜೋಡಿಸಿ. ಸೋತ ಅರಸನ ಬುದ್ಧಿವಂತ ಮತ್ತು ಅತ್ಯುತ್ತಮ ಅಧಿಕಾರಿಗಳನ್ನು ಪ್ರಲೋಭನೆಗೊಳಿಸಿ. ವಿದ್ರೋಹಿಗಳನ್ನು ಆ ರಾಜ್ಯದೊಳಕ್ಕೆ ನುಗ್ಗಿಸಿ. ಆತನ ನೈತಿಕತೆಯನ್ನು ಕೊನೆಗೊಳಿಸಿ. ವಾರಾಂಗನೆಯರನ್ನು ಕಳುಹಿಸಿ ಅರಸನ ಮನಸ್ಸನ್ನು ಮರುಳುಗೊಳಿಸಿ. ಮತ್ತೆ ಆತ ಮಾನಸಿಕವಾಗಿ ಸದೃಢವಾಗದಂತೆ ಮಾಡಿ.

ಯುದ್ಧಾಧಿಕಾರಿಯ ಮೇಲೆ ದುಷ್ಪರಿಣಾಮ ಬೀರುವ ಐದು ಅಂಶಗಳಿವೆ. ಮೊದಲನೆಯದಾಗಿ ಅಜಾಗರೂಕತೆ ಸರ್ವನಾಶಕ್ಕೆ ದಾರಿ ಮಾಡಬಲ್ಲದು. ಎರಡನೆಯದಾಗಿ ಹೇಡಿತನ ತನ್ನೆಲ್ಲವನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ಮೂರನೆಯದಾಗಿ ಅತಿ ಕೋಪ ಬುದ್ಧಿಗೆಡಿಸುತ್ತದೆ. ನಾಲ್ಕನೆಯದಾಗಿ ಅತಿಯಾದ



ಘನತೆಯ ವರ್ತನೆ ತೊಂದರೆಗೀಡು ಮಾಡಬಲ್ಲದು. ಕೊನೆಯದಾಗಿ ತನ್ನ ಜನರ ಬಗ್ಗೆಗಿನ ಅತಿಯಾದ ಉತ್ಸುಕತೆ ಹಾನಿಕಾರಕವಾಗುತ್ತದೆ. ಯಾವನೇ ಒಬ್ಬ ಸೈನ್ಯಾಧಿಕಾರಿಯ ಅಂತ್ಯವಾಗಿದ್ದರೇ ಅದು ಇವೇ ಕಾರಣಗಳಿಗಾಗಿ ಆಗಿರುತ್ತದೆ ಎಂಬುದು ಸತ್ಯ.

ಸೈನ್ಯದ ಚಲನೆ

ಸೈನ್ಯವನ್ನು ಮುನ್ನಡೆಸುವಾಗ ಸುತ್ತಲಿನ ಘಟನೆಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಬೆಟ್ಟಗಳಲ್ಲಿ ಶೀಘ್ರವಾಗಿ ಚಲಿಸಬೇಕು. ಕಣಿವೆಗಳ ಮಗ್ಗುಲಲ್ಲೇ ಚಲಿಸುತ್ತಿರಬೇಕು. ಗುಹೆಗಳ, ಅಪರಿಚಿತ ಸ್ಥಳಗಳ, ಕುಸಿಯುವ ಜವುಗು ಪ್ರದೇಶಗಳ ಬಳೀ ಹೋಗದಿರಿ. ನಿಮ್ಮ ಶಿಬಿರವನ್ನು ಎತ್ತರದ ಸ್ಥಳಗಳಲ್ಲಿ ಸೂರ್ಯ ಕಾಣುವಂತಹಾ ಸ್ಥಳಗಳಲ್ಲಿ ಹೂಡಿರಿ. ನದಿಯನ್ನು ದಾಟಿದ ನಂತರ ಅದರಿಂದ ದೂರವಿರಿ. ಹಕ್ಕಿಗಳು ಒಟ್ಟಾಗಿ ವಾಸಿಸುವ ಸ್ಥಳ ಸೈನದಿಂದ ಆಕ್ರಮಿಸಲ್ಪಟ್ಟಿಲ್ಲ ಎಂದರ್ಥ.

ನದಿಯ ನಡುವೆಯೇ ಶತ್ರುವಿನೊಂದಿಗೆ ಕಾದಾಟಕ್ಕೆ ಮುಂದಾಗದಿರಿ. ಮೊದಲು ನಿಮ್ಮ ಅರ್ಧ ಸೈನ್ಯ ದಡ ತಲುಪಿದ ನಂತರ ನಿಮ್ಮ ದಾಳಿ ಆರಂಭಿಸಿ. ಯುದ್ಧಕ್ಕೆ ಸನ್ನದ್ಧರಾಗಿದ್ದಾಗ ನಿಮ್ಮ ಶತ್ರುವನ್ನು ಕಾಣಲು ಆತ ದಾಟಬೇಕಿರುವ ನದಿಯ ಬಳಿ ಹೋಗಬೇಡಿ.

ನಿಮ್ಮ ಹಾದಿಯಲ್ಲಿ ಜವುಗು ಪ್ರದೇಶ ಅಡ್ಡ ಬಂದರೆ ಕೂಡಲೇ ಅದನ್ನು ದಾಟುವುದು ಒಳ್ಳೆಯದು. ಏಕೆಂದರೆ ಶತ್ರು ನಿಮ್ಮ ಮೇಲೆ ಬೀಳುವ ಸಾಧ್ಯತೆ ಇರುತ್ತದೆ. ಜವುಗಿನಲ್ಲಿ ಯುದ್ಧ ಮಾಡಬೇಕಾದಾಗ ನೀರು ಮತ್ತು ಹುಲ್ಲು ನಿಮ್ಮ ಬಳಿ ಇರಲಿ. ಸಾಧ್ಯವಾದಷ್ಟೂ ಮರಗಳ ಬಳಿ ಇರುವುದು ಒಳಿತು. ಹುಲ್ಲು, ನೀರು ಚೆನ್ನಾಗಿರುವ ಸ್ಥಳದಲ್ಲಿ ಶಿಬಿರ ಹೂಡುವ ಮುನ್ನ ಆ ಪ್ರದೇಶವನ್ನು ಚೆನ್ನಾಗಿ ಪರಿಶೀಲಿಸಬೇಕು. ದೂರದಲ್ಲಿ ಏಳುವ ಧೂಳು, ಕಾಡು ಪ್ರಾಣಿಗಳು ಗಾಬರಿಯ ಓಟ ಶತ್ರುವಿನ ದಾಳಿಯ ಸಾಧ್ಯತೆಯನ್ನು ಸೂಚಿಸುತ್ತದೆ.

ಶತ್ರು ಸೈನಿಕರು ಸರತಿಯಲ್ಲಿ ನಿಲ್ಲತೊಡಗಿದರೆ ಕಠಿಣ ಸಮಯ ಬಂದಿದೆ ಎಂದರ್ಥ. ಆತನ ಸೈನಿಕರು ತಮ್ಮ ಭರ್ಜಿಯನ್ನು ಆಧರಿಸಿ ನಿಲ್ಲುತ್ತಿದ್ದರೆ ಅವರಿಗೆ ಆಹಾರದ ಕೊರತೆಯಾಗಿದೆ ಎಂದು ತಿಳಿಯಿರಿ. ನೀರು ತರಲು ಕೊಳಕ್ಕೆ ಬಂದವ ತಾನೇ ಮೊದಲು ನೀರು ಕುಡಿಯತೊಡಗಿದ್ದರೆ ಆ ಪಾಳಯದಲ್ಲಿ ನೀರಿನ ಕೊರತೆ



ಇದೆ ಎಂದರ್ಥ. ಎದುರು ಪಾಳಯದಲ್ಲಿ ಸೈನಿಕರ ಗದ್ದಲ ಇದ್ದರೆ ಅದು ದಂಡನಾಯಕನ ಅಸಾಮರ್ಥ್ಯವನ್ನು ತೋರಿಸುತ್ತದೆ. ಕೋಪದಿಂದ ಜಗಳ ನಡೆಯುತ್ತಿದ್ದರೆ ಸೈನಿಕರು ಆಯಾಸಗೊಂಡಿದ್ದಾರೆ ಎನ್ನುವುದನ್ನು ಸೂಚಿಸುತ್ತದೆ. ದಂಡನಾಯಕ ತನ್ನ ಸೈನಿಕರಿಗೆ ಪದೇಪದೇ ಕೊಡುಗೆಗಳನ್ನು ನೀಡುತ್ತಿದ್ದರೆ ಶತ್ರುವಿನ ಸಂಪನ್ಮೂಲ ಕೊನೆಗೊಳ್ಳುತ್ತಿದೆ ಎಂದು ತಿಳಿಯಿರಿ. ಹಾಗೆಯೇ ಅತಿಯಾದ ಶಿಕ್ಷೆ ಕೂಡಾ ದುರಂತದ ಮುನ್ಸೂಚಕ.ರಣರಂಗದಲ್ಲಿ ಎದುರಿಗೆ ನಿಂತ ಶತ್ರು ಸೈನ್ಯ ಯುದ್ಧಕ್ಕೆಳಸದೇ ಬಹಳ ಕಾಲ ಹಾಗೆಯೇ ನಿಂತಿದ್ದಲ್ಲಿ ಆ ಸಂದರ್ಭವನ್ನು ಸೂಕ್ಷ್ಮವಾಗಿ ಗ್ರಹಿಸಬೇಕು.

ಪುರಾತನ ಚೀನಿ ಅಸ್ತ್ರಗಳು

ಚೀನಾದ ಇತಿಹಾಸದಲ್ಲಿ ಬಿಲ್ಲು-ಬಾಣಗಳು ಪ್ರಮುಖ ಅಸ್ತ್ರಗಳಾಗಿದ್ದವು. ಸುಮಾರು ಕ್ರಿ.ಪೂ.500 ರ ಸಮಯದಲ್ಲಿ ಖಡ್ಗಗಳು ಚೀನಿ ರಣರಂಗ ಪ್ರವೇಶಿಸಿದ ದಾಖಲೆಗಳು ದೊರೆಯುತ್ತವೆ. ಆರಂಭದಲ್ಲಿ ಖಡ್ಗಗಳನ್ನು ಕಂಚಿನ ಲೋಹದಲ್ಲಿ ತಯಾರಿಸಲಾಗುತ್ತಿತ್ತು. ಕ್ರಮೇಣ ಈಟಿ, ಭರ್ಜಿ, ಕಠಾರಿ ಮತ್ತು ಕೊಡಲಿಗಳು ಬಳಕೆಯಾದಂತೆ ಕಾಣುತ್ತವೆ.

ಕ್ರಿ.ಪೂ.1250 ರಲ್ಲಿ ಯುದ್ಧಗಳಲ್ಲಿ ರಥಗಳ ಬಳಕೆ ಆರಂಭವಾಗಿತ್ತು. ರಣರಂಗ ಪ್ರವೇಶಿಸುವ ಮುನ್ನ ಸೈನ್ಯವನ್ನು ಐದು ಭಾಗಗಳಾಗಿ ವಿಂಗಡಿಸಿ ಅವುಗಳಿಗೆ ಪ್ರತ್ಯೇಕ ಧ್ವಜವನ್ನು ನೀಡಲಾಗುತ್ತಿತ್ತು. ಕೆಂಪು ಹಕ್ಕಿಯ ಧ್ವಜ ಹೊಂದಿದ ತಂಡ ಮುಂಚೂಣಿಯಲ್ಲಿರುತ್ತಿತ್ತು. ಹಸಿರು ಡ್ರಾಗನ್ ಧ್ವಜದ ತಂಡ ಎಡ ಭಾಗದ ರಕ್ಷಣೆ ಮಾಡುತ್ತಿತ್ತು. ಬಿಳಿ ಹುಲಿಯ ಧ್ವಜದ ತಂಡ ಬಲ ಪಕ್ಕದಲ್ಲಿರುತ್ತಿತ್ತು. ಕಪ್ಪು ಆಮೆಯ ಗುರುತು ಹೊಂದಿದ ತಂಡ ಹಿಂಬದಿಯಲ್ಲಿ ರಕ್ಷಣೆ ಮಾಡುತ್ತಿತ್ತು. ಸಪ್ತರ್ಷಿ ಮಂಡಲದ ನಿಶಾನೆ ಹೊಂದಿದ ತಂಡ ಮಧ್ಯ ಭಾಗದಲ್ಲಿದ್ದು ಅರಸನ ರಕ್ಷಣೆ ಮತ್ತು ಸೇನಾಪತಿಯ ಆದೇಶಕ್ಕೆ ಕಾಯುತ್ತಿತ್ತು.

ಭೂ ಪ್ರದೇಶ

ಸುಂಟ್ಜು ಪ್ರಕಾರ ಯುದ್ಧರಂಗ ತಲುಪಲು ಸೂಕ್ತವಾದ ರಸ್ತೆ ಇರಬೇಕು. ಗೋಜಲು ರಸ್ತೆಗಳು, ತಾತ್ಕಾಲಿಕ ರಸ್ತೆಗಳು, ಕಣಿವೆ ರಸ್ತೆಗಳು, ಏರು ರಸ್ತೆಗಳು ಸೈನ್ಯದ ಚಲನೆಗೆ ಅಡ್ಡಿ ಉಂಟುಮಾಡುತ್ತವೆ. ಯುದ್ಧ ರಂಗ ತಲುಪಿದ ನಂತರ ನಿಮ್ಮ ಸೈನ್ಯಕ್ಕೆ ಆಹಾರ ಮತ್ತು ಶಸ್ತ್ರಾಸ್ತ್ರ ಸರಬರಾಜಾಗುವ ರಸ್ತೆಗಳನ್ನು ಎಚ್ಚರಿಕೆಯಿಂದ



ಕಾಯ್ದುಕೊಳ್ಳಬೇಕು. ನಿಮ್ಮ ಶತ್ರು ಇಂತಹ ಪರಿಸ್ಥಿತಿಯಲ್ಲಿದ್ದರೆ ನೀವು ಆತನನ್ನು ಸುಲಭವಾಗಿ ಗೆಲ್ಲಬಹುದು. ಒಂದು ವೇಳೆ ನೀವು ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದರೆ ಹಿಂದೆಗೆಯುವುದು ಉತ್ತಮ.

ನಿಮ್ಮ ಶತ್ರು ಸೂಕ್ತ ಸ್ಥಳದಲ್ಲಿ ಮೊದಲೇ ನಿಂತಿದ್ದರೆ ಆತನನ್ನು ನೀವೇ ಯುದ್ಧಕ್ಕೆ ಕರೆಯುವುದರ ಬದಲು ಕಾಯ್ದು ನೋಡುವ ತಂತ್ರ ಅನುಸರಿಸಿ. ಅಸುರಕ್ಷಿತ ಸ್ಥಳಗಳಲ್ಲಿ ಆರು ಪ್ರಾಕೃತಿಕ ತೊಂದರೆಗಳು ಉಂಟಾಗಬಹುದು. ಅವುಗಳೆಂದರೆ ಪ್ರಕೃತಿ ವಿಕೋಪದಿಂದ ಸೈನ್ಯ ಪರಾರಿಯಾಗಬಹುದು, ಅಶಿಸ್ತು ಉಂಟಾಗಬಹುದು, ಸೈನ್ಯದ ಶಕ್ತಿ ಕುಸಿಯಬಹುದು, ನಾಶವಾಗಬಹುದು, ಅಸಂಘಟನೆಯಾಗಬಹುದು ಮತ್ತು ಇದರಿಂದ ಸೋಲಾಗಬಹುದು.

ಯುದ್ಧಕಲೆಯ ಒಂಬತ್ತು ಸನ್ನಿವೇಶಗಳು

ಸುಂಟ್ಸು ಯುದ್ಧ ಮಾಡುವಾಗ ಗಮನಿಸಬೇಕಾದ ಒಂಬತ್ತು ಸನ್ನಿವೇಶಗಳನ್ನು ಇಲ್ಲಿ ವಿವರಿಸಿದ್ದಾನೆ. ಆತನ ಪ್ರಕಾರ ಅರಸ ತನ್ನ ರಾಜ್ಯದ ಗಡಿಯಲ್ಲೇ ಯುದ್ಧ ಆರಂಭಿಸಬಾರದು. ಏಕೆಂದರೆ ಸೈನಿಕರು ರಾತ್ರಿ ಮನೆಗೆ ಹೋಗಲು ಆತುರರಾಗಿರುವುದರಿಂದ ದೊರೆಯುವ ಸೂಕ್ತ ಅವಕಾಶಗಳನ್ನು ಕೈಚೆಲ್ಲಿಬಿಡುತ್ತಾರೆ. ನಿಮ್ಮ ಗಡಿ ದಾಟಿದ ತಕ್ಷಣ ನಿಮ್ಮ ದೋಣಿಗಳನ್ನು ಮತ್ತು ಸೇತುವೆಗಳನ್ನು ಸುಟ್ಟುಬಿಡಿ. ಇದರಿಂದ ಸೈನಿಕರು ತಾವು ಗೆಲ್ಲದೇ ಹಿಂದಿರುಗುವ ಸಾಧ್ಯತೆಗಳನ್ನು ತೊರೆಯುತ್ತಾರೆ. ಕಣಿವೆಯ ಪ್ರವೇಶದ್ವಾರವು ಆಯಕಟ್ಟಿನ ಪ್ರದೇಶವಾಗಿರುತ್ತದೆ. ಸುತ್ತಲೂ ರಸ್ತೆಗಳನ್ನು ಹೊಂದಿರುವ ಸ್ಥಳ ರಣರಂಗಕ್ಕೆ ಉತ್ತಮ. ಎರಡೂ ಪಂಗಡಗಳ ರಾಜ್ಯಕ್ಕೆ ಮತ್ತು ಎರಡು ಪಂಗಡಗಳ ಮಿತ್ರ ರಾಜ್ಯಕ್ಕೆ ರಸ್ತೆಗಳಿರುವ ಸ್ಥಳ ಸರ್ವೋತ್ತಮ. ದುರ್ಗಮ ಸ್ಥಳಗಳಲ್ಲಿ ಹೋರಾಟ ಸಲ್ಲದು.

ಶತ್ರು ತನಗೆ ಅನುಕೂಲಕರ ಸಂದರ್ಭ ಇದ್ದಾಗ ಮುಂದುವರೆಯುತ್ತಾನೆ, ಇಲ್ಲವೇ ಒಂದೆಡೆ ಶಿಬಿರ ಹೂಡುತ್ತಾನೆ. ಇದನ್ನು ಗಮನಿಸಿ ಪರಿಶೀಲಿಸಿಕೊಳ್ಳಬೇಕು. ಯುದ್ಧಕ್ಕೆ ಮುನ್ನಾ ಶತ್ರುವಿಗೆ ಪ್ರಿಯವಾದ ವಸ್ತು ಮತ್ತು ಸ್ಥಳಗಳನ್ನು ಆಕ್ರಮಿಸಿಕೊಳ್ಳಿ. ಕ್ಷಿಪ್ರ ಕಾರ್ಯಾಚರಣೆ ಯುದ್ಧದ ಮೂಲಸತ್ವ.

ಯುದ್ಧ ರಂಗದಲ್ಲಿ ನಿಮ್ಮ ಸೈನಿಕರಿಗೆ ಗೆಲ್ಲದೇ ಹಿಂದಿರುಗಲು ಸಾಧ್ಯವಿಲ್ಲವೆಂಬ ಪರಿಸ್ಥಿತಿ ಸೃಷ್ಟಿಸಿ. ಇದರಿಂದ ಅವರು ಗೆಲ್ಲುವವರೆಗೆ ಹೋರಾಟ ನಡೆಸುತ್ತಾರೆ. ಯುದ್ಧದ ಸಂದರ್ಭದಲ್ಲಿ ಶಕುನಗಳ ಬಗ್ಗೆ ಗಮನಕೊಡಬೇಡಿ. ವದಂತಿಗಳು ಸೈನಿಕರಿಗೆ ತಲುಪದಂತೆ ನೋಡಿಕೊಳ್ಳಿ.



ಬೆಂಕಿಯೊಂದಿಗೆ ದಾಳಿ

ಯುದ್ಧ ಕೌಶಲ್ಯದ ಈ ಅಧ್ಯಾಯದಲ್ಲಿ ಸುಂಟ್ಸು ಬೆಂಕಿಯನ್ನು ಉಪಯೋಗಿಸಿಕೊಂಡು ಯುದ್ಧ ಮಾಡುವ ತಂತ್ರಗಳ ಬಗ್ಗೆ ವಿವರಿಸುತ್ತಾನೆ. ಆತನ ಪ್ರಕಾರ ಇದನ್ನು ಐದು ವಿಧಾನಗಳಲ್ಲಿ ಬಳಸಬಹುದು. ಮೊದಲನೆಯದಾಗಿ ಶತ್ರು ಸೈನಿಕರ ಶಿಬಿರಗಳಿಗೆ ಬೆಂಕಿ ಇಡಬೇಕು, ಎರಡನೆಯದಾಗಿ ಶತ್ರುವಿನ ದವಸ ಧಾನ್ಯಗಳ ದಾಸ್ತಾನಿಗೆ ಬೆಂಕಿ ಹಾಕಬೇಕು, ಮೂರನೆಯದಾಗಿ ಶತ್ರುವಿನ ಸರಕು ಸಾಗಣೆಯ ಬಂಡಿಗಳನ್ನು ಸುಡಬೇಕು, ನಾಲ್ಕನೆಯದಾಗಿ ಅವರ ಮದ್ದು–ಗುಂಡಿನ ದಾಸ್ತಾನಿಗೆ ಬೆಂಕಿ ಹಚ್ಚಬೇಕು ಮತ್ತು ಕೊನೆಯದಾಗಿ ಶತ್ರು ಸೈನ್ಯದ ಶಿಬಿರದ ನಡುವೆ ಬಾಣದ ತುದಿಗಳ ಮೂಲಕ ಬೆಂಕಿ ಹಾಕಬೇಕು.

ಈ ಕಾರ್ಯವನ್ನು ನಿರ್ವಹಿಸುವಾಗ ರಾತ್ರಿಯ ಸಮಯದಲ್ಲಿ ವಾತಾವರಣ ಶುಷ್ಕವಾಗಿರಬೇಕು ಮತ್ತು ಗಾಳಿ ಬೀಸುತ್ತಿರಬೇಕು. ಬೆಂಕಿಯ ದಾಳಿ ಆರಂಭವಾದಾಗ ಶತ್ರು ಪಾಳೆಯದೊಳಗೆ ಗದ್ದಲ ಎಬ್ಬಿಸಿ ಸೈನಿಕರನ್ನು ದಿಕ್ಕೆಡಿಸಬೇಕು. ಈ ದಾಳಿ ಗಾಳಿ ಬೀಸುವ ದಿಕ್ಕಿನಿಂದ ಆರಂಭವಾಗಬೇಕು. ಬೆಂಕಿಯನ್ನು ಬಳಸಿ ದಾಳಿ ಮಾಡುವವರು ಬುದ್ಧಿವಂತಿಕೆಯ ಪ್ರದರ್ಶನ ಮಾಡಬೇಕು. ನೀರನ್ನು ಬಳಸಿ ದಾಳಿ ಮಾಡುವಾಗ ಶಕ್ತಿ ಪ್ರದರ್ಶನ ಮಾಡಬೇಕು.

ಗೂಢಚಾರರ ಅಗತ್ಯತೆ

ಯಾವುದೇ ರಾಜ್ಯ ಅಥವಾ ವ್ಯವಸ್ಥೆ ತನ್ನ ಶತ್ರುಗಳ ನಡುವೆ ಕಾರ್ಯ ನಿರ್ವಹಿಸಬೇಕಾಗುತ್ತದೆ. ಶತ್ರುವಿನ ನಡೆಯನ್ನು ಕಂಡುಕೊಳ್ಳುವಲ್ಲಿ ಗೂಢಚಾರರ ಪಾತ್ರ ಬಲು ಮಹತ್ವದ್ದು. ಇದರ ಬಗ್ಗೆ ಸುಂಟ್ಸು ತನ್ನ ಪುಸ್ತಕದ ಕೊನೆಯ ಅಧ್ಯಾಯದಲ್ಲಿ ವಿವರಿಸುತ್ತಾನೆ. ಶತ್ರು ಏನೇನು ಯೋಜನೆ–ಉಪಾಯಗಳನ್ನು ನಿರ್ವಹಿಸುತ್ತಿದ್ದಾನೆ ಎನ್ನುವುದನ್ನು ಮುಂದಾಗಿಯೆ ತಿಳಿಯುವುದು ಅಗತ್ಯ. ಇದನ್ನು ಕೇವಲ ಗೂಢಚಾರರು ಮಾತ್ರ ಮಾಡಬಲ್ಲರು.

ಗೂಢಚಾರರಲ್ಲಿ ಐದು ವರ್ಗಗಳಿವೆ – ಶತ್ರು ರಾಜ್ಯದಲ್ಲಿ ನಮಗೆ ಅನುಕೂಲಕರರಾದ ಅಲ್ಲಿನ ಸ್ಥಾನಿಕ ಗೂಢಚಾರರು, ಶತ್ರುವಿನ ಆಡಳಿತದಲ್ಲಿ ಕೆಲಸ ನಿರ್ವಹಿಸುವ ಆಂತರಿಕ ಗೂಢಚಾರರು, ಮೊದಲು ಶತ್ರುವಿನ ಪಾಳೆಯದಲ್ಲಿದ್ದು ನಂತರ ಇನ್ನೊಂದು ರಾಜ್ಯದ ಪರವಾಗಿ ಕಾರ್ಯ ನಿರ್ವಹಿಸುವ ಪರಿವರ್ತಿತ ಗೂಢಚಾರರು, ಇತರ ರಾಜ್ಯದಲ್ಲಿ ಜೀವನಕ್ಕಾಗಿ ಒಂದು ಕಾರ್ಯದಲ್ಲಿ ತೊಡಗಿದ್ದು



ಆಗಾಗ ಮಾಹಿತಿಗಳನ್ನು ರಹಸ್ಯವಾಗಿ ಒದಗಿಸುವ ಕಾನೂನುಬದ್ಧ ಗೂಢಚಾರರು ಮತ್ತು ಪೆದ್ದ, ಮೂರ್ಖನಂತೆ ವರ್ತಿಸುತ್ತಾ ಆದಷ್ಟೂ ಮಾಹಿತಿಗಳೊಂದಿಗೆ ಶತ್ರು ಪಾಳಯದಿಂದ ತಪ್ಪಿಸಿಕೊಂಡು ಬದುಕುಳಿದು ಬಂದ ಗೂಢಚಾರರು.

ಗೂಢಚಾರರೊಂದಿಗೆ ಒಳ್ಳೆಯ ಸಂಬಂಧವನ್ನು ಅರಸ ಹೊಂದಿರ ಬೇಕಾದುದು ಅಗತ್ಯ. ಆತನ ಮಾಹಿತಿಗಾಗಿ ಗೂಢಚಾರನಿಗೆ ಅತಿಯಾದ ಪ್ರತಿಫಲವನ್ನು ನೀಡುವುದು ಒಳ್ಳೆಯದಲ್ಲ. ಹೆಚ್ಚಿನ ಆಸೆಯನ್ನು ಹೊಂದುವ ಆತ ಶತ್ರುವಿಗೆ ಕೆಲಸ ಮಾಡಲು ಆರಂಭಿಸಬಹುದು.

ಗೂಢಚಾರರನ್ನು ಆಯ್ಕೆ ಮಾಡಿಕೊಳ್ಳುವಾಗ ಬುದ್ಧಿವಂತಿಕೆಯಿಂದ ಇರಬೇಕು. ಆತ ಶತ್ರುವಿನ ಕಡೆಯಿಂದ ಬಂದ ಗೂಢಚಾರನಾಗಿರುವ ಸಾಧ್ಯತೆಗಳೂ ಇರುತ್ತವೆ. ಯಾವನಾದರು ಒಬ್ಬ ಗೂಢಚಾರ ಮಾಹಿತಿಯನ್ನು ಸೋರಿಕೆ ಮಾಡಿದ್ದರೆ ಆ ಮಾಹಿತಿ ಯಾರಿಗೆ ರವಾನೆಯಾಗಿದೆಯೋ ಆತನೊಂದಿಗೆ ಗೂಢಚಾರನನ್ನೂ ಕೊಲ್ಲಬೇಕು. ಅರಮನೆಯ ದ್ವಾರಪಾಲಕರು, ಸೇವಕರುಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕು. ಒಬ್ಬ ವ್ಯಕ್ತಿ ಶತ್ರುವಿನ ಗೂಢಚಾರ ಎಂಬ ವಿಷಯ ತಿಳಿದಾಗ ಆತನನ್ನು ಹಣದ ಆಮಿಷ ಒಡ್ಡಿ ತನ್ನ ಕಡೆ ಕೆಲಸ ಮಾಡಲು ಪ್ರೇರೇಪಿಸಬೇಕು. ಇಂತಹ ಪರಿವರ್ತಿತ ಗೂಢಚಾರ ತಂದ ಮಾಹಿತಿಯನ್ನು ಮತ್ತೊಮ್ಮೆ ಪರಿಶೀಲಿಸಬೇಕು. ಗೂಢಚಾರರು ತರುವ ಮಾಹಿತಿಯ ಮೇಲೆ ಸೈನ್ಯದ ನಡೆ ನಿರ್ಧಾರಿತವಾಗಿರುತ್ತದೆ. ಆದುದರಿಂದ ಗೂಢಚಾರರಿಲ್ಲದ ಸೈನ್ಯ ಕಣ್ಣು–ಕಿವಿ ಇಲ್ಲದ ಮನುಷ್ಯನಂತೆ ಎನ್ನುತ್ತಾನೆ ದಂಡನಾಯಕ ಚಿಯಾ ಲಿನ್. ಗೂಢಚಾರರ ಅಗತ್ಯತೆಯ ಬಗ್ಗೆ ಕೌಟಿಲ್ಯ ಕೂಡಾ ತನ್ನ ಗ್ರಂಥ ಅರ್ಥಶಾಸ್ತ್ರದಲ್ಲಿ ವಿವರಿಸುತ್ತಾನೆ.

ಮುಂದೇನು ?

ಚೀನಿ ಯುದ್ಧ ಕಲೆಯಲ್ಲಿ ವೀರಾವೇಶಕ್ಕಿಂತಾ ಬುದ್ಧಿವಂತ ನಡೆಗಳು ಮುಖ್ಯವಾಗಿ ವಿವರಿಸಲ್ಪಟ್ಟಿವೆ. ಗೆಲ್ಲುವುದನ್ನೇ ಮುಖ್ಯ ಉದ್ದೇಶವಾಗಿ ಹೊಂದಿದ ರಾಜನೊಬ್ಬ ಅದಕ್ಕಾಗಿ ಪಲಾಯನವನ್ನೂ ಮಾಡಬಹುದು ಎನ್ನುವ ಸುಂಟ್ಸು ಅಂತಹಾ ನಾನಾ ಹಾದಿಗಳನ್ನು ನಮ್ಮ ಮುಂದೆ ತೆರೆದಿಡುತ್ತಾನೆ. ಸುಂಟ್ಸು ಚಿಂತನೆಗಳಿಂದ ಪ್ರೇರಿತರಾಗಿ ಕಮ್ಯೂನಿಸ್ಟ್ ನಾಯಕ ಮಾವೋ ಜೆಡಾಂಗ್, ಚಿಯಾಂಗ್ ಕೈಶೆಕ್, ಹೋಚಿ ಮಿನ್ ಮುಂತಾದವರು ತಮ್ಮ ನಿರ್ಧಾರಗಳಿಗೆ ಸುಂಟ್ಸು ನೀತಿಗಳ ಮೊರೆ ಹೋಗುತ್ತಿದ್ದರು. ಅನೇಕ ಬಿಸಿನೆಸ್ ಶಾಲೆಗಳೂ ಕೂಡಾ ಈ ಗ್ರಂಥವನ್ನು ತಮ್ಮ ಪಠ್ಯಕ್ರಮದಲ್ಲಿ ಅಳವಡಿಸಿಕೊಂಡಿದ್ದವು.



ಈ ಹಿನ್ನೆಲೆಯಲ್ಲಿ ಭಾರತೀಯ ಯುದ್ಧಕಲೆಯನ್ನು ಗಮನಿಸಿದಾಗ ಇಲ್ಲಿ ಯುದ್ಧದಲ್ಲೂ ಕೂಡಾ ಧರ್ಮ–ಕರ್ಮಗಳ ಸಂಗಮವನ್ನು ನೋಡುತ್ತೇವೆ. ಮೋಸಗಾರಿಕೆ, ಪಲಾಯನ, ಕಪಟ ಮುಂತಾದವು ಯುದ್ಧದಲ್ಲಿ ಸಲ್ಲದು ಎನ್ನುತ್ತವೆ ನಮ್ಮ ಗ್ರಂಥಗಳು. ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯುವುದು, ಯುದ್ಧ ರಂಗದಿಂದ ಓಡಿಹೋಗುವುದಕ್ಕಿಂತಾ ವೀರಮರಣ ಅಪ್ಪುವುದು ಮೇಲು ಎನ್ನುತ್ತದೆ ಭಾರತೀಯ ಶೌರ್ಯ.

ಚೀನಾದ ಯುದ್ಧ ನೀತಿಯಲ್ಲಿ ಧಾರ್ಮಿಕ ಅಡಿಪಾಯದ ಕೊರತೆ ಇದೇ ಎನ್ನಿಸುತ್ತದೆ. ಆದರೆ ಚೀನಾದ ಕನ್ಫ್ಯೂಶಿಯಸ್ ಪಂಥದ ಅನುಯಾಯಿಗಳು ಹೇಳುವಂತೆ ಯುದ್ಧ ಎನ್ನುವುದು ಸಾಮಾಜಿಕ ಕ್ರೌರ್ಯ. ಕಾಲಾನಂತರ ಕ್ವಿನ್ ವಂಶ ಚೀನಾವನ್ನು ಆಳತೊಡಗಿದಂತೆ ಯುದ್ಧಾಸಕ್ತಿ ಹೆಚ್ಚತೊಡಗಿತು. ಕನ್ಫ್ಯೂಶಿಯಸ್ ಬೋಧನೆಗಳನ್ನು ಬದಿಗಿಟ್ಟು ಪ್ರಾಕ್ಟಿಕಲ್ ಚಿಂತನೆ ಆರಂಭವಾಯ್ತು. ಇದರಿಂದ ಯುದ್ಧ ಕಲೆಗಳಲ್ಲಿ ನೈತಿಕತೆ ಮರೆಯುತ್ತಾ ತಂತ್ರಗಾರಿಕೆಗೆ ಒತ್ತು ನೀಡಲಾರಂಭಿಸಿದರು. ಈ ಕಾರಣದಿಂದ ಚೀನಾ ಯುದ್ಧ ನೀತಿಯಲ್ಲಿ ಧಾರ್ಮಿಕ ಅಂಶಗಳ ಪ್ರಭಾವ ಕಡಮೆ ಇದೆ. ಆದರೆ ಈ ಧಾರ್ಮಿಕ ಬೇಸ್ ಭಾರತೀಯ ಯುದ್ಧ ಕಲೆಯ ಪ್ರಮುಖ ನೆಲೆಗಟ್ಟಾಗಿದೆ. ಯುದ್ಧದಲ್ಲಿ ಅತ್ಯುನ್ನತವಾದದ್ದು ಧರ್ಮಯುದ್ಧ. ಕೂಟಯುದ್ಧ (ಮೋಸಗಾರಿಕೆಯ ಯುದ್ಧ) ಸಲ್ಲದು. ವಿಚಿತ್ರವೆಂದರೆ ಮಹಾಭಾರತದ ಯುದ್ಧದಲ್ಲಿ ಇವೆರಡೂ ನೀತಿಗಳ ಬಳಕೆ ಆಗಿದೆ. ಕೊನೆಗೆ ಗೆಲುವು ಧರ್ಮಯುದ್ಧದ ಕಡೆಗೇ ವಾಲುತ್ತದೆ. ಯುದ್ಧಕಲೆಯನ್ನು ವರ್ಣಿಸುವ ಕೌಟಿಲ್ಯನ ಅರ್ಥಶಾಸ್ತ್ರ ಈ ನಿಟ್ಟಿನಲ್ಲಿ ಒಂದು ಪ್ರಮುಖ ಆಕರ ಗ್ರಂಥವಾಗಿದೆ.

ಭಾರತೀಯ ಯುದ್ಧಕಲೆ

ಭಾರತ ದೇಶದ ಪುರಾತನ ಇತಿಹಾಸ ಯುದ್ಧಗಳಿಂದ ತುಂಬಿ ಹೋಗಿದೆ. ಬದುಕು ಮತ್ತು ಸಿದ್ಧಾಂತಗಳ ನಡುವಿನ ಹೋರಾಟದೊಂದಿಗೆ ಆರಂಭವಾಗುವ ಯುದ್ಧದ ಅಂತ್ಯ ಇನ್ನೇನೋ ಆಗಿರುತ್ತದೆ. ಸಂಬಂಧ, ಪ್ರೀತಿ–ವಿಶ್ವಾಸಗಳನ್ನು ಕೊಂದುಕೊಳ್ಳುವ ಯುದ್ಧದ ಖಾಲಿತನವನ್ನು ಅರಿತ ಬಾಹುಬಲಿ, ಅಶೋಕರಂತಹ ಚಕ್ರವರ್ತಿಗಳು ಇಲ್ಲಿ ಆಗಿಹೋಗಿದ್ದಾರೆ. ಋಗ್ವೇದದಲ್ಲಿ ಅರಸ ದಿವೋದಾಸ ತನ್ನ ಶತ್ರುವಿನ ಮೇಲೆ ಮಾಡಿದ ಯುದ್ಧದ ಉಲ್ಲೇಖ ಕಂಡುಬರುತ್ತದೆ. ಹಾಗೆ ನೋಡಿದರೆ ಇದೇ ಪ್ರಥಮವಾಗಿ ದಾಖಲಾದ ಅತೀ ಪುರಾತನ ಯುದ್ಧ.



ಹರಿಯೂಪಿಯಾ : ಸರಸ್ವತಿಯಲ್ಲಿ ಹರಿದ ರಕ್ತ

ಸರಸ್ವತಿ ನದಿಯು ಅಂದು ನಡೆದ ಯುದ್ಧವೊಂದಕ್ಕೂ ಸಾಕ್ಷಿಯಾಗಿತ್ತು. ರಾಜ್ಯದಾಹದಲ್ಲಿ ಹರಿದ ರಕ್ತದ ಹೊಳೆ ಕ್ರೌರ್ಯಕ್ಕೆ ಸಾಕ್ಷಿಯಾಗಿತ್ತು. ಅದನ್ನು ಹರಿಯೂಪಿಯಾ ಯುದ್ಧ ಎಂದು ಕರೆದಿದ್ದಾರೆ. (ಹರಿಯೂಪಿಯಾ ಹರಪ್ಪಾ ಎಂಬುದರ ತತ್ಸಮ ಪದವಿರಬಹುದು.) ಈ ಯುದ್ಧ ಹಾಗೂ ಅದರ ಕಥೆ ಕಾಲ್ಪನಿಕವೆಂಬ ಹೇಳಿಕೆಗಳೂ ಇವೆ. ಹರಿಯೂಪಿಯಾ ಬಗ್ಗೆ ವೇದಗಳಲ್ಲಿ ಉಲ್ಲೇಖಗಳನ್ನು ಕಾಣಬಹುದಾಗಿದೆ.

ಹರಿಯೂಪಿಯಾ ಯುದ್ಧ ಆರ್ಯರ ಮೂರು ಗುಂಪುಗಳ ನಡುವೆ ನಡೆದ ಭೀಕರ ಯುದ್ಧ ಎನ್ನಲಾಗುತ್ತದೆ. ಈ ಯುದ್ಧದಿಂದ ದಿವೋದಾಸ ಎಂಬಾತ ಸರಸ್ವತಿ ನದಿ ತೀರದ ಹಾಗೂ ಉತ್ತರ ಭಾರತದ ವಿಶಾಲ ಪ್ರದೇಶದ ಮೇಲೆ ಹಿಡಿತ ಸಾಧಿಸಿ ಭಾರತದ ಸರ್ವಪ್ರಥಮ ಚಕ್ರವರ್ತಿಗಳಲ್ಲಿ ಒಬ್ಬ ಎಂದು ಹೆಸರು ಗಳಿಸಿದ. ಕೆಲವು ದಶಕಗಳ ಹಿಂದೆ ಹರಿಯೂಪಿಯಾ ಎಂಬ ಕಾದಂಬರಿಯೊಂದು ಪ್ರಕಟವಾಗಿ ಅದ್ಭುತ ಜನಮನ್ನಣೆ ಗಳಿಸಿತ್ತು.

ಧರ್ಮಯುದ್ಧ


ಭಾರತದ ಭವ್ಯ ಪರಂಪರೆಯಲ್ಲಿ ಅರಸರು ಧರ್ಮಯುದ್ಧಕ್ಕೆ ಒತ್ತು ಕೊಟ್ಟಿದ್ದರು. ರಣರಂಗದಲ್ಲು ಧರ್ಮದ ಹಾದಿ ಬಿಡದೆ ಪ್ರಾಣತೆತ್ತ ಅರಸರ ಉದಾಹರಣೆ ನಮ್ಮ ಮುಂದಿದೆ. ಈ ಗುಣಗಳನ್ನು ಅವರು ಬಹುಶಃ ಓದದೇ ಆಚರಣೆಗೆ ತಂದು ಕೊಂಡಿರಬಹುದು. ಕ್ಷತ್ರೀಯನಾದ ಅರಸನ ಕರ್ತವ್ಯ ಯುದ್ಧ ಮಾಡುವುದು ಎಂದು ಬೋಧಿಸಿದ ಪುರಾತನ ರಾಜನೀತಿಯ ಗ್ರಂಥಗಳು ಯುದ್ಧ ಹೇಗೆ ಮಾಡಬೇಕು, ಅದರ ಒಳ-ಹೊರಗೇನು ಎನ್ನುವುದನ್ನೂ ತಿಳಿಸುತ್ತವೆ. ಕೌಟಿಲ್ಯನ ಅರ್ಥಶಾಸ್ತ್ರ, ಅಗ್ನಿಪರ್ವ, ಶುಕ್ರನೀತಿಸಾರ ಇಂತಹ ಪ್ರಮುಖ ವಿಷಯಗಳ ಬಗ್ಗೆ ವಿವರವಾಗಿ ಚರ್ಚಿಸುತ್ತವೆ. ರಾಜ ಧರ್ಮದಲ್ಲಿ ಸಾಮ-ದಾನ-ಭೇದ-ದಂಡಗಳ ಉಲ್ಲೇಖ ಇದೆ. ಅರ್ಥಶಾಸ್ತ್ರದ ಪ್ರಕಾರ ರಾಜ ದೈವಸಮಾನ ಸರಿ ಆದರೆ ಯುದ್ಧ ಘೋಷಣೆ ಮುಂತಾದ ಸಂದರ್ಭಗಳಲ್ಲಿ ಆತ ಧರ್ಮದ ಹಾದಿಯಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತಿತ್ತು. ಇವು ಕೌಟಿಲ್ಯನ ಅರ್ಥಶಾಸ್ತ್ರದ ಮೂಲದ್ರವ್ಯಗಳು.




ಕೌಟಿಲ್ಯನ ಅರ್ಥಶಾಸ್ತ್ರ

ಅರ್ಥಶಾಸ್ತ್ರ ಎಂಬ ಗ್ರಂಥವನ್ನು ರಚಿಸಿದ ಕೌಟಿಲ್ಯ ಚಂದ್ರಗುಪ್ತಮೌರ್ಯನ ಕಾಲದಲ್ಲಿ ಜೀವಿಸಿದ್ದ ಮಹಾನ್ ಚಿಂತಕ, ತತ್ವಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞನಾಗಿದ್ದ. ಸಂಸ್ಕೃತ ಭಾಷೆಯಲ್ಲಿ ರಚಿತವಾಗಿರುವ ಅರ್ಥಶಾಸ್ತ್ರವು ಹಲವಾರು ಶತಮಾನಗಳ ಕಾಲ ರಾಜ-ಮಹಾರಾಜರುಗಳಿಂದ ಅಭ್ಯಾಸ ಮಾಡಲ್ಪಡುತ್ತಿತ್ತು. ಮುಂದೆ ಸಂಸ್ಕೃತಕ್ಕೆ ಅಷ್ಟೇನೂ ಪ್ರಾಧಾನ್ಯತೆ ದೊರೆಯದ ಕಾರಣ ಅಂದಿನ ಇಂತಹಾ ಗ್ರಂಥಗಳೆಲ್ಲಾ ಮೂಲೆ ಸೇರಿದವು. ಮುಂದೆ 1909 ರಲ್ಲಿ ಆರ್.ಶಾಮಾಶಾಸ್ತ್ರಿಗಳು ಅರ್ಥಶಾಸ್ತ್ರವನ್ನು ಮರುಮುದ್ರಣ ಮಾಡಿದರು. ಮೂಲಗ್ರಂಥದ ಕಾಲದ ಬಗ್ಗೆ ವಿದ್ವಾಂಸರಲ್ಲಿ ಒಮ್ಮತ ಕಾಣುತ್ತಿಲ್ಲ. ಬಹುಶಃ ಕ್ರಿ.ಪೂ.2-3 ನೇ ಶತಮಾನದಲ್ಲಿ ರಚನೆಯಾಗಿದ್ದಿರಬಹುದು ಎನ್ನಲಾಗಿದೆ.

ಮೂಲ ಗ್ರಂಥವು ಸಂಸ್ಕೃತ ಪದ್ಯ ರೂಪದಲ್ಲಿದ್ದು ಅದನ್ನು 15 ಭಾಗಗಳಾಗಿ ವಿಂಗಡಿಸಲಾಗಿದೆ ಹಾಗೂ 150 ಅಧ್ಯಾಯಗಳು ಮತ್ತು 180 ಅಂಶಗಳು





ಚರ್ಚಿಸಲ್ಪಟ್ಟಿವೆ. ರಾಜ್ಯವೊಂದರ ಅಂಗಗಳಾಗಿರುವ ಪ್ರತಿಯೊಂದು ವಿಷಯದ ಬಗ್ಗೆಯೂ ಅರ್ಥಶಾಸ್ತ್ರ ಪ್ರಸ್ತಾಪ ಮಾಡುತ್ತದೆ. ಅರ್ಥಶಾಸ್ತ್ರದಲ್ಲಿ ಆರ್ಥಿಕ ಅಂಶಗಳ ಮತ್ತು ಯುದ್ಧದ ಒಳಗುಟ್ಟುಗಳ ಬಗ್ಗೆ ಮಾತ್ರಾ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ.

ಅರ್ಥಶಾಸ್ತ್ರದ 7–10 ಅಧ್ಯಾಯಗಳು ಯುದ್ಧದ ಬಗ್ಗೆ ಉಲ್ಲೇಖಿಸುತ್ತವೆ. ಕೌಟಿಲ್ಯ ಯುದ್ಧಗಳನ್ನು ಪ್ರಮುಖವಾಗಿ ಮುಕ್ತ ಯುದ್ಧ, ರಹಸ್ಯ ಯುದ್ಧ ಮತ್ತು ಮೌನ ಯುದ್ಧ ಎಂಬ ಮೂರು ಭಾಗಗಳಾಗಿ ವಿಂಗಡಿಸುತ್ತಾನೆ. ಯುದ್ಧಗಳಲ್ಲಿ ಧರ್ಮವಿಜಯ (ಸಾಮಾನ್ಯ ಯುದ್ಧ), ಲೋಭ ವಿಜಯ (ಆಸೆಯ ಯುದ್ಧ) ಮತ್ತು ಅಸುರ ವಿಜಯ (ರಕ್ಕಸನಂತಹ ಯುದ್ಧ) ಎಂಭ ಪ್ರಕಾರದ ಯುದ್ಧಗಳಿವೆ. ಚಂಗೇಸ್ ಖಾನನ ಆಕರಮಣ ಅಸುರ ವಿಜಯಕ್ಕೆ ಉತ್ತಮ ಉದಾಹರಣೆಯಾಗಿದೆ.

ಸಂಧಿ (ಶಾಂತಿ), ವಿಗ್ರಹ (ಯುದ್ಧ), ಆಸನ (ತಟಸ್ಥ), ಯಾನ (ಮುನ್ನಡೆ), ಸಂಸ್ರಯ (ಮೈತ್ರಿ) ಮತ್ತು ಯುದ್ಧದಿಂದ ಅಥವಾ ಹಾಗೆಯೇ ಶಾಂತಿ ಕಾಪಾಡುವ ಕ್ರಮಗಳು ರಾಜ್ಯಾಡಳಿತದ ಆರು ಮುಖ್ಯ ಮೂಲಾಧಾರಗಳು.

ರಾಜನಾದವನು ಕೋಟೆಗಳನ್ನು ನಿರ್ಮಿಸಬೇಕು, ಕಟ್ಟಡ–ರಸ್ತೆಗಳನ್ನು ನಿರ್ಮಿಸಬೇಕು ಮತ್ತು ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ರಾಜ್ಯದ ಉನ್ನತೀಕರಣಕ್ಕೆ ಮುಂದಾಗಬೇಕು. ನೆರೆಯ ರಾಜ್ಯಗಳೊಂದಿಗೆ ಶಾಂತಿ ಕಾಪಾಡಿಕೊಳ್ಳಬೇಕು.

ಯೋಗ್ಯನಾದ ರಾಜ

ಅರಸ ಆದರ್ಶಪ್ರಾಯನಾಗಿರಬೇಕು ಎನ್ನುವುದು ಕೌಟಿಲ್ಯನ ಹೇಳಿಕೆ. ದೇಶದ ಸಮಗ್ರತೆ ಮತ್ತು ಉನ್ನತಿ ರಾಜನ ಮೇಲೆ ಆಧರಿಸಿರುತ್ತದೆ. ಯಥಾ ರಾಜಾ ತಥಾ ಪ್ರಜಾ– ರಾಜನಿದ್ದಂತೆ ಪ್ರಜೆಗಳಿರುತ್ತಾರೆ. ಇಂತಹ ಹೇಳಿಕೆಗಳು ಸರ್ವಕಾಲಿಕ ಸತ್ಯಗಳಾಗಿದ್ದು ಜನನಾಯಕರು ಅವನ್ನು ಅನುಸರಿಸಬೇಕಾದ ಅಗತ್ಯ ಎದ್ದು ಕಾಣುತ್ತದೆ.

ರಾಜನಾದವನು ಬಹಳ ಚಟುವಟಿಕೆಯಿಂದ ಇರಬೇಕು. ಆತನು ಸೋಮಾರಿಯಾಗಿದ್ದರೆ ರಾಜ್ಯದ ಆಡಳಿತ ಹಿಡಿತಕ್ಕೆ ಬಾರದೇ ರಾಜ್ಯವು ಪರರ ಪಾಲಾಗುತ್ತದೆ. ರಾಜನು ತನ್ನ ಹಗಲು ಮತ್ತು ರಾತ್ರಿಗಳನ್ನು ತಲಾ 1.50 ಗಂಟೆಗಳಂತೆ ಎಂಟು ಭಾಗವಾಗಿ ವಿಂಗಡಿಸಿಕೊಳ್ಳಬೇಕು. ಈ ಅವಧಿಯನ್ನು



ನಾಲಿಕಾ ಎಂದು ಕರೆಯುತ್ತಾನೆ ಕೌಟಿಲ್ಯ. ಮೊದಲ ಅವಧಿಯಲ್ಲಿ ರಾಜನು ಕಾವಲಿನವನ ನೇಮಕ ಮಾಡಬೇಕು ಮತ್ತು ನಂತರ ಖರ್ಚು–ವೆಚ್ಚಗಳ ಲೆಕ್ಕ ಮಾಡಲು ಗುಮಾಸ್ತನಿಗೆ ತಿಳಿಸಬೇಕು. ಎರಡನೇ ಅವಧಿಯಲ್ಲಿ ಪ್ರಜೆಗಳ ಕುಂದು–ಕೊರತೆಗಳ ಬಗ್ಗೆ ಖುದ್ದಾಗಿ ತಿಳಿಯಬೇಕು. ಮೂರನೇ ಅವಧಿಯಲ್ಲಿ ಸ್ನಾನ, ಜಪ–ತಪಗಳೊಂದಿಗೆ ಏನನ್ನಾದರೂ ಓದಬೇಕು. ನಾಲ್ಕನೇ ಅವಧಿಯಲ್ಲಿ ಕಂದಾಯದ ಜಮಾ ಪಡೆದುಕೊಳ್ಳಬೇಕು ಮತ್ತು ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಬೇಕು. ಐದನೇ ಅವಧಿಯಲ್ಲಿ ತನ್ನ ಮಂತ್ರಿಗಳಿಗೆ ಲಿಖಿತ ಸೂಚನೆಗಳನ್ನು – ಪತ್ರಸಂಪ್ರೇಶನೇನ– ನೀಡಬೇಕು ಮತ್ತು ಗೂಢಚಾರಿಗಳಿಂದ ರಹಸ್ಯ ಮಾಹಿತಿ ಪಡೆಯಬೇಕು, ಆರನೇ ಅವಧಿಯಲ್ಲಿ ವಿನೋದ–ವಿಹಾರಗಳಲ್ಲಿ ತೊಡಗಬಹುದು, ಏಳನೆ ಅವಧಿಯಲ್ಲಿ ತನ್ನ ಸೈನ್ಯದ ಗಜ, ಅಶ್ವ, ರಥಗಳ ಮತ್ತು ಸೈನಿಕರ ಪರಿಶೀಲನೆ ನಡೆಸಬೇಕು ಮತ್ತು ಎಂಟನೇ ಅವಧಿಯಲ್ಲಿ ತನ್ನ ಸೇನಾನಾಯಕರೊಂದಿಗೆ ಸೈನ್ಯದ ಸಿದ್ಧತೆಗಳ ಬಗ್ಗೆ ಚರ್ಚಿಸಬೇಕು. ದಿನದ ಅಂತ್ಯದಲ್ಲಿ (ಸಂಧ್ಯಾ) ಪ್ರಾರ್ಥನೆ ಮಾಡಬೇಕು.

ದಿನದ ಎರಡನೇ ಭಾಗದ ಮೊದಲ ಅವಧಿಯಲ್ಲಿ ರಹಸ್ಯ ದೂತಾವಾಸಗಳ ವಿವರ ಪಡೆಯಬೇಕು. ಎರಡನೇ ಅವಧಿಯಲ್ಲಿ ಸ್ನಾನ ಮತ್ತು ಭೋಜನ ಮಾಡಬೇಕು. ಮೂರನೇ ಅವಧಿಯಲ್ಲಿ ವಿಶ್ರಾಂತಿಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾ ತಮಟೆಯ ಸದ್ದಿನ ನಡುವೆ ತನ್ನ ಶಯನಗೃಹ ಪ್ರವೇಶಿಸಬೇಕು. ನಾಲ್ಕು ಮತ್ತು ಐದನೇ ಅವಧಿಯನ್ನು ನಿದ್ರೆಗೆ ಉಪಯೋಗಿಸಿಕೊಳ್ಳಬೇಕು. ಆರನೇ ಅವಧಿಗೆ ತಮಟೆ ಸದ್ದು ಕೇಳುತ್ತಾ ಎಚ್ಚರಗೊಳ್ಳಬೇಕು. ನಂತರ ತನ್ನ ಮುಂದಿನ ಕಾರ್ಯಗಳ ಬಗ್ಗೆ ಆಲೋಚಿಸಬೇಕು. ಏಳನೇ ಅವಧಿಯಲ್ಲಿ ಗೂಢಚಾರರನ್ನು ಕೆಲವು ಕಡೆ ನೇಮಿಸಬೇಕು ಮತ್ತು ಆಡಳಿತದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಬೇಕು. ಎಂಟನೇ ಹಾಗೂ ಕೊನೆಯ ಭಾಗದಲ್ಲಿ ಗುರುಗಳು ಮತ್ತು ದೇವತೆಗಳಿಂದ ಆಶೀರ್ವಾದ ಪಡೆಯಬೇಕು. ನಂತರ ತನ್ನ ವೈದ್ಯನ, ಅಡುಗೆಯವನ ಮತ್ತು ಜ್ಯೋತಿಷಿಯ ಭೇಟಿ ಮಾಡಬೇಕು. ಗೋವಿಗೆ ಪ್ರದಕ್ಷಿಣೆ ಹಾಕಿ ನಮಸ್ಕರಿಸಿ ಎಂಟನೆ ಅವಧಿಯನ್ನು ಮುಕ್ತಾಯಗೊಳಿಸತಕ್ಕದ್ದು. ನಂತರ ತನ್ನ ಆಸ್ಥಾನವನ್ನು ಪ್ರವೇಶ ಮಾಡಬೇಕು. ರಾಜನು ತನ್ನ ಭೇಟಿಗಾಗಿ ಬಂದ ಯಾರನ್ನೇ ಕಾಯಿಸಬಾರದು ಹಾಗು ಆತನು ತನ್ನ ಪ್ರಜೆಗಳಿಗೆ ದುರ್ಲಭನಾಗಬಾರದು.



ಯೋಗ್ಯನಾದ ರಾಜ ಈ ಸೂಚನೆಗಳಂತೆ ಕಾರ್ಯನಿರ್ವಹಿಸಬೇಕಾದ ನಿರ್ಬಂಧವಿತ್ತು. ಇದು ಕೇವಲ ರಾಜರಿಗೆ ಮಾತ್ರವಲ್ಲದೇ ಇಂದಿನ ಆಡಳಿತಗಾರರು, ನೇತಾರರುಗಳಿಗೆ ಅವಶ್ಯಕವಾಗಿದೆ. ಇಂದು ಇದೇ ಪರಿಕಲ್ಪನೆಯನ್ನು ಟೈಂ ಮ್ಯಾನೇಜ್‌ಮೆಂಟ್ ಎಂಬ ಹೆಸರಿನಲ್ಲಿ ವಿದೇಶದಿಂದ ಆಮದು ಮಾಡಿಕೊಂಡು ಕಲಿಯುತ್ತಿದ್ದೇವೆ.

ಕೋಟೆಯ ನಿರ್ಮಾಣ ರಹಸ್ಯ

ಕೋಟೆಯ ನಿರ್ಮಾಣಕ್ಕೆ ಪಕ್ಕ ಯೋಜನೆ ಇರಬೇಕು. ಕೋಟೆಯೊಳಗೆ ಮೂರು ರಾಜಬೀದಿಗಳಿರಬೇಕು. ಮೂರು ರಸ್ತೆಗಳು ಪಶ್ಚಿಮದಿಂದ ಪೂರ್ವಕ್ಕೂ ಮೂರು ರಸ್ತೆಗಳು ದಕ್ಷಿಣ ದಿಕ್ಕಿನಿಂದ ಉತ್ತರಕ್ಕೆ ಸಾಗಬೇಕು. ಕೋಟೆಗೆ ಒಟ್ಟು ಹನ್ನೆರಡು ದ್ವಾರಗಳಿರಬೇಕು ಮತ್ತು ನೆಲ ಹಾಗು ಜಲದ ರಹಸ್ಯ ಮಾರ್ಗವಿರಬೇಕು.ರಥ ಬೀದಿಗಳು, ರಾಜಬೀದಿಗಳು 4 ದಂಡ ಅಂದರೆ 24 ಅಡಿ ವಿಸ್ತಾರವಾಗಿರಬೇಕು. ಮನುಷ್ಯರು, ರಥಗಳು, ಓಡಾಡುವ ಪ್ರತ್ಯೇಕ ಹಾದಿಗಳಿರಬೇಕು. ನಾಲ್ಕು ವರ್ಣಗಳ ಜನರ ಪ್ರತ್ಯೇಕ ಕಾಲೋನಿಗಳಿರಬೇಕು.

ಖಜಾನೆಯು ದಕ್ಷಿಣದಿಂದ ಪೂರ್ವಕ್ಕೆ ಹೋಗುವ ರಸ್ತೆಯಲ್ಲಿರಬೇಕು. ಮದ್ದಿನ ಮನೆಯು ದಕ್ಷಿಣದಿಂದ ಪಶ್ಚಿಮ ರಸ್ತೆಯಲ್ಲಿರಬೇಕು. ಪಶಿಮದಿಂದ ದಕ್ಷಿಣದ ರಸ್ತೆಯಲ್ಲಿ ಒಂಟೆ-ಕತ್ತೆಗಳ ಲಾಯವಿರಬೇಕು. ಪಶ್ಚಿಮದಿಂದ ಉತ್ತರದ ರಸ್ತೆಯಲ್ಲಿ ರಥಗಳ ನಿಲುಗಡೆ ಇರಬೇಕು. ಪಶ್ಚಿಮಕ್ಕೆ ಕಲಾಕಾರರ, ಕರಕುಶಲ ಕೆಲಸಗಾರರ, ಶೂದ್ರರ ಮನೆಗಳಿರಬೇಕು. ಉತ್ತರದಿಂದ ಪಶ್ಚಿಮಕ್ಕೆ ಅಂಗಡಿ-ಮುಂಗಟ್ಟುಗಳು ಮತ್ತು ಆಸ್ಪತ್ರೆಗಳಿರಬೇಕು. ಉತ್ತರಕ್ಕೆ ವಿದ್ಯಾದೇವತೆಯ ದೇಗುಲ, ಕಮ್ಮಾರರ, ಕರಕುಶಲಿಗರ ಮತ್ತು ಬ್ರಾಹ್ಮಣರ ಮನೆಗಳಿರಬೇಕು.

ನಗರದ ಕೇಂದ್ರದ ಭಾಗದಲ್ಲಿ ದೇಗುಲಗಳಿರಬೇಕು. ಮದಿರಾಗೃಹ ನಗರದ ಕೇಂದ್ರದಲ್ಲಿರಬೇಕು. ನಗರದ ಮೂಲೆಗಳಲ್ಲಿ ದೇವಾಲಯಗಳಿರಬೇಕು. ನಗರದ ಉತ್ತರ ಅಥವಾ ಪೂರ್ವಕ್ಕೆ ರುದ್ರಭೂಮಿ ಇರಬೇಕು. ಮೇಲ್ವರ್ಗದವರ ರುದ್ರಭೂಮಿಯು ದಕ್ಷಿಣದಲ್ಲಿರಬೇಕು.

ಪ್ರತೀ ಹತ್ತು ಮನೆಗಳಿಗೊಂದರಂತೆ ನೀರಿನ ಬಾವಿಗಳಿರಬೇಕು. ಈ ನಗರ ಯೋಜನಾ ನಿಯಮಗಳನ್ನು ಪಾಲಿಸದಿದ್ದವರಿಗೆ ದಂಡ ಹಾಕಬೇಕು.



ಶಸ್ತ್ರಾಸ್ತ್ರ ಸಂರಕ್ಷಣೆ

ಮದ್ದಿನ ಮನೆಯ ಉಸ್ತುವಾರಿಗೆ ಯೋಗ್ಯರನ್ನು ಆರಿಸಬೇಕು. ಆತ ಸದಾ ಮದ್ದು-ಗುಂಡುಗಳು ಹಾಳಾಗದಂತೆ ಉಸ್ತುವಾರಿ ಮಾಡಬೇಕು.

ಯುದ್ಧದಲ್ಲಿ ಪಾಂಚಾಲಿಕ, ದೇವದಂಡ, ಸೂಕರಿಕಾ, ಮುಸಲ, ಹಸ್ತಿವಾರಕ, ಯಶ್ತಿ, ತಾಲವೃಂತ, ಮುದ್ಗರ, ಗದಾ, ಸ್ಪ್ರಿಕ್‌ತಲ, ಕುದ್ದಾಲ, ಆಸ್ಫಾತಿಮಾ, ಔದ್ಗತಿಮಾ, ಶತಾಗ್ನಿ, ತ್ರಿಶೂಲ ಮತ್ತು ಚಕ್ರ ಒಂದೆಡೆ ಸ್ಥಿರವಾಗಿ ನಿಲ್ಲಿಸಬೇಕಾದ ಯಂತ್ರಗಳು.

ಶಕ್ತಿ, ಪ್ರಾಶ, ಕುಂತ, ಹಾತಕ, ಭಿಂದಿವಾಲ, ಶೂಲ, ತೋಮರ, ವರಾದಕರ್ಣ, ಕನಾಯ, ಕರ್ಪನ, ತ್ರಾಸಿಕಾ ಮುಂತಾದ ಆಯುಧಗಳು ನೇಗಿಲಿನಂತಹ ತುದಿಗಳನ್ನು ಹೊಂದಿದ ಹಲಮುಖಾನಿ ಆಯುಧಗಳು.

ಬಿಲ್ಲಿನ ತಯಾರಿ

ಬಿಲ್ಲನ್ನು ತಾಲ, ಚಪ್ರ, ದಾರು ಮರದಿಂದ ಮತ್ತು ಶೃಂಗ (ಕೊಂಬು) ಮರದಿಂದ ಮಾಡಲಾಗುತ್ತಿತ್ತು. ಇವನ್ನು ಕ್ರಮವಾಗಿ ಕಾರ್ಮುಖ, ಕೋದಂಡ, ದ್ರುನ ಮತ್ತು ಧನುಸ್ ಎಂದು ಕರೆಯಲಾಗುತ್ತಿತ್ತು. ಬಿಲ್ಲಿನ ದಾರವನ್ನು ಮೂರ್ವ, ಅರ್ಕ, ಗವೇಧು, ವೇಣು ಮತ್ತು ಸ್ನಾಯು ಎಂಬ ವಸ್ತುವಿನಿಂದ ಮಾಡಲಾಗುತ್ತಿತ್ತು.

ವೇಣು, ಸಾರ, ಶಲಾಕ, ದಂಡಾಸನ ಮತ್ತು ನಾರಾಚ ಬಿಲ್ಲಿನ ಹೆಸರುಗಳು. ಬಾಣದ ತುದಿಗಳನ್ನು ಕಬ್ಬಿಣ, ಮೂಳೆ ಅಥವಾ ಮರದ ತುದಿಯಿಂದ ಮಾಡಲಾಗುತ್ತಿತ್ತು.

ನಿಸ್ತ್ರಿಂಸ, ಮಂಡಲಾಗ್ರ ಮತ್ತು ಅಸಿಯಸ್ತಿ ಎಂಬುವು ಖಡ್ಗದ ಹೆಸರುಗಳು. ಇವುಗಳ ಹಿಡಿಕೆಯನ್ನು ಘೇಂಡಾಮೃಗದ ಕೊಂಬು, ದಂತ, ಮರ ಮತ್ತು ಬೊಂಬಿನ ಬೇರಿನಿಂದ ಮಾಡಲಾಗುತ್ತಿತ್ತು.

ಪರಶು, ಕುಠಾರ, ಪತ್ತಸ, ಖನಿತ್ರ, ಕುದ್ದಾಲ, ಚಕ್ರ ಮತ್ತು ಕಾಂಡಚ್ಛೇದನ ಹರಿತವಾದ ಆಯುಧಗಳು.

ಯಂತ್ರಪಾಶಾಣ, ಗೋಶ್ಪನಪಾಶಾಣ, ಮುಷ್ಟಿಪಾಶಾಣ, ರೋಚನಿ ಮುಂತಾದವುಗಳು ಇತರ ಆಯುಧಗಳು.

ಲೋಹಜಾಲಿಕ, ಪತ್ತ, ಕವಚ ಮತ್ತು ಸೂತ್ರಕ ದೇಹದ ಕವಚಗಳು. ಹಾಗೆಯೇ ಶಿರಸ್ತ್ರಾಣ, ಕಂಠತ್ರಾಣ, ಕೂರ್ಪಾಶ (ಸೊಂಟದ ರಕ್ಷಣೆಗೆ ಕವಚ), ಕಂಚುಕ



(ಮಡಿಯ ಕವಚ), ವಾರವಾನ (ಉದ್ದ ನಿಲುವಂಗಿ), ಪತ್ತ (ನಿಲುವಂಗಿ) ಮತ್ತು ನಾಗೋದಾರಿಕಾ (ಕೈಗವಸು) ಮುಂತಾದುವುಗಳು ದೇಹದ ರಕ್ಷಣೆಗೆ ಬಳಸುವಂತಹವುಗಳು.

ವೇತಿ, ಚರ್ಮ, ಹಸ್ತಿಕರ್ಣ, ತಾಲಮೂಲ, ಧರ್ಮಾನಿಕ, ಕವಾಟ, ಕಿತಿಕಾ, ಅಪ್ರತಿಹಾತ ಮತ್ತು ವಲಾಹಕಾಂಟ ಮುಂತಾದುವುಗಳು ಸ್ವಯಂರಕ್ಷಣೆಗಾಗಿ ಇರುವ ಆವರಣಾನಿ ಎಂದು ಕರೆಯಲಾಗುವ ಆಯುಧಗಳು.

ಎರಡು ಪ್ರಬಲ ರಾಷ್ಟ್ರಗಳ ಮಧ್ಯೆ ಇರುವ ರಾಜ್ಯದ ರಾಜನು ಯಾರೋ ಪ್ರಬಲರೋ ಅವರೊಂದಿಗೆ ಇಲ್ಲವೇ ಯಾರು ನಂಬಿಕೆ ಅರ್ಹನೋ ಆತನೊಂದಿಗೆ ರಕ್ಷಣೆಯನ್ನು ಕೇಳಬೇಕು. ಶಾಂತಿ ಸ್ಥಾಪನೆಗೆ ಹಲವಾರು ಹಾದಿಗಳಿವೆ. ಸ್ತ್ರೀಯೊಬ್ಬಳನ್ನು ಒತ್ತೆಯಾಳಾಗಿ ನೀಡುವುದು, ಪರಿಕ್ರಯ (ಹಣ ಕೊಟ್ಟು ಶಾಂತಿ ಸ್ಥಾಪನೆ), ಸುವರ್ಣಸಂಧಿ (ಕಂತುಗಳಲ್ಲಿ ಹಣ ಕೊಡುವುದು) ಇತ್ಯಾದಿ.

ಸಮಬಲವುಳ್ಳ ಒಬ್ಬ ರಾಜನ ಜೊತೆಗೆ ಸೇರುವುದಕ್ಕಿಂತಾ ಕಡಮೆ ಬಲವಿರುವ ಇಬ್ಬರು ಅರಸರೊಂದಿಗೆ ಸೇರುವುದು ಒಳ್ಳೆಯದು. ದುಷ್ಟ ಅರಸನ ವಿರುದ್ಧ ಯುದ್ಧ ಮಾಡಬೇಕಾದಾಗ ಹಿಂಜರಿಯಬಾರದು. ಏಕೆಂದರೆ ದುಷ್ಟನಿಗೆ ತನ್ನ ಪ್ರಜೆಗಳ ಮತ್ತು ಅಧಿಕಾರವರ್ಗದವರ ಬೆಂಬಲ ಇರುವುದಿಲ್ಲ. ಅವರೆಲ್ಲಾ ಆತನ ಸಹಾಯಕ್ಕೆ ನಿಲ್ಲುವುದಿಲ್ಲ. ಆದುದರಿಂದ ಅರಸನಾದವನು ಇಂತಹಾ ಒಳ ವಿರೋಧಗಳನ್ನು ಕಟ್ಟಿಕೊಳ್ಳಬಾರದು. ಯಾವಾಗಲೂ ಹೆಚ್ಚು ಚಿನ್ನವನ್ನು ಹೊಂದಿರುವ ರಾಜನಿಗಿಂತಾ ಹೆಚ್ಚು ಜನರಿರುವ ರಾಜ್ಯದ ರಾಜನ ಸ್ನೇಹದಿಂದ ಉಪಯೋಗವಿಲ್ಲ. ಹೆಚ್ಚು ಚಿನ್ನವನ್ನು ಹೊಂದಿರುವ ರಾಜ ಸೈನಿಕರನ್ನು ವಸ್ತುಗಳನ್ನು ಬೇಕಾದಾಗ ಕೊಳ್ಳುವ ಸಾಮರ್ಥ್ಯ ಹೊಂದಿರುತ್ತಾನೆ.

ನದಿಯ ನಡುವೆ ತನ್ನ ಕೋಟೆಯನ್ನು ಹೊಂದಿರುವ ಅರಸ ಹಾಗೂ ಬೆಟ್ಟಗಳ ಕಣಿವೆಯಲ್ಲಿ ಕೋಟೆಯನ್ನು ಹೊಂದಿರುವ ಅರಸರಲ್ಲಿ ಯಾರು ಹೆಚ್ಚು ಬಲಶಾಲಿ ಎನ್ನುವ ಪ್ರಶ್ನೆಗೆ ಕೌಟಿಲ್ಯನ ಉತ್ತರ ವಿಶಿಷ್ಟವಾಗಿದೆ. ಆತನ ಪ್ರಕಾರ ನದಿಯ ನಡುವೆ ಕೋಟೆಯನ್ನು ಹೊಂದಿದ್ದರೆ ಆನೆಗಳ ಮೇಲೆ ಸೇತುವೆ ನಿರ್ಮಿಸಿ, ದೋಣಿಗಳನ್ನು ಬಳಸಿ ಕೋಟೆಯನ್ನು ತಲುಪಬಹುದು. ಬೆಟ್ಟಗಳ ಕಣಿವೆಯಲ್ಲಿರುವ ಕೋಟೆಯು ರಹಸ್ಯ ಹಾಗೂ ಅಪಾಯಕಾರಿ ಸ್ಥಳಗಳನ್ನು ಹೊಂದಿರುತ್ತದೆ. ಇಂತಹ ಅರಸನ ಮೇಲೆ ಯುದ್ಧ ಮಾಡುವುದು ಕಷ್ಟ.



ಭಾರತದ ಯುದ್ಧ ನೀತಿಗಳು ಧರ್ಮದ ತಳಹದಿಯ ಮೇಲೆ ನಿಂತಿದ್ದವು. ಯುದ್ಧ ಮಾಡುವಾಗ ಮೋಸ ಮಾಡಬಾರದು, ಕುತಂತ್ರ ಮಾಡಬಾರದು, ವೀರಾವೇಶವನ್ನು ಮೆರೆಯಬೇಕು, ಯುದ್ಧವನ್ನು ಶಂಖನಾದದ ನಂತರವೇ ಆರಂಭಿಸಬೇಕು, ಕತ್ತಲಾದ ನಂತರ ಯುದ್ಧ ಮಾಡಬಾರದು, ಮಲಗಿದವರ ಮೇಲೆ ಆಕ್ರಮಣ ಮಾಡಬಾರದು, ಹಿಂದಿನಿಂದ ಇರಿದು ಕೊಲ್ಲಬಾರದು ಇತ್ಯಾದಿಗಳು ಭಾರತೀಯ ಯುದ್ಧದ ಮೂಲಸತ್ವಗಳು.

ಕೌಟಿಲ್ಯ ತನ್ನ ಯುದ್ಧ ತಂತ್ರದಲ್ಲಿ ನಾಲ್ಕು ಉಪಾಯಗಳ ಬಗ್ಗೆ ತಿಳಿಸುತ್ತಾನೆ. ಸಾಮ–ದಾನ–ಭೇದ ಮತ್ತು ದಂಡ ನಾಲಕನ್ನು ಒಂದರ ನಂತರ ಒಂದರ ಹಾಗೆ ಪ್ರಯೋಗಿಸಿ ಅಂತಿಮ ನಿರ್ಧಾರಕ್ಕೆ ಬರಬೇಕು.

ಏಳು ಪ್ರಾಕೃತ್ ಅಥವಾ ಸಂವಿಧಾನಾತ್ಮಕ ಅಂಶಗಳು ವಿಧಿಸುವ ಅಧಿಕಾರವನ್ನು ಪಾಲಿಸಬೇಕು. ಅವುಗಳೆಂದರೆ ಸ್ವಾಮಿನ್ (ಅರಸ), ಅಮಾತ್ಯ (ಮಂತ್ರಿ), ಜನಪದ / ರಾಷ್ಟ್ರ (ಜಲ–ನೆಲ ಮುಂತಾದ ಕ್ಷೇತ್ರ), ದುರ್ಗ / ಪುರ (ಕೋಟೆ), ಕೋಶ (ಹಣಕಾಸು), ದಂಡ/ ಬಲ (ಸೈನ್ಯ) ಮತ್ತು ಮಿತ್ರ (ಸ್ನೇಹಿತ).

ಆರು ಸದ್ಗುಣಗಳು (ಮಂಡಲ)ವಿದೇಶ ವ್ಯವಹಾರಗಳಲ್ಲಿ ಪಾಲಿಸಲ್ಪಡಬೇಕು. ಸಂಧಿ (ಒಪ್ಪಂದ), ವಿಗ್ರಹ (ಹಗೆತನದ ನಿಯಮ), ಆಸನ (ತಟಸ್ಥ ನೀತಿ), ಯಾನ (ಪಡೆಗಳ ಚಲನೆ), ಸಂಸರ್ಯ (ಆಶ್ರಯ ಪಡೆಯುವುದು) ಮತ್ತು ದ್ವೈಧಿಭಾವ (ಒಬ್ಬರೊಂದಿಗೆ ಸಂಧಿ ಮತ್ತೊಬ್ಬರೊಂದಿಗೆ ವಿಗ್ರಹ) ನೀತಿಗಳು ಗಮನದಲ್ಲಿರಬೇಕು.

ಕೌಟಿಲ್ಯನ ರಾಜಮಂಡಲ ಎಂಬ ನೀತಿಯು ಸ್ವಲ್ಪ ಗೊಂದಲ ಉಂಟು ಮಾಡಿದಂತೆ ಅನ್ನಿಸುತ್ತದೆ. ಕೌಟಿಲ್ಯ ಹೇಳುವಂತೆ ನೆರೆಯ ಹನ್ನೆರಡು ರಾಜರನ್ನು ಸೇರಿಸಿಕೊಂಡು ಮಂಡಲ ರಚನೆ ಮಾಡಿಕೊಳ್ಳಬೇಕು. ಅವುಗಳೆಂದರೆ ವಿಜುಗಿಶು (ಗೆಲ್ಲುವವನು), ಅರಿ (ಶತ್ರು), ಮಿತ್ರ (ವಿಜುಗಿಶುವಿನ ಗೆಳೆಯ), ಅರಿ ಮಿತ್ರ (ಶತ್ರುವಿನ ಗೆಳೆಯ), ಮಿತ್ರಮಿತ್ರ (ಗೆಳೆಯನ ಮಿತ್ರ), ಅರಿಮಿತ್ರಮಿತ್ರ(ಶತ್ರುವಿನ ಗೆಳೆಯನ ಗೆಳೆಯ), ಪಾರ್ಶ್ನಿಗ್ರಹ (ಗೆಲ್ಲುವವನಿಂದ ದೂರವಿರುವಶತ್ರು), ಆಕ್ರಂದ (ಗೆಲ್ಲುವವನಿಂದ ದೂರವಿರುವ ಮಿತ್ರ), ಪಾರ್ಶ್ನಿಗ್ರಹಸಾರ (ಪಾರ್ಶ್ನಿಗ್ರಹನ ಗೆಳೆಯ), ಆಕ್ರಂದಸಾರ (ಆಕ್ರಂದನ ಗೆಳೆಯ), ಮಧ್ಯಮ (ಎರಡು ಪಂಗಡದೊಂದಿಗೆ ಸೇರದ ತಟಸ್ಥ) ಮತ್ತು ಉದಾಸೀನ (ಯುದ್ಧಾಸಕ್ತಿ ಇಲ್ಲದವ). ಇವುಗಳ ಕಾರಣದ ಬಗ್ಗೆ ಸ್ಪಷ್ಟತೆ ಇದ್ದಂತಿಲ್ಲ.



ಯುದ್ಧ ರಂಗದಲ್ಲಿ ಎಂತಹ ಜನರ ಮೇಲೆ ಶಸ್ತ್ರಗಳನ್ನೆತ್ತಬಾರದು ಎಂದು ಕೌಟಿಲ್ಯ ತನ ಗ್ರಂಥದ 13.4.52 ಶ್ಲೋಕದಲ್ಲಿ ತಿಳಿಸುತ್ತಾನೆ. ರಾಜ ಮತ್ತು ಸೈನಿಕರು ಪತಿತ (ಜೀವನದಲ್ಲಿ ಬಿದ್ದವರು), ಪರಾನ್ಮುಖ (ಬೆನ್ನು ತಿರುಗಿಸಿ ಓಡುವವರು), ಅಭಿಪನ್ನ (ಶರಣಾದವರು), ಮುಕ್ತಕೇಶ (ತಮ್ಮ ಕೂದಲನ್ನು ಶರಣಾಗತಿ ಸಂಕೇತವಾಗಿ ಕಟ್ಟದೇ ಬಿಟ್ಟವರು), ಮುಕ್ತಶಸ್ತ್ರ (ಶಸ್ತ್ರವನ್ನು ತೊರೆದವನು), ಭಯವಿರೂಪ (ಭಯದಿಂದ ಕಂಗೆಟ್ಟವನು), ಆಯುಧ್ಯಮನ (ಯುದ್ಧದಲ್ಲಿ ಪಾಲ್ಗೊಳ್ಳದವನು) ಮುಂತಾದವರ ಮೇಲೆ ಶಸ್ತ್ರ ಪ್ರಯೋಗ ಮಾಡಬಾರದು.

ಆಗ ಯುದ್ಧದಲ್ಲಿ ಬಾಣಗಳು (ಧನುರ್ವಿದ್ಯೆ) ಮತ್ತು ಕತ್ತಿಗಳು (ಕತ್ತೀವರಸೆ) ಮಾತ್ರಾ ಬಳಕೆಯಾಗುತ್ತಿದ್ದವು. ವರಾಹಮಿಹಿರನ ಬೃಹತ್‌ಸಂಹಿತೆಯಲ್ಲಿ, ಭೋಜ ಎಂಬಾತನ ಯುಕ್ತಿಕಲ್ಪತರು ಹಾಗೂ ಸಾರಂಗಧರ ಪದ್ಧತಿಯಲ್ಲಿ ಖಡ್ಗ ಪರೀಕ್ಷಾ (ಕತ್ತಿಗಳ ಪರೀಕ್ಷೆ) ಎಂಬ ಸುದೀರ್ಘ ಅಧ್ಯಾಯದಲ್ಲಿ ಲೋಹಾರ್ಣವ, ಖಡ್ಗಕೋಶ, ಲೋಹರತ್ನಾಕರ ಇತ್ಯಾದಿ ಅಂಶಗಳ ವಿವರಗಳಿವೆ.

ವೇದಗಳ ಕಾಲದ ಸಂಸ್ಕೃತ ಬರಹಗಳಲ್ಲಿ ಯುದ್ಧ ವಿಭಾಗಗಳ ಬಗ್ಗೆ ವಿವರಗಳು ದೊರೆಯುತ್ತವೆ. ಅಂದಿನ ಸೈನ್ಯದಲ್ಲಿ ಎರಡು ಪ್ರಮುಖ ಘಟಕಗಳು ಇದ್ದವು. ಮೊದಲನೆಯ ಕಾಲಾಳುಗಳು (ಪತ್ತಿ) ಮತ್ತು ಎರಡನೆಯದಾಗಿ ರಥಿಕರು (ರಥಿನ್). ವೇದಗಳ ಕಾಲದ ನಂತರ ಸೈನ್ಯಕ್ಕೆ ಕುದುರೆಗಳು ಮತ್ತು ಆನೆಗಳ ಸೇರ್ಪಡೆಯಾಯಿತು. (ಮೂಲ: ದ ಆರ್ಟ್ ಆಫ್ ವಾರ್ ಇನ್ ಏನ್ಶಿಯೆಂಟ್ ಇಂಡಿಯಾ– ಪಿ.ಸಿ.ಚಕ್ರವರ್ತಿ, 1941). ಮುಂದೆ ಯುದ್ಧಕ್ಕೆ ಚತುರಂಗಬಲದ ಪರಿಚಯವಾಯಿತು. ಆ ನಂತರ ಕೌಟಿಲ್ಯನ ಅರ್ಥಶಾಸ್ತ್ರದ ಪ್ರಕಾರ ಶಡಂಗ ಎಂಬ ಆರುಬಲದ ಸೈನ್ಯ ಅಸ್ತಿತ್ವಕ್ಕೆ ಬಂದಿತು. ಮೊದಲನೆಯದಾಗಿ ಕಾಲಾಳು (ಮೌಲ), ಎರಡನೆಯ ಬಾಡಿಗೆ ಸೈನಿಕರು (ಭ್ರತ), ಸೈನಿಕ ಸ್ತರಗಳು (ಶ್ರೇಣಿ), ಮಿತ್ರ ಪಂಗಡದ ಸೈನಿಕರು (ಸುಹೃದ್ ಬಲ), ಶತೃವಿನಿಂದ ವಶಕ್ಕೆ ಪಡೆದ ಸೈನ್ಯ (ದ್ವಿಸದ್ ಬಲ) ಮತ್ತು ಆದಿವಾಸಿ ಸೈನಿಕರು (ಅಟವಿ ಬಲ) ಸೇರಿಕೊಂಡವು.

ಮುಂದಿನ ಕಾಲಘಟ್ಟದಲ್ಲಿ ಸೈನ್ಯ ಸುಧಾರಿಸಲ್ಪಟ್ಟು ರಥಗಳ ಸೇರ್ಪಡೆಯಾಯಿತು. ಇದರಿಂದ ಕಾಲಾಳುಗಳ ಅನಾವಶ್ಯಕ ಪ್ರಾಣಾರ್ಪಣೆ ನಿಂತಿತು. ರಥಿಕ ಸುರಕ್ಷಿತವಾಗಿ ಒಮ್ಮೆಗೆ ಹಲವಾರು ಸೈನಿಕರೊಂದಿಗೆ ಯುದ್ಧ ಮಾಡಬಲ್ಲ ಚಾತುರ್ಯ ಪಡೆದ. ಅಶ್ವದಳದ ಸೇರ್ಪಡೆಯಿಂದ ಸೈನಿಕರ ಚಾತುರ್ಯ ಹೆಚ್ಚಿತು.



ಮುಂದೆ ಆನೆಗಳನ್ನು ಪಳಗಿಸಿ ಸರಕು ಸಾಗಣೆಗೆ ಮತ್ತು ಯುದ್ಧದ ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿತ್ತು. ಅವುಗಳಿಗೆ ಉಪಸ್ಥಾನ (ಡ್ರಿಲ್), ಸಂವರ್ತನ (ಮಲಗುವ–ಏಳುವ ಕ್ರಿಯೆ), ಸಂಯಾನ (ಹಿಂದೆ–ಮುಂದೆ, ಅಡ್ಡ ಚಲನೆ), ವಧಾವಧ (ಶತ್ರುಗಳನ್ನು ತುಳಿದು ಕೊಲ್ಲುವ ತರಬೇತಿ), ಹಸ್ತಿಯುದ್ಧ (ಬೇರೊಂದು ಆನೆಯೊಂದಿಗೆ ಯುದ್ಧ), ನಾಗರಾಯಣ (ಆಕ್ರಮಣ) ಮತ್ತು ಸಂಗ್ರಾಮಿಕ (ಯುದ್ಧ ಚಲನೆಗಳು) ಮುಂತಾದ ಕುಶಲ ಕಲೆಗಳಲ್ಲಿ ತರಬೇತಿ ನೀಡಲಾಗುತ್ತಿತ್ತು.

ಅರ್ಥಶಾಸ್ತ್ರದಲ್ಲಿ ನೌಕಾಪಡೆಯ ಬಗ್ಗೆ ಸಹಾ ಹೇಳಲಾಗಿದೆ. ಅಂದು ಮೌರ್ಯರ ಕಾಲದಲ್ಲಿ ನೌಕೆಗಳ ನೇತಾರನಾಗಿ ನಾವಾಧ್ಯಕ್ಷ ಎಂಬ ಅಧಿಕಾರಿ ಇರುತ್ತಿದ್ದ. ನೌಕಾಪಡೆಗಳು ಅಂದು ಬಹಳ ಉಪಯುಕ್ತವಾಗಿ ಕಾರ್ಯ ನಿರ್ವಹಿಸಿದ್ದವು.

ರಾಜನ ಆಡಳಿತದಲ್ಲಿ ಮತ್ತು ಯುದ್ಧದ ಸಮಯದಲ್ಲಿ ಮಹತ್ವದ ಪಾತ್ರ ವಾಹಿಸುತ್ತಿದ್ದುದು ಆತನ ಗುಪ್ತಚಾರ ಪಡೆ. ಗುಪ್ತಚಾರರಲ್ಲಿ ಎರಡು ವಿಧಗಳಿದ್ದವು. ಸಂಸ್ಥಾ (ಸ್ಥಳೀಯ ಮಾಹಿತಿದಾರ) ಮತ್ತು ಸಂಚಾರ (ಸದಾ ಓಡಾಡಿ ಮಾಹಿತಿ ಸಂಗ್ರಹಿಸುತ್ತಿದ್ದವ). ಇವರೊಂದಿಗೆ ಕಪಟಿಕ ಚಾತ್ರ (ಮೋಸದಲ್ಲಿ ಮಾಹಿತಿ ಸಂಗ್ರಹಿಸುತ್ತಿದ್ದ), ಉದಾಸ್ಥಿತ (ಏಕಾಂಗಿಯಾಗಿರುತ್ತಿದ್ದ ಗುಪ್ತಚಾರ), ವೈದೇಹಕ (ವ್ಯಾಪಾರಿ ವೇಷದಲ್ಲಿರುತ್ತಿದ್ದವ), ತಾಪಸ (ಸನ್ಯಾಸಿಯ ವೇಷದಲ್ಲಿರುತ್ತಿದ್ದವ) ಮುಂತಾದವರೆಲ್ಲಾ ಇರುತ್ತಿದ್ದರು.

ಸೈನ್ಯಾಡಳಿತ

ಸೈನಿಕರನ್ನು ಆಯ್ಕೆ ಮಾಡಿಕೊಳ್ಳುವ ವಿಧಾನ ಕೂಡಾ ಮಹತ್ವದ್ದಾಗಿತ್ತು. ಸೈನದಲ್ಲಿ ಹತ್ತು ಜನರ ಪಡೆಗೆ ದಶಾಧಿಪತಿ ಮತ್ತು ನೂರುಜನರ ಪಡೆಗೆ ಶತಾಧಿಪತಿ ನಾಯಕರಾಗಿರುತ್ತಿದ್ದರು. ಒಂದು ರಥ, ಒಂದು ಗಜ, ಮೂರು ಅಶ್ವ ಮತ್ತು ಐದು ಸೈನಿಕರಿರುತ್ತಿದ್ದ ಪಡೆಗೆ ಪತ್ತಿ ಎನ್ನಲಾಗುತ್ತಿತ್ತು. ಅಕ್ಷೋಹಿಣಿ ಸೈನ್ಯದ ಉನ್ನತ ಪಡೆಯಾಗಿದ್ದು ಅಲ್ಲಿ 21,870 ರಥಗಳು, 21,870 ಆನೆಗಳು, 65,610 ಅಶ್ವಗಳು ಮತ್ತು 1,09,350 ಕಾಲಾಳುಗಳಿರುತ್ತಿದ್ದರು. ರಾಜನ ಶಕ್ತಿ ಆತನಲ್ಲಿ ಎಷ್ಟು ಅಕ್ಷೋಹಿಣಿ ಸೈನ್ಯವಿದೆ ಎಂಬುದರ ಮೇಲೆ ನಿರ್ಧರಿಸಲ್ಪಡುತ್ತಿತ್ತು.

ಇವರಿಗೆ ವಾರ್ಷಿಕ ವೇತನವಾಗಿ ದೊರೆಯುತ್ತಿದ್ದ ಮೊತ್ತದ ಬಗ್ಗೆ ಸಹಾ ಅರ್ಥಶಾಸ್ತ್ರದಲ್ಲಿ ಮಾಹಿತಿ ದೊರೆಯುತ್ತದೆ. ಗಜಪಡೆಯ ಮಾಹುತನಿಗೆ ಮತ್ತು ಸೈನಿಕನಿಗೆ ವರ್ಷಕ್ಕೆ 500 ಪಣ ದೊರೆತರೆ ಸೈನ್ಯಾಧಿಕಾರಿಗೆ 48,000 ಪಣ ದೊರೆಯುತ್ತಿದ್ದವು.



ಹಣ ನೀಡದೆ ದುಡಿಸಿಕೊಳ್ಳುವ ಸೈನಿಕರಿಗೆ ಉತ್ಸಾಹ ಇರುವುದಿಲ್ಲ. ಖಾಯಿಲೆಯಿಂದ ನರಳುವ ಸೈನಿಕರು ಅಶಕ್ತರಾಗಿರುತ್ತಾರೆ. ಸೈನಿಕರನ್ನು ಬಹಳ ದೂರ ನಡೆಸಬಾರದು. ಇದರಿಂದ ಅವರಿಗೆ ಆಯಾಸವಾಗಿ ಯುದ್ಧದಲ್ಲಿ ಉತ್ಸಾಹವಿರುವುದಿಲ್ಲ. ಸೈನಿಕರಿಗೆ ತಮ್ಮ ಮನೆಯ ಮೇಲೆ, ಪ್ರೇಯಸಿಯ ಮೇಲೆ ಮೋಹವಿರಬಾರದು. ಸೈನ್ಯದಲ್ಲಿ ದ್ರೋಹಿಗಳಿರಬಾರದು. ತಮ್ಮ ಶತ್ರುಗಳಿಗೆ ಸೈನಿಕರು ಹೆದರಬಾರದು. ತಮ್ಮ ನಾಯಕನನ್ನು, ಆತನೊಂದಿಗೆ ಸಂಪರ್ಕವನ್ನು ಕಳೆದುಕೊಂಡ ಸೈನಿಕರು ಎದೆಗುಂದುತ್ತಾರೆ.

ಭಾರತೀಯ ಯುದ್ಧನೀತಿ

ಯುದ್ಧನೀತಿಗಳಲ್ಲಿ ಪ್ರಮುಖವಾದುದು ಶತ್ರು ಸೈನ್ಯವನ್ನು ಹಿಂದಿನಿಂದ ದಾಳಿ ಮಾಡಿ ಕಂಗೆಡಿಸುವುದು ಮತ್ತು ತಾವಾಗಿಯೇ ಮೊದಲು ಯುದ್ಧ ಆರಂಭಿಸಲು ಉತ್ತೇಜಿಸುವುದು. ಇದರಿಂದ ಶತ್ರುವಿನ ಬಲದ ಪೂರ್ಣ ಅರಿವಾಗುತ್ತದೆ ಎನ್ನುವುದು ಕೌಟಿಲ್ಯನ ಅಭಿಮತ. ಇಂತಹದೇ ಅಭಿಪ್ರಾಯವನ್ನು ಸುಂಟ್ಜು ಕೂಡಾ ವ್ಯಕ್ತಪಡಿಸುತ್ತಾನೆ.

ದಾಳಿಗೆ ಹೊರಡುವ ಮುನ್ನ ಯುದ್ಧರಂಗದ ಸುತ್ತ–ಮುತ್ತಾ ಸೈನಿಕರಿಗೆ ಆಹಾರ ಪದಾರ್ಥಗಳು ದೊರೆಯುತ್ತವೆಯೆ ಎಂಬುದನ್ನು ಪರಿಶೀಲಿಸಬೇಕು. ಬೇಸಗೆಯಲ್ಲಿ ಯುದ್ಧ ಮಾಡಹೊರಟರೆ ನೀರು–ಆಹಾರದ ಸಮಸ್ಯೆ ಇರುತ್ತದೆ. ಆದುದರಿಂದ ಕೌಮುದ ಮಾಸದಲ್ಲಿ (ಅಕ್ಟೋಬರ್–ನವೆಂಬರ್) ಯುದ್ಧ ಮಾಡುವುದು ಸೂಕ್ತ. (ಕುರುಕ್ಷೇತ್ರ ಯುದ್ಧ ನಡೆದದ್ದು ಕೌಮುದಮಾಸದಲ್ಲೆ.) ಶತ್ರುವಿನ ರಾಜ್ಯದಲ್ಲಿ ಬೆಳೆದಿರುವ ಹಿಂಗಾರು ಅಥವಾ ಮುಂಗಾರು ಫಸಲನ್ನು ನಾಶಮಾಡಿದರೆ ಅವರು ಎದೆಗುಂದುತ್ತಾರೆ. ಅದಕ್ಕೆ ಮಾರ್ಗಶಿರ ಮಾಸದಲ್ಲಿ ಅಥವಾ ಚೈತ್ರಮಾಸದಲ್ಲಿ ಯುದ್ಧ ಆರಂಭಿಸಬೇಕು.

ನೈಮಿತ್ತಿಕ (ಜ್ಯೋತಿಷಿ) ರೊಡನೆ ಕುಳಿತು ಯುದ್ಧಾರಂಭಕ್ಕೆ ಒಳ್ಳೆಯ ಮುಹೂರ್ತ ಇಟ್ಟುಕೊಳ್ಳುವುದು ಒಳ್ಳೆಯದು ಎನ್ನುತ್ತಾನೆ ಕೌಟಿಲ್ಯ. ಯುದ್ಧಕ್ಕೆ ಮುನ್ನಾ ಅರಸನು ಕೆಲವು ಧಾರ್ಮಿಕ ಕ್ರಿಯೆಗಳನ್ನು ಮಾಡಬೇಕಾಗುತ್ತದೆ. ಮೊದಲನೆಯದಾಗಿ ಯಜ್ಞ ಮಾಡಿ ಅಗ್ನಿಗೆ ಬಲಿ ನೀಡಬೇಕು, ದೇವತೆಗಳನ್ನು ಮತ್ತು ದ್ವಿಜರನ್ನು ಪೂಜಿಸಿ ಆಶೀರ್ವಾದ ಪಡೆದು ಅವರಿಗೆ ಗೋದಾನ, ಒಡವೆ–ವಸ್ತ್ರದಾನ ಮಾಡಬೇಕು. ನಂತರ ಉಪವಾಸ ಮಾಡಿ ಯುದ್ಧಾಸ್ತ್ರಗಳೊಡನೆ ತನ್ನ ರಥದಲ್ಲಿ ಮಲಗಬೇಕು.



ಯುದ್ಧಕ್ಕೆ ಹೊರಟ ಸೈನ್ಯದ ಮುಂದೆ ಕೂಲಿಕಾರ್ಮಿಕರು (ಪ್ರಶಾಸ್ತ) ಹೊರಟು ಸೈನಕ್ಕೆ ಹಾದಿಯನ್ನು ಸುಗಮಗೊಳಿಸಬೇಕು. ನಂತರ ಸೈನ್ಯದ ನಾಯಕ ಇರುತ್ತಾನೆ. ಅರಸನು ಯಾವಾಗಲೂ ತನ್ನ ಸೈನ್ಯದ ಮಧ್ಯಭಾಗದಲ್ಲಿ ಬರುತ್ತಿರಬೇಕು (ಮಧ್ಯೇ ಕಳತ್ರಂ ಸ್ವಾಮೀಚ..). ಮುಖ್ಯ ಸೈನ್ಯಾಧಿಕಾರಿ ಹಿಂದೆ ಬರುತ್ತಿರುವ ದುರ್ಬಲ ಪಡೆಯನ್ನು ಆಗಾಗ ಉತ್ತೇಜಿಸುತ್ತಾ ಜೊತೆಗೆ ಸಾಗಬೇಕು.

ಅದರ ಹಿಂದೆ ಗಜಪಡೆ ಮತ್ತು ಸರಕು ಸಾಗಣೆಯ ಕುದುರೆಗಳು, ಎತ್ತಿನಗಾಡಿಗಳ ತಂಡ ಇರುತ್ತದೆ. ಸೈನದ ಅವಶ್ಯಕತೆಗಳಾದ ಆಹಾರ, ಪ್ರಾಣಿಗಳಿಗೆ ಹುಲ್ಲು–ಸೊಪ್ಪು, ಶಸ್ತ್ರಗಳ ರಿಪೇರಿಗೆ ಕಮ್ಮಾರರು, ಚಮ್ಮಾರರು ಮುಂತಾದ ಕುಶಲಕರ್ಮಿಗಳು ಕೊನೆಯಲ್ಲಿ ಇರುತ್ತಾರೆ. ಹಿಂದೆ ಯುದ್ಧಕ್ಕೆ ಹೊರಟ ಸೈನಿಕರ ಸಂಖ್ಯೆಯಷ್ಟೇ ಸಹಾಯಕರು ಇರುತ್ತಿದ್ದರು. ಒತ್ತೆಯಾಳುಗಳು ಕೂಡಾ ವಸ್ತುಗಳನ್ನು ಹೊತ್ತು ಬರುತ್ತಿದ್ದರು ಎಂದು ಮಹಾಕ್ಷತ್ರಪ ರುದ್ರಮನ ಜುನಾಗಢದ ಶಾಸನ ವಿವರಿಸುತ್ತದೆ. ಇದನ್ನೇ ತುಸು ಬದಲಾವಣೆಗಳೊಂಡನೆ ಕಾಮಾಂಡಕೀಯದಲ್ಲಿ ಹೇಳಲಾಗಿದೆ.

ಪಾಂಡವ ಸೈನ್ಯ ಕೂಡಾ ತನ್ನ ಚತುರ್ಬಲದೊಂದಿಗೆ, ಶಂಖನಾದದೊಂದಿಗೆ, ಜಾಗಟೆ, ನಗಾರಿ ಮತ್ತು ರಣಕಹಳೆಯೊಂದಿಗೆ, ಸೈನಿಕರ ಕೂಗುಗಳ ನಡುವೆ ಮುನ್ನಡೆದಿತ್ತು ಎಂದು ಉದ್ಯೋಗಪರ್ವ ವರ್ಣಿಸುತ್ತದೆ.

ಸೈನವು ತಂಗುವ ಸ್ಥಳವನ್ನು ಶಿಬಿರ ಎನ್ನುತ್ತಿದ್ದರು. ಶಿಬಿರದ ಆಯ್ಕೆಗೆ ಕೂಡ ಕೆಲವು ಮಾರ್ಗದರ್ಶಿ ಸೂತ್ರಗಳಿದ್ದವು. ಸೈನ್ಯದೊಂದಿಗೆ ಇರುತ್ತಿದ್ದ ವಾಸ್ತು ವಿದ್ಯಾ ಪರಿಣಿತರು ಸೈನ್ಯಾಧಿಕಾರಿ, ಮುಖ್ಯ ವಾಸ್ತುಶಿಲ್ಪಿ (ವಾರ್ಧಕಿ) ಮತ್ತು ಜ್ಯೋತಿಷಿಗಳೊಡನೆ ಚರ್ಚಿಸಿ ನೀರು ಮತ್ತು ಇತರೆ ವಸ್ತುಗಳ ಲಭ್ಯತೆ ನೋಡಿ ಶಿಬಿರದ ಸ್ಥಳ ಆಯ್ಕೆ ಮಾಡುತ್ತಿದ್ದರು. ದೇವಾಲಯಗಳು, ಸ್ಮಶಾನಗಳು, ಆಶ್ರಮಗಳು ಇರುವೆಡೆ ಶಿಬಿರ ಹೂಡುತ್ತಿರಲಿಲ್ಲ. ಶಿಬಿರ ಹೂಡಿದ ಮೇಲೆ ಅಡುಗೆಯವರ, ಮದ್ದು–ಗುಂಡು ಸರಿಹೊಂದಿಸಿಕೊಳ್ಳುವವರ, ಪೂಜಾಕಾರ್ಯ ನಿರ್ವಹಿಸುವ ಪುರೋಹಿತರ ಕಾರ್ಯ ಶುರುವಾದರೆ ಸೈನಿಕರ ನಡುವೆ ತಮ್ಮೊಂದಿಗೆ ಬಂದಿದ್ದ ವೇಶ್ಯೆಯರ ಆಯ್ಕೆ ಆರಂಭವಾಗುತ್ತಿತ್ತು.

ಅರಸನ ಶಿಬಿರವು ಉತ್ತರ ದಿಕ್ಕಿನಲ್ಲಿ 100 ಧಾನು ಉದ್ದ ಮತ್ತು 50 ಧಾನು ಅಗಲ ಇರುತ್ತಿತ್ತು. ಸ್ವಲ್ಪ ದೂರದಲ್ಲೇ ಆತನ ರಾಣಿಯರ ಶಿಬಿರಕ್ಕೆ ಸ್ಥಳ ಕಲ್ಪಿಸಲಾಗುತ್ತಿತ್ತು.



ರಾಜನ ಶಿಬಿರದ ಎದುರಿಗೆ ಸಭಾಕೋಣೆ ಮತ್ತು ಅದರ ಬಲದಲ್ಲಿ ಖಜಾನೆ ಮತ್ತು ಅಧಿಕಾರಿಗಳು ಇರುತ್ತಿದ್ದರು. ರಾತ್ರಿ ಪಾಳಿಯ ಸೈನಿಕರು ತಮ್ಮ ವೀಕ್ಷಣಾ ಗೋಪುರ (ಅತ್ತಾಲಕ) ಗಳಲ್ಲಿ ಕಟ್ಟೆಚ್ಚರದಿಂದ ಇರುತ್ತಿದ್ದರು.

ಶತ್ರುವಿನ ಸೈನ್ಯ ಕಷ್ಟಗಳಲ್ಲಿದ್ದಾಗ ದಾಳಿ ಮಾಡಬೇಕು. ಶತ್ರುವಿನ ಹಗೆಗಳೊಂದಿಗೆ ಸಂಪರ್ಕಿಸಿ ಹೆಚ್ಚಿನ ಬಲ ಪಡೆಯಬೇಕು. ಶತ್ರುವಿನ ಸೈನ್ಯ ಒಂದೇ ಬಲವಾಗಿದ್ದಾಗ ಅದನ್ನು ಒಡೆಯಬೇಕು. ಶತ್ರುವನ್ನು ಇನ್ನೂ ಕಷ್ಟದ ಪರಿಸ್ಥಿತಿಗೆ ತಳ್ಳುವಂತಹಾ ಕಾರ್ಯಗಳನ್ನು ಕೈಗೊಳ್ಳಬೇಕು.

ಯುದ್ಧಕ್ಕಾಗಿ ಸೈನ್ಯ ಸಿದ್ಧವಾಗಿದ್ದಾಗ ರಾಜನು ತನ್ನ ಸೈನ್ಯವನ್ನುದ್ದೇಶಿಸಿ 'ನಾನೂ ಕೂಡಾ ನಿಮ್ಮ ಹಾಗೆಯೇ ರಾಜ್ಯ ರಕ್ಷಣೆಗಾಗಿ ನಿಂತ ಸೇವಕ. ನಾನು ನಿಮ್ಮೊಂದಿಗಿದ್ದೇನೆ ನಾನು ತಿಳಿಸಿದವರ ವಿರುದ್ಧ ನೀವು ಹೋರಾಡಬೇಕು' ಎಂದು ಹುರಿದುಂಬಿಸಬೇಕು.

ಶತ್ರು ಅರಸನನ್ನು ಕೊಂದವರಿಗೆ ಲಕ್ಷ ಪಣ, ಸೇನಾಧಿಕಾರಿಯನ್ನು ಕೊಂದವರಿಗೆ 50,000 ಪಣ, ಯುವರಾಜನನ್ನು ಕೊಂದರೆ 10,000 ಪಣ, ಗಜವನ್ನು ಕೊಂದರೆ 5,000 ಪಣ, ಅಶ್ವವನ್ನು ಕೊಂದರೆ 1,000 ಪಣ, ತುಕಡಿಯ ನಾಯಕನನ್ನು ಕೊಂದರೆ 100 ಪಣ ಎಂದು ಜಾಹೀರು ಮಾಡಿ ಸೈನಿಕರಿಗೆ ತಿಳಿಸಬೇಕು.

ಸೈನ್ಯ ರಚನೆ

ಸೈನಿಕರನ್ನು ನಿರ್ದಿಷ್ಟ ಅಂತರದಲ್ಲಿ ನಿಲ್ಲಿಸುವ ವ್ಯವಸ್ಥೆ ಮಾಡಬೇಕು. ಪದಾತಿ ದಳದ ಸೈನಿಕರಿಗೆ ಪ್ರತಿಯೊಬ್ಬರ ನಡುವೆಯೂ ಅಂತರ ಸಮವಾಗಿರಬೇಕು (14), ಪ್ರತೀ ಅಶ್ವಗಳ ನಡುವೆ ಮೂರು ಸಮ ಅಂತರವಿರಬೇಕು, ರಥಗಳ ನಡುವೆ ನಾಲ್ಕು ಸಮದ ಅಂತರ ವಿರಬೇಕು, ಗಜ ಪಡೆಯ ನಡುವೆ ಎಂಟು ಸಮ ಅಂತರವಿರಬೇಕು. ಬಿಲ್ಗಾರರ ನಡುವೆ ಐದು ಅರತ್ನಿ ಅಂತರವಿರಬೇಕು. ಅಶ್ವದಳದಿಂದ ಬಿಲ್ಗಾರರು ಮೂರು ಅಂಬುಗಳ ದೂರದಲ್ಲಿರಬೇಕು. ಅಶ್ವದಳದ ಎದುರು ಕನಿಷ್ಟ ಮೂರು ಸೈನಿಕರಿರಬೇಕು. ಗಜವೊಂದರ ವಿರುದ್ಧ 15 ಸೈನಿಕರು ಅಥವಾ ಐದು ಕುದುರೆಗಳು ನಿಲ್ಲಬೇಕು.

ಪ್ರತೀ ತುಕಡಿಯ ಮುಂಭಾಗದಲ್ಲೂ ಮೂರು ರಥಗಳು ನಿಲ್ಲಬೇಕು. ಪ್ರತಿಯೊಂದು ವ್ಯೂಹದಲ್ಲೂ 45 ರಥಗಳು, 225 ಅಶ್ವಗಳು, 675 ಸೈನಿಕರು



ಇರಬೇಕಾಗುತ್ತದೆ. ಇದೇ ಮಾದರಿಯಲ್ಲಿ ವ್ಯೂಹ ರಚನೆ ಮಾಡುತ್ತಾ ಹೋಗಬೇಕು. ವ್ಯೂಹದ ನಂತರ ಉಳಿಯುವ ಹೆಚ್ಚುವರಿ ಸೈನ್ಯವನ್ನು ಆವಾಪ ಎನ್ನುತ್ತಿದ್ದರು. ಸೈನ್ಯದ ಕೊರತೆಯು ಪ್ರತ್ಯಾವಾಪಾ ಎಂದು ಕರೆಯಲ್ಪಡುತ್ತಿತ್ತು. ಶತ್ರುವಿನ ಸೈನ್ಯದ ನಾಲ್ಕರಿಂದ ಎಂಟೂ ಪಟ್ಟು ಹೆಚ್ಚು ಸೈನ್ಯವನ್ನು ಹೊಂದುವ ಪ್ರಯತ್ನವನ್ನು ಅರಸನಾದವನು ಮಾಡಬೇಕು.


ಸೈನ್ಯದ ಉತ್ತಮ ತುಕಡಿಗಳಲ್ಲಿ ಮೂರನೇ ಒಂದು ಭಾಗವನ್ನು ಮುಂಭಾಗದಲ್ಲಿ ಉಳಿದ ಎರಡನೇ ಮೂರು ಭಾಗವನ್ನು ಹಿಂಭಾಗದಲ್ಲಿ ನಿಲ್ಲಿಸಬೇಕು. ಯುದ್ಧ ಆರಂಭವಾದಾಗ ಸೈನ್ಯಾಧಿಕಾರಿ ಮತ್ತು ಅರಸ ತಂಡದಲ್ಲಿ ಮಿಂಚಿನಂತೆ ಸಂಚರಿಸಿ ಸೂಚನೆಗಳನ್ನು ನೀಡುತ್ತಿರಬೇಕು.

ಸಾಮಾನ್ಯ ನಂಬಿಕೆಯಂತೆ ಉತ್ತಮ ಸೈನಿಕರ ತಂಡ ಮುಂದೆ ಇರುತ್ತಿರಲಿಲ್ಲ. ಬದಲಾಗಿ ಪಲ್ಗು ಬಲ ಮುಂದೆ ನಿಂತಿರುತ್ತಿತ್ತು. ನಂತರ ತೃತೀಯಾಸಾರಂ, ಅನುಸಾರಂ ಮತ್ತು ಸಾರಂ ಬಲ ಇರುತ್ತಿದ್ದವು. ಶತ್ರು ಸೈನ್ಯ ಇವೆಲ್ಲಾ ವರ್ಗದೊಂದಿಗೆ ಹೋರಾಡಿ ಸಾರಂ ಬಲದ ಬಳಿ ಬರುವ ವೇಳೆಗಾಗಲೇ ದಣಿದಿರುತ್ತಿದ್ದರು. ಆಗ ಬಲಶಾಲಿ ಸಾರಂ ಬಲ ಇಡೀ ಶತ್ರು ಸೈನ್ಯವನ್ನು ಹಣಿಯುತ್ತಿತ್ತು. ಇದಕ್ಕೆ ತಕ್ಕಂತೆ ಶತ್ರು ಸೈನ್ಯ ಕೂಡಾ ತನ್ನದೇ ಮಾದರಿಯಲ್ಲಿ ಹೋರಾಟ ನಡೆಸುತ್ತಿತ್ತು.

ಸೈನಿಕರನ್ನು ಉತ್ತೇಜಿಸಲು ಆಗಾಗ ಸೈನ್ಯಾಧಿಕಾರಿಗಳು, ಅರಸ ಮಾತನಾಡುತ್ತಿದ್ದರು. ಅವರನ್ನು ಹುರಿದುಂಬಿಸಲು ದ್ರಂಗಳ (ದುಂಧುಬಿ), ಕಹಳೆ (ತೂರ್ಯಘೋಷ), ಶಂಖಗಳನ್ನು ಊದಲಾಗುತ್ತಿತ್ತು. ಮುಹಮ್ಮದೀಯ ಇತಿಹಾಸಕಾರರು ತಮ್ಮ ಬರಹಗಳಲ್ಲಿ ಗಜಪಡೆಗಳ ಹಿಂದೆ ನಿಂತ ಕಾಗೆಮುಖದವರು ಬಿಳಿಯಬಣ್ಣದ ಶಂಖಗಳನ್ನು ಊದುತ್ತಿದ್ದರು ಎಂದು ಉಲ್ಲೇಖಿಸಿದ್ದಾರೆ.

ರಣರಂಗದ ವ್ಯವಸ್ಥೆ

ರಣತಂತ್ರಗಳಿಗೆ ಸಂಬಂಧಿಸಿದಂತೆ 'ಅನುಕೂಲಕರ ಸ್ಥಳದಲ್ಲಿ ಕುಳಿತ ನಾಯಿ ಮೊಸಳೆಯನ್ನೇ ಎಳೆದುತರಬಲ್ಲದು. ಆದರೆ ಕೆಳಗೆ ನಿಂತ ಮೊಸಳೆ ಅವಕಾಶ ದೊರೆತರೆ ನಾಯಿಯನ್ನೇ ಎಳೆದೊಯ್ಯುತ್ತದೆ' ಎನ್ನುತ್ತಾನೆ ಕೌಟಿಲ್ಯ. ಯುದ್ಧವ್ಯೂಹ ರಚನೆಗೆ ಇಲ್ಲಿ ಇನ್ನಿಲ್ಲದ ಪ್ರಾಶಸ್ತ್ಯ. ಯುದ್ಧದಲ್ಲಿ ಪ್ರಮುಖವಾಗಿ ಮೂರು ಹಂತಗಳಿರುತ್ತವೆ. ಮೊದಲನೆಯಾಗಿ ಸೈನ್ಯದ ವಿಭಾಗಗಳು (ಪಕ್ಷ), ಮುಂಚೂಣಿ ನಾಯಕವರ್ಗ (ಉರಸ್ಯಂ) ಮತ್ತು ಎರಡನೇ ಹಂತದ ರಕ್ಷಕವರ್ಗ (ಪ್ರತಿಗ್ರಹ). ನಂತರದ್ದೇ ವ್ಯೂಹದ ಪಾರ್ಶ್ವ (ಕಕ್ಷ) ರಚನೆ. ಕಾಮಾಂಡಕೀಯ ಮತ್ತು ಅಗ್ನಿಪುರಾಣದಲ್ಲಿ ಏಳು ಹಂತಗಳ (ಸಪ್ತಾಂಗ) ವಿವರಣೆ ಇದೆ.




ಪಾಂಡವರು ಮೊದಲ ದಿನ ತಮ್ಮ ಸೈನ್ಯವ್ಯೂಹವನ್ನು ಸೂಜಿಯ ಆಕಾರದಲ್ಲೂ ಎರಡನೆಯ ದಿನ ಕ್ರೌಂಚ ವ್ಯೂಹವನ್ನೂ, ಮೂರನೆಯ ದಿನ ಗರುಡ ವ್ಯೂಹವನ್ನು, ನಾಲ್ಕನೆಯ ದಿನ ಅರ್ಧಚಂದ್ರಾಕೃತಿಯನ್ನೂ, ಐದನೆಯ ದಿನ ಗರುಡವ್ಯೂಹವನ್ನೂ, ಆರನೆಯ ದಿನ ಮಕರವ್ಯೂಹವನ್ನೂ, ಏಳನೆಯ ದಿನ ಮಂಡಲ ವ್ಯೂಹವನ್ನೂ, ಎಂಟನೆಯದಿನ ವಜ್ರವ್ಯೂಹವನ್ನೂ, ಒಂಬತ್ತನೆಯ ದಿನ ಸಮುದ್ರದ ರೀತಿಯಲ್ಲೂ, ನಂತರ ಸರ್ವತೋಭದ್ರ ವ್ಯೂಹವನ್ನು ನಂತರದ ದಿನಗಳಲ್ಲಿ ಹೆಸರಿಸಲಾಗದ ವ್ಯೂಹ ರಚನೆಗಳನ್ನು ಮಾಡಿದ್ದರು.

ಇವುಗಳಲ್ಲಿ ಕುರುಸೈನ್ಯ ಮೂರನೆಯ ದಿನ ರಚಿಸಿದ್ದ ಗರುಡವ್ಯೂಹವನ್ನು ನೋಡೋಣ. ಕುರುಸೈನ್ಯದ ನಾಯಕ ಭೀಷ್ಮ ಮುಂದೆ ಗರುಡನ ಕೊಕ್ಕಿನ ಸ್ಥಳದಲ್ಲಿ ನಿಂತಿದ್ದ. ಸೈನ್ಯದ ಇಬ್ಬರು ಸೈನ್ಯಾಧಿಕಾರಿಗಳು ಪಕ್ಷಿಯ ತಲೆಯ (ಶೀರ್ಷಂ) ಸ್ಥಳದಲ್ಲಿದ್ದರೆ ಇನ್ನಿಬ್ಬರು ಸೈನ್ಯಾಧಿಕಾರಿಗಳೂ ಪಕ್ಷಿಯ ಕಣ್ಣುಗಳ (ಚಕ್ಷು) ಸ್ಥಳದಲ್ಲಿದ್ದರು. ಉಳಿದ ವಿಭಾಗಗಳ ನಾಯಕರು ಕುತ್ತಿಗೆಯ ಭಾಗದಲ್ಲಿ (ಗ್ರೀವ), ಬಲ ರೆಕ್ಕೆಯ ಭಾಗದಲ್ಲಿ (ದಕ್ಷಿಣಂ ಪಕ್ಷಂ), ಎಡರೆಕ್ಕೆಯ ಭಾಗದಲ್ಲಿ (ವಾಮನಂ ಪಾರ್ಶ್ವಂ) ಮತ್ತು ಬಾಲದ (ಪುಚ್ಚ) ಭಾಗದಲ್ಲಿ ನಿಂತಿದ್ದರು. ಇದೇ ಮಾದರಿಯಲ್ಲಿ ಪಾಂಡು ಸೈನ್ಯ ಕೂಡ ಐದನೆಯ ದಿನ ಗರುಡವ್ಯೂಹದ ರಚನೆ ಮಾಡಿತ್ತು.

ಕೌಟಿಲ್ಯನ ಅರ್ಥಶಾಸ್ತ್ರದ ಹತ್ತನೇ ಅಧ್ಯಾಯದಲ್ಲಿ ಬುದ್ಧಿಪೂರ್ವಕ ವ್ಯೂಹ ರಚನೆಗಳ ಬಗ್ಗೆ ಹೇಳಲಾಗಿದೆ. ಆತನ ಪ್ರಕಾರ ವ್ಯೂಹ ರಚನೆಗಳಲ್ಲಿ ದಂಡ, ಭೋಗ, ಮಂಡಲ ಮತ್ತು ಅಸಂಹತ ಎಂಬ ನಾಲ್ಕು ವಿಭಾಗಗಳಿದ್ದು ಇವು ಮುಂದೆ ಇನ್ನೂ ಸಣ್ಣ–ಸಣ್ಣ ಭಾಗಗಳಾಗಿ ಬೇರಾಗುತ್ತವೆ. ಇಲ್ಲಿ ಸೈನದ ನಾಲ್ಕು ಭಾಗಗಳಾದ ಸಾರಂ (ಉತ್ತಮ ಸೈನಿಕರ ತಂಡ), ಅನುಸಾರಂ (ಎರಡನೇ ದರ್ಜೆಯ ಸೈನಿಕರ ತಂಡ), ತೃತೀಯಾ ಸಾರಂ (ಸಾಮಾನ್ಯ ಸೈನಿಕರು) ಮತ್ತು ಪಲ್ಗು ಬಲ (ನಿಶ್ಯಕ್ತ ಸೈನಿಕರು) ವಿಭಾಗಗಳನ್ನು ಆದ್ಯತೆಯ ಮೇಲೆ ನಿಲ್ಲಿಸಲಾಗುತ್ತಿತ್ತು.

ವಿಷ್ಣುವಿನ ಚತುರ್ವ್ಯೂಹಗಳ ಬಗ್ಗೆ ಪಂಚರಾತ್ರಾಗಮದಲ್ಲಿ ಉಲ್ಲೇಖಿಸಲಾಗಿದ್ದು ವಿಷ್ಣುವಿನ ಅವತಾರಗಳಾದ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಮುಂತಾದುವು ಸೃಷ್ಟಿ ಸಿದ್ಧಾಂತಗಳು. ವ್ಯೂಹವು ಸ್ವರೂಪ ಮತ್ತು ಬಹುರೂಪಗಳನ್ನು ಹೊಂದಿರುತ್ತದೆ.

ಮಹಾಭಾರತದಲ್ಲಿ ರಚಿಸಲಾಗಿದ್ದ ವ್ಯೂಹಗಳ ಬಗ್ಗೆ ಹೇಳಲಾಗುತ್ತದೆ. ಶಕಟವ್ಯೂಹ, ಗರ್ಭವ್ಯೂಹ, ಸೂಚಿ ವ್ಯೂಹ, ಅರ್ಧ ಚಂದ್ರ ವ್ಯೂಹ, ಸರ್ವತೋಭದ್ರ



ವ್ಯೂಹ, ಮಕರ ವ್ಯೂಹ, ಊರ್ಮಿ ವ್ಯೂಹ, ಮಂಡಲ ವ್ಯೂಹ, ಶ್ಯೇನ ವ್ಯೂಹ ಅಥವಾ ಗರುಡವ್ಯೂಹ, ವಜ್ರವ್ಯೂಹ ಮತ್ತು ಚಕ್ರವ್ಯೂಹಗಳ ಉಲ್ಲೇಖ ದೊರೆಯುತ್ತದೆ. ಇವನ್ನು ಬುದ್ಧಿ ಪೂರ್ವಕವಾಗಿ ಎಚ್ಚರಿಕೆಯಿಂದ ರಚಿಸಲಾಗುತ್ತಿತ್ತು. ವ್ಯೂಹ ರಚನೆಯನ್ನು ತಪ್ಪಾಗಿ ಅರ್ಥ ಮಾಡಿಕೊಂಡ ಎದುರಾಳಿಗೆ ಸೋಲೇ ಗತಿಯಾಗುತ್ತಿತ್ತು.

ಕೋಟೆ ಮತ್ತು ಅದರ ಭದ್ರತೆ

ಕೌಟಿಲ್ಯನ ಪ್ರಕಾರ ಕೋಟೆ ಮತ್ತು ಅದರ ಭದ್ರತೆ ರಾಜ್ಯದ ಏಳು ಅಂಶಗಳಲ್ಲಿ ಪ್ರಮುಖವಾದುದು. ಕೋಟೆಗಳನ್ನು ಪರ್ವತ, ಔದಕ (ನೀರ ನಡುವೆ), ಧಾನ್ವನ (ಮರಳುಗಾಡಿನಲ್ಲಿ) ಮತ್ತು ವನದುರ್ಗ (ಕಾಡಿನ ನಡುವೆ) ನಿರ್ಮಿಸಲಾಗುತ್ತಿತ್ತು. ಕೋಟೆಗಳ ಭದ್ರತೆ ಕೂಡಾ ಬಲವಾಗಿ ಮತ್ತು ಬುದ್ಧಿಪೂರ್ವಕವಾಗಿ ಇರುತ್ತಿತ್ತು. ಕೋಟೆಗಳ ಸುತ್ತ ಮೂರು ಹಂತಗಳಲ್ಲಿ 14–12–10 ದಂಡಗಳ ಅಂದರೆ 84–72–60 ಅಡಿ ಆಳದ ಕಂದಕಗಳನ್ನು ಮಾಡುತ್ತಿದ್ದರು. ಯುದ್ಧದಲ್ಲಿ ಜಯಗಳಿಸಿದ ಪಂಗಡ ಶತ್ರುವಿನ ಕೋಟೆಯನ್ನು ವಶಪಡಿಸಿಕೊಂಡು ತಮ್ಮ ಅರಸನ ಅನುಮತಿಯ ಮೇರೆಗೆ ಲೂಟಿ ಮಾಡುತ್ತಿದ್ದರು. ಸೋತ ಅರಸನ ಭಂಡಾರ ಗೆದ್ದವನಿಗೆ ಸೇರುತ್ತಿತ್ತು. ಭಾರತೀಯ ಅರಸರ ಸೈನ್ಯ ಎಂದಿಗೂ ಸ್ತ್ರೀಯರ, ವೃದ್ಧರ ಮತ್ತು ದೇವಾಲಯಗಳ ಲೂಟಿ ಮಾಡಿದ ಉದಾಹರಣೆ ಕಂಡುಬರುವುದಿಲ್ಲ.

ಕೋಟೆಗಳನ್ನು ವಶಪಡಿಸಿಕೊಳ್ಳಲು ವಿಶಿಷ್ಟ ತಂತ್ರವೊಂದನ್ನು ಅನುಸರಿಸಲಾಗುತ್ತಿತ್ತು. ಗಿಳಿ, ಹದ್ದು ಮುಂತಾದ ಪಕ್ಷಿಗಳ ಬಾಲಕ್ಕೆ ಮದ್ದಿನ ಪುಡಿಯನ್ನು ಕಟ್ಟಿ ಹಾರಿಬಿಡಲಾಗುತ್ತಿತ್ತು. ಕಾವಲು ಪಡೆ ಈ ಪಕ್ಷಿಗಳಿಗೆ ಬಾಣ ಬಿಟ್ಟಾಗ ಮದ್ದಿನ ಪುಡಿಗೆ ಬೆಂಕಿಹತ್ತಿ ಕೋಟೆಯಲ್ಲಿ ಬೆಂಕಿ ಹೊತ್ತುತ್ತಿತ್ತು. ಕೆಲವೊಮ್ಮೆ ಕೋತಿ, ಉಡ, ಬೆಕ್ಕು, ನಾಯಿಗಳ ಬಾಲಕ್ಕೆ ಮದ್ದಿನಪುಡಿ ಕಟ್ಟಿ ಕೋಟೆಯೊಳಕ್ಕೆ ಸಂದುಗಳಿಂದ ನುಗ್ಗಿಸಲಾಗುತ್ತಿತ್ತು. ಕೋಟೆಯೊಳಗೆ ಮದ್ದಿನ ಸಂಗ್ರಹ ಇದ್ದು ಅದರ ಮೇಲ್ವಿಚಾರಕನನ್ನು ಆಯುಧಾಗಾರಾಧ್ಯಕ್ಷ ಎನ್ನುತ್ತಿದ್ದರು. ಈತನ ಸುಪರ್ದಿನಲ್ಲಿ ಕೋಟೆಯ ಮೇಲಿನಿಂದ ಕ್ಷಿಪಣಿಗಳನ್ನು ಮತ್ತು ಸಿಡಿಮದ್ದುಗಳನ್ನೂ ಹಾರಿಸಿ ಶತ್ರುಗಳನ್ನು ತಡೆಯುವ ಪ್ರಯತ್ನ ಮಾಡಲಾಗುತ್ತಿತ್ತು.

ಕೋಟೆಯೊಳಗಿಂದ ಅರಸ ತಪ್ಪಿಸಿಕೊಳ್ಳಲು ರಹಸ್ಯ ಮಾರ್ಗಗಳಿರುತ್ತಿದ್ದವು. ಕೋಟೆಯೊಳಗೆ ನುಗ್ಗಲು ಶತ್ರುಗಳು ಸುರಂಗಗಳನ್ನು (ಪ್ರತಿ ಸುರಂಗ) ತೋಡುತ್ತಿದ್ದರು. ಇದಕ್ಕೆ ಪ್ರತಿಯಾಗಿ ಕೋಟೆಯೊಳಗೆ ಮೊದಲೆ ಕೆಲವು ಆಳವಾದ ಬಾವಿಗಳನ್ನು ತೋಡಿರಲಾಗುತ್ತಿತ್ತು. ಇದರಲ್ಲಿನ ನೀರು ಸುರಂಗ ತೋಡಿದ ಕಡೆಗೆ



ಹರಿದು ಹೋಗುತ್ತಾ ಬಾವಿಯ ನೀರು ಕಡಮೆಯಾಗುತ್ತಿತ್ತು. ಇದನ್ನು ಸದಾ ಎಚ್ಚರಿಕೆಯಿಂದ ಗಮನಿಸುತ್ತಿದ್ದ ಕಾವಲುಗಾರರು ಸುರಂಗ ತೋಡಿದ ದಿಕ್ಕನ್ನು ಗಮನಿಸಿ, ಪರಿಶೀಲಿಸಿ ಸೈನ್ಯಾಧಿಕಾರಿಗೆ ತಿಳಿಸುತ್ತಿದ್ದರು. ಇಂತಹ ಜಲ ತತ್ವಗಳನ್ನು ಅರ್ಥಶಾಸ್ತ್ರದಲ್ಲಿ ವಿವರಿಸಲಾಗಿದೆ.

ಗೂಢಚಾರ ವ್ಯವಸ್ಥೆ

ರಾಜ್ಯಾಡಳಿತದಲ್ಲಿ ಗೂಢಚಾರ ವ್ಯವಸ್ಥೆ ಅತಿ ಮುಖ್ಯ ಅಂಗ. ಸನ್ಯಾಸಿಯ ವೇಷದಲ್ಲಿ ಹೋಗುವ ಗೂಢಚಾರ ಸುಲಭವಾಗಿ ವಿಷಪ್ರಾಶನ ಮಾಡಬಹುದು. ವ್ಯಾಪಾರಿಯ ವೇಷದ ಗೂಢಚಾರ ಶತ್ರುವಿನ ರಾಣಿಯ ಸೇವಕಿಯ ಸಂಪರ್ಕ ಬೆಳೆಸಿ ವಿಷಯ ಸಂಗ್ರಹ ಮಾಡಬಹುದು. ಜ್ಯೋತಿಷಿಯ ವೇಷದಲ್ಲಿರುವವ ಮಂತ್ರಿಯ ಮೂಲಕ ವಿಷಯ ಸಂಗ್ರಹ ಮಾಡಬಹುದು. ಅಡುಗೆಯವನ ವೇಷದಲ್ಲಿರುವ ಗೂಢಚಾರನಿಗೆ ಸುದ್ದಿಯ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಸುಳ್ಳು ಸುದ್ದಿಯನ್ನು ಹಬ್ಬಿಸುತ್ತಾ ಕಣಜಗಳಿಗೆ, ಬೆಳೆಗೆ ಬೆಂಕಿ ಹಾಕಿ ನಷ್ಟ ಉಂಟು ಮಾಡಬಹುದು.

ಉತ್ತಮ ಗೂಢಚಾರಿಯು ಶತ್ರುವಿನ ಅಡವಿಬಲವನ್ನು ಹಣದ ಆಮಿಷಗಳನ್ನೊಡ್ಡಿ ತನ್ನ ರಾಜ್ಯದ ಕಡೆಗೆ ಬಳಸಿಕೊಳ್ಳಬಹುದು. ಶತ್ರುವಿನ ಸೈನ್ಯದಲ್ಲಿ ಕೆಲಸ ಮಾಡುತ್ತಿರುವ ಗೂಢಚಾರ ಯುದ್ಧದ ಮಾಹಿತಿಯನ್ನು ತನ್ನ ಅರಸನಿಗೆ ನೀಡಬಹುದು. ಶತ್ರುವಿನ ನಾಡಲ್ಲಿ ಜಾದೂ ಮತ್ತು ಪವಾಡಗಳನ್ನು ಮಾಡುತ್ತಾ ಜನರನ್ನು ಮರುಳು ಮಾಡಬಹುದು.

ಶತ್ರುವಿಗೆ ವಿಷಪ್ರಾಶನ ಮಾಡುವ ವಿಧಾನಗಳನ್ನು ಕೌಟಿಲ್ಯ ವಿವರವಾಗಿ ತಿಳಿಸುತ್ತಾನೆ. ವಿಷದ ತಯಾರಿಕೆಯ ವಿಧಾನಗಳೂ ಕೂಡಾ ದೊರೆಯುತ್ತವೆ. ಸುಟ್ಟ ಶತಕರ್ದಮ, ಉಚ್ಚಿತಿಂಗ (ಏಡಿ), ಕರವೀರ, ಕಟುತುಂಬಿ, ಮದನ, ಕೋದ್ರವ, ಹಸ್ತಿಕರ್ಣ ಮತ್ತು ಪಲಾಸಗಳು ಪ್ರಾಣಿಗಳಿಗೆ ಹಾನಿಕರ. ಪೂತಿಕಿತ, ಮೀನು, ಕಟುತುಂಬಿ, ಶತಕರ್ದಮ ಮತ್ತು ಇಂದ್ರಗೋಪದ ಜೊತೆಗೆ ಹೇಮವಿದಾರಿಯನ್ನು ಮಿಶ್ರ ಮಾಡಿ ತಿನ್ನಿಸಿದರೆ ಪ್ರಾಣಿಗಳಿಗೆ ಅಂಧಕಾರವುಂಟಾಗುತ್ತದೆ.

ಮಾತ್ರಿವಾಹಕ, ಜಲೂಕ, ನವಿಲಿನ ಬಾಲ, ಕಪ್ಪೆಯ ಕಣ್ಣು ಮತ್ತು ಪಿಲುಕಾ ಮಿಶ್ರಣವನ್ನು ಸೇವಿಸಿದರೆ ವಿಶೂಚಿಕಾ ಎಂಬ ಕಾಯಿಲೆ ಬರುತ್ತದೆ. ಪಂಚಕುಷ್ಟ, ಕೌಂಡಿನ್ಯಕ, ರಾಜವೃಕ್ಷ ಮತ್ತು ಮಧು ಪುಷ್ಪ ಮಿಶ್ರಣ ಜ್ವರವನ್ನು ತರುತ್ತದೆ.




ಇಂತಹ ಕ್ರಮಗಳ ಫಲಿತಾಂಶ ಒಂದು ತಿಂಗಳ ಒಳಗಾಗಿ ಗೋಚರವಾಗುತ್ತದೆ. ಪರಿಣಾಮವನ್ನು ಎದುರಿಸುವಲ್ಲಿ ಆಡಳಿತ ಸೋಲುತ್ತದೆ. ಆ ಪರಿಸ್ಥಿತಿಯನ್ನು ಬಳಸಿಕೊಳ್ಳಬಹುದು.

ವೈದ್ಯಕೀಯ ಸಹಾಯ

ರಣರಂಗದ ಪ್ರಮುಖ ಅಗತ್ಯ ಗಾಯಾಳುಗಳಿಗೆ ಚಿಕಿತ್ಸೆ. ಅದಕ್ಕಾಗಿ ನಾಲ್ಕು ಚಿಕಿತ್ಸೆಗಳಲ್ಲಿ ನುರಿತ ವೈದ್ಯರನ್ನು ಶಿಬಿರಗಳಲ್ಲಿರಿಸಬೇಕು ಎನ್ನುತ್ತಾನೆ ಭೀಷ್ಮ. ಶತ್ರುಗಳ ವಿಷಬಾಣಗಳಿಂದ ಗಾಯಗೊಂಡ, ಕತ್ತಿಗಳ ಪ್ರಹಾರದಿಂದ ರಕ್ತ ಹರಿಸುತ್ತಿರುವ, ಭರ್ಜಿಗಳ ಏಟಿನಿಂದ ಪ್ರಜ್ಞೆ ತಪ್ಪಿದ ಹಾಗೂ ದಣಿದ ಸೈನಿಕರಿಗೆ ತುರ್ತು ಚಿಕಿತ್ಸೆ ನೀಡಬೇಕಾಗುತ್ತಿತ್ತು.

ಯುದ್ಧಾಸ್ತ್ರಗಳು

ಪ್ರಾಥಮಿಕವಾಗಿ ಆದಿವಾಸಿಗಳು ಯುದ್ಧಗಳಲ್ಲಿ ದೊಣ್ಣೆ ಮತ್ತು ಕಲ್ಲುಗಳನ್ನು ಬಳಸುತ್ತಿದ್ದರು. ನಂತರ ಬಿಲ್ಲು-ಬಾಣ ಹಾಗೂ ಕತ್ತಿಗಳ ಪರಿಚಯವಾಯಿತು. ಮಹಾಭಾರತವು ನಾಲ್ಕು ವಿಧಗಳ ಆಯುಧಗಳ ವರ್ಣನೆ ನೀಡುತ್ತದೆ. ಅರ್ಥಶಾಸ್ತ್ರದಲ್ಲಿ ಕೌಟಿಲ್ಯ ಯುದ್ಧಾಸ್ತ್ರಗಳಾದ ಆಯುಧಗಳು, ಬಿಲ್ಲು, ಕತ್ತಿ ಮತ್ತು







ಹರಿತವಾದ ತಲವಾರುಗಳ ಬಳಕೆಯ ಬಗ್ಗೆ ವಿವರ ನೀಡುತ್ತಾನೆ. ಅಗ್ನಿಪುರಾಣವು ಆಯುಧಗಳನ್ನು ಯಂತ್ರಮುಕ್ತ (ಯುದ್ಧ ಯಂತ್ರಗಳು), ಪಾಣಿ ಮುಕ್ತ (ಹಸ್ತದಲ್ಲಿ ಹಿಡಿದು ಎಸೆಯುವ ಆಯುಧಗಳು), ಮುಕ್ತ ಸಂಧಾರಿತ (ಎಸೆದು ಮತ್ತೆ ವಾಪಾಸ್ ಹಿಡಿಯುವ ಆಯುಧಗಳು), ಅಮುಕ್ತ (ಹಸ್ತದಲ್ಲಿ ಹಿಡಿದು ಹೋರಾಡುವ ಆಯುಧಗಳು) ಮತ್ತು ಮುಷ್ಟಿ ಎಂದು ಐದು ಭಾಗಗಳಾಗಿ ವಿಂಗಡಿಸುತ್ತದೆ. ಭೋಜನು ರಚಿಸಿದ ಯುಕ್ತಿ ಕಲ್ಪತರು ಎಂಬ ಗ್ರಂಥದಲ್ಲಿ ಮಾಯಿಕಂ (ಮೋಸದ ಆಯುಧ), ನಿರ್ಮಾಯಂ (ನೈಜ ಆಯುಧ), ದಹನಾಧಿಕಂ (ಬೆಂಕಿಯಿಂದ ಉರಿಯುವ ಆಯುಧ) ಮತ್ತು ಖಡ್ಗಾಧಿಕಂ (ಖಡ್ಗ) ಎಂಬ ಆಯುಧಗಳನ್ನು ವರ್ಣಿಸುತ್ತಾನೆ. ನೀತಿಪ್ರಕಾಶಿಕ ಗ್ರಂಥದ ಪ್ರಕಾರ ಮಂತ್ರ ಮುಕ್ತ (ಮಂತ್ರದ ಸಹಕಾರದಿಂದ ಬಳಸುವಂತಹುದು) ಎಂಬ ಆಯುಧವೊಂದಿದೆ.

ಪುರಾತನ ಕಾಲದ ಯುದ್ಧಗಳಲ್ಲಿ ಯಂತ್ರಗಳ ಬಳಕೆಯಾಗುತ್ತಿತ್ತು ಎನ್ನಲಾಗುತ್ತದೆ. ಕೌಟಿಲ್ಯ ಇಂತಹಾ ಯಂತ್ರಗಳನ್ನು ಸ್ಥಿರ ಮತ್ತು ಚಲ ಯಂತ್ರ ಎಂದು ವಿಭಾಗಿಸುತ್ತಾನೆ. ಇವು ಕಲ್ಲುಗುಂಡುಗಳನ್ನು ಎಸೆಯುವ, ಒಮ್ಮೆಗೇ ಎಲ್ಲಾ ದಿಕ್ಕುಗಳಲ್ಲೂ ಹತ್ತಾರು ಬಾಣಗಳನ್ನು ಬಿಡುವ, ಚಕ್ರಗಳನ್ನು ದೂರಕ್ಕೆ ಎಸೆಯಬಲ್ಲ, ನೀರನ್ನು ರಭಸವಾಗಿ ಚಿಮ್ಮಿಸಬಲ್ಲ ಯಂತ್ರಗಳು ಇವು.

ಖಡ್ಗಗಳಲ್ಲೂ ಕೂಡಾ ಅನೇಕ ವಿಧಗಳನ್ನು ಗುರುತಿಸುತ್ತದೆ ಅರ್ಥಶಾಸ್ತ್ರ. ನಿಸ್ತ್ರಿಂಸ (ಡೊಂಕಾದ ಮೊನೆ ಉಳ್ಳದ್ದು), ಅಸಿ ಯಸ್ತಿ (ದೊಣ್ಣೆಯ ಆಕಾರದ್ದು) ಮತ್ತು ಮಂಡಲಾಗ್ರ (ದುಂಡಾದ ಮೊನೆ ಉಳ್ಳದ್ದು) ಎಂಬ ಮೂರು ವಿಧಗಳಿವೆ. ಕತ್ತಿಯ ಒರೆಗಳನ್ನು ಹಸುವಿನ ಚರ್ಮದಿಂದ (ಗವ್ಯ ಕೋಶೇ), ಸಿಂಹದ ಚರ್ಮದಿಂದ (ವ್ಯಾಘ್ರ ಕೋಷೇ) ಮತ್ತು ಆಡಿನ ಚರ್ಮದಿಂದ ಮಾಡಲಾಗುತ್ತಿತ್ತು.





ಬಿಲ್ಲು ಭಾರತದ ಪುರಾತನ ಆಯುಧವಾಗಿದ್ದು ಇದನ್ನು ರಕ್ಷಣೆಗಾಗಿ ಮತ್ತು ಯುದ್ಧಗಳಲ್ಲಿ ಬಳಸಲಾಗುತ್ತಿತ್ತು. ಕೌಟಿಲ್ಯನು ಬಿಲ್ಲನ್ನು ತಾಲ (ತಾಳೆಮರ), ಕುಪ (ಬಿದಿರು), ದಾರು (ಮರ) ಮತ್ತು ಶೃಂಗ (ಕೊಂಬು) ಗಳಿಂದ ಮಾಡಲಾಗುತ್ತದೆ ಎನ್ನುತ್ತಾನೆ. ತಾಳೆಮರದಿಂದ ಮಾಡಿದ ಬಿಲ್ಲನ್ನು ಕಾರ್ಮುಖ ಎಂದೂ, ಬಿದಿರಿನಿಂದ ಮಾಡಿದ ಬಿಲ್ಲನ್ನು ಕೋದಂಡ ಎಂದೂ, ಮರದಿಂದ ಮಾಡಿದ್ದನ್ನು ದ್ರೂನ ಮತ್ತು ಕೊಂಬಿನಿಂದ ಮಾಡಿದ್ದನ್ನು ಧನು ಎಂದೂ ಕರೆಯಲಾಗುತ್ತಿತ್ತು. ಬಿಲ್ಲಿನ ಎತ್ತರ ಅದನ್ನು ಹಿಡಿಯುವವನ ಎತ್ತರಕ್ಕಿಂತಾ ಸ್ವಲ್ಪ ಕಡಮೆ ಇರಬೇಕು. ಬಿಲ್ಲಿನ ಪ್ರಮಾಣಿತ ಎತ್ತರ 6 ಅಡಿಗಳು ಎನ್ನುತ್ತದೆ ಅಗ್ನಿಪುರಾಣ.

ಬಿಲ್ಲಿನ ಗುಣ

ಬಿಲ್ಲನ್ನು ಹಿಡಿಯುವಾತ ಅದನ್ನು ಬಾಗಿಸುವಷ್ಟು ಶಕ್ತಿವಂತನಾಗಿರಬೇಕು. ಭಾರತೀಯರ ಬಿಲ್ಲು ಸುಮಾರು 4.75 ಅಡಿ ಎತ್ತರವಿರುತ್ತದೆ. ವಿಷ್ಣು ಹಿಡಿದಿರುವ ಬಿಲ್ಲು 5.25 ಅಡಿ ಎತ್ತರವಿದೆಯಂತೆ. ಬಾಣದ ಉದ್ದ 3–4 ಅಡಿ ಇರಬೇಕಾಗುತ್ತದೆ ಅಥವಾ ಐದು ಮುಷ್ಟಿ ಉದ್ದವಿರಬೇಕು.

ಭರ್ಜಿಗಳು ಭಯಾನಕ ಆಯುಧ ಎಂದು ಅರ್ಥಶಾಸ್ತ್ರ ಪರಿಗಣಿಸುತ್ತದೆ. ಸುಮಾರು ಆರು ಅಡಿ ಎತ್ತರದ ಭರ್ಜಿಗಳನ್ನು ಕಬ್ಬಿಣ, ಚಿನ್ನ ಮತ್ತು ಪಚ್ಚೆಯಿಂದ ಮಾಡಲಾಗುತ್ತಿತ್ತು. ಗದೆಗಳು ಪುರಾಣಗಳ ಕಾಲದಲ್ಲಿ ಬಹಳ ಪ್ರಸಿದ್ಧವಾಗಿದ್ದವು. ಇವುಗಳಲ್ಲಿ ಮುಸಲ, ಯಸ್ತಿ ಮತ್ತು ಗದಾ ಎಂಬ ಮೂರು ವಿಧಗಳಿವೆ. ಕೈಕೊಡಲಿಗಳು, ಚಕ್ರಗಳು, ಕುಣಿಕೆ ಹಗ್ಗಗಳು, ಗುರಾಣಿಗಳು, ಕವಚಗಳು, ಶಿರಸ್ತ್ರಾಣಗಳು ಕಡ್ಡಾಯವಾಗಿ ಬಳಕೆಯಾಗುತ್ತಿದ್ದವು.



ಕೌಟಿಲ್ಯ ಎಷ್ಟು ಪ್ರಸ್ತುತ ?

ಯುದ್ಧಗಳನ್ನು ದೂರವಿಡಬೇಕು ಎನ್ನುವ ಈ ಆಧುನಿಕ ಕಾಲದಲ್ಲಿ ಯುದ್ಧವನ್ನು ಕಲೆಯ ರೀತಿ ಅಭ್ಯಾಸ ಮಾಡುವ ಅಗತ್ಯವೇನಿದೆ ಎನ್ನುವುದು ಮುಖ್ಯವಾಗುತ್ತದೆ. ಕೌಟಿಲ್ಯ ತನ್ನ ಗ್ರಂಥದಲ್ಲಿ ಕೇವಲ ಯುದ್ಧದ ಬಗ್ಗೆ ಮಾತ್ರವಲ್ಲದೇ ಒಬ್ಬ ಅತ್ಯುತ್ತಮ ಆಡಳಿತಗಾರನಿಗೆ ಬೇಕಾದ ಎಲ್ಲಾ ಮಾರ್ಗದರ್ಶನವನ್ನೂ ನೀಡುತ್ತಾನೆ. ಗುರುಕುಲದಲ್ಲಿಯ ಬೋಧನೆಯ ಹಾಗೆ ಸವಿವರವಾಗಿ ಆಡಳಿತ, ಟೈಂ ಮ್ಯಾನೇಜ್‌ಮೆಂಟ್, ಸಿಬ್ಬಂದಿಯ ಆಯ್ಕೆ, ಸಿಬ್ಬಂದಿಯೊಂದಿಗೆ ಉತ್ತಮ ಸಂಬಂಧ ನಿರ್ವಹಣೆ, ಪಕ್ಕದವನೊಂದಿಗೆ ವ್ಯವಹರಿಸುವ ಬಗೆ, ಔಷಧೀಕರಣ, ಗೆಲ್ಲಲೂ ಬೇಕಾದ ಹಾದಿ ನಿರ್ಮಾಣ ಹೀಗೆ ಪ್ರತಿಯೊಂದೂ ಕೂಡಾ ಈವತ್ತಿನ ನಾಗರೀಕರಿಗೆ ಪ್ರಸ್ತುತವಾಗಿದೆ.

ಸುಂಟ್ಸು ಒಬ್ಬ ಸೈನ್ಯಾಧಿಕಾರಿ ಆತ ಯುದ್ಧಕಲೆಯ ಬಗ್ಗೆ ಬರೆಯುವುದು ಪರಿಣತನೊಬ್ಬನ ವಿವರಣೆಯಾಗುತ್ತದೆ. ಕೌಟಿಲ್ಯ ಬ್ರಾಹ್ಮಣ ಆತನಿಗೆ ಯುದ್ಧದ ಬಗ್ಗೆ ಕೇಳಿರುವುದು ಬಿಟ್ಟರೆ ಅನುಭವವಿಲ್ಲ. ಆತನ ಬರಹದ ಮೌಲ್ಯ ಎಷ್ಟು ಎನ್ನುವ ವಾದವೂ ಇದೆ. ಸುಂಟ್ಸು ಬರಹದಲ್ಲಿ ಕ್ರೌರ್ಯ ಎದ್ದು ಕಾಣುತ್ತದೆ. ಎಲ್ಲೂ ದಯಯ ಸುಳಿವೂ ಕಾಣುವುದಿಲ್ಲ. ಕೌಟಿಲ್ಯ ಒಬ್ಬ ಉತ್ತಮ ಸಲಹೆಗಾರ. ರಾಜನಿಗೆ ಸಮಯದಲ್ಲಿ ಸಲಹೆ ನೀಡಬಲ್ಲವ ಗುರುವಿಗೆ ಸಮಾನ. ಆತನ ಬರಹದಲ್ಲಿ ರಾಜ ಧರ್ಮದ ಪಾಲನೆ ಎದ್ದು ಕಾಣುತ್ತದೆ. ಅಕ್ರಮವಾಗಿ ಯಾವುದನ್ನೇ ಪಡೆಯುವ ಬಗ್ಗೆ ಕೌಟಿಲ್ಯ ಬೋಧಿಸುವುದಿಲ್ಲ.

ಇಂತಹ ಅದ್ಭುತ ಗ್ರಂಥವನ್ನು ಪಠ್ಯವಾಗಿಸಬೇಕೆಂಬ ಸೂಚನೆ ಹಿಂದಿನಿಂದಾ ಇದೆ. ಭಾರತದ ಮಿಲಿಟರಿ ಶಾಲೆಗಳಲ್ಲಿ ಅರ್ಥಶಾಸ್ತ್ರದ ಬಗ್ಗೆ ಬೋಧನೆ ನಡೆಯುತ್ತಿದೆ. ಆದರೆ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಅಧ್ಯಯನ ಸಂಸ್ಥೆಗಳಲ್ಲೂ ಕೂಡಾ ಅರ್ಥಶಾಸ್ತ್ರದ ಬೋಧನೆ ಕಡ್ಡಾಯವಾಗಬೇಕಾಗಿದೆ.

ನಾವೆಲ್ಲಿದ್ದೇವೆ ?

ಭಾರತ ಮತ್ತು ಚೀನಾದ ಪುರಾತನ ಯುದ್ಧಕಲೆಯ ವರ್ಣನೆಗಳಲ್ಲಿ ಕಾಣುವ ಮುಖ್ಯಾಂಶವೆಂದರೆ ಗುರಿ ಮತ್ತು ಸಾಧನ. ಭಾರತೀಯರಿಗೆ ಗುರಿಯನ್ನು ತಲುಪುವ ಹಾದಿ ಮುಖ್ಯ. ಆದರೆ ಚೀನೀಯರಿಗೆ ಹಾದಿ ಹೇಗಿದ್ದರೂ ಸರಿ ಗುರಿ ತಲುಪುವುದು ಮುಖ್ಯ. ನೈತಿಕತೆ ಭಾರತೀಯರಿಗೆ ಪ್ರಮುಖವಾಗಿದ್ದರೆ ಚೀನೀಯರಿಗೆ ನೈತಿಕತೆ ಎರಡನೇ ಸ್ಥಾನದಲ್ಲಿದೆ. ಸೂರ್ಯೋದಯಕ್ಕೆ ಮುನ್ನಾ





ಮತ್ತು ಸೂರ್ಯಾಸ್ಥದ ನಂತರ ಯುದ್ಧ ಮಾಡಬಾರದು ಎಂಬುದು ಭಾರತೀಯರ ನೀತಿಯಾಗಿದ್ದರೆ ಚೀನಿಯರಿಗೆ ರಾತ್ರಿ–ಹಗಲಿನ ಬೇಧವಿಲ್ಲ. ಕಹಳೆ–ನಗಾರಿ ಸದ್ದಿನ ನಂತರವೇ ಮುಂದುವರೆಯಿರಿ ಎಂಬುದು ಭಾರತೀಯರ ಶಿಸ್ತಾದರೆ ಶತ್ರು ತಾನೆ ಮುಂದುವರೆಯಲಿ ಎಂದು ಕಾದು ನೋಡುವ ತಂತ್ರ ಚೀನಿಯರದು.

ಚೀನಿ ಯುದ್ಧ ಕೌಶಲ್ಯದಲ್ಲಿ ಕ್ರೌರ್ಯ ಸೇರಿ ಹೋಗಿದೆ. ಸೈನಿಕರ ನಿಯಂತ್ರಣ ಭಯ ಹುಟ್ಟಿಸುವುದರಿಂದ ಮತ್ತು ದಂಡ ಪ್ರಯೋಗದಿಂದ ಮಾತ್ರಾ ಸಾಧ್ಯ ಎಂದು ಸುಂಟ್ಸು ಅಭಿಪ್ರಾಯ. ಭಾರತೀಯ ಯುದ್ಧ ಕಲೆ ಇದಕ್ಕೆ ವಿಭಿನ್ನವಾಗಿ ಸಾಮ, ದಾನ, ಭೇದ ಮತ್ತು ನಂತರ ಅಂತಿಮವಾಗಿ ದಂಡಿಸುವ ಬಗ್ಗೆ ಚಿಂತಿಸುತ್ತದೆ.

ಆಧುನಿಕ ಕಾಲದಲ್ಲಿ ಯುದ್ಧ ತಂತ್ರಗಳು ಮತ್ತು ನೈತಿಕ ಮೌಲ್ಯಗಳು ಮರೆಯಾಗಿ ವಿನಾಶವೊಂದೇ ಮುಖ್ಯ ಗುರಿಯಾಗಿದೆ. ರಾಸಾಯನಿಕ ಯುದ್ಧದ ಪರಿಣಾಮ ಮುಂದಿನ ಜನಾಂಗಕ್ಕೂ ರವಾನೆಯಾಗುತ್ತಿದೆ. ಕುವೈತ್ ಮತ್ತು ಸಿರಿಯಾಗಳ ಯುದ್ಧದ ನಡೆ ಟಿವಿಗಳ ಮೂಲಕ ನಮ್ಮ ನಡುಮನೆಯಲ್ಲೂ ಪ್ರವೇಶ ಮಾಡಿದೆ. ಯುದ್ಧಗಳ ಅವಾಂತರ ಕಂಡಾಗ ಅಶೋಕ ಚಕ್ರವರ್ತಿಯ ಮನಃಪರಿವರ್ತನೆ ಮಾಡಿದ ಕಳಿಂಗ ಯುದ್ಧದ ನೆನಪಾಗುತ್ತದೆ.

ಯುದ್ಧ ಬೇಡವೆಂದರೂ ಪದೇಪದೆ ಬಾಗಿಲಿಗೆ ಬಂದು ನಿಲ್ಲುತ್ತಿದೆ. ನಾವು ಅದಕ್ಕೆ ಅನ್ನ ಹಾಕದಿದ್ದರು ಮಗ್ಗುಲ ಮನೆಯವ ಅದನ್ನು ಸಾಕಿಕೊಳ್ಳುತ್ತಿದ್ದಾನೆ. ಸಮಾಧಾನದ ಅಂಶವೆಂದರೆ ಭಾರತೀಯ ಸೈನ್ಯದಲ್ಲಿ ಇನ್ನೂ ಈ ನೈತಿಕ ಮೌಲ್ಯಗಳು ಉಳಿದುಕೊಂಡಿವೆ. ಆದರೆ ನೆರೆಯ ದೇಶಗಳ ಅಟಾಟೋಪದಲ್ಲಿ ನೈತಿಕ ಮೌಲ್ಯವೇ ನಮ್ಮ ಬಲಹೀನತೆಯಾಗುತ್ತಿರುವುದು ದುರಂತ.

❖





೩. ಅಂಕೋರವಾಟ ಎಂಬ ಶಿಲ್ಪ ಕಲಾ ವೈಭವ

ಕಾಂಬೋಡಿಯಾ ಪುರಾತನ ಕಾಲದಿಂದ ಭಾರತದೊಂದಿಗೆ ಸಂಬಂಧ ಹೊಂದಿದ್ದ ನೆರೆ ರಾಷ್ಟ್ರ. ಸುಮಾರು 6000–7000 ವರ್ಷಗಳ ಇತಿಹಾಸದ ಹಿನ್ನೆಲೆ ಈ ರಾಷ್ಟ್ರಕ್ಕಿದೆ. ಇಲ್ಲಿನ ಸುಪ್ರಸಿದ್ಧ ಗುಹಾಲಯ ಲಾಂಗ್ ಸ್ಪೇಅನ್‌ನಲ್ಲಿ ದೊರೆತ ಕಲ್ಲಿನ ಆಯುಧಗಳ ಕಾರ್ಬನ್ ಡೇಟಿಂಗ್ ಪರಿಕ್ಷೆಯಿಂದ ಅವು ಬಹು ಪುರಾತನವಾದವುಗಳು ಎಂದು ತಿಳಿದು ಬಂತು. ಮುಂದೆ ಕೆಲವು ಉತ್ಖನನಗಳಲ್ಲಿ ದೊರೆತ ಮಡಕೆಗಳು ಮತ್ತಿತರ ದಿನ ಬಳಕೆಯ ವಸ್ತುಗಳು ಸಹಾ ಕ್ರಿ.ಪೂ. 4200 ರ ನಿಯೋ ಲಿಥಿಕ್ ಕಾಲದವು ಎಂದು ಊಹಿಸಲಾಗಿದೆ.

ಇಲ್ಲಿನ ಜನ ಬಹುಶಃ ಆಗ್ನೇಯ ಏಷ್ಯಾದ ಕಡೆಯಿಂದ ಚೀನಾಕ್ಕೆ ಮತ್ತು ನಂತರ ಈ ಪ್ರದೇಶಕ್ಕೆ ವಲಸೆ ಬಂದವರು ಎನ್ನಲಾಗಿದೆ. ಇವರನ್ನು ಖ್ಮೇರ್ ಜನಾಂಗ ಎಂದು ಗುರುತಿಸಲಾಗಿದ್ದು ಲಭ್ಯವಿರುವ ಸಂಪನ್ಮೂಲಗಳನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳಬಲ್ಲ ನಿಪುಣರಾಗಿದ್ದರು. ಕೃಷಿ ಬಗ್ಗೆ ಇವರಿಗೆ ಅರಿವಿದ್ದು ಭತ್ತ ಮುಂತಾದ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದರು. ಪ್ರಾಣಿಗಳನ್ನು ಬೇಟೆಯಾಡಲು ಕಂಚಿನ ಆಯುಧಗಳನ್ನು ತಯಾರಿಸಿಕೊಂಡಿದ್ದರು. ತಮ್ಮವೇ ಆದ ಧಾರ್ಮಿಕ ನಂಬಿಕೆ ಮತ್ತು ಧಾರ್ಮಿಕ ಕಟ್ಟಳೆಗಳನ್ನು ಹೊಂದಿದ್ದ ಇವರು ಹೊರ ದೇಶಗಳೊಂದಿಗೂ ಸಹಾ ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಚಾರ–ವಿನಿಮಯಗಳನ್ನು ಮಾಡಿಕೊಳ್ಳುತ್ತಿದ್ದರು. ಆ ಕಾಲದಲ್ಲಿ ಪುನನ್ ವಂಶ ಆಳ್ವಿಕೆ ನಡೆಸಲಾರಂಭಿಸಿದ್ದು ನಂತರ ಚೆನ್‌ಲಾ ಹಾಗೂ ಖ್ಮೇರ್ ವಂಶಗಳು ರಾಜ್ಯಭಾರ ನಡೆಸಿದವು. ಖ್ಮೇರ್ ವಂಶಕ್ಕೆ ಸೇರಿದ್ದ ಎರಡನೇ ಜಯವರ್ಮನ್ ಎಂಬಾತನ ಕಾಲದಲ್ಲಿ ಅನೇಕ ಸಾಂಸ್ಕೃತಿಕ ಚಟುವಟಿಕೆಗಳು ಪ್ರಾರಂಭವಾಗಿದ್ದವು. ಈತ ಒಮ್ಮೆ



ಈಗಿನ ಅಂಗ್‌ಕೊರವಾಟ್ ದೇವಾಲಯ ಇರುವ ಸ್ಥಳಕ್ಕೆ ಭೇಟಿ ನೀಡಿದ್ದಾಗ ಈತನಿಗೆ ಆ ಸ್ಥಳದಲ್ಲಿ ಒಂದು ದೇವಾಲಯವನ್ನು ನಿರ್ಮಿಸಬೇಕೆಂಬ ಬೋಧೆಯಾಯಿತು. ತನಗಾದ ಈ ವಿಶಿಷ್ಟ ಅನುಭವದಿಂದ ರೋಮಾಂಚಿತನಾದ ಎರಡನೇ ಜಯವರ್ಮನ್ ಕ್ರಿ.ಶ. 802 ರಲ್ಲಿ ಒಂದು ಮಹಾನ್ ದೇವಾಲಯ ನಿರ್ಮಾಣಕ್ಕೆ ಅಡಿಪಾಯ ಹಾಕಿದ.

ಈತನ ನಂತರ ಬಂದ ಅರಸರು ಈ ಚಿಂತನೆಗೆ ರೂಪ ಕೊಟ್ಟು ಎರಡನೇ ಸೂರ್ಯವರ್ಮನ್ ಕಾಲದಲ್ಲಿ ದೇವಾಲಯದ ನೀಲ ನಕ್ಷೆ ತಯಾರಾಗಿ ದೇವಾಲಯ ಕಟ್ಟಡ ಕಾರ್ಯ ಪ್ರಾರಂಭವಾಯಿತು. ಸುಮಾರು 34 ವರ್ಷಗಳ ನಿರ್ಮಾಣ ಮುಕ್ತಾಯವಾದಾಗ ಇದೊಂದು ಜಗತ್ಪ್ರಸಿದ್ಧ ದೇವಾಲಯವಾಗಲಿದೆ ಎಂಬ ಕಲ್ಪನೆ ಬಹುಶಃ ಇದರ ನಿರ್ಮಾತೃಗಳಿಗೂ ಇರಲಿಲ್ಲ. ಕ್ರಿ.ಶ.1431 ರಲ್ಲಿ ಖ್ಮೇರ್ ವಂಶದ ಆಡಳಿತ ಮುಕ್ತಾಯವಾಯಿತು. ಕ್ರಿ.ಶ.15ನೇ ಶತಮಾನದಿಂದ 19 ನೇ ಶತಮಾನದವರೆಗೂ ಕಾಂಬೋಡಿಯಾದ ಇಳಿಗಾಲ. ಬರಗಾಲ ಅಥವಾ ಯುದ್ಧದ ಕಾರಣದಿಂದ ಜನ ಈ ಪ್ರದೇಶವನ್ನು ತೊರೆದಾಗ ಅಂಕೋರವಾಟ ಪಾಳು ಬಿತ್ತು. ನಂತರ ಬೌದ್ಧ ಸನ್ಯಾಸಿಯೊಬ್ಬ ಇಲ್ಲಿಗೆ ಬಂದ ನಂತರ ಬೌದ್ಧಾಲಯವಾಗಿ ಈ ಸ್ಥಳ ಬದಲಾಯ್ತು.

ಧರ್ಮ ಮತ್ತು ಸಂಸ್ಕೃತಿ

ಪುರಾತನ ರಾಜಕೀಯದಲ್ಲಿ ಅನೇಕ ಏಳು-ಬೀಳುಗಳನ್ನು ಕಂಡಿದ್ದರೂ ಸಾಂಸ್ಕೃತಿಕವಾಗಿ ಉನ್ನತ ಮಟ್ಟದಲ್ಲಿದ್ದ ರಾಷ್ಟ್ರ ಕಾಂಬೋಡಿಯಾ. ಈ ಔನ್ನತ್ಯಕ್ಕೆ ಇಲ್ಲಿ ಆಳಿದ ಅರಸರುಗಳ ಧಾರ್ಮಿಕ ಸಹಿಷ್ಣುತೆ ಮತ್ತು ಕಲಾ ಪ್ರೇಮ ಬಹುತೇಕ ಕಾರಣವಾಗಿದೆ. ಕ್ರಿ.ಶ. 9–14 ನೇ ಶತಮಾನ ಕಾಂಬೋಡಿಯಾದ ಸಂಸ್ಕೃತಿಯ ಉನ್ನತಿಯ ಕಾಲ. ಈ ಸಮಯದಲ್ಲೇ ವಿಶ್ವ ಪ್ರಸಿದ್ಧ ದೇವಾಲಯ ಅಂಕೋರವಾಟ ಅರಳಿತ್ತು. ಸಂಗೀತ, ನೃತ್ಯ, ವಾಸ್ತು ಶಿಲ್ಪ ಮತ್ತು ಇತರೇ ಕಲಾ ಪ್ರಕಾರಗಳು ವಿಕಸಿತವಾಗಿದ್ದವು.

ಪುರಾತನ ಕಾಂಬೋಡಿಯಾ ಹಿಂದೂ ರಾಷ್ಟ್ರವಾಗಿತ್ತು. ಇಲ್ಲಿನ ಅರಸರುಗಳು ಹಿಂದೂಗಳಾಗಿದ್ದು ಅನೇಕ ದೇವಾಲಯಗಳನ್ನು ನಿರ್ಮಿಸಿದ್ದರು. ಬಹಳ ಹಿಂದೆಯೆ ಬೌದ್ಧ ಧರ್ಮ ಭಾರತದಿಂದ ಕಾಂಬೋಡಿಯಾ ಪ್ರವೇಶಿಸಿತ್ತು. ಆ ಸಂದರ್ಭದಲ್ಲಿ ಆಳುತ್ತಿದ್ದ ಅರಸರು ಬೌದ್ಧ ತತ್ವಗಳಿಂದ ಪ್ರಭಾವಿತರಾಗಿ ಬೌದ್ಧ



ಧರ್ಮಕ್ಕೆ ಮತಾಂತರ ಹೊಂದಿದರು. ಅರಸರ ಆಶ್ರಯ ಹಾಗೂ ಜನತೆಯ ಒಲವಿಲ್ಲದೇ ಹಿಂದು ಧರ್ಮ ಕಳೆಗುಂದಿ ನಿಧಾನವಾಗಿ ಕಣ್ಣು ಮುಚ್ಚಿತು. ಈ ಹಿನ್ನೆಲೆಯಲ್ಲಿ ಕಾಂಬೋಡಿಯಾ ಬೌದ್ಧ ರಾಷ್ಟ್ರವಾಗಿದ್ದು ಈಗ ಪ್ರತಿಶತ. 90 ರಷ್ಟು ಜನರು ತೇರಾವಾದ ಬೌದ್ಧ ಪಂಥಕ್ಕೆ ಸೇರಿದ್ದಾರೆ. ಬೌದ್ಧ ಧರ್ಮದ ಮತ್ತೊಂದು ಪಂಥವಾದ ತೇರಾವಾದವು ಗೌತಮ ಬುದ್ಧನಲ್ಲದೇ ಇತರ ಗುರುಗಳ ಉಪದೇಶದ ಸಾರವನ್ನು ಅನುಸರಿಸುವ ಅನುಯಾಯಿಗಳ ಪಂಥ. ಇಲ್ಲಿ ಬುದ್ಧನೊಂದಿಗೆ ಇತರ ಗುರುಗಳೂ ಸಹಾ ಪೂಜಾರ್ಹರು.

ಕಾಂಬೋಡಿಯಾದ ಜನರು ಧರಿಸುವ ಉಡುಪುಗಳು ಅವರ ಸಂಸ್ಕೃತಿಯ ದ್ಯೋತಕವಾಗಿವೆ. ಅವರ ಸಾಂಪ್ರದಾಯಿಕ ಉಡುಪುಗಳೆಂದರೆ ಕ್ರಮ (ಸ್ಕಾರ್ಫ್), ಸರೋಂಗ್(ಶಾಲು), ಸಂಪೋಕ್ (ನಿಲುವಂಗಿ), ಚಾಂಗ್ ಪೋಂಗ್ (ದಾವಣಿ), ಲುಪಾಂಗ್ (ನಿಲುವಂಗಿ), ಅವ್ ದೈ ಪೋನ್ (ಬ್ಲೌಸ್), ಅವ್ ನೋತ್ ಕಬಚ್ (ಯುವತಿಯರ ಅಂಗಿ), ಅವ್ ಪಕ್ (ಬ್ಲೌಸ್). ಇವುಗಳಲ್ಲಿ ವರ್ಣ-ವೈವಿಧ್ಯವೇ ಪ್ರಧಾನವಾಗಿದ್ದು ನೋಡಲು ಬಹಳ ಆಕರ್ಷಕವಾಗಿ ಕಾಣುತ್ತವೆ. ವಿಶೇಷ ಸಂದರ್ಭಗಳಲ್ಲಿ ಮತ್ತು ಸಂಗೀತ ಹಾಗು ನೃತ್ಯಗಳ ಸಮಯದಲ್ಲಿ ಇವನ್ನು ಧರಿಸಲಾಗುತ್ತದೆ. ಕಾಂಬೋಡಿಯಾದಲ್ಲಿ ಸಂಗೀತ ಮತ್ತು ನೃತ್ಯಗಳ ಕಾಲ ಆರಂಭವಾಗಿದ್ದು ಅಂಕೋರವಾಟದ ಸಮಯದಿಂದ. ಅಂಕೋರವಾಟ ಕೇವಲ ದೇವಾಲಯ ಮಾತ್ರವಾಗಿರದೇ ವಿದ್ಯಾಭ್ಯಾಸ ಮತ್ತು ಅನೇಕ ಕಲಾ ಪ್ರಕಾರಗಳ ಬೋಧನಾ ಸ್ಥಳವಾಗಿತ್ತೆಂದು ಹೇಳಲಾಗಿದೆ. ವಿದೇಶಗಳಿಂದಲೂ ಕೂಡಾ ವಿದ್ಯಾರ್ಥಿಗಳು ಇಲ್ಲಿಗೆ ಆಗಮಿಸುತ್ತಿದ್ದರಂತೆ.

ಇವರ ನೃತ್ಯ ಪ್ರಕಾರಗಳಲ್ಲಿ ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ ಮತ್ತು ದೇಶೀಯ ಶೈಲಿ ನೃತ್ಯ ಎಂಬ ಮೂರು ಪ್ರಕಾರಗಳಿವೆ. ಶಾಸ್ತ್ರೀಯ ನೃತ್ಯವು ಅರಸರ ಕಾಲದ್ದಾಗಿದ್ದು ಹೆಜ್ಜೆ, ನಡೆ, ತಾಳ-ಲಯಗಳ ಪ್ರಾಧಾನ್ಯತೆ ಹೊಂದಿತ್ತು. ಜಾನಪದ ಶೈಲಿಯು ಜನಸಾಮಾನ್ಯರ ಬಿಡುವಿನ ವೇಳೆಯ ಮನರಂಜನಾ ನೃತ್ಯವಾಗಿತ್ತು. ಮನರಂಜನಾ ನೃತ್ಯಗಳು ಶಾಸ್ತ್ರೀಯ ಶೈಲಿಗಳ ಕಟ್ಟು-ಪಾಡುಗಳಿಲ್ಲದೆ ಸ್ಥಳೀಯ ವಾದ್ಯಗಳ ಹಿನ್ನೆಲೆಯಲ್ಲಿ ನಡೆಯುತ್ತವೆ. ತ್ರಾಲ್ ನೃತ್ಯ, ತೋಸೆ (ಹಾವಿನ) ನೃತ್ಯ, ರೋಬಂ ಕ್ನಗಾವೋಕ್(ನವಿಲು) ನೃತ್ಯ ಈ ಪ್ರಕಾರದ ಕೆಲವು ನೃತ್ಯಗಳು. ದೇಶೀಯ ನೃತ್ಯವು ಇವೆರಡರ ಸಮ್ಮಿಲನವಾಗಿದ್ದು ರಾಮ್ ವೋಂಗ್, ರೋಮ್ ಕಬಾಚ್ ಕೆಲವು ಪ್ರಕಾರಗಳು.




ಅಂಕೋರವಾಟ ಎಂಬ ಶಿಲ್ಪ ಕಲಾ ವೈಭವ

ಖ್ಮೇರ್ ವಂಶದ ಅರಸ ಎರಡನೆ ಸೂರ್ಯವರ್ಮನ್ ಎಂಬಾತನಿಂದ ನಿರ್ಮಾಣಗೊಂಡ ಹಿಂದೂ ದೇವಾಲಯ ಇದು. ಇಲ್ಲಿನ ಮೂಲ ದೇವತೆ ವಿಷ್ಣು ಎನ್ನಲಾಗಿದೆ. ಈ ಸ್ಥಳವು ಕಾಂಬೋಡಿಯಾದ ರಾಜಧಾನಿ ನಾಂಪೆನ್‌ನಿಂದ ಸುಮಾರು 310 ಕಿಲೋಮೀಟರ್ ದೂರವಿರುವ ಸೆಯಂ ದೀಪ್ ಪ್ರಾಂತ್ಯದ ಸೆಯಂ ರೀಪ್ ಪ್ರದೇಶಕ್ಕೆ ಸುಮಾರು 5.5 ಕಿಮಿ ದೂರದಲ್ಲಿದೆ. ದ್ರಾವಿಡ ಶೈಲಿಯಲ್ಲಿ ಎತ್ತರದ ಜಗುಲಿಯ ಮೇಲೆ ನಿರ್ಮಾಣವಾಗಿರುವ ಈ ದೇವಾಲಯದ ಮುಖ್ಯ ಲಕ್ಷಣ ಒಂಬತ್ತು ಗೋಪುರಗಳು. ಅಂಕೋರವಾಟ ಎಂಬ ಹೆಸರು ಅಂಕೋರ (ನಗರ) ಹಾಗೂ ವಾಟ (ದೇವಾಲಯ ಅಥವಾ ಶಾಲೆ) ಎಂಬ ಪದಗಳಿಂದ ಬಂದಿದೆ. ಬಹಳ ಹಿಂದೆ ದೇವಾಲಯಗಳಲ್ಲಿ ವಿದ್ಯಾಭ್ಯಾಸ ನಡೆಯುತ್ತಿತ್ತು.

ಒಟ್ಟು ಸುಮಾರು 500 ಎಕರೆ ವಿಸ್ತಾರವಾದ ಸ್ಥಳದಲ್ಲಿ ನಿರ್ಮಾಣವಾಗಿರುವ ಈ ದೇವಾಲಯ ಸಂಕೀರ್ಣವು ಎತ್ತರದ ಅಡಿಪಾಯದ ಮೇಲೆ ನಿರ್ಮಾಣವಾಗಿದೆ. ಈ ಸಮುಚ್ಚಯದ ಸುತ್ತಲೂ ನೀರು ಕಾಲುವೆಗಳ ಸಂಕೀರ್ಣವೇ ಇದೆ. ಜೌಗು ಪ್ರದೇಶದ ಕಾರಣ ಅಡಿಪಾಯ ಎತ್ತರವಾಗಿದ್ದು ಪುರಾತನ ಎಂಜಿನೀರಿಂಗ್ ಅದ್ಭುತವಾಗಿದೆ. ಅಡಿಪಾಯ ಕುಸಿಯದಂತೆ ಆಳವಾದ ಹೊಂಡ ತೋಡಿ ಮರಳನ್ನು ಸುರಿದು ಅದರ ಮೇಲೆ ಭಾರೀ ಗಾತ್ರದ ಕಲ್ಲುಗಳನ್ನು ಹಾಕಿ ಅಡಿಪಾಯ ನಿರ್ಮಿಸಲಾಗಿದೆ. ಲ್ಯಾಟರೈಟ್ ಕಲ್ಲುಗಳನ್ನು ಹೊರತುಪಡಿಸಿ ಗಾರೆ ಅಥವಾ ಯಾವುದೇ ಲೋಹಗಳನ್ನು ಬಳಸಲಾಗಿಲ್ಲ. ಇಡೀ ದೇವಾಲಯವನ್ನು ನಯಗೊಳಿಸಿದ ಕಲ್ಲಿನ ದಿಮ್ಮಿಗಳನ್ನು ಒಂದರೊಳಕ್ಕೊಂದು ಇಂಟರ್ ಲಾಕ್ ಮಾಡಿ ಅಲುಗದಂತೆ ನಿಲ್ಲಿಸಲಾಗಿದೆ. ದೇವಾಲಯ ಸಂಕೀರ್ಣದಲ್ಲಿ ಸುಮಾರು 50 ಲಕ್ಷಗಳಷ್ಟು ಕಲ್ಲುಗಳನ್ನು ಬಳಸಲಾಗಿದೆ. ಅಂದು ಈ ದೇವಾಲಯವನ್ನು ನಿರ್ಮಿಸಲು ಸುಮಾರು 34 ವರ್ಷಗಳು ಬೇಕಾಗಿದ್ದವು. ಒಂದು ಅಂದಾಜಿನಂತೆ ಈಗ ಈ ದೇವಾಲಯವನ್ನು ನಿರ್ಮಿಸಲು ಸುಮಾರು 300 ವರ್ಷಗಳು ಬೇಕಾಗುತ್ತವೆ ಎಂದರೆ ಅಂಕೋರವಾಟದ ಅಗಾಧತೆಯ ಅರಿವಾಗುತ್ತದೆ.





ಮುಖ್ಯ ಗೋಪುರ

ದೇವಾಲಯ ಸಮುಚ್ಚಯದ ನಡುವೆ ಒಂದು ಮುಖ್ಯ ಗೋಪುರವಿದೆ. ಇದರ ಎತ್ತರ 43 ಮೀಟರ್ ಅಥವಾ 143.19 ಅಡಿ. ಅರಳಿದ ಕಮಲದ ಆಕಾರದಲ್ಲಿರುವ ಗೋಪುರದ ಕೆಳಗೆ ಗರ್ಭಗೃಹ ಮತ್ತು ಮುಖ್ಯ ದೇವತೆಯ 3.25 ಮೀಟರ್ ಎತ್ತರದ ವಿಗ್ರಹವಿದೆ. ಮೊದಲು ಇಲ್ಲಿ ಚಿನ್ನದ ವಿಗ್ರಹವಿತ್ತು ಎಂಬ ಹೇಳಿಕೆಗಳಿವೆ. ಎಂಟು ಕೈಗಳನ್ನು ಹೊಂದಿ ಶಂಖ, ಚಕ್ರ, ಗದಾಧಾರಿಯಾದ ಮಹಾ ವಿಷ್ಣುವಿನ ವಿಗ್ರಹವಿದೆ. 1934 ರಲ್ಲಿ ಪುರಾತತ್ವ ಶಾಸ್ತ್ರಜ್ಞರ ತಂಡವೊಂದು ಇಲ್ಲಿ ಪರಿಶೀಲನೆ ನಡೆಸಿತ್ತು. ಆ ಸಂದರ್ಭದಲ್ಲಿ ಮುಖ್ಯ ವಿಗ್ರಹ ಇದ್ದ ಸ್ಥಳದ ಕೆಳಗೆ ಎರಡು ಬಿಳಿಯ ಬಣ್ಣದ ರತ್ನಗಳು ಮತ್ತು ಚಿನ್ನದ ಎಲೆಗಳನ್ನು ಹುದುಗಿಸಲಾಗಿತ್ತು ಎಂಬ ಅಂಶ ಹೊರ ಬಂತು.

ಎಲೆನೋರ್ ಮನ್ನಿಕ್ಕಾ ಎಂಬ ಪುರಾತತ್ವ ಶಾಸ್ತ್ರಜ್ಞರು ಅಂಕೋರವಾಟ ದೇವಾಲಯವು ಗಣಿತದ ಲೆಕ್ಕಾಚಾರದ ಮೇಲೆ ನಿರ್ಮಾಣವಾಗಿದ್ದು ಪ್ರತೀ ಅಳತೆಯೂ ಒಂದಲ್ಲಾ ಒಂದು ನಿಗೂಢ ಅಳತೆಗಳ ಆಧಾರವನ್ನು ಹೊಂದಿದೆ ಎನ್ನುತ್ತಾರೆ. ಅವರ ಪ್ರಕಾರ ಅಂಕೋರವಾಟ ದೇವಾಲಯವು 13.41 ಡಿಗ್ರಿ ಉತ್ತರ ಅಕ್ಷಾಂಶದಲ್ಲಿದೆ ಮತ್ತು ಉತ್ತರ–ದಕ್ಷಿಣ ಅಕ್ಷದಲ್ಲಿನ ಕೇಂದ್ರ ಗೋಪುರ ಸಹಾ 13.41 ಗಜದ ಅಳತೆಯಲ್ಲಿದೆ. ಇದನ್ನು ಕಾಕತಾಳೀಯ ಎನ್ನಲಾಗುವುದಿಲ್ಲ. ಅಲ್ಲದೇ ಆಗಿನ ಖ್ಮೇರ್ ಜನ ಮೂಲ ವಿಗ್ರಹವಿದ್ದ ಸ್ಥಳವು ಭೂಮಿಯ ಕೇಂದ್ರ ಎಂದು ನಂಬಿದ್ದರು.

ವೈಜ್ಞಾನಿಕ ದೇವಾಲಯಗಳು

ಫನೋಂ ಬಕೆಂಗ್ ದೇವಾಲಯ ತನ್ನ ಸುತ್ತಾ 108 ಗೋಪುರಗಳನ್ನು ಹೊಂದಿದೆ. ಇದೂ ಸಹಾ ಹಿಂದೂ ಮತ್ತು ಬೌದ್ಧ ನಂಬಿಕೆಗಳ ಆಧಾರಗಳ ಮೇಲೆ ಆಧರಿಸಿದೆ. ಹಿಂದೂ ಮತ್ತು ಬೌದ್ಧ ನಂಬಿಕೆಗಳ ಪ್ರಕಾರ 108 ವಿಶಿಷ್ಟವಾದ ಸಂಖ್ಯೆ. ಈ ಸಂಖ್ಯೆ 72 ಮತ್ತು 36 ಸಂಖ್ಯೆಗಳ ಮೊತ್ತ. ಅಲ್ಲದೇ 72 ರ ಅರ್ಧ ಭಾಗ 36. ಭೂಮಿ ತನ್ನ ಅಕ್ಷದ ಮೇಲೆ ಸುತ್ತುವಾಗ ನಕ್ಷತ್ರಗಳ ಸ್ಥಾನದಲ್ಲಿ ಪ್ರತೀ 25,120 ವರ್ಷಗಳಲ್ಲಿ ಬದಲಾವಣೆಯಾಗುತ್ತದೆ. ಈ ಬದಲಾವಣೆಯು ಪ್ರತೀ 72 ವರ್ಷಗಳಿಗೆ ಒಂದು ಡಿಗ್ರೀ ಲೆಕ್ಕಾಚಾರದಲ್ಲಿ ಬದಲಾವಣೆಯಾಗುತ್ತಿರುತ್ತದೆ. ಮತ್ತೊಂದು ವಿಶಿಷ್ಟತೆಯೆಂದರೆ ಅಂಕೋರವಾಟ ಸಂಕೀರ್ಣದ ಕೇಂದ್ರವು 72







ಡಿಗ್ರಿ ಪೂರ್ವ ಅಕ್ಷಾಂಶದಲ್ಲಿದ್ದು ಈಜಿಪ್ಟ್‌ನ ಗೀಜ಼ಾ ಪಿರಮಿಡ್‌ನ ನೇರದಲ್ಲಿದೆ ಎನ್ನಲಾಗುತ್ತದೆ. ಬಕೋಂಗ್ ದೇವಾಲಯ, ಪ್ರಾಕೋ, ಪ್ರೇಮೋನಲಿ ದೇವಾಲಯಗಳೂ ಸಹಾ ನಕ್ಷತ್ರಗಳ ಸ್ಥಾನ, ಅಕ್ಷಾಂಶ–ರೇಖಾಂಶಗಳ ಆಧಾರದ ಮೇಲೆ ನಿರ್ಮಾಣವಾಗಿವೆ ಮತ್ತು ಇವು ನಕ್ಷತ್ರಗಳ ಸ್ಥಾನವನ್ನು ಪ್ರತಿನಿಧಿಸುತ್ತವೆ ಎನ್ನಲಾಗುತ್ತದೆ.

ಇಲ್ಲಿನ ಗೋಪುರಗಳು ಮೇರು ಪರ್ವತದ ಪ್ರತೀಕವಾಗಿದ್ದು 5 ಆಯತಾಕಾರದ ಗೋಡೆ ಮತ್ತು ಕಂದಕಗಳು ಮೇರು ಪರ್ವತ ಮತ್ತು ಸಮುದ್ರಗಳ ಸರಣಿಯ ಆಧಾರದ ಮೇಲೆ ಆಧರಿಸಿವೆ. ಉತ್ತರ–ದಕ್ಷಿಣ ಕೇಂದ್ರ ಮತ್ತು ಪೂರ್ವ–ಪಶ್ಚಿಮ ಕೇಂದ್ರದ ಪೌಳಿಯ ಗೋಡೆಗಳು 0.75 ಡಿಗ್ರಿ ದಕ್ಷಿಣದಿಂದ ಪೂರ್ವಕ್ಕೆ ಮತ್ತು ಉತ್ತರದಿಂದ ಪಶ್ಚಿಮಕ್ಕೆ ಓರೆಯಾಗಿ ನಿರ್ಮಿಸಲಾಗಿದೆ. ಇದು ಯಾವುದೋ ರಹಸ್ಯ ಲೆಕ್ಕಾಚಾರ ಅಧರಿಸಿದೆ ಎಂಬ ಅಭಿಪ್ರಾಯವಿದೆ.

ಮುಖ್ಯ ದೇವಾಲಯವು ಮೂರು ಹಂತಗಳ ಪ್ರವೇಶ ಹೊಂದಿದೆ. ಮೊದಲ ಹಂತದಲ್ಲಿ 187–215 ಮೀಟರ್ ಹೊರ ಪೌಳಿಯ ಗೋಡೆಯಿದ್ದು 1.5 ಕಿಲೋಮೀಟರ್ ಉದ್ದವಿದೆ. ನೀರಿನ ಕಾಲುವೆಗಳಿಂದ ಸುತ್ತುವರೆದಿದೆ. ಎರಡನೆ



ಹಂತದಲ್ಲಿನ 110–115 ಮೀಟರ್ ಅಳತೆಯ ಒಳ ಚೌಕಗಳಲ್ಲಿ ನಾಲ್ಕು ಮೂಲೆಗಳಲ್ಲಿ ನಾಲ್ಕು ಗೋಪುರಗಳಿವೆ. ಮೂರನೇ ಹಂತದ ನಾಲ್ಕು ಮೂಲೆಗಳಲ್ಲಿ ಮತ್ತೆ ನಾಲ್ಕು ಗೋಪುರಗಳಿವೆ. ಇದನ್ನು ದಾಟಿದ ನಂತರ ಕೇಂದ್ರ ಗರ್ಭ ಗೃಹದ ದೊಡ್ಡ ಗೋಪುರವಿದೆ. ಇದು ನೆಲ ಮಟ್ಟದಿಂದ 65 ಮೀಟರ್ ಮತ್ತು ಕಟ್ಟಡದಿಂದ 43 ಮೀಟರ್ ಎತ್ತರವಿದೆ.

ಶಿಲ್ಪಕಲೆ

ದೇಗುಲದ ಉತ್ತರ ಭಾಗದಲ್ಲಿ ಕುರುಕ್ಷೇತ್ರ ಯುದ್ಧದ ದೃಶ್ಯಗಳನ್ನು ಕೆತ್ತಲಾಗಿದೆ. ಪಶ್ಚಿಮ ದಿಕ್ಕಿನಲ್ಲಿ ಸೂರ್ಯವರ್ಮನ್ ಅರಸ ಆನೆಯ ಮೇಲೆ ಕುಳಿತು ತನ್ನ ರಾಜ ಲಾಂಛನ ಮತ್ತು ಸೇನೆಯೊಂದಿಗೆ ಮೆರವಣಿಗೆ ಹೊರಟಿರುವ ದೃಶ್ಯಗಳಿವೆ. ಅರಸನಿಗೆ 15 ಛತ್ರಿ–ಚಾಮರಗಳನ್ನು ಹಿಡಿಯಲಾಗಿದೆ. ಪೂರ್ವ ದಿಕ್ಕಿನಲ್ಲಿ 37 ಸ್ವರ್ಗಗಳ ಮತ್ತು 32 ನರಕಗಳ ವಿವರಣೆಗಳಿವೆ. ಇಲ್ಲಿ 18 ಭುಜಗಳನ್ನು ಹೊಂದಿದ ಯಮ ಧರ್ಮನು ಮೃತರ ವಿಚಾರಣೆ ನಡೆಸುತ್ತಿದ್ದಾನೆ. ಇದರ ಮೇಲು ಭಾಗದಲ್ಲಿ ಸುಂದರ ಸ್ತ್ರಿ–ಪುರುಷರ ಹಾಗೂ ಮಕ್ಕಳ ಕೆತ್ತನೆಗಳಿವೆ. ಅಪ್ಸರಸಿಯರ ಕೆತ್ತನೆಗಳು ಅಲ್ಲಲ್ಲಿ ಕಾಣುತ್ತವೆ.

ದಕ್ಷಿಣ ಭಾಗದಲ್ಲಿ 88 ಮಂದಿ ಅಸುರರು ಮತ್ತು 92 ಮಂದಿ ದೇವತೆಗಳು ಸಮುದ್ರ ಮಥನದಲ್ಲಿ ತೊಡಗಿರುವ ಬಲು ಸುಂದರ ಕೆತ್ತನೆಯ ದೃಶ್ಯಗಳಿವೆ. ಆದಿಶೇಷನನ್ನು ಹಗ್ಗವಾಗಿಸಿ ಕಡೆಯುತ್ತಿದ್ದಾಗ ಮಂದಾರ ಪರ್ವತ, ಲಕ್ಷ್ಮಿ, ಆಂಜನೇಯರು ಹೊರಬರುತ್ತಿರುವಂತೆ ಕೆತ್ತಲಾಗಿದೆ. ಉತ್ತರ ದಿಕ್ಕಿನ ಗ್ಯಾಲರಿಯಲ್ಲಿ ವಿಷ್ಣುವು ರಾಕ್ಷಸರನ್ನು ಸೋಲಿಸುವ ಕೆತ್ತನೆ ಇದೆ. ನಂತರ ವಿಷ್ಣುವಿನ ಅವತಾರವಾದ ಶ್ರೀಕೃಷ್ಣನು ಗೋವರ್ಧನ ಗಿರಿಯನ್ನು ಎತ್ತಿ ಹಿಡಿದು ದನ–ಕರುಗಳನ್ನು ಮತ್ತು ಗೋಕುಲದ ಜನರನ್ನು ರಕ್ಷಿಸಿದ ಹಾಗು ಬಾಣ ರಾಕ್ಷಸನ ವಧೆ ಮಾಡಿದ ವಿವರಣೆಗಳಿವೆ. ಮುಂದೆ ರಾಮಾಯಣದ ಚಿತ್ರಣ, ದಶಕಂಠ ರಾವಣನ, ಸೀತೆಯ ಕೆತ್ತನೆಗಳಿವೆ. ರಾಮನು ಮರೆಯಲ್ಲಿ ನಿಂತು ವಾಲಿಯ ವಧೆ ಮಾಡಿದ ವಿವರಣೆ ಇದೆ. ಮೇಲಂಕಣಗಳ ಖಾಲೀ ಜಾಗದಲ್ಲಿ ನರ್ತಿಸುತ್ತಿರುವ ಯುವತಿಯರ ಚಿತ್ರಗಳಿವೆ. ಶಿವ–ಪಾರ್ವತಿಯರು ತಮ್ಮ ಗಣಗಳೊಂದಿದೆ ಕೈಲಾಸ ಪರ್ವತದಲ್ಲಿ ಕುಳಿತಿರುವ ಕೆತ್ತನೆ ಇದೆ. ಅಲ್ಲಲ್ಲಿರುವ ಕಂಭಗಳ ಮೇಲೆ ಸಂಸ್ಕೃತದ ಮತ್ತು ಖ್ಮೇರ್ ಭಾಷೆಯ ಶಾಸನಗಳಿವೆ.





ವಾಹನಗಳು

ದೇವಾಲಯದಲ್ಲಿ ದೇವಾನು ದೇವತೆಗಳು ತಮ್ಮ-ತಮ್ಮ ವಾಹನಗಳ ಮೇಲೆ ಕುಳಿತಿರುವ ಕೆತ್ತನೆಗಳಿವೆ. ಸೂರ್ಯನು ತನ್ನ ರಥಕ್ಕೆ ಏಳು ಕುದುರೆಗಳನ್ನು ಕಟ್ಟಿ ಹೊರಟಿದ್ದಾನೆ. ಕುಬೇರನು ಯಕ್ಷನ ಹೆಗಲ ಮೇಲೆ ಕುಳಿತಿದ್ದರೆ ಬ್ರಹ್ಮನು ಹಂಸದ ಮೇಲೆ ಸವಾರಿ ಹೊರಟಿದ್ದಾನೆ. ಸ್ಕಂದನು ನವಿಲಿನ ಮೇಲೆ, ಇಂದ್ರನು ತನ್ನ ಐರಾವತದ ಮೇಲೆ, ಯಮನು ಕೋಣದ ಮೇಲೆ, ಶಿವನು ನಂದಿಯಮೇಲೆ ಕುಳಿತಿದ್ದಾನೆ. ಸಿಂಹದ ಮೇಲೆ ಮತ್ತು ಕುದುರೆಯ ಮೇಲೆ ಕುಳಿತ ಮತ್ತೆರಡು ದೇವತೆಗಳ ಕೆತ್ತನೆಗಳಿವೆ. ಒಂದೆಡೆ ಡೈನೋಸಾರಸ್ ಮತ್ತು ಸ್ಟಾಗೋಸಾರಸ್ ಹೋಲುವಂತಹ ಪ್ರಾಣಿಗಳ ಕೆತ್ತನೆ ಇದೆ. ಸಹಸ್ರ ವರ್ಷಗಳ ಹಿಂದೆ ಇಲ್ಲಿನ ಶಿಲ್ಪಕಾರರಿಗೆ ಲಕ್ಷಾಂತರ ವರ್ಷಗಳ ಹಿಂದೆ ಗತಿಸಿದ ಪ್ರಾಣಿಗಳ ರೂಪು ತಿಳಿದದ್ದು ಹೇಗೆ ಎಂಬ ಪ್ರಶ್ನೆ ಕಾಡುತ್ತದೆ.

ಈ ಕೆತ್ತನೆಗಳು ವಾಸ್ತು ಶಿಲ್ಪದ ಅತ್ಯುನ್ನತ ಕಲಾಕೃತಿಗಳೇನೂ ಅಲ್ಲ. ಇವುಗಳಲ್ಲಿ ಬೇಲೂರು-ಹಳೇ ಬೀಡುಗಳ ಸೂಕ್ಷ್ಮತೆಯಾಗಲೀ ಅಥವಾ ಖಜುರಾಹೋದ ತಾಂತ್ರಿಕ ಉದ್ದೇಶವಾಗಲೀ ಇದ್ದಂತೆ ಕಾಣುವುದಿಲ್ಲ. ಧರ್ಮದ ಬಗ್ಗೆ ತಮಗಿರುವ ಒಲವು ಮತ್ತು ಅದನ್ನು ಮುಂದಿನ ಜನಾಂಗಕ್ಕೆ ತೆರೆದಿಡುವ ಕಾತುರತೆ ಕಾಣುತ್ತದೆ. ದೇವಾಲಯದ ಗೋಡೆಗಳನ್ನು ಕಲ್ಲಿನ ದಿಮ್ಮಿಗಳಿಂದ ನಿರ್ಮಿಸಿದ್ದು ಅದರ ಮೇಲೆ ಕೆತ್ತನೆ ಕೆಲಸ ನಡೆದಿದೆ. ಹಾಗಾಗಿ ಶಿಲ್ಪಗಳ ನಡುವೆ ಬಿರುಕು ಇದೆ. ದೇವಾಲಯದ ಬೃಹದಾಕಾರತೆ, ವೈಜ್ಞಾನಿಕ ಅಳತೆ ಮತ್ತು ಲೆಕ್ಕಾಚಾರಗಳು ಸೇರಿ ಇದನ್ನು ಒಂದು ಮಹತ್ ಕಲಾಕೃತಿಯನ್ನಾಗಿಸಿವೆ. ಕಾಲನ ಹೊಡೆತಕ್ಕೆ ಸಿಲುಕಿದ ಇಲ್ಲಿನ ದೇವಾಲಯಗಳನ್ನು ಈಗಾಗಲೇ ಕಾಡು ನುಂಗಿ ಹಾಕಿದ್ದು ಉಳಿದ ಭಾಗವನ್ನು ಸುಸ್ಥಿತಿಯಲ್ಲಿಡಲು ಸರ್ಕಾರ ಮತ್ತು ಯುನೆಸ್ಕೋ ಪ್ರಯತ್ನಪಡುತ್ತಿವೆ.

ಇತರೇ ದೇವಾಲಯಗಳು

ಅಂಕೋರ ಧಾಮ ಮೊದಲು ಖ್ಮೇರ್ ಅರಸರ ರಾಜಧಾನಿಯಾಗಿತ್ತು. ಈಗ ಪಾಳು ಬಿದ್ದಿರುವ ನಗರದ ಮಧ್ಯ ಭಾಗದಲ್ಲಿ ಬಯೋನ್ ಚಿನ್ನದ ಗೋಪುರವಿದೆ. ಮತ್ತೆ 20 ಗೋಪುರಗಳಿದ್ದು ಅವುಗಳಲ್ಲಿ ಅನೇಕ ಗೂಡುಗಳನ್ನು ಬಿಡಲಾಗಿದ್ದು ಆ ಗೂಡುಗಳಲ್ಲಿ ಬುದ್ಧನ ವಿಗ್ರಹಗಳಿವೆ. ಬಳಿಯಲ್ಲೇ ಆನೆ ಮಂಟಪವಿದೆ. ಅಂಕೋರ ಧಾಮ್ ಸಹಾ ಅನೇಕ ಖಭೌತ ಲೆಕ್ಕಾಚಾರಗಳನ್ನು ಆಧರಿಸಿದ್ದು ಆ ರಹಸ್ಯವನ್ನು





ತನ್ನೊಡಲಲ್ಲಿ ಬಚ್ಚಿಟ್ಟುಕೊಂಡಿದೆ. ಪ್ರಸಾತ್ ಬಕೋಂಗ್ ಮತ್ತೊಂದು ದೇವಾಲಯವಾಗಿದ್ದು ಇದನ್ನು ಒಂದನೇ ಇಂದ್ರವರ್ಮನು ಕ್ರಿ.ಶ.9 ನೇ ಶತಮಾನದಲ್ಲಿ ನಿರ್ಮಿಸಿದ. ಇದು ಶಿವನ ದೇವಾಲಯ. ಈಗ ಪಾಳು ಬಿದ್ದ ಸ್ಥಿತಿಯಲ್ಲಿದೆ.

ಪ್ರಸಾತ್ ಬಯೋನ್ ಅಂಕೋರ ಧಾಮದ ಬಳಿ ಇದೆ. ಈದನ್ನು ಕ್ರಿ.ಶ.12 ನೇ ಶತಮಾನದಲ್ಲಿ ಏಳನೇ ಜಯವರ್ಮನ್ ನಿರ್ಮಿಸಿದ. ಇದು ಅಂಕೋರವಾಟದ ದೇವಾಲಯಗಳಲ್ಲಿ ಕೊನೆಯ ನಿರ್ಮಾಣ. ಇಲ್ಲಿ ಒಂದು ಭಾರಿ ಕೆತ್ತನೆ ಇದ್ದು ಅದನ್ನು ಬೌದ್ಧ ದೇವತೆ ಅವಲೊಕಿತೇಶ್ವರ ಎನ್ನಲಾಗಿದೆ.


ಪ್ರಸಾತ್ ತಾ ಪ್ರೋಮ್ ದೇವಾಲಯವು ಬ್ರಹ್ಮನ ದೇವಾಲಯವೆಂಬ ಅಭಿಪ್ರಾಯವಿದೆ. ಈ ದೇವಾಲಯವನ್ನು ಸುತ್ತುವರೆದಿರುವ ಆಲದ ಮರವೊಂದು ಬೃಹದಾಕಾರವಾಗಿ ಬೆಳೆದಿದೆ. ಒಂದಾನೊಂದು ಕಾಲದಲ್ಲಿ ಈ ದೇವಾಲಯದ ಸುತ್ತಾ 3140 ಹಳ್ಳಿಗಳು ಮತ್ತು 79,365 ಜನರು ಇಲ್ಲಿ ವಾಸಿಸುತ್ತಿದ್ದರು ಎಂದು ಸಂಸ್ಕೃತ ಭಾಷೆಯ ಶಾಸನವೊಂದು ತಿಳಿಸುತ್ತದೆ. ಆಗ ದೇವಾಲಯದ ಸಂಕೀರ್ಣದಲ್ಲಿ 18 ಹಿರಿಯ ಅರ್ಚಕರು, 2740 ಸಿಬ್ಬಂದಿ, 2202 ಸಹಾಯಕರು ಮತ್ತು 615 ಜನ ನರ್ತಕಿಯರಿದ್ದರಂತೆ. ಇಲ್ಲಿ ಸುಮಾರು 500 ಕೇಜಿಗಳಷ್ಟು ಚಿನ್ನ, 35 ವಜ್ರಗಳು, 40,620 ಕಡಲ ಮುತ್ತುಗಳು, 4540 ಬೆಲೆ ಬಾಳುವ ರತ್ನಗಳಿದ್ದುವಂತೆ. ಈ ವಿವರಣೆ ಉತ್ಪ್ರೇಕ್ಷೆಯಂತೆ ಕಂಡರು ಸಹ ಅರಸರ ವೈಭವವನ್ನು ತೋರಿಸುವ ಉದ್ದೇಶ ಇಲ್ಲಿತ್ತು ಎನ್ನಬಹುದು. ಪಾಳು ಬಿದ್ದ ಸುಮಾರು 566 ಮನೆಗಳ ಸಂಕೀರ್ಣವನ್ನು ಈಗಲು ನೋಡಬಹುದು.

ಸ್ರಾ ಸ್ರಂಗ್ ಇಲ್ಲಿನ ದೊಡ್ಡ ಸರೋವರ. ಇದನ್ನು ರಾಜರ ಸ್ನಾನ ಗೃಹ ಎನ್ನಲಾಗುತ್ತದೆ. ಸಿಯಾಮ್ ರೀಪ್ ಮಾರುಕಟ್ಟೆಯಿಂದ ಸುಮಾರು 11 ಕಿಮಿ ದೂರವಿರುವ ರೊಲೌಸ್ ಸ್ಮಾರಕಗಳ ಸಂಕೀರ್ಣವನ್ನು ಹರಿಹರನ ದೇವಾಲಯ ಎನ್ನಲಾಗುತ್ತದೆ. ಇಲ್ಲಿ ಕೆಲವು ಸೂಕ್ಷ್ಮ ಕೆತ್ತನೆಗಳನ್ನು ಕಾಣಬಹುದು. ಸ್ತ್ರೀಯರ, ಅಪ್ಸರೆಯರ ಒಡವೆಗಳು ಮತ್ತು ಉಡುಪುಗಳ ಸೂಕ್ಷ್ಮತೆಯ ಕೆತ್ತನೆ ಇಲ್ಲಿದೆ.

ಪ್ರೇ ಪಿಥು, ಪ್ರೇ ಪಲಿಲೇ, ಪ್ರಸಾತ್ ಪ್ರೆ ಖಾನ್, ಪ್ರಸಾತ್ ಪ್ರೇ ರಬ್, ಫಿಮೆಅನ್ ಅಕಸ್, ಚೌ ಸೇ ತೆವೋದಾ, ಪ್ರಸಾತ್ ಬೆಂಗ್ ಮೆಅಲೆ (ಕಮಲ ಕೊಳ), ಪ್ರಸಾತ್ ಬಪುಹೋನ್, ಬಂತೇ ಸಮ್ರೇ,ಪ್ರಸಾತ್ ಪ್ರೆ ಕೋ ದೇವಾಲಯಗಳು ಮತ್ತು ಅಂಗಕೋರ್ ಪುರಾತತ್ವ ಪಾರ್ಕ್ ನೋಡತಕ್ಕ ಸ್ಥಳಗಳು.









ಅಂಕೋರವಾಟದ ಪತನಕ್ಕೆ ಕಾರಣಗಳೇನು ?

ಹಿಂದೂಗಳಾಗಿದ್ದ ಅರಸರು ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದ ನಂತರ ಈ ಹಿಂದೂ ದೇವಾಲಯದತ್ತ ಗಮನ ಕಡಮೆಯಾಯಿತು ಎಂಬುದು ಒಂದು ಕಾರಣವಾದರೆ ಈ ಸಂಕೀರ್ಣದ ಬಳಿ ನಿರ್ಮಿಸಿದ ಕೆಲವು ಅಣೆಕಟ್ಟೆಗಳು ನೀರಿನ ಸೆಲೆಯನ್ನು ಬತ್ತಿಸಿ ಈ ಪ್ರದೇಶವನ್ನು ಪಾಳುಗೆಡವಿದವು ಎಂಬ ಅಭಿಪ್ರಾಯವನ್ನು ಕೆಲವು ವಿದ್ವಾಂಸರು ಪ್ರತಿಪಾದಿಸುತ್ತಾರೆ. ಪುಲೋಕ್, ರೌಲೊಸ್ ಮತ್ತು ಸಿಯೆಮ್ ರಿಪ್ ನದಿಗಳಿಗೆ ಕಟ್ಟಲಾದ ಅಣೆಕಟ್ಟೆಗಳೆ ಈ ದುರಂತಕ್ಕೆ ಕಾರಣ ಎನ್ನಲಾಗಿದೆ. ಮತ್ತೆ ಕೆಲವು ವಿಜ್ಞಾನಿಗಳ ಪ್ರಕಾರ ನೀರಿನ ಕೊರತೆಯಿಂದ ಇಲ್ಲಿ ಸುಮಾರು ಕ್ರಿ.ಶ.13 ನೆ





ಶತಮಾನದ ನಂತರ ಬಂದ ಭೀಕರ ಬರಗಾಲ ಕಾರಣವಿರಬಹುದು. ಈ ಬರಗಾಲವು ಕ್ರಿ.ಶ.1362 ರಿಂದ ಕ್ರಿ.ಶ. 1392ರವರೆಗೆ ಮತ್ತು 1415 ರಿಂದ 1440 ರವರೆಗೆ ಕಾಡಿತ್ತೆಂದು ಹೇಳಲಾಗಿದೆ. ಜೊತೆಗೆ ಕ್ರಿ.ಶ 1431 ರ ಸಮಯದಲ್ಲಿ ಥಾಯ್ ದಾಳಿಕಾರರೂ ಸಹ ಈ ಸಮುಚ್ಚಯಕ್ಕೆ ಹೇಳತೀರದ ಹಾನಿ ಮಾಡಿದರು ಎಂದು ಹೇಳಲಾಗಿದೆ.

ವಿರಾಟ ರಾಮಾಯಣ ದೇವಾಲಯ

ಅಂಕೋರವಾಟ ದೇವಾಲಯದ ಅಗಾಧತೆ ಮತ್ತು ಜನಪ್ರಿಯತೆಯಿಂದ ಪ್ರಭಾವಿತಗೊಂಡು ಬಿಹಾರದ ಧಾರ್ಮಿಕ ಸಂಸ್ಥೆಯೊಂದು ಭಾರಿ ದೇಗುಲ ನಿರ್ಮಾಣಕ್ಕೆ ಕೈಹಾಕಿರುವ ಸುದ್ದಿ ಬಂದಿದೆ. ಇದರ ನೀಲ ನಕ್ಷೆ ಸಿದ್ಧಗೊಳ್ಳುತ್ತಿದ್ದು ಅದರ ಕೆಲ ವಿವರಗಳು ಬಹಿರಂಗಗೊಂಡಿವೆ. ಅಂಕೋರವಾಟಕ್ಕಿಂತಾ ಎರಡು ಪಟ್ಟು ದೊಡ್ಡದಾಗಿರಬೇಕೆಂಬ ಉದ್ದೇಶ ಹೊಂದಲಾಗಿದೆ.

ಹೊಸಾ ದೇವಾಲಯಕ್ಕೆ ಮೊದಲು ಅಂಕೋರವಾಟ ವಿಷ್ಣು ದೇವಾಲಯ ಎಂದು ಹೆಸರಿಡಲು ಉದ್ದೇಶಿಸಿದ್ದು ನಂತರ ವಿರಾಟ ರಾಮಾಯಣ ದೇವಾಲಯ ಎಂದು ಹೆಸರನ್ನು ಬದಲಿಸಲಾಗಿದೆ. ಈ ದೇವಾಲಯದ ಮುಖ್ಯ ಗೋಪುರವು ಸುಮಾರು 405 ಅಡಿ ಎತ್ತರ ಇದ್ದು ಈ ಸಂಕೀರ್ಣದಲ್ಲಿ 18 ಗೋಪುರಗಳಿರುತ್ತವಂತೆ.

ತಲುಪುವ ಹಾದಿ–

ಬೆಂಗಳುರಿನಿಂದ ನಾಂಪೆಂಗ್ 43 ಕಿಮಿ ದೂರವಿದ್ದು ನವ ದೆಹಲಿಯಿಂದ ನೇರ ವಿಮಾನ ಸೌಕರ್ಯವಿದೆ. ಇಲ್ಲಿಗೆ ಪ್ರವೇಶಿಸಲು ಪಾಸ್‌ಪೋರ್ಟ್ ಅಗತ್ಯವಿದೆ. ಇಲ್ಲಿಗೆ ಭಾರತದ ಖ್ಯಾತ ಪ್ರವಾಸಿ ಸಂಸ್ಥೆಗಳು ವ್ಯವಸ್ಥಿತ ಪ್ರವಾಸಗಳನ್ನು ಏರ್ಪಡಿಸುತ್ತವೆ. ನಿಮ್ಮ ವೀಸಾ ಮತ್ತು ಸ್ಥಳೀಯ ಪ್ರವಾಸದ ಏರ್ಪಾಡುಗಳನ್ನು ಸಂಸ್ಥೆಗಳು ತಾವೇ ಮಾಡಿಕೊಳ್ಳುವುದರಿಂದ ಆತಂಕವಿಲ್ಲ. ನಂಪೆಂಗ್ ನಗರ ಪ್ರದಕ್ಷಿಣೆ ಹಾಕಬಹುದು. ವಾಪಾಸ್ ಬರುವಾಗ ನೆನಪುಗಳ ಬುತ್ತಿ ಉಚಿತ.

ಅಂಕೋರವಾಟ ದೇವಾಲಯಗಳಿಗೆ 20 ಡಾಲರ್ ಪ್ರವೇಶ ಶುಲ್ಕವಿದ್ದು ಸದರಿ ಪಾಸುಗಳು ವಿಮಾನ ನಿಲ್ದಾಣದಲ್ಲು ದೊರೆಯುತ್ತವೆ. ಪ್ರವೇಶದ ಸಮಯ ಬೆಳಗಿನ 5 ರಿಂದ ಸಂಜೆ 6 ಗಂಟೆಗಳವರೆಗೆ.

❖





4. ನಾಥ ಪಂಥ–ಶೈವ ಪದ್ಧತಿಯ ಪರಮಹಂಸ ಅವಸ್ಥೆ

ಭಾರತದ ಧಾರ್ಮಿಕ ಜಗತ್ತಿನಲ್ಲಿ ಅನೇಕ ಕ್ಷಿಪ್ರ ಕ್ರಾಂತಿಗಳು, ನಿರಂತರ ತಲ್ಲಣಗಳು ಸಂಭವಿಸಿವೆ. ಮೂಲ ಹಿಂದೂ ಧರ್ಮಇಂತಹ ಅನೇಕ ಬದಲಾವಣೆಗಳನ್ನು ಅರಗಿಸಿಕೊಂಡು ಅನನ್ಯವಾಗಿ ನಿಂತಹಾಗೆ ಅಂತರ್ಮುಖವಾಗಿ ತನ್ನನ್ನೇ ಪರೀಕ್ಷೆಗೆ ಒಳಪಡಿಸಿಕೊಳ್ಳುವುದರ ಮೂಲಕ ಹೊಸ ಧರ್ಮಗಳಿಗೆ ಹಾದಿ ಮಾಡಿಕೊಟ್ಟಿದೆ. ಬೌದ್ಧ ಮತ್ತು ಜೈನ ಧರ್ಮಗಳು ಉದಯಿಸಿದ ನಂತರವೂ ಕಳೆಗುಂದದ ಹಿಂದೂ ಧರ್ಮ ವೈಷ್ಣವ ಮತ್ತು ಶೈವ ಪಂಥವಾಗಿ ಇಬ್ಭಾಗವಾಗಿ ಮೋಕ್ಷಕ್ಕೆ ದಾರಿ ಕಾಣುವ ವೈವಿಧ್ಯಮಯ ಹಾದಿಗಳನ್ನು ತೆರೆದಿಟ್ಟಿತು. ಧಾರ್ಮಿಕ ವಿಕಾಸ ಅಷ್ಟಕ್ಕೇ ನಿಲ್ಲದೇ ಶೈವ ಪಂಥ ಇನ್ನೂ ನಾಲ್ಕಾರು ಪಂಥಗಳಾಗಿ ಒಡೆಯಿತು. ಇವೆಲ್ಲಾ ಪಂಥಗಳು ತಮ್ಮವೇ ಆದಸಂಪ್ರದಾಯಗಳು; ತಾಂತ್ರಿಕ ಆಚರಣೆಗಳ ಮೂಲಕ ಬದುಕಿನ ಏಕತಾನತೆ ಮತ್ತು ಅಂಧಕಾರದಿಂದ ದೂರ ಹೋಗಲು ಆಸಕ್ತಿ ತೋರಿಸಿದವು.

ಹಿಂದೂ ಧರ್ಮ

ಭಾರತದ ಧಾರ್ಮಿಕ ಕ್ಷಿತಿಜದಲ್ಲಿ ಮೊದಲಿಗೆ ಹಿಂದೂ ಧರ್ಮ ಒಂದೇ ವಿರಾಜಿಸುತ್ತಿದ್ದ ಸಂದರ್ಭದಲ್ಲಿ ಬ್ರಹ್ಮ, ಈಶ್ವರ ಮತ್ತು ವಿಷ್ಣು ತ್ರಿಮೂರ್ತಿಗಳೆಂದು ಗುರುತಿಸಲ್ಪಟ್ಟರು. ಆಗ ಮೋಕ್ಷ ಸಾಧನೆಗೆ ಇದ್ದುದೇ ಎರಡು ದಾರಿಗಳು. ಮೊದಲನೆಯದಾಗಿ ಭಕ್ತಿ ಮಾರ್ಗ ಎರಡನೆಯದಾಗಿ ತತ್ವ ಮಾರ್ಗ. ಇವೆರಡು ಕೂಡಾ ಮುಂದಿನ ಕಾಲಘಟ್ಟದಲ್ಲಿ ಕವಲುಗಳಾಗಿ ಒಡೆದವು.

ಮುಂದೆ ಗ್ರಾಮೀಣ ಸಂಪ್ರದಾಯಗಳು, ವೈದೀಕ, ವೇದ ಮೂಲದ, ಯೋಗಮೂಲದ, ವೇದಾಂತದ, ಕರ್ಮಮಾರ್ಗದ ಭಕ್ತಿ ಆಚರಣೆಗಳು ಭಾರತದ



ಧಾರ್ಮಿಕ ಜಗತ್ತಿನಲ್ಲಿ ಕಂಡುಬರುತ್ತಿವೆ ಎಂದು ಮೆಕ್ ಡ್ಯಾನಿಯಲ್ ತಮ್ಮ ಗ್ರಂಥ ಹಿಂದೂಯಿಸಂನಲ್ಲಿ ಅಭಿಪ್ರಾಯಪಡುತ್ತಾರೆ.

ಜೀವದ ಮೂಲವಾಗಿ ಆತ್ಮ, ಮಾಯ, ಸಂಸಾರ, ಪುರುಷಾರ್ಥಗಳು ಇದ್ದವು. ಮನುಷ್ಯನ ಬದುಕನ್ನು ನಿರ್ದೇಶಿಸಲು ನೀತಿಶಾಸ್ತ್ರದ ರಚನೆಯಾಯಿತು. ಅವುಗಳಲ್ಲಿ ನೀತಿಶಾಸ್ತ್ರ, ಯಮಸ್, ಅಹಿಂಸ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ, ಸತ್ಯ, ದಮ (ಆತ್ಮನಿಗ್ರಹ), ದಯಾ, ಆಕ್ರೋಧ, ಆರ್ಜ್ವ, ಸಂತೋಷ, ತಪಸ್, ಸ್ವಾಧ್ಯಾಯ, ಶೌಚ, ಮಿತಾಹಾರ ಮತ್ತು ದಾನಗಳೆಂಬ ಹಾದಿಗಳನ್ನು ಹಾಕಿಕೊಡಲಾಯ್ತು. ವಿಮೋಚನೆಗಾಗಿ ಭಕ್ತಿಯೋಗ, ಜ್ಞಾನಯೋಗ ಮತ್ತು ಕರ್ಮಯೋಗಗಳು ಕಂಡವು.


ಮನುಷ್ಯನಿಗೆ ದೈವ ಸಾಕ್ಷಾತ್ಕಾರವಾಗಲು ಪೂಜೆ, ದೇವಾಲಯ, ಮೂರ್ತಿ, ಭಕ್ತಿ, ಜಪ, ಭಜನೆ, ಯಜ್ಞ, ಹೋಮ, ವ್ರತ, ಪ್ರಾಯಶ್ಚಿತ್ತ, ತೀರ್ಥ, ಮಠ, ಧ್ಯಾನ, ದಾನ ಮಾರ್ಗಗಳು ತೆರೆದವು. ಇವುಗಳಿಗೆ ಗುರುಗಳಾಗಿ ಸಪ್ತಋಷಿಗಳು, ಅಗಸ್ತ್ಯ, ಅಂಗೀರಸ, ಆರುಣಿ, ಅಷ್ಟಾವಕ್ರ, ಅತ್ರಿ, ಭಾರದ್ವಾಜ, ಗೌತಮ, ಕಪಿಲ, ಕಶ್ಯಪ, ಪಾಣಿನಿ, ಪತಂಜಲಿ, ಜಾಬಾಲ, ವಾಲ್ಮೀಕಿ, ವಶಿಷ್ಠ, ವಿಶ್ವಾಮಿತ್ರ, ವ್ಯಾಸ, ಯಾಗ್ನವಲ್ಕ್ಯ ಮುಂತಾದವರಿದ್ದರು.

ವೈಷ್ಣವ ಪಂಥ

ಪ್ರತಿಯೊಂದು ಪಂಥವೂ ಕೂಡ ತನ್ನ ಹಾದಿಯೇ ಸರಿಯೆಂದು ವಾದ ಮಂಡಿಸುತ್ತದೆ. ವೈಷ್ಣವ ಪಂಥ ಕೂಡ ಇದಕ್ಕೆ ಹೊರತಾಗಿರಲಿಲ್ಲ. ವೈಷ್ಣವ ಪಂಥವು ವಿಷ್ಣು, ಕೃಷ್ಣ ಮತ್ತು ರಾಮರನ್ನು ತನ್ನ ಮುಖ್ಯ ದೇವತೆಗಳಾಗಿ ಒಪ್ಪಿಕೊಂಡಿದೆ. ದಶಾವತಾರಗಳ ಮತ್ಸ್ಯ, ಕೂರ್ಮ, ವರಾಹಾ, ನರಸಿಂಹ, ವಾಮನ, ಪರಶುರಾಮ, ರಾಮ, ಬಲರಾಮ, ಕೃಷ್ಣರನ್ನು ಕೂಡಾ ಮುಖ್ಯ ದೇವತೆಗಳಾಗಿ ಪೂಜಿಸುತ್ತದೆ.

ವೈಷ್ಣವ ಪಂಥಕ್ಕೆ ವೇದಗಳು, ಉಪನಿಷದ್, ಭಗವದ್ಗೀತೆ, ಪುರಾಣಗಳು ಪ್ರಮುಖ ಧಾರ್ಮಿಕ ಗ್ರಂಥಗಳಾಗಿವೆ. ಇವುಗಳ ಆಧಾರದ ಮೇಲೆ ಶ್ರೀ (ವಿಶಿಷ್ಟಾದ್ವೈತ), ಬ್ರಹ್ಮ (ದ್ವೈತ, ಅಚಿಂತ್ಯ-ಭೇದ-ಅಭೇದ), ರುದ್ರ (ಶುದ್ಧಾದ್ವೈತ), ನಿಂಬಾರಕ (ದ್ವೈತ-ಅದ್ವೈತ) ಮುಖ್ಯವಾದ ಸಂಪ್ರದಾಯಗಳನ್ನು ನಿರ್ದಿಷ್ಟಪಡಿಸಲಾಗಿದೆ.





ಮೇಲಿನ ಗ್ರಂಥಗಳು, ಸಂಪ್ರದಾಯಗಳನ್ನು ವಿಶ್ಲೇಷಿಸಿ ಸರಿ ಮಾರ್ಗದಲ್ಲಿ ಕರೆದೊಯ್ಯಲು ಪೂಜನೀಯ ವೈಷ್ಣವ ಗುರು ಪರಂಪರೆಯಲ್ಲಿ ನಮ್ಮಾಳ್ವರ್, ಯಮುನಾಚಾರ್ಯ, ಶಂಕರಾಚಾರ್ಯ, ರಾಮಾನುಜ, ಮಧ್ವ, ಚೈತನ್ಯ, ವಲ್ಲಭ, ಶಂಕರದೇವ, ನಿಂಬಾರಕ ಇತ್ಯಾದಿ ಗುರುವರ್ಗವಿದೆ.

ವೈಷ್ಣವ ಪಂಥದ ಜನ ಕೂಡಾ ತಮ್ಮದೇ ಆದ ಕೆಲವು ಸಂಪ್ರದಾಯಗಳನ್ನು ಹೊಂದಿದ್ದಾರೆ. ಅವನ್ನು ಪುಷ್ಟಿ ಮಾರ್ಗ, ಭಾಗವತ, ಸ್ವಾಮಿನಾರಾಯಣ, ಪ್ರಣಾಮಿ, ರಾಮನಂದಿ, ವೈಖಾನಸ, ಇಸ್ಕಾನ್ ಇತ್ಯಾದಿಯಾಗಿ ವರ್ಗೀಕರಿಸಬಹುದು.

ಇವೆಲ್ಲಾ ಪಂಥ, ಆಚರಣೆ ಮತ್ತು ಗುರುವರ್ಗ ಸೌಮ್ಯ ಪೂಜೆಗಳ ಮೂಲಕ ಸಾಧಕರು ಭಗವಂತನ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸಿದರು. ಯಾವುದೇ ಪಂಥ ಕೂಡಾ ಕ್ಲಿಷ್ಟ ಆಚರಣೆಗಳ ಮೂಲಕ ಸಾಧನೆಗೆ ಮುಂದಾಗಲಿಲ್ಲ. ಆದರೆ ಶೈವ ಪಂಥ ಮಾತ್ರಾ ತನ್ನೊಳಗೇ ಅನೇಕ ಒಳಹಾದಿಗಳನ್ನು ತೆರೆದುಕೊಳ್ಳಲಾರಂಭಿಸಿತು. ಇದು ಹಿಂದೂ ಧಾರ್ಮಿಕ ಜಗತ್ತಿನ ಒಂದು ಪ್ರಮುಖ ಘಟ್ಟ.

ಶೈವಪಂಥ

ಶಿವ ಮತ್ತು ಶಕ್ತಿಯರೇ ಈ ಪಂಥದ ಮೂಲ ದೈವಗಳು. ಶಿವ–ಶಕ್ತಿಯರನ್ನು ಪುರುಷ ಮತ್ತು ಪ್ರಕೃತಿಗೆ ಹೋಲಿಸಿ ನಾನಾ ತಾಂತ್ರಿಕ ಹಾದಿಗಳನ್ನು ಕಂಡುಹಿಡಿಯಲಾಯ್ತು. ಇವರನ್ನು ಸದಾಶಿವ, ರುದ್ರ, ಭೈರವ, ಪಾರ್ವತಿ, ದುರ್ಗಾ, ಕಾಳಿ, ಗಣೇಶ, ಕಾರ್ತಿಕೇಯರ ರೂಪದಲ್ಲಿ ಕಾಣಲಾಯ್ತು. ದೈವ ಸಾಕ್ಷಾತ್ಕಾರಕ್ಕೆ ಶಾಸ್ತ್ರ ಮತ್ತು ರೂಢಿ ಪಂಥಗಳು ಹುಟ್ಟಿದವು. ಇವನ್ನು ಆಚರಿಸಲು ಆದಿ ಮಾರ್ಗ ಮತ್ತು ಮಂತ್ರ ಮಾರ್ಗಗಳು ಹುಟ್ಟಿದವು. ಆದಿಮಾರ್ಗದಲ್ಲಿ ಪಾಶುಪಥ, ಕಾಳಾಮುಖ ಮತ್ತು ಕಾಪಾಲಿಕ, ನಾಥ ಪಂಥಗಳು ಕಾಣಿಸಿಕೊಂಡವು. ಮಂತ್ರ ಮಾರ್ಗದಲ್ಲಿ ಸೈದ್ಧಾಂತಿಕ, ಅಸೈದ್ಧಾಂತಿಕ ಎಂಬ ಎರಡು ಭಾಗಗಳಾದವು. ಅಸೈದ್ಧಾಂತಿಕ ಮಾರ್ಗದಲ್ಲಿ ಕಾಶ್ಮೀರ ಶೈವ, ಪ್ರತ್ಯಭಿಜ್ಞ, ವಾಮ, ದಕ್ಷಿಣ, ಕೌಲ, ತ್ರಿಕ, ಯಮಳ, ಕುಬ್ಜಿಕ, ನೇತ್ರ ಎಂಬ ಪಂಥಗಳಾದವು.ಇವುಗಳ ಅಧ್ಯಯನವೇ ಮತ್ತೊಂದು ಮಹಾ ಸಾಗರ. ಶಕ್ತಿ ಉಪಾಸನೆ ಶೈವ ಪಂಥದ ಆಚರಣೆಯಾದರೂ ನಾಥ ಮಹಾಪೀಠಗಳಲ್ಲಿ ಅಸ್ಸಾಮಿನ ಕಾಮಾಖ್ಯ ಮಂದಿರ ಒಂದು ಪ್ರಮುಖ ಸ್ಥಳವಾಗಿದೆ. ಇಲ್ಲಿ ಇಂದಿಗೂ ತಾಂತ್ರಿಕ ಆಚರಣೆಗಳು ನಡೆಯುತ್ತಿವೆ.

ಇವೆಲ್ಲಾ ಪಂಥಗಳ ಆದಿಗುರುಗಳಾಗಿ ಲಕುಲೀಶ, ಅಭಿನವ, ವಸುಗುಪ್ತ, ನಾಯನಾರರು, ಬಸವ, ಶರಣರು, ನವನಾಥರು ಮೋಕ್ಷದೆಡೆಗೆ ಬದುಕನ್ನು



ಮುನ್ನಡೆಸಿದರು. ಹೀಗೆ ಮುನ್ನೆಲೆಗೆ ಬಂದ ಕೆಲವು ಪಂಥಗಳು ಕಾಲಕ್ರಮೇಣ ಮರೆಯಾಗಿ ಹೋದವು. ನಾಗಾ ಸಾಧುಗಳು ಮತ್ತು ಅಘೋರಿಗಳು ತಮ್ಮ ರಹಸ್ಯ ಆಚರಣೆಗಳೊಂದಿಗೆ ಸಮಾಜದಿಂದ ದೂರವೇ ಉಳಿದಿದ್ದಾರೆ. ಪ್ರಸ್ತುತ ಶೈವಾಚರಣೆಯಲ್ಲಿ ಅತಿಪುರಾತನ ಪಂಥವಾಗಿ ಹಠಯೋಗದ ಹಾದಿಯಲ್ಲಿ ನಡೆದು ನಾಥ ಸಂಸ್ಕೃತಿ ಸಮಾಜದ ಮುಖ್ಯ ವಾಹಿನಿಯಲ್ಲಿ ಬೆರೆತಿದೆ. ಭಾರತದಾದ್ಯಂತ ತಮ್ಮ ಅನುಯಾಯಿಗಳನ್ನು ಹೊಂದಿ ತಮ್ಮ ಶಾಖೆಗಳನ್ನು ತೆರೆದಿರುವ ಇವರ ಆಚರಣೆಗಳು ಸಹಸ್ರಾರು ವರ್ಷಗಳಿಂದ ಬೆಳೆದು ಬಂದಿವೆ.

ನಾಥ ಸಂಪ್ರದಾಯ

ಆದಿ ಕಾಲದಲ್ಲಿ ಇನ್ನೂ ಸೃಷ್ಟಿಕಾರ್ಯ ಆರಂಭವಾಗಿರದ ಕಾಲದಲ್ಲಿ ಎಲ್ಲೆಲ್ಲೂ ಕತ್ತಲು ತುಂಬಿತ್ತು. ಆಗ ದೇವತೆಗಳು ಹೇಗೆ ಸೃಷ್ಟಿಯಾದರು ಎಂದು ವಸಿಷ್ಟಮುನಿಗಳು ಶ್ರೀರಾಮನಿಗೆ ವರ್ಣಿಸುತ್ತಾರೆ. ಮೊದಲು ಶಕ್ತಿಯ ಸೃಷ್ಟಿಯಾಯಿತು. ನಂತರ ಆಕೆ ವಿಷ್ಣುವನ್ನೂ ಹಾಗೂ ಬ್ರಹ್ಮನನ್ನು ಸೃಷ್ಟಿಸಿದಳು. ನಂತರ ಶಿವನ ಸೃಷ್ಟಿಯಾಯಿತು. ಈ ಮೂರೂ ಮಂದಿ ತಾವೇ ಶ್ರೇಷ್ಠರು ಎಂದು ವಾದಿಸತೊಡಗಿದಾಗ ಕಮಲವೊಂದು ಉದ್ಭವಿಸುತ್ತದೆ. ಯಾರು ಅದರ ಆದಿ–ಅಂತ್ಯ ಕಂಡುಬರುತ್ತಾರೋ ಅವರೇ ಶ್ರೇಷ್ಠರು ಎಂದು ಒಪ್ಪಿಕೊಳ್ಳಬೇಕೆಂಬ ಒಪ್ಪಂದವಾಗುತ್ತದೆ. ವಿಷ್ಣು ಮತ್ತು ಬ್ರಹ್ಮ ಅದರಲ್ಲಿ ಸೋಲುತ್ತಾರೆ. ಆದರೆ ಶಿವ ತನ್ನ ದೇಹವನ್ನು ತೊರೆದು ಒಂದು ಕೀಟದ ರೂಪ ತಾಳಿ ಕಮಲದ ಆದಿ ಹಾಗೂ ಅಂತ್ಯವನ್ನು ಕಾಣಲು ಕಮಲದ ಕಾಂಡದ ಒಳಗೆ ಸೇರಿ ಹೊರಡುತ್ತಾನೆ. ಆತ ಬರುವ ಮೊದಲೇ ಶಿವನ ದೇಹವನ್ನು ಪುನರುಜ್ಜೀವನಗೊಳಿಸಲು ಉಳಿದವರು ಶಕ್ತಿಗೆ ಬೇಡುತ್ತಾರೆ.

ಶಕ್ತಿ ತನ್ನ ದೇಹದ ಗಂಧವನ್ನು ತೆಗೆದು ಕುಂಡಲದ ರೂಪ ಮಾಡಿ ಶಿವನ ದೇಹದ ಮೇಲಿಟ್ಟು ಪುನರುಜ್ಜೀವನಗೊಳಿಸುತ್ತಾಳೆ. ತನ್ನ ದೇಹದ ಗಂಧ ಶಿವನ ಮೇಲಿದ್ದುದರಿಂದ ತನ್ನನ್ನು ವಿವಾಹವಾಗುವಂತೆ ಶಿವನನ್ನು ಶಕ್ತಿ ಕೋರುತ್ತಾಳೆ. ಆತ ಒಪ್ಪುವುದಿಲ್ಲ. ಶಕ್ತಿ ಕೋಪದಿಂದ ಆತನನ್ನು ಭಸ್ಮ ಮಾಡಲು ಉದ್ದೇಶಿಸಿದಾಗ ಆತ ತಾನು ಶಕ್ತಿಯ ಕುಂಡಲ ಧರಿಸಿರುವುದರಿಂದ ತನ್ನನ್ನು ಸುಡಲು ಸಾಧ್ಯವಿಲ್ಲ ಎನ್ನುತ್ತಾನೆ. ನೀನು ಯಾರು ಎಂದು ಶಕ್ತಿ ಕೇಳಿದಾಗ ಆತ ತಾನು ಭೋಗುರಿಕ ಎಂಬ ಅಮರ ರೂಪ ಎನ್ನುತ್ತಾನೆ.





ಆ ವೇಳೆಗೆ ಶಿವ ಕಮಲದ ಆದಿ –ಅಂತ್ಯವನ್ನು ಕಂಡು ಆಗಮಿಸುತ್ತಾನೆ. ತನ್ನ ದೇಹವನ್ನು ಸೇರಲು ನೋಡಿದಾಗ ಆ ದೇಹವು ಭೋಗರಿಕನ ರೂಪದಲ್ಲಿರುತ್ತದೆ. ಆಗ ಶಿವ ಹೊಸ ದೇಹವೊಂದನ್ನು ಸೃಷ್ಟಿಸಿಕೊಂಡು ಅದರೊಳಗೆ ಪ್ರವೇಶಿಸಿ ಶಕ್ತಿಯನ್ನು ವಿವಾಹವಾಗುತ್ತಾನೆ. ಭೋಗುರಿಕನನ್ನು ಭೂಮಿಗೆ ತೆರಳಿ ಜೋಗಿ ಎಂಬ ಹೆಸರಿನಲ್ಲಿ ಧರ್ಮ ಸಂರಕ್ಷಣೆ ಮಾಡಲು ತಿಳಿಸುತ್ತಾನೆ.

ನಾಥ ಪರಂಪರೆ

ಅನಂತಯುಗದಲ್ಲಿ ಆದಿನಾಥನಾದ ಶಿವನನ್ನು ಕುರಿತು ಪಾರ್ವತಿ ಕೇಳುತ್ತಾಳೆ,' ನೀನೇ ಸರ್ವಾಂತರ್ಯಾಮಿ ಜಗತ್ ರಕ್ಷಕನಾಗಿದ್ದು ಯಾರನ್ನು ಕುರಿತು ಧ್ಯಾನ ಮಾಡುತ್ತೀಯೆ ?'

ಅದಕ್ಕೆ ಶಿವನು ಓಂಕಾರಮೂರ್ತಿಯಾದ ಜ್ಯೋತಿ ಸ್ವರೂಪನಾದ ದಕ್ಷಿಣಾಧಿಪತಿ ರವಾಗ್ನಿ ಸ್ವರೂಪನಾದ ಶ್ರೀ ರಾವುಳೇಶ್ವರನನ್ನು ನಾನು ಧ್ಯಾನಿಸುತ್ತೇನೆ ಎಂದನಂತೆ.

ಕೃತಯುಗದಲ್ಲಿ ಕಮಳರಾವುಳ, ತ್ರೇತಾಯುಗದಲ್ಲಿ ರತ್ನ ರಾವುಳ, ದ್ವಾಪರಯುಗದಲ್ಲಿ ಸಿದ್ಧ ಸಾಗರರಾವುಳ, ಕಲಿಯುಗದಲ್ಲಿ ಘೇಲಾ ರಾವುಳರು ದಾರ್ಶನಿಕ ಗುರುಗಳಾಗಿದ್ದಾರೆ. ಇಂತಹಾ ರಾವುಳ ಮೂರ್ತಿಯಿಂದ ಬ್ರಹ್ಮಾಂಡ, ಮಹಾಂಡ, ಮಹಾ ಬ್ರಹ್ಮಾಂಡ ಎಂಬ ಮೂರು ರೂಪಗಳು ಉದ್ಭವಿಸಿದವು. ಒಂದನೆ ತಾರಕ ಖಣಿಯಲ್ಲಿ ಬ್ರಹ್ಮನಿಂದ ತೌರ, ವಿಷ್ಣುವಿನಿಂದ ತಾಮ್ರ, ಶಿವನಿಂದ ಬಂಗಾರ ಖನಿಜಗಳು ಸೃಷ್ಟಿಯಾದವು. ಎರಡನೇ ಸ್ವೇದ ಖಣೀಯಲ್ಲಿ ಕೂರ್ಮ–ಬ್ರಹ್ಮ, ಗರುಡ–ವಿಷ್ಣು, ಹಂಸ–ಶಿವ ಉದ್ಭವಿಸಿದವು. ಮೂರನೇ ಖಣಿಯಲ್ಲಿ ಅನ್ನ–ಶಿವ, ಚಂದನ–ವಿಷ್ಣು, ವಸ್ತ್ರ–ಬ್ರಹ್ಮರು ಬಂದರು. ನಾಲ್ಕನೇ ಜಾರಜ ಖಣಿಯಲ್ಲಿ ಅಶ್ವ–ಬ್ರಹ್ಮ, ಗಜ–ವಿಷ್ಣು, ನರ–ಶಿವರು ಕಂಡರು.

ವಿರಾಟ್ ಮೂರ್ತಿಯ ರಕಾರದಿಂದ ಬ್ರಹ್ಮ ಗ್ರಂಥಿ, ಉಕಾರದಿಂದ ವಿಷ್ಣು ಗ್ರಂಥಿ, ಳಕಾರದಿಂದ ರುದ್ರಗ್ರಂಥಿಗಳು ಉದ್ಭವವಾದವು. ಬ್ರಹ್ಮ ಗ್ರಂಥಿಗೆಮೂರು ರಂದ್ರಗಳು, ವಿಷ್ಣು ಗ್ರಂಥಿಗೆ ಎರಡು ರಂಧ್ರಗಳು ಮತ್ತು ರುದ್ರ ಗ್ರಂಥಿಗೆ ಮೂರು ರಂಧ್ರಗಳು ಇರುತ್ತವೆ. ಇವು ಆಧ್ಯಾತ್ಮಿಕ, ಆದಿಭೌತಿಕ ಮತ್ತು ಆದಿ ದೈವಿಕ ಎಂಬ ತ್ರಿವಿಧ ತಾಪಗಳಾದವು. ವಾತ, ಪಿತ್ತ, ಕಫ ಮುಂತಾದ ತ್ರಿವಿಧ ದೋಷಗಳಾದವು. ವಟ ವೃಕ್ಷ, ಔದುಂಬರ ವೃಕ್ಷ, ಅರಳಿ ವೃಕ್ಷ ಎಂಬ ತ್ರಿವಿಧ ವೃಕ್ಷಗಳಾದವು. ಅಳಲೆ ಕಾಯಿ, ತಾರಿಕಾಯಿ, ನೆಲ್ಲಿಕಾಯಿ ಕೂಡಿ ತ್ರಿಫಲಾ ಚೂರ್ಣವಾದವು. ಶುಂಟಿ, ಮೆಣಸು,

ಹಿಪ್ಪಲಿ ಸೇರಿ ತ್ರಿಕುಟಿಯಾಯಿತು. ಹೀಗೆ ಎಲ್ಲದರಲ್ಲು ತ್ರಿವಿಧ ರೂಪದಲ್ಲಿ ನೆಲೆಸಿರುವ ತ್ರಯಂಬಕ ರಾವುಳನನ್ನು ಧ್ಯಾನಿಸುವುದು ಅವಶ್ಯಕ ಎಂದು ಶಿವ ಪಾರ್ವತಿಗೆ ತಿಳಿಸುತ್ತಾನೆ.

ನಾಥರ ಮೊದಲ ಗುರು ಆದಿನಾಥ ಶಿವ ಆತನ ನಂತರ ನವನಾಥರೆಂಬ ಎಂಟು ಜನ ಜನ ಸಿದ್ಧರ ಪರಂಪರೆ ಇದ್ದು ಇವರನ್ನು ನವನಾಥರು ಎನ್ನುತ್ತಾರೆ. ನಂತರ ಮತ್ಸ್ಯೇಂದ್ರನಾಥ, ಗೋರಕ್ಷನಾಥ, ಜಲಂಧರನಾಥ, ಕಾನಿಫ಼ನಾಥ, ಗಾಹಿನಿನಾಥ, ಭಾರತ್ರಿನಾಥ, ಮಿನ್ನಾಥ, ಚಾರ್ಪತಿನಾಥ ಮತ್ತು ನಾಗನಾಥ. ಈ ಗುರುವರ್ಗದ ಹೆಸರುಗಳನ್ನು ಪ್ರತಿಯೊಂದು ಪಂಥವೂ ತನ್ನದೇ ರೀತಿ ದಾಖಲಿಸಿಕೊಂಡಿದೆ.

ನವನಾಥರು ಧಾರ್ಮಿಕ ಪ್ರಚಾರವನ್ನು ಕೈಗೊಂಡು ಸಾಕ್ಷಾತ್ಕಾರಕ್ಕಾಗಿ ಜನರನ್ನು ಸಿದ್ಧಗೊಳಿಸುವ ಕಾಯಕ ಆರಂಭಿಸುತ್ತಾರೆ. ಈ ಕಾಲಘಟ್ಟದಲ್ಲಿ ಅತ್ರಿ ಮಹರ್ಷಿಗಳ ಪುತ್ರ ದತ್ತಾತ್ರೇಯನಂತಹ ಕೆಲವು ಯೋಗಿಗಳ ಆಗಮನವಾಗುತ್ತದೆ. ಪತಂಜಲಿ ಋಷಿ ಯೋಗದ ಮಹತ್ವ ತಿಳಿಸಿಕೊಡುತ್ತಾರೆ.

ನಾಥರಲ್ಲಿ ಬಾರಹ್ ಪಂಥ ಸ್ವಲ್ಪ ಭಿನ್ನವಾದ ಸಂಪ್ರದಾಯ. ಇವರಲ್ಲಿ ಚೋಟಿ ಗುರು, ಚೀರಾಗುರು ಮತ್ತು ಮಂತ್ರಗುರು ಎಂಬ ಮೂರು ಹಂತದ ಗುರುಗಳಿರುತ್ತಾರೆ. ಮೊದಲ ಹಂತದ ಗುರು ತನ್ನ ಶಿಷ್ಯನ (ಚೇಲಾ) ತಲೆಗೂದಲನ್ನು ಸಾಂಕೇತಿಕವಾಗಿ ಕತ್ತರಿಸಿ ಆತನನ್ನು ಮುಂದಿನ ಕ್ರಿಯೆಗಳಿಗೆ ಅಣಿಮಾಡುತ್ತಾನೆ. ಎರಡನೇ ಹಂತದ ಚೀರಾಗುರು ಶಿಷ್ಯನ ಕಿವಿ ಹಾಲೆಯನ್ನು ತೂತು ಮಾಡಿ ಕುಂಡಲಗಳನ್ನು ತೊಡಿಸುತ್ತಾನೆ. ಮೂರನೇ ಹಂತದ ಉಪದೇಶಗುರು ಶಿಷ್ಯನಿಗೆ ಮಂತ್ರೋಚ್ಚಾರಣೆಯನ್ನು ಕಲಿಸುತ್ತಾನೆ.

ಆಧುನಿಕ ಕಾಲದಲ್ಲಿ ಮಹೇಶ್ವರನಾಥ ಬಾಬಾಜಿ, ಲಾಹಿರಿ ಮಹಾಶಯ, ಮಹಾವತಾರನಾಥ್ ಬಾಬಾಜಿ ಪ್ರಮುಖ ಸಿದ್ಧ ಯೋಗಿಗಳು. ಶಿರಡಿ ಸಾಯಿಬಾಬಾರು ಕೂಡಾ ನಾಥ ಪರಂಪರೆಗೆ ಸೇರಿದವರು ಎನ್ನಲಡ್ಡಿಯಿಲ್ಲ. ಶ್ರೀ.ಎಂ ಎಂದು ಕರೆಯಲಾಗುವ ಗುರುಗಳು ಈಗ ಮದನಪಲ್ಲಿಯ ಬಳಿ ನೆಲೆಸಿ ಧರ್ಮ ಪ್ರಚಾರದಲ್ಲಿ ತೊಡಗಿದ್ದಾರೆ. ಹಾಗೆ ನೋಡಿದರೆ ಟಿಬೇಟಿನ ಮಹಾನ್ ಯೋಗಿ ಮಿಲರೇಪ ಮತ್ತು ಸೂಫ಼ಿ ಸಂತರು ಕೂಡಾ ನಾಥ ಪರಂಪರೆಯವರೇ !

ಈ ಹಿನ್ನೆಲೆಯಲ್ಲಿ ನಾಥರು ತಾವು ಶಿವನ ರೂಪವಾದ ಜೋಗಿಯ ಸಂತಾನ ಎಂದು ಭಾವಿಸುತ್ತ ಶಿವನನ್ನು ತಮ್ಮ ಮೊದಲ ಗುರು–ಆದಿನಾಥ ಎಂದು

ಕರೆಯುತ್ತಾರೆ. ನಾಥರಲ್ಲಿ ಮಹಿಳೆಯರೂ ಇದ್ದು ಇವರನ್ನು ಯೋಗಿಣಿ ಅಥವಾ ನಾಥಿನಿ ಎನ್ನುತ್ತಾರೆ. ಜೋಗಿಗಳು ಇಂದಿಗೂ ಹಳ್ಳಿಗಾಡುಗಳಲ್ಲಿ ಭಿಕ್ಷಾಟನೆ ಮಾಡುತ್ತಾ ಜೀವಿಸಿದ್ದಾರೆ. ನಾಥ ಸಂಪ್ರದಾಯದ ಜನರನ್ನು ಕರ್ನಾಟಕದಲ್ಲಿ ಕಾಣಬಹುದು. ಇವರನ್ನು, ಜೋಗಿ, ಬಳೆಗಾರ ಜೋಗಿ, ಕಿನ್ನರಿ ಜೋಗಿ, ಮಣಿಗಾರ ಜೋಗಿ, ಹಣಗಿ ಜೋಗಿ, ನೇಕಾರ ಜೋಗಿ, ಶಿವಜೋಗಿ, ನಾಯಕ ಜೋಗಿ, ಮರಾಠಿ ಜೋಗಿ ಇತ್ಯಾದಿ ಹೆಸರುಗಳಿಂದ ಗುರುತಿಸಲಾಗುತ್ತದೆ. ಇತ್ತೀಚೆಗೆ ಜೋಗಿ ಪಂಥದ ಜನ ಶಿಕ್ಷಣ ಪಡೆದು ಪ್ರಮುಖ ವಾಹಿನಿಗೆ ಬರುತ್ತಿದ್ದಾರೆ.

ನಾಥರು ಸದಾ ಸಂಚಾರಿಗಳು, ಇವರ ಗುಂಪನ್ನು ಜಮಾತ್ ಎಂದು ಕರೆಯಲಾಗುತ್ತದೆ. ನವರಾತ್ರಿಯ ವೇಳೆಯಲ್ಲಿ ಹಿಮಾಚಲಪ್ರದೇಶದ ಜ್ವಾಲಾಮುಖಿ ಕ್ಷೇತ್ರದಲ್ಲಿದ್ದರೆ ಕಾರ್ತೀಕ ಪೂರ್ಣಿಮೆಯ ದಿನ ರಾಜಸ್ತಾನದ ಪುಷ್ಕರದಲ್ಲಿರುತ್ತಾರೆ. ಇಲ್ಲಿಂದ ಗಿರ್ನಾರ್ ತಲುಪಿ ಶಿವರಾತ್ರಿಯಲ್ಲಿ ಭಾಗವಹಿಸುತ್ತಾರೆ. ನಂತರ ಮಂಗಳೂರಿನ ಕದ್ರಿಗೆ ಪ್ರಯಾಣ.

ನಾಥ ಪರಂಪರೆಯಲ್ಲಿ ಹರಿದ್ವಾರ ದೇಶದ ಕೇಂದ್ರ ಕಚೇರಿಯಾದರೆ ಕರ್ನಾಟಕದ ಮಂಗಳೂರು ನಗರದಲ್ಲಿರುವ ಕದ್ರಿ (ಕದಲಿ ದೇಶ) ರಾಜ್ಯದ ಮುಖ್ಯ ಕೇಂದ್ರ. ಕರ್ನಾಟಕದ ಎಲ್ಲಾ ನಾಥ ಕೇಂದ್ರಗಳಿಗೂ ಪ್ರತೀ ಹನ್ನೆರಡು ವರ್ಷಗಳಿಗೊಮ್ಮೆ ರಾಜರನ್ನು (ಮುಖ್ಯಸ್ಥ) ಆರಿಸಲಾಗುತ್ತದೆ. ಈ ಸಂದರ್ಭಕ್ಕಾಗಿ ತ್ರಯಂಬಕೇಶ್ವರದ ಕುಂಭಮೇಳದ ನಂತರ ಬಾರಹ ಪಂಥದ ಎಲ್ಲಾ ಯೋಗಿಗಳೂ ಕಾಲ್ನಡಿಗೆಯಲ್ಲಿ ಕದ್ರಿಗೆ ಆಗಮಿಸುತ್ತಾರೆ. ಈ ಸಂದರ್ಭವನ್ನು ನವನಾಥ ಝುಂಡಿ ಎಂದು ಕರೆಯಲಾಗುತ್ತದೆ. ನಾಗರಪಂಚಮಿಯ ದಿನದಂದು ಪಾತ್ರದೇವತೆಯನ್ನು ಪ್ರತಿಷ್ಠಾಪಿಸಿ ಮುಂದಿನ ಹನ್ನೆರಡು ವರ್ಷಗಳಿಗೆ ಯೋಗಿಯೊಬ್ಬರನ್ನು ಆಯ್ಕೆಮಾಡಿ ಅವರ ವಶಕ್ಕೆ ಪಾತ್ರದೇವತೆಯನ್ನು ನೀಡುತ್ತಾರೆ. ಕರ್ನಾಟಕದ ನಾಥ ಪಂಥದ ರಾಜರಾಗಿ ಶ್ರೀ. ರಾಜಮೋಹನಯೋಗಿ ಕಳೆದ ಮಾರ್ಚ್ 2016 ರಲ್ಲಿ ಆಯ್ಕೆಯಾಗಿದ್ದಾರೆ.

ಕ್ರಿ.ಶ. 1505 ರಲ್ಲಿ ಕದ್ರಿಗೆ ಬಂದಿದ್ದ ಇಟಾಲಿಯನ್ ಪ್ರವಾಸಿ ವಾರ್ತೆಮಾ ಎಂಬಾತ ಕದ್ರಿಯಲ್ಲಿ ಸಂತರ ಮುಖ್ಯಸ್ಥನಾಗಿ ರಾಜಯೋಗಿಯೊಬ್ಬ ಸುಮಾರು 30,000 ಸಾಧುಗಳನ್ನು ಆಳುತ್ತಿದ್ದರು ಎಂದು ಬರೆಯುತ್ತಾನೆ. ಮುಂದೆ ಕ್ರಿ.ಶ. 1624 ರಲ್ಲಿ ಪೆತ್ರೋ ದೆಲ್ಲಾವಲ್ಲೆ ಎಂಬ ವಿದೇಶಿ ಪ್ರವಾಸಿ ಕದ್ರಿಗೆ ಭೇಟಿ ನೀಡಿದಾಗ ಅಲ್ಲಿನ

ಮುಖ್ಯಸ್ಥ ರಾಜಯೋಗಿಯು ವೆಂಕಟಪ್ಪ ನಾಯ್ಕ ಎಂಬ ಸ್ಥಳೀಯ ಅರಸ ತನ್ನೆಲ್ಲಾ ಕುದುರೆ, ಆನೆಗಳು ಮತ್ತು ಪಲ್ಲಕ್ಕಿಗಳನ್ನು ಕಿತ್ತುಕೊಂಡನೆಂದು ದೆಲ್ಲಾವಲ್ಲೆಯ ಮುಂದೆ ದೂರುತ್ತಾರೆ. ಈ ಹಿನ್ನೆಲೆಯಲ್ಲಿ ನಾಥರ ನೆಲೆ ಕದ್ರಿಯಿಂದ ವಿಟ್ಲ ಗ್ರಾಮಕ್ಕೆ ಬದಲಾದಂತೆ ಕಾಣುತ್ತದೆ. ಮುಂದೆ ಕ್ರಿ.ಶ.17 ನೇ ಶತಮಾನದಲ್ಲಿ ಉತ್ತರದಿಂದ ನಾಥ ಯೋಗಿಗಳ ದೊಡ್ಡ ಪಡೆಯೊಂದು ಬಂದು ಸ್ಥಳೀಯ ಅರಸನನ್ನು ಭೇಟಿ ಮಾಡಿ ತಮ್ಮ ಯೋಗಿರಾಜರಿಗೆ ಸೂಕ್ತ ಸ್ಥಾನಮಾನ ಕಲ್ಪಿಸಿಕೊಡುವಂತೆ ಕೋರುತ್ತಾರೆ. ಅಂದು ನಾಥ ಪರಂಪರೆಯ ಪ್ರಮುಖ ಬೆಂಬಲಿಗರಾಗಿ ಮಾರವಾಡಿ ಸಮುದಾಯದ ಜನ ಇದ್ದರು ಎಂದು ಈ ದಾಖಲೆಗಳು ಹೇಳುತ್ತವೆ. ಈ ಹೇಳಿಕೆಗಳು ಅಮೂಲ್ಯ ದಾಖಲೆಗಳಾಗಿ ಅಂದಿನ ಕಾಲಘಟ್ಟದಲ್ಲಿ ಕದ್ರಿಯ ಸ್ಥಾನಮಾನವನ್ನು ವಿವರಿಸುತ್ತವೆ. (ಮೂಲ: ನಾಥ ಸಂಪ್ರದಾಯ–ಜೆ. ಮ್ಯಾಲಿನ್‌ಸನ್)

ನಾಥ ಯೋಗಿಗಳು ಧರ್ಮ ರಕ್ಷಣೆಗಾಗಿ ಆಯುಧಗಳನ್ನು ಹಿಡಿದರು ಎಂದು ಕೆಲವು ವಿದ್ವಾಂಸರ ಅಭಿಪ್ರಾಯವಿದ್ದಂತೆ ಕಾಣುತ್ತದೆ. ಇಲ್ಲಿ ಬಹುಶಃ ನಾಗಾ ಸಾಧುಗಳನ್ನು ತಪ್ಪಾಗಿ ನಾಥರು ಎಂದು ಉಲ್ಲೇಖಿಸಿದ್ದಿರಬಹುದಾದ ಸಾಧ್ಯತೆಗಳೂ ಇವೆ. ನಾಥ ಯೋಗಿಗಳು ಆಯುಧ ಹಿಡಿಯುವುದಿಲ್ಲ ಎಂಬ ಶಪಥ ಕೈಗೊಂಡಿದ್ದು ಯುದ್ಧಕ್ಕಿಳಿದಲ್ಲಿ ತಮ್ಮ ಕರ್ಣಕುಂಡಲ ನಷ್ಟವಾಗಬಹುದು ಎಂಬ ಭಯ ಇವರಲ್ಲಿದ್ದಂತೆ ಕಾಣುತ್ತದೆ ಎನ್ನುತ್ತಾರೆ ಇತಿಹಾಸಕಾರರಾದ ರೋಸ್ ಮತ್ತು ಬೋಲಿಯೆರ್. ಇದಕ್ಕೆ ವಿರುದ್ಧವಾಗಿ ಹೋರಾಟಗಾರರಾದ ನಾಗಾ ಸಾಧುಗಳಲ್ಲಿ ಅಖಾಡಾಗಳು ಇದ್ದವು (ಈಗಲೂ ಇವೆ) ಎಂಬ ಉಲ್ಲೇಖವಿದೆ. (ಮೂಲ: ನಾಥ ಸಂಪ್ರದಾಯ–ಜೆ. ಮ್ಯಾಲಿನ್‌ಸನ್)

ಮಂಡ್ಯ ಜಿಲ್ಲೆಯಲ್ಲಿರುವ ಆದಿಚುಂಚನಗಿರಿ ಮಠ ನಾಥ ಪರಂಪರೆಯ ಕೇಂದ್ರ. ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲೂ ನಾಥ ಜೋಗಿಗಳು ನೆಲೆಸಿದ್ದಾರೆ. ವಿಶೇಷವಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡು ಬರುವ ಅವಧೂತ ಪರಂಪರೆಯ ಯೋಗಿಗಳು ನಾಥ ಸಂಪ್ರದಾಯಕ್ಕೆ ಸೇರಿದವರು. ಮಹಾರಾಷ್ಟ್ರದ ಗುರುಪಂಥಗಳಲ್ಲಿ ನಿವೃತ್ತಿನಾಥ, ಜ್ಞಾನೇಶ್ವರ, ತುಕಾರಾಮ, ಏಕನಾಥ ಮುಂತಾದವರು ಪ್ರಮುಖರು. ಸೂಫಿ ಸಂತರು, ಕಬೀರ, ನಾನಕರು ಆದ್ವರ್ಯುಗಳು.

ನಾಥ ತತ್ವಗಳು

ಸಿದ್ಧ ಯೋಗಿಗಳ ಪ್ರಕಾರ ಮಾನವ ದೇಹವು ಅಣುರೂಪದ್ದು. ಇದರಲ್ಲಿ ವಿಶ್ವದಲ್ಲಿ ಸಮಷ್ಟಿ ರೂಪದಲ್ಲಿರುವ ಪ್ರತಿಯೊಂದೂ ಸೂಕ್ಷ್ಮ ರೂಪದಲ್ಲಿ ಮಾನವ ದೇಹದೊಳಗೆ ಅಸ್ತಿತ್ವದಲ್ಲಿರುತ್ತದೆ. ವಿಶ್ವದ ಪ್ರತಿಯೊಂದು ಆಗು–ಹೋಗುಗಳು ಶಿವ ಮತ್ತು ಶಕ್ತಿಯರ ಆದೇಶದ ಮೇರೆಗೇ ನಡೆಯುತ್ತದೆ. ಪ್ರತೀ ಯೋಗಿಯು ತನ್ನ



ಆತ್ಮತತ್ವವನ್ನು ಶಿವತತ್ವದ ಮುಖೇನ ಗ್ರಹಿಸಬೇಕು. ಯೋಗಿ ತನ್ನ ಸಾಧನೆಯಿಂದ ಅತೀಂದ್ರಿಯ ಶಕ್ತಿ ಗಳಿಸುವುದನ್ನು ತುರೀಯಾತೀತ ಎನ್ನುತ್ತಾರೆ.

ಇವರ ಪ್ರಕಾರ ಇಡಿ ವಿಶ್ವವೇ ಲೀಲಾ ಕ್ಷೇತ್ರ ಅದರಲ್ಲೇ ಜೀವನ್ಮುಕ್ತಿ ಸಾಧಿಸಬೇಕು. ಪ್ರತೀ ಸಿದ್ಧಯೋಗಿಯ ಅಂತಿಮ ಗುರಿ ಪರಮಪದ ಮತ್ತು ಸಮರಸ ಸಂಪಾದನೆ. ಇದನ್ನು ತಲುಪುವ ಹಾದಿಯನ್ನು ಭೌತಿಕ ರೂಪದಲ್ಲಿ ವಿವರಿಸುವುದಾದರೆ ಅವನ್ನು ಅಗಮ್ಯ (ತಲುಪಲಾಗದ), ವ್ಯಕ್ತ (ಸ್ಪಷ್ಟ), ಅವ್ಯಕ್ತ (ಅಸ್ಪಷ್ಟ), ಸತ್ (ಅಸ್ತಿತ್ವ) ಮತ್ತು ಅಸತ್ (ಭ್ರಮೆ) ಎಂದು ಕರೆಯಲಾಗುತ್ತದೆ.

ಇದಕ್ಕಾಗಿ ಯೋಗಿಗಳು ತಪದಲ್ಲಿ ತೊಡಗಿಕೊಳ್ಳುವ ಮೂಲಕ ಕುಂಡಲಿನಿ ಶಕ್ತಿಯನ್ನು ಜಾಗೃತಗೊಳಿಸಿಕೊಳ್ಳಬೇಕಾಗುತ್ತದೆ. ಈ ಹಾದಿಯಲ್ಲಿ ರಾಜಯೋಗ, ಸಮಾಧಿ, ಉನ್ಮಣೀ, ಮನೋನ್ಮಣೀ, ಅಮರತ್ವ, ಲಯ–ತತ್ವ, ಶೂನ್ಯ–ಅಶೂನ್ಯ, ಪರಮಪದ, ಅಮನಸ್ಕ, ಅದ್ವೈತ, ನಿರಾಲಂಬ, ನಿರಸ್ಜನ, ಜೀವನ್ಮುಕ್ತಿ, ಸಹಜ ಮತ್ತು ತೂರ್ಯ ಮುಂತಾದ ಹಾದಿಗಳಿವೆ. ಗೋರಕ್ಷ ಶತಕ ಎಂದು ಕರೆಯಲಾಗುವ ಹಠ ಯೋಗದಲ್ಲಿ ಮೂಲ ಬಂಧ, ಉಡ್ಡಿಯಾನ ಬಂಧ, ಜಲಂಧರ ಬಂಧ ಮತ್ತು ಕುಂಭಕ ಎಂಬ ಹಾದಿಗಳಿವೆ. ಖೇಚರಿ ಮುದ್ರೆಗಳು ಕುಂಡಲಿನಿ ಶಕ್ತಿಯನ್ನು ಉದ್ದೀಪನಗೊಳಿಸಬಲ್ಲವು. ಇವರು ಸುಪ್ತ ಮತ್ತು ಜಾಗೃತ ಸ್ಥಿತಿಗಳಲ್ಲಿರುವ ದೈವೀಕ ಶಕ್ತಿಯ ಸಾಧಕರಾಗಿದ್ದಾರೆ. ಷಟ್ಚಕ್ರಗಳಲ್ಲಿ ಜಾಗೃತವಾಗುತ್ತಾ ಹೋಗಿ ಒಂಬತ್ತನೆಯ ಸಹಸ್ರಾರ ಚಕ್ರದಲ್ಲಿ ನಿಲ್ಲುವ ಹಠಯೋಗದ ಕ್ರಿಯೆ ಸಾಧಕನನ್ನು ಸಮಾಧಿ ಸ್ಥಿತಿಗೆ ತಲುಪಿಸುತ್ತದೆ. ನಾಥ ಯೋಗಿಗಳು ಯೋಗ ಮತ್ತು ಕುಂಡಲಿನಿ ಅಭ್ಯಾಸ ಮಾಡುತ್ತಾರೆ ನಿಜ ಆದರೆ ಅವರು ಯಾವುದೇ ಲಿಖಿತ ರೂಪದ ತಾಂತ್ರಿಕ ಪೂಜೆಗಳಲ್ಲಿ ಒಳಗೊಳ್ಳುವುದಿಲ್ಲ. ಇವರ ಆಶ್ರಮಗಳಲ್ಲಿ ಧುನಿ ಎಂದು ಕರೆಯಲಾಗುವ ಅಖಂಡ ಅಗ್ನಿಕುಂಡ ಉರಿಯುತ್ತಿರುತ್ತದೆ.

ನಾಥ ಯೋಗಿಗಳಿಗು ಮತ್ತು ಸರ್ಪಗಳಿಗೂ ಅನನ್ಯ ಸಂಬಂಧವಿದೆ. ಮಾನಸ ಎಂಬಾಕೆ ನಾಗದೇವತೆಗಳ ಅರಸಿ. ಮಾನಸಾ ಅಥವಾ ಕೇತಕಾ ಎಂಬಾಕೆಯಿಂದ ತ್ರಿಮೂರ್ತಿಗಳು ಜನಿಸಿದರು. ಅದುದರಿಂದ ಈಕೆ ನಾಥರ ಮಹಾಮಾತೆಯಾಗಿದ್ದಾಳೆ. ಹಾಗೆಯೇ ಸರ್ಪಗಳು ಕೂಡಾ ಪವಿತ್ರವಾಗುತ್ತವೆ. ಯೋಗದಲ್ಲಿ ಕುಂಡಲಿನಿ ಉದ್ದೀಪನಗೊಳ್ಳುವ ಪ್ರಕ್ರಿಯೆಯಲ್ಲಿ ಮೂಲಾಧಾರ ಚಕ್ರದಲ್ಲಿ ಸುತ್ತಿ ಮಲಗಿರುವ ಸರ್ಪದ ಶಕ್ತಿ ಪ್ರೇರಿತಗೊಳ್ಳಬೇಕಾಗುತ್ತದೆ.


ನಾಥ ಯೋಗಿಗಳು ಎಲ್ಲಾ ಆಸೆಗಳಿಂದ ಮುಕ್ತವಾಗಿರುತ್ತಾರೆ. ಅವರನ್ನು ಅನ್ಯಾಭಿಲಾಷಿತ ಶೂನ್ಯಂ ಎನ್ನುತ್ತಾರೆ. ತಮಗಾಗಿ ಏನನ್ನು ಮಾಡಿಕೊಳ್ಳದ ಇವರು ರಸವಿದ್ಯೆಯಲ್ಲಿ ಪರಿಣಿತರು ಎನ್ನಲಾಗುತ್ತದೆ. ಇವರು ಶುದ್ಧೀಕರಿಸಿದ ಪಾದರಸದಿಂದ ತಯಾರಿಸಲಾಗುವ ಅಮೃತಕರಣ ಎಂಬ ರಸಾಯನವನ್ನು ಸೇವಿಸುತ್ತಾರೆ (ಮೃತಸೂತಕ). ಪಾದರಸ ಅತ್ಯುಗ್ರ ವಿಷ ಅದನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ವಿಶೇಷ ಪರಿಣಾಮ ನೀಡುತ್ತದೆ. ಯಥಾ ಲೋಹೆ ತಥಾ ದೇಹೆ ಎಂಬ ನಂಬಿಕೆ ಇವರದ್ದು. ಅಭ್ರಕ, ಗಂಧಕಗಳು ಸ್ತ್ರೀ ಸಂತಾನೋತ್ಪತ್ತಿ ದ್ರವವನ್ನು ಹೋಲುತ್ತವೆ. ಇವುಗಳೊಂದಿಗೆ ಪಾದರಸ ಪುರುಷ ದ್ರವವನ್ನು ಪ್ರತಿನಿಧಿಸುತ್ತದೆ. ಇವುಗಳ ಸಂಗಮದಿಂದ ಪುನರುತ್ಥಾನ ಸಾಧ್ಯ ಎಂದು ನಂಬುತ್ತಾರೆ. ಶಿವ ಮತ್ತು ಶಕ್ತಿ ಇವುಗಳನ್ನು ಪ್ರತಿನಿಧಿಸುತ್ತಾರೆ ಎಂದು ನಾಥರ ನಂಬಿಕೆ. ತಮಿಳುನಾಡಿನ ದಿಂಡಿಗಲ್ ಬಳಿಯ ಪಳನಿ ಬೆಟ್ಟದಲ್ಲಿರುವ ದೇವತಾ ವಿಗ್ರಹವು ಒಂಬತ್ತು ವಿಧಗಳ (ನವ ಪಾಷಾಣ) ಕಠೋರ ವಿಷದಿಂದ ಮಾಡಲ್ಪಟ್ಟಿದ್ದು ಯೋಗ್ಯ ಪೂಜೆಯಿಂದ ನಿರೀಕ್ಷಿತ ಫಲ ದೊರೆಯುತ್ತದೆ ಎಂಬ ನಂಬಿಕೆ ಇದೆ.

ನಾಥ ಅಗ್ರಗಾಮಿಗಳು ಕೌಲ ತಂತ್ರದ ಭಿನ್ನವಾದ ಪದ್ಧತಿಗಳನ್ನು ಅನುಸರಿಸುತ್ತಾರೆ. ಇಂದು ಬಹುತೇಕ ಪುರಾತನ ತಂತ್ರ ಪದ್ಧತಿಗಳು ನಶಿಸಿಹೋಗಿ ಶ್ರೀವಿದ್ಯಾ ತಂತ್ರ ಪದ್ಧತಿ ಮಾತ್ರಾ ಆಚರಣೆಯಲ್ಲಿದೆ. ಇದರ ಪ್ರಕಾರ ಬಾಲಸುಂದರಿ ಅಥವಾ ತ್ರಿಪುರಸುಂದರಿ –ಯೋಗಮಾಯ– ಮುಖ್ಯ ದೇವತೆ. ಸಾಧನೆಗೆ ಅನೇಕ ರಹಸ್ಯ ಮಂತ್ರೋಚ್ಚಾರಣೆಗಳು ಮತ್ತು ಮಂಡಲ ರಚನೆಗಳಿದ್ದು ಅವನ್ನು ಸಂಖದಾಲ್ ಎನ್ನುತ್ತಾರೆ. ಈ ಹಾದಿಯಲ್ಲಿ ಗಾಂಜಾ, ಭಂಗಿ ಮುಂತಾದ ವಸ್ತುಗಳು ಬಳಸಲ್ಪಡುತ್ತವೆ. (ಮೂಲ: ಬೌಲಿಯೆರ್, ಯೋಗಿ ವಿಲಾಸನಾಥ)

ನಾಥ ಯೋಗಿಗಳು ಮೋಕ್ಷ ಸಾಧನೆಗಾಗಿ ತಮ್ಮದೇ ಹಾದಿ ಹಿಡಿದು ಕಾರ್ಯ ನಿರತರಾಗಿದ್ದಾರೆ. ಬದುಕಿನ ಜಂಜಾಟಗಳಿಂದ ದೂರವುಳಿಯ ಬಯಸುವ ನಾಥರ ಜೀವನ ಕ್ರಮ, ಕ್ರಿಯಾ ಸಾಧನೆಗಳು ಹೊರ ಜಗತ್ತಿಗೆ ಪರಿಚಯವಾಗಿಲ್ಲ. ಅವರ ಅಮೃತಕರಣ ರಸಾಯನ, ಕುಂಡಲಿನಿ ಶಕ್ತಿ ಜನ ಸಾಮಾನ್ಯರಿಗೂ ದೊರಕುವಂತಾದರೆ ಧರ್ಮ ರಕ್ಷಣೆಗೆ ಇನ್ನೊಂದು ಆಯಾಮ ದೊರೆತಂತೆ. ಸನ್ಯಾಸದ ಮುಖ್ಯ ಉದ್ದೇಶವೇ ತಾನು ಸಾಧಿಸಿದ್ದನ್ನು ಸಾಮಾನ್ಯರಿಗೆ ಬೋಧಿಸಿ ಅವರನ್ನು ಸಾಕ್ಷಾತ್ಕಾರದ ಹಾದಿಗೆ ತರುವುದು. ಇದೇ ನಿಜವಾದ ಧರ್ಮ ಸಂರಕ್ಷಣೆ.

ನಾಥ ಯೋಗಿಗಳ ರೂಪ–ಲಕ್ಷಣ

ನಾಥ ಯೋಗಿಗಳು ಧರಿಸುವ ವೇಷವನ್ನು ಜೋಗಿ ವೇಷ ಎಂದು ಕರೆಯಲಾಗುತ್ತದೆ. ನಾಥ ಯೋಗಿಗಳ ಪ್ರಮುಖ ಲಕ್ಷಣ ಕಿವಿಯ ಹಾಲೆಯ ಮಧ್ಯ



ಭಾಗಕ್ಕೆ ದೊಡ್ಡ ಉಂಗುರವನ್ನು ಧರಿಸುವುದು. ಇದು ದೇವಿಯಿಂದ ಕೊಡಲ್ಪಟ್ಟ ಕರ್ಣಕುಂಡಲವಾದ ಕಾರಣ ಇವರನ್ನು ಕಾನ್‌ಫಟಾ ಯೋಗಿ ಎಂದು ಕರೆಯುತ್ತಾರೆ. ಇದರ ನಂತರವೇ ದೀಕ್ಷಾ ಕಾರ್ಯ ಮಂತ್ರ ಫೂಂಕನ ನಡೆಯುತ್ತದೆ. ಗುರುವಿನಿಂದ ಮಂತ್ರೋಪದೇಶವಾಗುತ್ತದೆ. ಉತ್ತರದ ಕೆಲವು ಪಂಥದ ಯೋಗಿಗಳು ಕಿವಿಯ ಕೆಳ ಭಾಗವನ್ನು ಕೊಯ್ದುಕೊಳ್ಳುವುದುಂಟು. ನಂತರ ಇವರು ದೇಹದ ಎರಡು ನಾಡಿಗಳ ಉದ್ದೀಪನ ಕಾರ್ಯವನ್ನು ಕೈಗೊಳ್ಳುತ್ತಾರೆ. ಇದರಿಂದ ಕುಂಡಲಿನಿ ಶಕ್ತಿ ಜಾಗೃತವಾಗುತ್ತದೆ ಎಂಬ ನಂಬಿಕೆ ಇದೆ. ನಂತರ ಪ್ರತಿ ಶಿಷ್ಯನಿಗೂ ನಾಥ ಎಂಬ ಪದವನ್ನು ಸೇರಿಸಿ ಹೆಸರಿಡಲಾಗುತ್ತದೆ.

ಭಸ್ಮವನ್ನು ದೇಹದ ಮೂವತ್ತೆರಡು ಭಾಗಗಳಿಗೆ ಲೇಪಿಸಿಕೊಳ್ಳುತ್ತಾರೆ. ಸಿಂಹನಾದ ಜನೇವು ಎಂದು ಕರೆಯಲಾಗುವ ಕಪ್ಪು ಉಣ್ಣೆಯ ಜನಿವಾರವನ್ನು ಧರಿಸುತ್ತಾರೆ. ಇದಕ್ಕೆ ಲೋಹದ ಉಂಗುರ ಪವಿತ್ರಿಯನ್ನು ಕಟ್ಟುತ್ತಾರೆ. ಕತ್ತಿಗೆ 32, 66, 68 ಅಥವಾ 108 ರುದ್ರಾಕ್ಷಿಗಳಿರುವ ಮಾಲೆ ಸುಮಿರನಿಯನ್ನು ಧರಿಸುತ್ತಾರೆ. ಕೈಗೆ 18–28 ರುದ್ರಾಕ್ಷಿಗಳ ಮಾಲೆ ಧರಿಸುತ್ತಾರೆ.

ಇವರು ಕೈಯ್ಯಲ್ಲಿ ಜಪಮಾಲೆಯನ್ನು ಸುತ್ತಲು ದಂಧಾರಿ ಎಂದು ಕರೆಯಲಾಗುವ ಚಕ್ರಾಕಾರವನ್ನು ಹಿಡಿದಿರುತ್ತಾರೆ. ಕೈಯ್ಯಲ್ಲಿ ಸಿಂಗಿ ಎಂದು ಕರೆಯಲಾಗುವ ಸಣ್ಣ ಊದುವ ಪೀಪಿಯ ಜೊತೆಗೆ ಕಿಂಗರಿ ಎಂಬ ವಾದ್ಯವಿರುತ್ತದೆ. ಸೊಂಟಕ್ಕೆ ಮೇಖಲಾ ಎಂಬ ನಾರಿನ ಹಗ್ಗವನ್ನು ಸುತ್ತಿಕೊಳ್ಳುತ್ತಾರೆ. ಕಾಲಿಗೆ ಘುಂಗರೂ ಎಂಬ ಹೆಸರಿನ ಹಿತ್ತಾಳೆಯ ಕಡಗ ಧರಿಸುತ್ತಾರೆ.ಸಿಂಹನಾದ ಜನೇವು ಎಂಬ ಜನಿವಾರವನ್ನು ನಾಥ ಯೋಗಿಗಳು ಧರಿಸುತ್ತಾರೆ. ಕಪ್ಪು ಉಣ್ಣೆಯ ದಾರಕ್ಕೆ ಪ್ರಾಣಿಯ ಕೊಂಬಿನ ಅಥವಾ ತಾಮ್ರ, ಹಿತ್ತಾಳೆ ಮುಂತಾದ ಲೋಹಗಳಿಂದ ತಯಾರಿಸಿದ ಉಂಗುರ ಕಟ್ಟುತ್ತಾರೆ. ಇದನ್ನು ಪವಿತ್ರಿ ಎಂದು ಕರೆಯಲಾಗುತ್ತದೆ.

ದೇಹಕ್ಕೆ ಕಂಥ ಎಂದು ಕರೆಯಲಾಗುವ ಕಾವಿ ಬಣ್ಣದ ನಿಲುವಂಗಿ ಧರಿಸುತ್ತಾರೆ. ಹೊದೆಯಲು ಗೂದರಿ ಎಂಬ ವಸ್ತ್ರ ಬಳಸುತ್ತಾರೆ. ಜೊತೆಗೆ ಸೋಟಾ ಎನ್ನುವ ದಂಡವನ್ನು ಕೊಂಡೊಯ್ಯುತ್ತಾರೆ. ಕೆಲವು ಯೋಗಿಗಳು ತ್ರಿಶೂಲ ಹಿಡಿಯುವುದುಂಟು. ಧ್ಯಾನಕ್ಕಾಗಿ ಕೂರಲು ಆಧಾರಿ ಎಂಬ ಪೀಠವಿರುತ್ತದೆ. ನೀರು ಕುಡಿಯಲು, ಭೋಜನಕ್ಕೆ ಬಳಸಲು ಕಪ್ಪರ ಎಂಬ ಮಡಿಕೆಯನ್ನು ಬಳಸುತ್ತಾರೆ.ನಾಥ ಯೋಗಿಗಳು ಭಿಕ್ಷೆ ಕೊಡಿ ಎಂದು ಬಾಯಿ ಬಿಟ್ಟು ಕೇಳುವುದಿಲ್ಲ ಮನೆಯ ಮುಂದೆ ನಿಂತು ಘುಂಗರೂವನ್ನು ಊದುತ್ತಾರೆ. ಭಿಕ್ಷೆಯನ್ನು ಕಪ್ಪದಲ್ಲಿ



ಮಾತ್ರಾ ಹಾಕಿಸಿಕೊಳ್ಳುತ್ತಾರೆ. ಭಿಕ್ಷೆ ಕೊಟ್ಟವರಿಗೆ ತಿಲಕ ಹಚ್ಚಿ ಆಶೀರ್ವದಿಸುತ್ತಾರೆ. ಕಾಲಿಗೆ ಹಾವುಗೆಗಳನ್ನು ಧರಿಸುತ್ತಾರೆ. ನಾಥ ಯೋಗಿಗಳು ಪರಸ್ಪರ ಎದುರಾದಾಗ ಆದೇಶ್ ಎನ್ನುತ್ತಾ ಬಾಗಿ ನಮಸ್ಕರಿಸುವ ಪದ್ಧತಿ ಇದೆ.

ನಾಥ ಸಂಪ್ರದಾಯದಲ್ಲಿ ಆಚರಣೆಗಳು, ಹಠಯೋಗ ಮತ್ತು ಕುಂಡಲಿನಿ ಬಗ್ಗೆ ಖೇಚರಿವಿದ್ಯಾ, ದತ್ತಾತ್ರೇಯ ಯೋಗಶಾಸ್ತ್ರ, ಸಿದ್ಧಸಿದ್ಧಾಂತ ಪದ್ಧತಿ, ಸುಧಾಕರ ಚಂದ್ರಿಕಾ, ನವನಾಥ ಭಕ್ತಿಸಾರ, ಹಠಪ್ರದೀಪಿಕಾ, ಮತ್ಸ್ಯೇಂದ್ರನಾಥ ಸಂಹಿತಾ, ಗೋರಕ್ಷಶತಕ ವಿವರಣೆಗಳನ್ನು ನೀಡುತ್ತವೆ. ಗೋರಕ್ಷಶತಕದಲ್ಲಿ ನಾಥ ಯೋಗಿಗಳು ಬಿಂದು ಎಂಬ ದ್ರವ ಸೇವನೆ ಮಾಡಬೇಕು ಎನ್ನುತ್ತದೆ. ಬಿಂದು ಮದ್ಯವಲ್ಲ, ಮಾಂಸವಲ್ಲ. ಅವರು ಮಾನಿನಿಯ ಸಹವಾಸ ಮಾಡುವುದಿಲ್ಲ. ಆದರೆ ಸ್ತ್ರೀ ಸಂಪರ್ಕವನ್ನು ಸುಶುಮ್ನಾ ನಾಡಿಯ ಮೂಲಕ ಮಾನಸಿಕವಾಗಿ ಹೊಂದುತ್ತಾರೆ. ಇವೆಲ್ಲವೂ ಶೂನ್ಯದಲ್ಲಿ ಸಂಭವಿಸುತ್ತದೆ ಎಂದು ಹೇಳಲಾಗಿದೆ (3.46–48).

ಹನ್ನೆರಡು ಯೋಗಿ ಪಂಥಗಳು

ನಾಥ ಯೋಗಿಗಳಲ್ಲೂ ಕೆಲವು ಪಂಥಗಳಿದ್ದು ಅವುಗಳ ಆಚರಣೆ ಮತ್ತು ಆಡಳಿತ ಭಿನ್ನವಾಗಿರುತ್ತದೆ. ಇವನ್ನು ಬಾರಹ್ ಪಂಥ ಎಂದು ಹೆಸರಿಸಲಾಗುತ್ತದೆ. ಅಂತಹ ಹನ್ನೆರಡು ಪಂಥಗಳಿವೆ. ಸತ್ಯನಾಥ (ಸತ್ನಾತಿ) ಪಂಥ, ರಾಮನಾಥಿ–ಹರ್ಯಾಣ, ಪಾಕಲ್ ಪಾಗಲ್ಪಂಥಿ–ಪೇಶಾವರ್ ಮತ್ತು ಹರ್ಯಾಣ, ಪಾವ್ ಪಂಥ್ ಪಾವಕ್– ರಾಜಾಸ್ತಾನ್, ಧರ್ಮನಾಥ್ (ಧರ್ಮನಾತಿ) ಪಂಥ– ನೇಪಾಲ ಮತ್ತು ಉತ್ತರಪ್ರದೇಶ, ಮನ್ನಾಥಿ (ಮನೋನಾಥಿ)–ಸಿಕರ್, ರಾಜಾಸ್ತಾನ್, ಕಪ್ಲಾನಿ ಪಂಥ (ಕಪಿಲಪಂಥ)– ಬಂಗಾಳ ಮತ್ತು ಹರ್ಯಾಣ, ಗಂಗಾನಾಥ್ (ಗಂಗಾನಾಥಿ) ಪಂಥ– ಬಂಗಾಳ ಮತ್ತು ಹರ್ಯಾಣ, ನಾಥೇಶ್ವರಿ (ದರ್ಯಾನಾಥಿ) ಪಂಥ– ಬಂಗಾಳ ಮತ್ತು ಪಂಜಾಬ್, ಆಯ್ ಪಂಥ – ಬಂಗಾಳ ಮತ್ತು ಹರ್ಯಾಣ, ಬೈರಾಗ್ (ಭೃತೃಹರಿ ಬೈರಾಗ್) ಪಂಥ– ರಾಜಸ್ತಾನ ಹಾಗೂ ಕೊನೆಯದಾಗಿ ರವಳಪಂಥ–ಅಫ್ಘಾನಿಸ್ತಾನ.

ನಾಗ ಪೂಜೆ

ಮಹಾರಾಷ್ಟ್ರ ರಾಜ್ಯದ ಬತ್ತೀಸ್–ಶಿರಾಳ ವಾರ್ಷಿಕ ನಾಗ ಪೂಜೆಗೆ ಹೆಸರಾಗಿದೆ. ನಾಗ ಪೂಜೆಗೆ ನಾಥ ಗುರುಗಳ ಕೃಪಾಶಿರ್ವಾದ ಇದೆಯೆಂದು ಜನ ನಂಬುತ್ತಾ ಬತ್ತೀಸ್–ಶಿರಾಳಕ್ಕೆ ಬಂದು ಜೀವಂತ ನಾಗ ಪೂಜೆಯಲ್ಲಿ ಪಾಲ್ಗೊಳ್ಳುತ್ತಾರೆ.

ನಾಥ ಸಾಧುಗಳು ಭಿಕ್ಷೆ ಬೇಡುವಾಗ ಒಂದು ಮನೆಯ ಮುಂದೆ ನಿಂತು ಬೇಡಿ ಏನೂ ಸಿಗದೇ ಹೋದರೆ ಮುನ್ನಡೆಯುತ್ತಾರೆಯೇ ಹೊರತು ಮತ್ತೆ ಹಿಂದೆ ಬರುವುದಿಲ್ಲ. ಹಿಂದೊಮ್ಮೆ ನಾಥ ಸಾಧುಗಳಾದ ಗೋರಕ್ಷನಾಥ ಮತ್ತು ಮತ್ಸ್ಯೇಂದ್ರನಾಥರು ಬತ್ತೀಸ್ ಶಿರಾಳದ ಮನೆಯೊಂದರ ಮುಂದೆ ನಿಂತು ಭಿಕ್ಷೆಗಾಗಿ ಕಾಯ್ದು ಯಾರೂ ಬಾರದೇ ಹೋದಾಗ ಮುಂದೆ ಹೊರಟು ಬಿಟ್ಟರು. ಮನೆಯೊಡತಿ ಸಾಧುಗಳು ಬಿಕ್ಷೆಯಿಲ್ಲದೇ ಹೊರಟು ಹೋದುದರಿಂದ ಖಿನ್ನಳಾಗಿ ಓಡಿ ಬಂದು ಕ್ಷಮೆ ಕೋರುತ್ತಾಳೆ. ಕಾರಣ ಕೇಳಿದ್ದಕ್ಕೆ ತಾನು ನಾಗಪೂಜೆಯಲ್ಲಿ ತೊಡಗಿದ್ದ ಕಾರಣ ಕೂಡಲೇ ಬರಲಾಗಲಿಲ್ಲ ಎನ್ನುತ್ತಾಳೆ. ಆಕೆ ಮಣ್ಣಿನ ನಾಗನ ಪೂಜೆ ಮಾಡುತ್ತಿದ್ದುದನ್ನು ತಿಳಿದ ಸಾಧುಗಳು ಇನ್ನು ಮುಂದೆ ಜೀವಂತ ನಾಗನ ಪೂಜೆ ಮಾಡು ಅದಕ್ಕಾಗಿ ಜೀವಂತ ನಾಗ ನಿನ್ನ ಮನೆಯಲ್ಲಿ ಕಾಯ್ದಿದ್ದಾನೆ ಎಂದು ತಿಳಿಸಿ ವಿಭೂತಿಯನ್ನು ನೀಡುತ್ತಾರೆ. ಇತ್ತ ಆಕೆಯ ಮನೆಯಲ್ಲಿ ಜೀವಂತ ಹಾವು ಕಂಡು ಬಂದು ಎಲ್ಲರೂ ಗಾಬರಿಯಿಂದ ಓಡುವಾಗ ಮನೆಯೊಡತಿ ಬಂದು ವಿಭೂತಿಯನ್ನು ನಾಗನ ಮೇಲೆ ಹಾಕಿದಾಗ ಅದು ಒಂದೆಡೆ ಪ್ರತಿಷ್ಠಾಪನೆಯಾಗುತ್ತದೆ. ನಂತರ ಎಲ್ಲರೂ ಈ ಜೀವಂತ ನಾಗನನ್ನು ಪೂಜೆ ಮಾಡುತ್ತಾರೆ.

ಈಗಲೂ ಬತ್ತೀಸ್ ಶಿರಾಳದಲ್ಲಿ ಜೀವಂತ ನಾಗನನ್ನು ಹಿಡಿದು ಅದಕ್ಕೆ ಪೂಜೆ ಮಾಡುತ್ತಾರೆ. ಆಶ್ಚರ್ಯವೆಂದರೆ ಈ ಹಾವುಗಳು ಯಾರಿಗೂ ತೊಂದರೆ ಉಂಟೂ ಮಾಡುವುದಿಲ್ಲ. ಇದು ನಾಗಾ ಸಾಧುಗಳ ಮತ್ತು ನಾಥ ಗುರುಗಳ ಕೃಪೆ ಎಂಬ ನಂಬಿಕೆ ಇದೆ.

ಕರ್ನಾಟಕದ ನಾಥ ಶಾಖೆಗಳು

1. ಶ್ರೀ. ರಾಜಮೋಹನಜೀ ಯೋಗೆಶ್ವರವಿಠಾಲ ಮಠ, ಕದ್ರಿ, ಮಂಗಳೂರು.
2. ಶ್ರೀ. ಮಹಂತ ಉಮೇಶನಾಥಜೀ ಶ್ರೀನಾಥಕಾ ಡೇರಾ, ಸೊರಬ.
3. ಶ್ರೀ. ಮಹಂತನಾಥಜೀ ಜೋಗಿ, ಯೋಗೇಶ್ವರ ಮಠ, ದಕ್ಷಿಣಕನ್ನಡ.
4. ಶ್ರೀ. ಮಹಂತ ಶಂಕರನಾಥಜೀ ಖಾನಪುರ, ಬೆಳಗಾವಿ.
5. ಶ್ರೀ. ಮಹಂತ ಶ್ರದ್ಧಾನಾಥಜೀ. ಸಿದ್ಧೇಶ್ವರ ಮಠ ಹುತ್ರಿದುರ್ಗ.
6. ಶ್ರೀ. ಮಹಂತ ರಾಜಗುರು ಮಂಗಳನಾಥಜೀ, ಕಾಲಭೈರವ ಮಂದಿರ, ಲೌಕಿಮಠ, ನುಂಕೆಮಲೆ, ಚಿತ್ರದುರ್ಗ.

7. ಶ್ರೀ. ಪೀರ್ ದುರ್ಗಾನಾಥಜೀ, ಶ್ರೀ ಗುರು ಗೋರಕ್ಷನಾಥ ಮಠ, ಕಿರವಾಲ, ಖಾನಪುರ.

8. ಶ್ರೀ. ಪೀರ್ ಸೋಮನಾಥಜೀ, ಶ್ರೀ ಕೋಡಶಾಹಿ ಹಕ್ವಾರಿ ಮಠ, ಎಡಮೊಗ, ಕಮಲಶಿಲೆ, ಉತ್ತರಕನ್ನಡ.

9. ಶ್ರೀ. ಪೀರ್ ಭೋಲಾನಾಥಜೀ, ಶ್ರೀ ದಾದಾಕಾ ಮಠ, ಡೊಂಗರಗಾವ್, ಖಾನಾಪುರ.

ಭಾರತದ ಪ್ರಮುಖ ನಾಥ ಪುಣ್ಯಕ್ಷೇತ್ರಗಳು

ಪ್ರಯಾಗ, ಕಾಶಿ, ಅಯೋಧ್ಯಾ, ತ್ರಯಂಬಕೇಶ್ವರ, ದ್ವಾರಕಾ, ಹರಿದ್ವಾರ, ಬದರಿನಾಥ, ಕೇದಾರನಾಥ, ಅಮರನಾಥ, ತುಂಗಾನಾಥ (ಪಂಚಕೇದಾರ), ಸೋಮನಾಥ, ವೈದ್ಯನಾಥ (ಜಾರ್ಖಂಡ್), ಉಜ್ಜೈನಿ, ರಾಮೇಶ್ವರ, ಗೋರಖತಿಲ್ಲಾ, ಗಂಗಾಸಾಗರ, ಕೈಲಾಸನಾಥ (ಎಲ್ಲೋರ), ಅಬೋಹರ, ಭುವನೇಶ್ವರ, ಅಲಹಾಬಾದ್, ತುಳಸಿಪುರ, ಅಮೃತಸರ, ಪುರಿ ಜಗನ್ನಾಥ, ಹೇಮಾವತಿ (ಆಂಧ್ರಪ್ರದೇಶ), ಘರ್ವಾಲ್ (ಕಾಶ್ಮೀರ), ಪಶುಪತಿನಾಥ (ನೇಪಾಳ), ಮಹೇಂದ್ರನಾಥ (ಬಿಹಾರ), ಕಾಶಿ ವಿಶ್ವನಾಥ, ಗೋರಖನಾಥ್ (ಗೋರಖಪುರ), ಗರೀಬನಾಥ (ಹಿಮಾಚಲ), ಕಾಮಾಖ್ಯ (ಅಸ್ಸಾಂ) ಮತ್ತು ನೈನಾನಾಥ (ನೈನಿತಾಲ್). ಇವು ಪ್ರಮುಖವಾದ ಸ್ಥಳಗಳು ಮಾತ್ರಾ. ಇನ್ನೂ ಅದೆಷ್ಟೊ ನಾಥ ದೇವಾಲಯಗಳನ್ನು ಹೆಸರಿಸಲಾಗಿಲ್ಲ.

ಗೋರಕ್ಷನಾಥ

ನಾಥ ಪರಂಪರೆಯಲ್ಲಿ ಗೋರಕ್ಷನಾಥನಿಗೆ ದೊಡ್ಡ ಹೆಸರಿದೆ. ಭಕ್ತನೊಬ್ಬನಿಗೆ ಸಂತಾನದ ವರವನ್ನು ಶಿವ ನೀಡುತ್ತಾ ಕೈಲಾಸದ ಧುನಿ (ಅಗ್ನಿಕುಂಡ) ಯಿಂದ ಹಿಡಿ ಬೂದಿಯನ್ನು ಕೊಟ್ಟು ಆತನ ಪತ್ನಿಗೆ ತಿನ್ನಿಸುವಂತೆ ತಿಳಿಸುತ್ತಾನೆ. ಭಕ್ತ ತನ್ನ ಪತ್ನಿಗೆ ಅದನ್ನು ನೀಡಿ ತಿನ್ನುವಂತೆ ತಿಳಿಸಿದಾಗ ಆಕೆ ಅಸಹ್ಯದಿಂದ ಅದನ್ನು ದನದ ಸಗಣಿಯ ತಿಪ್ಪೆಯ ಮೇಲೆ ಬಿಸಾಡುತ್ತಾಳೆ. ಮಾರನೇ ದಿನ ಭಕ್ತ ತಿಪ್ಪೆಯ ಮೇಲೆ ಮಲಗಿದ್ದ ಮಗುವೊಂದನ್ನು ನೋಡಿ ಶಿವನ ಪ್ರಸಾದ ಎಂದು ಮಗುವನ್ನು ಶಿವನ ಬಳಿಗೆ ತರುತ್ತಾನೆ. ಶಿವ ಆ ಮಗುವನ್ನು ತಪಸ್ವಿಯಾಗಿ ಮಾಡಲು ತಿಳಿಸಿ ಮಗುವಿಗೆ ಗೋರಕ್ಷನಾಥ ಎಂದು ಹೆಸರು ನೀಡುತ್ತಾನೆ. ಆತನೊಂದಿಗೆ 84 ಶಿಷ್ಯ ಪರಂಪರೆ ಇರುತ್ತದೆ. ತಾಂತ್ರಿಕ ಪೂಜೆಗಳಲ್ಲಿ ಈ ಸಂಖ್ಯೆಗೆ ಅತ್ಯಂತ ಮಹತ್ವವಿದೆ.



ವೈಷ್ಣೋದೇವಿ ಮತ್ತು ಗುರು ಗೋರಖ್‌ನಾಥ

ಗುರು ಗೋರಖನಾಥನ ಉಲ್ಲೇಖವೊಂದು ವೈಷ್ಣೋದೇವಿ ಕ್ಷೇತ್ರದೊಂದಿಗೆ ತಳುಕು ಹಾಕಿಕೊಂಡಿದೆ. ದೇವಿ ಬಾಲಕಿಯ ರೂಪದಲ್ಲಿ ಪಂಡಿತ ಶ್ರೀಧರ



ಎಂಬಾತನಿಗೆ ಕಾಣಿಸಿಕೊಳ್ಳುತ್ತಾಳೆ. ಊರಿನ ಎಲ್ಲಾ ಜನರನ್ನೂ ಭೋಜನಕ್ಕೆ ಕರೆಯುವಂತೆ ಆಕೆಯಿಂದ ಶ್ರೀಧರನಿಗೆ ಆಜ್ಞೆಯಾಗುತ್ತದೆ. ಅದನ್ನು ಪಾಲಿಸಿದ ಶ್ರೀಧರ ಗುರು ಗೋರ್ಖನಾಥನಿಗೂ ಆಹ್ವಾನ ನೀಡುತ್ತಾನೆ. ಗೋರಖನಾಥ ತನ್ನ ನೂರಾರು ಶಿಷ್ಯರಿಗೆ ಊಟ ನೀಡಲು ಸಾಧ್ಯವೇ ಎಂಬ ಅನುಮಾನ ವ್ಯಕ್ತಪಡಿಸಿದಾಗ ಶ್ರೀಧರ ಏನೂ ಚಿಂತೆಗೆ ಆಸ್ಪದವಿಲ್ಲ ಎಂಬ ಭರವಸೆ ನೀಡುತ್ತಾನೆ.

ಗೋರಖನಾಥ ತನ್ನ ಶಿಷ್ಯರೊಂದಿಗೆ ಸ್ಥಳಕ್ಕೆ ತಲುಪಿದಾಗ ಏನೂ ಸಿದ್ಧತೆಯಾಗಿರುವುದಿಲ್ಲ. ಶ್ರೀಧರ ಸ್ನಾನ ಮಾಡಿ ಬರಲು ಸಾಧುಗಳಿಗೆ ತಿಳಿಸುತ್ತಾನೆ. ಜಪ-ತಪ ಮುಗಿಸಿ ಬಂದ ನೂರಾರು ನಾಥರನ್ನು ಒಮ್ಮೆಗೇ ಸಣ್ಣ ಗುಡಿಸಿಲಿನ ಒಳಗೆ ಕೂರಿಸಿ ಊಟ ನೀಡಲಾಗುತ್ತದೆ. ದೇವಿ ಒಂದೇ ಬಟ್ಟಲಿನಿಂದ ಎಲ್ಲರಿಗೂ ಕೇಳಿದ ಭಕ್ಷ್ಯಗಳನ್ನು ಬಡಿಸುತ್ತಾಳೆ. ಉಂಡ ನಂತರ ತೆರಳಿದ ಗೋರಖನಾಥ ತನ್ನ ಶಿಷ್ಯ ಭೈರವನಾಥನನ್ನು ಕರೆದು ವೈಷ್ಣೋದೇವಿಯ ಮಾಹಿತಿ ತಿಳಿಯುವಂತೆ ಆದೇಶಿಸುತ್ತಾನೆ. ಅದಕ್ಕಾಗಿ ಹೋದ ಭೈರವನಾಥ ದೇವಿಯ ಸೌಂದರ್ಯಕ್ಕೆ ಮರುಳಾಗಿ ತನ್ನನ್ನು ವಿವಾಹವಾಗುವಂತೆ ಆಕೆಗೆ ದುಂಬಾಲು ಬೀಳುತ್ತಾನೆ.

ಭೈರವನಾಥನ ಕಾಟ ಅತಿಯಾದಾಗ ದೇವಿ ಆತನನ್ನು ಕೊಲ್ಲುತಾಳೆ. ನಂತರ ಆತನ ಕೋರಿಕೆಯನ್ನು ಮನ್ನಿಸಿ ಭೈರವನಾಥನ ದೇವಾಲಯ ಸಂದರ್ಶಿಸಿ ತೆರಳುವ ಯಾತ್ರಿಗಳಿಗೆ ಮಾತ್ರಾ ಯಾತ್ರೆಯ ಫಲ ಸಿಗಲಿ ಎಂಬ ವರ ನೀಡುತ್ತಾಳೆ. ಹಾಗೆ ಭೈರವನಾಥನ ದೇವಾಲಯ ವೈಷ್ಣೋದೇವಿ ಕ್ಷೇತ್ರದಲ್ಲಿದೆ.

ನವನಾಥ ಝುಂಡಿ

ನಾಥಯೋಗಿಗಳಿಗೆ ಪಾತ್ರದೇವತೆ ಪವಿತ್ರವಾದುದು. ಇದು ಶಿವನಿಂದ ಪರಶುರಾಮನಿಗೆ ನೀಡಲ್ಪಟ್ಟ ಅಮೃತಕಲಶ. ಪರಶುರಾಮ ಕ್ಷತೀಯರನ್ನು ಕೊಂದ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಹೊರಟಾಗ ಪಾರ್ವತಿ ಆತನಿಗೆ ಪಾತ್ರದೇವತೆಯನ್ನು ನೀಡಿ ಅದು ಪ್ರಜ್ವಲಿಸಿದ ಸ್ಥಳದಲ್ಲಿ ಕ್ರಿಯಾಕರ್ಮ ಮಾಡಲು ತಿಳಿಸುತ್ತಾಳೆ. ಪರಶುರಾಮ ಭಾರತವನ್ನೆಲ್ಲಾ ಸುತ್ತಿ ಕದ್ರಿಗೆ ಬಂದಾಗ ಪಾತ್ರದೇವತೆ ಪ್ರಜ್ವಲಿಸುತ್ತದೆ. ಪರಶುರಾಮ ಅಲ್ಲೇ ನಿಂತು ತನ್ನ ಕಾರ್ಯ ಮುಗಿಸುತ್ತಾನೆ. ನಂತರ ಈ ಸ್ಥಳ ನಾಥರ ಪ್ರಸಿದ್ಧ ಕೇಂದ್ರವಾಗುತ್ತದೆ. ಅದೇ ರೀತಿ ಗುರು ಸಿಂಹ ರಾಶಿ ಪ್ರವೇಶಿಸುವ ಕುಂಭಮೇಳದ ಸಂದರ್ಭದಲ್ಲಿ ತ್ರಯಂಬಕೇಶ್ವರದಿಂದ ಹೊರಡುವ ನಾಥ ಯೋಗಿಗಳ ಮಹಾ ಸೈನ್ಯ ಕೈಯ್ಯಲಿ ಪಾತ್ರ ದೇವತೆಯನ್ನು ಹಿಡಿದು ಅದನ್ನು ಎಲ್ಲೂ ನೆಲಕ್ಕಿಡದಂತೆ ಕಾಪಾಡಿಕೊಂಡು ನಡಿಗೆಯಲ್ಲಿ ಕದ್ರಿ ತಲುಪಿ ಪೂಜಾ ಕ್ರಿಯೆಗಳನ್ನು ಮಾಡುತ್ತದೆ.

ಮಹಾರಾಷ್ಟ್ರ ರಾಜ್ಯದ ಖ್ಯಾತ ಜ್ಯೋತಿರ್ಲಿಂಗ ದೇವಾಲಯ ತ್ರಯಂಬಕೇಶ್ವರದಿಂದ ಹೊರಡುವ ನವನಾಥ ಝೊಂಡಿ ಅಲ್ಲಿಂದ ಕಾಲ್ನಡಿಯಲ್ಲಿ ಹೊರಟು ಸುಮಾರು 1160 ಕಿಲೋಮೀಟರ್ ಪ್ರಯಾಣ ಮಾಡಿ 79 ಕ್ಷೇತ್ರಗಳನ್ನು ಸಂದರ್ಶಿಸಿ ಕೊನೆಗೆ ಮಂಗಳೂರಿನ ಕದ್ರಿ ತಲುಪುತ್ತದೆ. ನಾಥ ಯೋಗಿಗಳು ತಾವು ತಂಗುವ ಎಲ್ಲಾ ಸ್ಥಳಗಳಲ್ಲಿ ಪ್ರತಿದಿನ ಧುನಿಯ (ಅಗ್ನಿಕುಂಡ) ಪೂಜೆ ಮಾಡುತ್ತಾರೆ. ಎಲ್ಲಾ ನಾಥ ಮಠಗಳಿಗೂ ಆಡಳಿತಾಧಿಕಾರಿಗಳನ್ನು ಆಯ್ಕೆ ಮಾಡುವ ಕಾರ್ಯ ಕೂಡಾ ನಡೆಯುತ್ತದೆ.

ಕದ್ರಿ ತಲುಪಿದ ನಂತರ ಯೋಗಿಗಳು ಮಂಜುನಾಥನ ದರ್ಶನ ಮಾಡಿ ಬಾರಹ ಪಂಥ ಕಟ್ಟೆಯ ಮೇಲೆ ಪಾತ್ರ ದೇವತೆಯನ್ನಿರಿಸಿ ಪೂಜಾ ವಿಧಿಗಳನ್ನು ನಡೆಸುತ್ತಾರೆ. ನಂತರ ನಿರ್ಗಮಿತ ಪೀಠಾಧಿಪತಿಗಳು ತಮ್ಮ ಶಿಷ್ಯಗಣದೊಂದಿಗೆ ಹಾಗೂ ಝೊಂಡಿಯೊಂದಿಗೆ ಬಂದ ಎಲ್ಲಾ ಯೋಗಿಗಳನ್ನು ಕೂಡಿಕೊಂಡು ತಮ್ಮ ಮಠಕ್ಕೆ

ಕರೆತರುತ್ತಾರೆ. ಇವೆಲ್ಲಾ ಆಚರಣೆಗಳು ಕ್ರಮಬದ್ಧವಾಗಿ ನಡೆಯುತ್ತವೆ. ಮುಂದಿನ ಹನ್ನೆರಡು ವರ್ಷಗಳಿಗೆ ರಾಜ್ಯದ ಎಲ್ಲಾ ನಾಥ ಕೇಂದ್ರಗಳಿಗೂ ರಾಜರನ್ನು ಆಯ್ಕೆ ಮಾಡುತ್ತದೆ.

ಕದ್ರಿಯಲ್ಲಿ ರಾಜಪೀಠಕ್ಕೆ ಪಟ್ಟಾಭಿಶೇಕ ನಡೆದ ನಂತರ ಹೊಸ ರಾಜನಿಗೆ ಪಟ್ಟದ ಕತ್ತಿಯನ್ನು ವಿದ್ಯುಕ್ತವಾಗಿ ನೀಡುವ ಕ್ರಿಯೆ ನಡೆಯುತ್ತದೆ. ನಿರ್ಗಮಿತ ರಾಜ ತಾನು ಹನ್ನೆರಡು ವರ್ಷ ಅರಾಧಿಸಿದ ಪಾತ್ರದೇವತೆಯನ್ನು ಪೀಠದ ಮೇಲೆ ಪ್ರತಿಷ್ಟಾಪಿಸಿ ಕಲಶದೊಳಕ್ಕೆ ಯೋಗಿ ರಾಜರ ನಿಶಾನೆಗಳನ್ನು ಇರಿಸುತ್ತಾರೆ. ನಂತರ ಹಳೆಯ ರಾಜ ಮಠದ ಎಲ್ಲಾ ವಹಿವಾಟನ್ನೂ ಸಾಂಕೇತಿಕವಾಗಿ ಹೊಸ ರಾಜರಿಗೆ ವಹಿಸಿಪಾತ್ರ ದೇವತೆಯನ್ನು ಹೊತ್ತು ಸಮುದ್ರ ತೀರಕ್ಕೆ ಬರುತ್ತಾರೆ. ಅಲ್ಲಿ ಪಾತ್ರ ದೇವತೆಗೆ ಮತ್ತೊಮ್ಮೆ ಪೂಜೆ ಜರುಗುತ್ತದೆ. ನಂತರ ಪಾತ್ರ ದೇವತೆಯನ್ನು ಸಮುದ್ರದಲ್ಲಿ ವಿಸರ್ಜಿಸಿ ಜಲಸಮಾಧಿ ಕ್ರಿಯೆಯನ್ನು ಪೂರ್ಣಗೊಳಿಸಿ ಮಠಕ್ಕೆ ವಾಪಸಾಗುತ್ತಾರೆ. ಅಲ್ಲಿಗೆ ಪ್ರತೀ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ನವನಾಥ ಝೊಂಡಿಗೆ ವಿದ್ಯುಕ್ತವಾಗಿ ತೆರೆ ಬೀಳೂತ್ತದೆ.

ಕದ್ರಿಯ ಮಹತ್ವ

ಪರಶುರಾಮ ತಾಯಿಯನ್ನು ಹಾಗೂ ಕ್ಷತ್ರಿಯರನ್ನು ಕೊಂದ ಪಾಪ ಪರಿಹಾರಾರ್ಥವಾಗಿ ಶಿವನ ಆದೇಶದ ಮೇರೆಗೆ ಕದ್ರಿ ವನಕ್ಕೆ ಬಂದು ಅಲ್ಲಿ ತಪಸ್ಸು ಮಾಡಿ ಧ್ಯಾನಕ್ಕೆ ಅಗ್ನಿಕುಂಡವೊಂದನ್ನು ಸ್ಥಾಪಿಸಿರುತ್ತಾನೆ. ಈ ಮಂಜು ಕವಿದ ಪ್ರದೇಶದಲ್ಲಿ ರಸರೂಪಿಯಾಗಿ ಉದ್ಭವಿಸಿದ ಲಿಂಗರೂಪವನ್ನು ಮತ್ಸ್ಯೇಂದ್ರನಾಥ ಮಂಜುನಾಥನೆಂದು ಕರೆದು ಕದ್ರಿ ಬೆಟ್ಟದ ಮೇಲೆ ಪ್ರತಿಷ್ಟಾಪನೆ ಮಾಡಿದ. ಈ ಹಿನ್ನೆಲೆಯಲ್ಲಿ ಕದ್ರಿ ಮಂಜುನಾಥ ನಾಥ ಪಂಥದ ಪ್ರಮುಖ ದೇವತೆಯಾಗಿ ಝೊಂಡಿಯ ಘಟನಾವಳಿಯ ಭಾಗವಾಗಿದ್ದಾನೆ.

ಈ ಘಟನೆಯ ಹಿನ್ನೆಲೆಯಾಗಿ ಮತ್ಸ್ಯೇಂದ್ರನಾಥ ಕಾಶಿಯಲ್ಲಿರುವ ಶಿವಲಿಂಗವನ್ನು ಕದ್ರಿಯಲ್ಲಿ ಪ್ರತಿಷ್ಟಾಪಿಸಿ ಪೂಜಿಸುವ ಇಚ್ಚೆಯಿಂದ ತನ್ನ ಶಿಷ್ಯ ಗೋರಖನಾಥನನ್ನು ಕಾಶಿಗೆ ಕಳುಹಿಸುತ್ತಾನೆ. ನಂತರ ಗೋರಖನಾಥ ತಂದ ಲಿಂಗವನ್ನು ಗಂಗೆಯಲ್ಲಿರಿಸಿ ಪೂಜಿಸಲಾಗುತ್ತದೆ. ಮುಂದೆ ಅದೇ ಲಿಂಗವನ್ನು ಅಣ್ಣಪ್ಪಸ್ವಾಮಿ ಧರ್ಮಸ್ಥಳಕ್ಕೆ ಒಯ್ದನೆಂಬ ನಂಬಿಕೆ ಇದೆ.

ನಂತರ ಕದ್ರಿ ನಾಥ ಪಂಥದ ಗುರುಗಳ ಕೇಂದ್ರವಾಗಿ ಮಂಜುನಾಥನ ಆರಾಧನೆ, ಧುನಿಯ ಪೂಜೆ ನಿರಂತರವಾಗಿ ಮುಂದುವರೆದು ಬಂದಿದೆ. ಇದೇ ಕ್ಷೇತ್ರದಲ್ಲಿ ಬದುಕು ಮುಗಿಸಿದ ಅನೇಕ ಯೋಗಿಗಳ ಸಮಾಧಿಗಳು ಇಲ್ಲಿವೆ.

ಇಲ್ಲಿನ ಮತ್ತೊಂದು ವಿಶೇಷವೆಂದರೆ ನಾಥ ಪಂಥದ ಪ್ರಥಮ ಯೋಗಿನಿಯಾಗಿ ದೀಕ್ಷೆ ಪಡೆದ ಪಿಂಗಳಾದೇವಿಗೆ ಮೋಕ್ಷ ನೀಡಿ ಆಕೆಯನ್ನು ಮಂಗಳಾದೇವಿ ಎಂದು ಹೆಸರಿಸಿ ದೇವಿಯನ್ನು ಲಿಂಗರೂಪದಲ್ಲಿ ನೆಲೆಸುವಂತೆ ಮತ್ಸ್ಯೇಂದ್ರನಾಥ ಮತ್ತು ಗೋರಖನಾಥರು ಅನುಗ್ರಹಿಸುತ್ತಾರೆ. ದೇವಿ ಲಿಂಗರೂಪದಲ್ಲಿರುವ ವಿಶಿಷ್ಟ ದೇಗುಲ ಕದ್ರಿಯದ್ದು. ದೇವಿಗೆ ಪ್ರತೀ ವರ್ಷ ಜೋಗಿ ಅರಸರು ಪಟ್ಟೆ ಸೀರೆಯ ಬಾಗಿನ ನೀಡುವ ಸಂಪ್ರದಾಯವಿದೆ. ಹೀಗೆ ಕದ್ರಿ ನಾಥ ಪಂಥದ ಬಹುತೇಕ ಘಟನೆಗಳಲ್ಲಿ ಕಾಣಿಸಿಕೊಳ್ಳುತ್ತಾ ಕದಲಿವನ ಎಂದು ಪ್ರಸಿದ್ಧವಾಗಿದೆ.

ನುಂಕೆಮಲೆ

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಬಳಿ ಇರುವ ನುಂಕೆಮಲೆ ಸಹಸ್ರಾರು ವರ್ಷಗಳ ಇತಿಹಾಸ ಹೊಂದಿದ ಒಂದು ನಾಥ ಕ್ಷೇತ್ರ. ಇಲ್ಲಿ ನಾಥ ಕೇಂದ್ರವಿದ್ದು ಶ್ರೀ. ಮಂಗಳನಾಥ ಬಾಬಾಜಿ ವಲಯದ ರಾಜರಾಗಿದ್ದಾರೆ. ಕಳೆದ ಹನ್ನೆರಡು ವರ್ಷಗಳ ಎರಡು ಅವಧಿಯಲ್ಲಿ ಆಡಳಿತ ನಡೆಸಿ ಮೂರನೇ ಅವಧಿಗೆ ಮುಂದುವರೆದಿದ್ದಾರೆ. ಇಲ್ಲಿ ಸುಮಾರು 11 ನೇ ಶತಮಾನಕ್ಕೆ ಸೇರಿದ ಕಾಲಭೈರವ ಸ್ವಾಮಿ ದೇವಾಲಯವಿದ್ದು ಅದರ ಬಾಜುವಿನಲ್ಲೇ ಶ್ರೀ ಮಂಗಳನಾಥ ಸ್ವಾಮೀ ಎಂಬ ಸಂತರ ಗದ್ದುಗೆ ಇದೆ. ಇವರು ಗೋರಕ್ಷನಾಥರ ಶಿಷ್ಯ ಎನ್ನಲಾಗುತ್ತದೆ ಕಾಲಭೈರವನ ಗುಡಿಯಲ್ಲಿ ಕಾನ್‌ಫ಼ಟಾ ಯೋಗಿಗಳು ಪೂಜಾಕಾರ್ಯ ನಡೆಸುತ್ತಾರೆ.

ಇಲ್ಲಿ ವಾರ್ಷಿಕ ಜಾತ್ರೆಯ ವೇಳೆಯಲ್ಲಿ ಕಾಲಭೈರವನಿಗೆ ಸಿಧ್‌ಭುಕ್ತಿ (ಸಿದ್ಧ–ಭುಕ್ತಿ) ಎಂಬ ವಿಶೇಷ ಕಾರ್ಯಕ್ರಮ ನಡೆಯುತ್ತದೆ. ಆ ಸಮಯದಲ್ಲಿ ಬಲಿ ಪ್ರಾಣಿಯ ಯಕೃತ್ತನ್ನು ತೆಗೆದು ಸೋರೆ ಬುರುಡೆಯಲ್ಲಿಟ್ಟು ಅದನ್ನು ದೇವರಿಗೆ ನೈವೇದ್ಯ ಮಾಡಲಾಗುತ್ತದೆ. ಆ ಸಮಯದಲ್ಲಿ ನಾಥ ಪರಿವಾರದವರು ತಮ್ಮ ಸಿಂಗಿ ಊದಿ ಶಿವನಿಗೆ ಗೌರವ ಸಲ್ಲಿಸುತ್ತಾರೆ. (ಮಾಹಿತಿ: ಡಾ.ಮೀರಾಸಾಬಿಹಳ್ಳಿ ಶಿವಣ್ಣ)

ಇಲ್ಲಿ ಬಹಳ ಹಿಂದೆ ನುಂಕವ್ವ ಮತ್ತು ಮಲೆಯವ್ವ ಎಂಬ ರಕ್ಕಸಿಯರಿದ್ದು ಸಿದ್ದೇಶ್ವರಸ್ವಾಮಿ ಅವರನ್ನು ಸಂಹರಿಸಲು ಬಂದಾಗ ಆತನ ಕುದುರೆಯ ಲಗಾಮು ಕಿತ್ತು ಹೋಯಿತು. ಆಗ ಅಲ್ಲಿದ್ದ ಹರಳಯ್ಯ ಎಂಬಾತ ತನ್ನ ನರವನ್ನು ತೆಗೆದು

ಅದರಿಂದ ಲಗಾಮಿನ ದಾರ ಮಾಡಿಕೊಟ್ಟ. ಸಂಪ್ರೀತನಾದ ಸಿದ್ದೇಶ್ವರಸ್ವಾಮಿ ತನಗಿಂತಾ ಮೊದಲು ಹರಳಯ್ಯನಿಗೆ ಪೂಜೆ ಸಲ್ಲಬೇಕೆಂದು ತಿಳಿಸಿದನಂತೆ. ನಂತರ ರಕ್ಕಸಿಯರ ಸಂಹಾರವಾಗಿ ಅವರ ಕೋರಿಕೆಯ ಮೇರೆಗೆ ಅವರ ಹೆಸರನ್ನೇ ಈ ಪ್ರದೇಶಕ್ಕೆ ಇಟ್ಟನಂತೆ. ಅವೆರಡು ವಿಗ್ರಹಗಳು ಈಗಲೂ ಆಂಜನೇಯಸ್ವಾಮಿ ಗರ್ಭಗುಡಿಯ ಮುಂದೆ ಇವೆ. ಬೆಟ್ಟದ ಮೇಲೆ ಮಲ್ಲಿಕಾರ್ಜುನ ಸ್ವಾಮಿ ದೇವಾಲಯ, ತುಪ್ಪದಮ್ಮ ದೇವಾಲಯಗಳಿವೆ.

ಮಹಾವತಾರನಾಥ ಬಾಬಾಜಿ

ನಾಥ ಗುರು ಪರಂಪರೆಯಲ್ಲಿ ಮಹಾವತಾರ ಬಾಬಾಜಿ ಪ್ರಮುಖರು. ಇವರ ಪೂರ್ವಾಶ್ರಮದ ಹೆಸರು ಮತ್ತು ವಿವರಗಳು ಲಭ್ಯವಿಲ್ಲ. ಲಾಹಿರಿ ಮಹಾಶಯರು ಮತ್ತು ಇತರೆ ಹಿರಿಯ ಯೋಗಿಗಳು ಮಹಾವತಾರನಾಥ ಬಾಬಾಜಿ ಎಂಬ ಹೆಸರನ್ನು ನೀಡಿದರು. ಕೆಲವು ಮೂಲಗಳ ಪ್ರಕಾರ ಬಾಬಾಜಿಯವರ ಮೂಲ ಹೆಸರು ನಾಗರಾಜನ್. ಇವರು ತಮಿಳುನಾಡಿನ ಪರಂಗಿಪೇಟ್ಟೈ ಎಂಬಲ್ಲಿ ಜನಿಸಿದರು. ಬಾಬಾಜಿಯವರೇ ತಮ್ಮ ಭಕ್ತರಿಗೆ ತಿಳಿಸಿದಂತೆ ಅವರ ಜನಿಸಿದ್ದು ನವೆಂಬರ್ 30, 203 ರಲ್ಲಿ. ಪರಮಹಂಸ ಯೋಗಾನಂದ ತಮ್ಮ ಗ್ರಂಥ ದಿ ಸೆಕೆಂಡ್ ಕಮಿಂಗ್ ಆಫ್ ಕ್ರೈಸ್ಟ್‌ನಲ್ಲಿ ಯೇಸುವು ಭಾರತಕ್ಕೆ ಬಂದು ಬಾಬಾಜಿಯವರನ್ನು ಭೇಟಿ ಮಾಡಿದ್ದರು ಎನ್ನುತ್ತಾರೆ.

ಬಾಬಾಜಿಯವರ ಜೀವನ ರಹಸ್ಯಮಯವಾಗಿದ್ದು ಅವರ ಅಧಿಕೃತ ಭೇಟಿ ದಾಖಲಾಗಿರುವುದು ಶ್ಯಾಮಚರಣ ಲಾಹಿರಿಯವರೊಂದಿಗೆ 1861 ರಲ್ಲಿ. ನಂತರ 1894 ರ ಅಲಹಾಬಾದ್ ಕುಂಭಮೇಳದಲ್ಲಿ ಯುಕ್ತೇಶ್ವರ ಗಿರಿಯವರಿಗೆ ಕಾಣಿಸಿಕೊಂಡರು. ಮುಂದೆ 1935 ರಲ್ಲಿ ಕೇಶವಾನಂದ ಎಂಬ ಸಂತರು ಹಿಮಾಲಯ ಬೆಟ್ಟಗಳಲ್ಲಿ ದಾರಿ ತಪ್ಪಿದಾಗ ಬಾಬಾಜಿ ಕಾಣಿಸಿಕೊಂಡ ಬಗ್ಗೆ ಉಲ್ಲೇಖಗಳಿವೆ. ಬಾಬಾಜಿ ಮರೆಯಾಗಿರುವುದೇ ಹೆಚ್ಚು. ಈಗಲೂ ಬಾಬಾಜಿ ಹಿಮಾಲಯ ಪರ್ವತಗಳ ಗುಹೆಯಲ್ಲಿ ವಾಸಿಸುತ್ತಿದ್ದು ಆಗಾಗ ತನ್ನ ಭಕ್ತರಿಗೆ ಮಾತ್ರಾ ಕಾಣಿಸಿಕೊಳ್ಳುತ್ತಾರೆ ಎಂಬ ನಂಬಿಕೆ ಇದೆ. ಖ್ಯಾತ ಚಿತ್ರ ನಟ ರಜನಿಕಾಂತ್ ಬಾಬಾಜಿಯವರನ್ನು ಭೇಟಿ ಮಾಡಿದ್ದಾರೆ ಎನ್ನಲಾಗುತ್ತದೆ. ಅನೇಕ ವಿದೇಶಿ ಭಕ್ತರೂ ಕೂಡಾ ಬಾಬಾಜಿಯವರ ಶಿಷ್ಯರಾಗಿದ್ದು ಬಾಬಾಜಿಯವರ ಮಹಿಮೆಗೆ ಎಣೆಯಿಲ್ಲ.

ಲಾಹಿರಿ ಮಹಾಶಯ

ಬಂಗಾಳದಲ್ಲಿ ಜನಿಸಿದ ಶ್ಯಾಮಚರಣ ಲಾಹಿರಿ ಒಬ್ಬ ಮಹಾನ್ ನಾಥ ಸಂತ (1828–1895) ಹಾಗೂ ಮಹಾವತಾರಿ ಬಾಬಾಜಿಯವರ ಶಿಷ್ಯ. ಸಾಮಾಜಿಕ ಬದುಕಿನಲ್ಲಿದ್ದ ಇವರು ಕ್ರಿಯಾಯೋಗದಿಂದ ಆಕರ್ಷಿತರಾಗಿ ಅದನ್ನು ಕಲಿತು ನಂತರ ತಮ್ಮ ಗುರುಗಳ ಸೂಚನೆ ಮೇರೆಗೆ ಧರ್ಮ ಪ್ರಚಾರದಲ್ಲಿ ತೊಡಗಿಕೊಂಡರು. ಅಪಾರ ಸಂಖ್ಯೆಯ ಶಿಷ್ಯರನ್ನು ಹೊಂದಿದ್ದ ಇವರ ಶಿಷ್ಯ ಗಣದಲ್ಲಿ ಯುಕ್ತೇಶ್ವರ ಗಿರಿ, ಪ್ರಣಬಾನಂದ, ಕೇಶವಾನಂದ ಬ್ರಹ್ಮಚಾರಿ, ಭೂಪೇಂದ್ರನಾಥ ಸನ್ಯಾಲ್ ಮುಂತಾದವರಿದ್ದರು. ತಮ್ಮ ಅಪಾರ ಜ್ಞಾನ ಮತ್ತು ಮಾನವೀಯತೆಗಳಿಂದ ಲಾಹಿರಿ ಮಹಾಶಯ ಎಂದು ಹೆಸರು ಗಳಿಸಿದ ಇವರನ್ನು ಸ್ವಾಮಿ ಯೋಗಾನಂದರು ಯೋಗಾವತಾರ ಎಂದು ಗೌರವಿಸುತ್ತಾರೆ.

❖





೫. ಮುಕ್ತಿಪ್ರದಾಯಕ ಕುಂಭಮೇಳದಲ್ಲಿ ನಿರ್ವಾಣದ ನೆನಪುಗಳು.

ಚಾರ್ವಾಕರು ಅದೇನೇ ಹೇಳಿದರೂ ಭಾರತದ ಧಾರ್ಮಿಕ ಲೋಕದ ಸಾಮೂಹಿಕ ಆಚರಣೆಗಳಲ್ಲಿ ಪಾಲ್ಗೊಳ್ಳುವ ಜನರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇದೆ. ಆಧ್ಯಾತ್ಮ ಮತ್ತು ಅಲೌಕಿಕಗಳ ನಡುವಿನ ಅವಿನಾಭಾವ ಸಂಬಂಧವನ್ನು ಅರಿಯುವ ಪ್ರಯತ್ನವನ್ನು ಮಾನವಲೋಕ ನಿರಂತರವಾಗಿಟ್ಟಿರುವ ಸೂಚನೆ ಇದು. ಈ ಪ್ರಯತ್ನಗಳಲ್ಲಿ ಸಾಮಾನ್ಯರಿಗೆ ಯಶಸ್ಸು ನಿಲುಕುವ ಸಾಧ್ಯತೆ ಕಡಮೆ ಇದ್ದರೂ ಮುಕ್ತಿ ಮಾರ್ಗವನ್ನು ಹುಡುಕುವ ಜನರ ಸಂಖ್ಯೆ ಕಡಮೆಯಾಗುತ್ತಿಲ್ಲ. ತಾವು ರಚಿಸಿಕೊಂಡ ಸುಖದ ವರ್ತುಲದೊಳಗೆ ಬದುಕುತ್ತಾ ಜಗತ್ತಿನ ಲೌಕಿಕ ಸುಖಗಳನ್ನೆಲ್ಲಾ ಬಾಚಿಕೊಂಡು ಮುಂದಿನ ಜಗತ್ತಿನಲ್ಲಿ ಜಾಗ ಮಾಡಿಕೊಳ್ಳುವ ಹವಣಿಕೆಯಲ್ಲಿ ಅನೇಕ ಶಾರ್ಟ್‌ಕಟ್‌ಗಳನ್ನು ಜನ ಹುಡುಕುತ್ತಿರುತ್ತಾರೆ. ಕೆಲವೊಮ್ಮೆ ಯೋಗ-ಭೋಗಗಳ ಈ ಸಮನ್ವಯವೇ ಅತಿರೇಕವೆನ್ನಿಸಿದರೂ ಜನರ ಶ್ರದ್ಧಾನಿಷ್ಠ ಭಾವನೆಗಳಲ್ಲಿ ಸರಿ-ತಪ್ಪುಗಳಿಗೆ ಎಡೆಯಿಲ್ಲ.

ಧರ್ಮದ ಸಮ್ಮೋಹನ ಶಕ್ತಿಯನ್ನು ಅಭಿವ್ಯಕ್ತಿಗೊಳಿಸುವ ಅಪರೂಪದ ಹಿಂದೂ ಆಚರಣೆಗಳಲ್ಲಿ ಕುಂಭಮೇಳ ಕೂಡಾ ಒಂದು. ಹರಿದ್ವಾರ, ಅಲಹಾಬಾದ್ (ಪ್ರಯಾಗ), ನಾಸಿಕ್ ಮತ್ತು ಉಜ್ಜೈನಿಗಳಲ್ಲಿ ನಡೆಯುವ ಪವಿತ್ರ ಸ್ನಾನದ ಕ್ರಿಯೆಯನ್ನು ಕುಂಭಮೇಳ ಎನ್ನುತ್ತಾರೆ. ಗ್ರಹಗಳ ಚಲನೆಗೆ ಅನುಸಾರವಾಗಿ ನಿರ್ದಿಷ್ಟ ಪಡಿಸಿದ ದಿನಗಳಂದು ನಡೆಯುವ ಕುಂಭಸ್ನಾನ ಹರಿದ್ವಾರ ಮತ್ತು ಅಲಹಾಬಾದ್‌ಗಳಲ್ಲಿ ಪ್ರತೀ ಆರು ವರ್ಷಗಳಿಗೆ ಒಮ್ಮೆ ಅರ್ಧ ಕುಂಭಮೇಳ ಎಂಬ ಹೆಸರಿನಲ್ಲಿ ನಡೆಯುತ್ತದೆ. ಹರಿದ್ವಾರದಲ್ಲಿ ಗಂಗಾ ನದಿ, ಅಲಹಾಬಾದ್‌ನಲ್ಲಿ ಗಂಗಾ, ಯಮುನಾ, ಸರಸ್ವತಿ ನದಿಗಳೆಂಬ ಮೂರು ನದಿಗಳ ಸಂಗಮ, ನಾಸಿಕ್ ನಗರದಲ್ಲಿ



ಗೋದಾವರಿ ನದಿ ಮತ್ತು ಉಜ್ಜೈನಿಯಲ್ಲಿ ಶಿಪ್ರಾ ನದಿ ಹರಿಯುತ್ತವೆ. ನಿರ್ದಿಷ್ಟ ಸಮಯದಲ್ಲಿ ಈ ನದಿಗಳ ನೀರಿನಲ್ಲಿ ಮೀಯುವುದರಿಂದ ಪುಣ್ಯ ಲಭಿಸುತ್ತದೆ ಎಂಬ ನಂಬಿಕೆಯಿಂದ ಧಾರ್ಮಿಕ ಮನೋಭಾವದ ಜನ ಇಲ್ಲಿ ಮಿಂದು ಭಗವಂತನ ದಿವ್ಯ ದರ್ಶನ ಪಡೆಯಲು ಹಾತೊರೆಯುತ್ತಾರೆ.

ಭಾರತದ ನಾಲ್ಕು ಪ್ರಮುಖ ಧಾರ್ಮಿಕ ಸ್ಥಳಗಳಲ್ಲಿ ನಡೆಯುವ ಕುಂಭಮೇಳಗಳಲ್ಲಿ ಪ್ರತಿಯೊಂದು ಸ್ಥಳಗಳಲ್ಲೂ ಸುಮಾರು 100 ಮಿಲಿಯನ್ ಜನ ಒಂದೂವರೆ ತಿಂಗಳುಗಳ ಕಾಲ ಪಾಲ್ಗೊಳ್ಳುತ್ತಾರೆ. ಈ ಸಮಯದಲ್ಲಿ ಯಾವುದೇ ಕುಂಭಮೇಳದ ಪ್ರದೇಶದಲ್ಲಿ ತಿರುಗಾಡಿದರೂ ಯಜ್ಞದ ಧೂಮ, ವೇದ ಮಂತ್ರಗಳ ಘೋಷ, ಧಾರ್ಮಿಕ ವ್ಯಾಖ್ಯಾನಗಳು, ಪುರಾಣ ಆಧಾರಿತ ನೃತ್ಯಗಳು, ಪ್ರಾರ್ಥನೆಗಳು, ನಾಗಾ ಸಾಧುಗಳ ಪವಾಡ ಪ್ರದರ್ಶನ, ಆನೆ, ಕುದುರೆ, ವಾದ್ಯ ವೃಂದಗಳೊಂದಿಗೆ ಸಾಂಪ್ರದಾಯಿಕ ಮೆರವಣಿಗೆಗಳು ಅವನ್ನು ನೋಡಲು ನಿಂತ ಲಕ್ಷಾಂತರ ಜನ, ಅದನ್ನು ವರದಿ ಮಾಡಲು ಬಂದ ಮಾಧ್ಯಮದ ಸಹಸ್ರಾರು ಜನ ಕಾಣುತ್ತಾರೆ. ಪ್ರತಿಯೊಬ್ಬರೂ ಆಧ್ಯಾತ್ಮ ಅನುಭವದ ಅಮೃತಫಳಿಗೆಯ ನಿರೀಕ್ಷೆಯಲ್ಲಿರುತ್ತಾರೆ.

ಹರನ ಮುಡಿಯಿಂದ

ದೈವೀಕ ಸೌಂದರ್ಯ ಮತ್ತು ಜ್ಞಾನದ ಸಂಕೇತವಾದ ಕುಂಭ ಮೇಳವು ಆಂತರಿಕ ಶುದ್ದಿಯ ಬಗ್ಗೆ ಕೂಡಾ ದಿವ್ಯ ದರ್ಶನವನ್ನು ಮೂಡಿಸುತ್ತದೆ ಎಂದು ಹಿಂದೂ ಧರ್ಮ ಗ್ರಂಥಗಳು ಹೇಳುತ್ತವೆ. ನದಿ–ಜಲ ಎಂದರೆ ಮಾತೃ ಸಮಾನ ಎಂಬ ಪ್ರಜ್ಞೆ ಬೆಳೆದುಬಂದ ಹಿನ್ನೆಲೆಯಲ್ಲಿ ಪ್ರತಿ ದಿನ ಬೆಳಗಾಗೆದ್ದು

ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ
ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು

ಎಂದು ಪ್ರಾರ್ಥಿಸಲಾಗುತ್ತದೆ. ಭಾರತೀಯರಿಗೆ ನದಿಗಳ ಬಗ್ಗೆ ಅಪಾರವಾದ ಗೌರವವಿದ್ದು ಈ ಹಿನ್ನೆಲೆಯಲ್ಲಿ ನದಿಗಳಲ್ಲಿ ಮೀಯುವಾಗ ಅದಕ್ಕೆ ಉಗುಳುವುದು ಅದರಲ್ಲಿ ಕೊಳಕನ್ನು ವಿಸರ್ಜಿಸುವುದು ಮಹಾಪಾಪ ಎಂಬ ನಂಬಿಕೆ ಇದೆ.

ಗಂಗೆಯು ಶಿವನೊಂದಿಗೆ ಕೈಲಾಸದಲ್ಲಿದ್ದು ಆಕೆಯನ್ನು ಭಗೀರಥ ಜನರ ಉಪಯೋಗಕ್ಕಾಗಿ ಭೂಮಿಗೆ ತಂದ. ಬಹುಶಃ ಅಲ್ಲಿಂದ ಪವಿತ್ರ ಜಲದಲ್ಲಿ ಮಿಂದು ಪಾಪಗಳನ್ನು ತೊಳೆದುಕೊಳ್ಳುವ ಪ್ರಕ್ರಿಯೆ ಪ್ರಾರಂಭವಾಯಿತೆನ್ನಬಹುದು.




ಬದುಕಿನ ಜೀವದಾಯಿಯಾದ ನದಿಗಳ ತೀರದಲ್ಲೇ ಅನೇಕ ಮಹಾನ್ ನಾಗರೀಕತೆಗಳೂ ಬೆಳೆದದ್ದು ವಿಶೇಷ. ರಘುವಂಶದ (ಅಧ್ಯಾಯ– 13) ಉಲ್ಲೇಖದಂತೆ ತೀರ್ಥ ಸ್ನಾನ ಮಾಡಿದವರು ತಮ್ಮ ಜನ್ಮಗಳನ್ನು ಮುಗಿಸಿ ಮುಕ್ತಿ ಹೊಂದಲಿದ್ದಾರೆ ಎಂಬ ಉಲ್ಲೇಖವಿದೆ. ಮರಣದ ಸಮಯದಲ್ಲಾದರೂ ಒಂದು ತೊಟ್ಟು ಗಂಗಾ ಜಲ ದೊರೆತರೆ ಮುಕ್ತಿ ಪಡೆದಂತೆ ಎಂಬ ನಂಬಿಕೆಯೂ ಇಲ್ಲಿದೆ.

ಕಲಶಸ್ಯ ಮುಖೇ ವಿಷ್ಣು ಕಾಂತೇ ರುದ್ರ ಸಮಾಶ್ರಿತಾ
ಮೂಲೇತ್ವಾಸ್ಯ ಸ್ಥಿತೋ ಬ್ರಹ್ಮ ಮಧ್ಯೇ ಮಾತ್ರಿಗಾನಾಃ ಸ್ಮಿತಾಃ
ಕುಕ್ಷೌ ತು ಸಾಗರಾಃ ಸರ್ವೇ ಸಪ್ತ ದ್ವೀಪ ವಸುಂಧರಾ
ಹೃಗ್ವೇದೋ ಯಜುರ್ವೇದೋ ಸಾಮವೇದೋಹ್ರಿತರ್ವಣಾ
ಅಂಗೈಶ್ಚ ಸರಿತಾಃ ಸರ್ವೇ ಕಲಶಂ ತು ಸಮಾಶ್ರಿತಾ

ಎನ್ನುವ ಶ್ಲೋಕವೊಂದು ಸಂಸ್ಕೃತದಲ್ಲಿದೆ. ಕುಂಭಮೇಳದ ಜಲವು ತ್ರಿಮೂರ್ತಿಗಳು, ದೇವಾನು ದೇವತೆಗಳು, ಭೂ ದೇವತೆಗಳು, ನಾಲ್ಕು ವೇದಗಳನ್ನು ಪ್ರತಿನಿಧಿಸುವುದರಿಂದ ಅದಕ್ಕೆ ಇನ್ನಿಲ್ಲದ ಪ್ರಾಶಸ್ತ್ಯವಿದೆ. ಅಂಕೋರವಾಟದ ಶಿಲ್ಪಗಳಲ್ಲೂ ಕೂಡಾ ಸಮುದ್ರ ಮಥನದ ಚಿತ್ರಗಳಿದ್ದು ಕುಂಭಸ್ನಾನ ಪುರಾತನ ಕ್ರಿಯೆ ಎನ್ನುವುದರಲ್ಲಿ ಸಂದೇಹವಿಲ್ಲ.

ಧರ್ಮದ ಅಂತರಂಗವನ್ನು ಹೊಕ್ಕು ಅದರ ಅನುಭೂತಿಯನ್ನು ಪಡೆಯುವ ಪರಮಹಂಸ ಅವಸ್ಥೆಯನ್ನು ಆಧ್ಯಾತ್ಮ ಎನ್ನುತ್ತೇವೆ. ಆಧ್ಯಾತ್ಮದ ತುರೀಯವನ್ನು ತಲುಪಿದ ಸಾಧಕರು ನಡೆಸುವ ಕೆಲವು ಅಚರಣೆಗಳನ್ನು ತನ್ನ ಲೌಕಿಕ ಅನುಕೂಲಕ್ಕಾಗಿ ಬಳಸಿಕೊಳ್ಳುವತ್ತ ಜಗತ್ತು ಇಂದು ಹೊರಳುತ್ತಿದೆ. ಕುಂಭ ಮೇಳ ಕೂಡ ಇದಕ್ಕೆ ಹೊರತಾಗಿಲ್ಲ. ನಾಗಾ ಸಾಧುಗಳು, ಅಘೋರಿಗಳು ತಮ್ಮ ಸಾಧನೆಯ ಮತ್ತು ಅಮರತ್ವದ ಶೋಧನೆಯ ಭಾಗವಾಗಿ ನಿರ್ದಿಷ್ಟ ಸಮಯದಲ್ಲಿ ಮಾಡುವ ಕುಂಭಸ್ನಾನ ಅವರ ಸಾಧನೆಗೆ ಬಲ ತಂದರೆ ಸಾಮಾನ್ಯ ಜನತೆಗೆ ಮುಕ್ತಿಯ ಸುಲಭ ಸಾಧನವಾಗಿ ಪರಿಣಮಿಸಿ ಕೇವಲ ಧಾರ್ಮಿಕ ಪರಂಪರೆಯ ಸಂಕೇತವಾಗಿ ಮಾತ್ರಾ ಉಳಿದುಕೊಂಡಿದೆ. ಕುಂಭಮೇಳಗಳಲ್ಲಿ ಕಾಣುವ ಅದೆಷ್ಟೋ ಸಾಧುಗಳು ಕುಂಭಸ್ನಾನದಲ್ಲಿ ಭಾಗವಹಿಸುವುದೇ ತಮ್ಮ ಹಿರಿಮೆಗೆ ಒಂದು ಗರಿ ಎಂದು ತಿಳಿದುಕೊಂಡು ಸಾಂಪ್ರದಾಯಿಕ ಆಚರಣೆಯಲ್ಲಿ ತೊಡಗಿರುವುದು ಒಂದು ವಿರೋಧಾಭಾಸ.



ಕುಂಭ ಮೇಳದ ಮೂಲ

ಹಿಂದೂ ಧರ್ಮದ ಭಾಗವತ ಪುರಾಣದ ಸಮುದ್ರ ಮಥನದಲ್ಲಿ ಕುಂಭಮೇಳದ ಉಲ್ಲೇಖ ಬರುತ್ತದೆ. ವಿಷ್ಣು ಪುರಾಣದ 9 ನೇ ಅಧ್ಯಾಯದಲ್ಲಿ ಮತ್ತು ಮಹಾಭಾರತದಲ್ಲೂ ಕೂಡ ಕುಂಭಮೇಳದ ಬಗ್ಗೆ ಉಲ್ಲೇಖಗಳಿವೆ ಎಂದರೆ ಕುಂಭಮೇಳದ ಮಹತ್ವದ ಬಗ್ಗೆ ಅರಿವಾಗುತ್ತದೆ. ಆದರೂ ಈ ಆಚರಣೆಯು ಯಾವಾಗಿನಿಂದ ಪ್ರಾರಂಭವಾಯಿತು ಎಂಬುದರ ಬಗ್ಗೆ ಅಧಿಕೃತ ದಾಖಲೆಗಳಿಲ್ಲ. ಕ್ರಿ.ಶ. 9 ನೇ ಶತಮಾನದಲ್ಲಿ ಶಂಕರಾಚಾರ್ಯರು ಕುಂಭ ಮೇಳದ ಮಹತ್ವವನ್ನು ತಿಳಿಸಿ ಧಾರ್ಮಿಕ ಭಾವನೆಗಳು ಹೆಚ್ಚಲು ಕಾರಣವಾದರು.

ಆದಿ ಶಂಕರಾಚಾರ್ಯರ ಕಾಲದಲ್ಲಿ ಅನ್ಯ ಧರ್ಮಗಳ ಹೊಡೆತದಿಂದ ಹಿಂದೂ ಧರ್ಮ ಕಳೆಗುಂದತೊಡಗಿತ್ತು. ದೇಶವಿಡಿ ಸುತ್ತಾಡಿದ ಶಂಕರರು ದಶನಾಮಿ ಸಂಪ್ರದಾಯ, ಅದ್ವೈತ ವೇದಾಂತಗಳನ್ನು ಹುಟ್ಟುಹಾಕಿದರು. ಸನಾತನ ಧರ್ಮದ ರಕ್ಷಣೆಗಾಗಿ ನಾಗಾ ಸಾಧುಗಳನ್ನು ಸಂಘಟಿಸಿ ಅವರನ್ನು ಸೇನಾನಿಗಳಾಗಿ ತಯಾರು ಮಾಡಿದರು. ಇವರನ್ನೆಲ್ಲಾ ಒಟ್ಟಾಗಿ ಸೇರಿಸಿ ಅವರ ಸಮೂಹಗಳನ್ನು ಅಖಾಡಾಗಳೆಂದು ಕರೆದರು. ಇವರಲ್ಲಿ ಅಸ್ತ್ರಧಾರಿ (ಅಸ್ತ್ರಗಳನ್ನು ಹಿಡಿದವರು) ಮತ್ತು ಶಾಸ್ತ್ರಧಾರಿ (ಶಾಸ್ತ್ರಗಳನ್ನು ಹಿಡಿದವರು) ಎಂಬ ಎರಡು ತಂಡಗಳಿದ್ದವು. ಧರ್ಮ ರಕ್ಷಣೆಗಾಗಿ ದೈಹಿಕ ಮತ್ತು ಬೌದ್ಧಿಕ ಹೋರಾಟ ಮಾಡಬಲ್ಲವರಾದುದರಿಂದ ಸಮೂಹಕ್ಕೆ ಅಖಾಡಾ ಎಂಬ ಹೆಸರು ಸೂಕ್ತವಾಗಿತ್ತು. ನಾಗಾ ಸಾಧುಗಳು ಬ್ರಿಟೀಷರ ಕಾಲದಲ್ಲೂ ಕೂಡಾ ಸ್ವಾತಂತ್ರ್ಯ ಹೋರಾಟವನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು ಎಂಬ ಬಗ್ಗೆ ಇತಿಹಾಸಕಾರ ವಿಲಿಯಂ ಆರ್. ಪಿಂಚ್ ವಾರಿಯರ್ ಬರೆದ ಗ್ರಂಥ 'ಅಸಿಟಿಕ್ಸ್ ಅಂಡ್ ಇಂಡಿಯನ್ ಎಂಪೈರ್ಸ್' ನಲ್ಲಿ ನೋಡಬಹುದು.

ಹಿಂದೆ ಭಾರತಕ್ಕೆ ಪ್ರವಾಸಿಗಳಾಗಿ ಬಂದಿದ್ದ ಅನೇಕ ಜನ ವಿದೇಶೀಯರಲ್ಲಿ ಚೀನೀ ಪ್ರವಾಸಿ ಹ್ಯುಯೆನ್ ತ್ಸಾಂಗ್ ಕುಂಭಮೇಳದ ಬಗ್ಗೆ ತನ್ನ ಅನಿಸಿಕೆಗಳನ್ನು ದಾಖಲಿಸಿದ್ದಾನೆ. ತನ್ನ ಬರಹಗಳಲ್ಲಿ ಈತ ಅರಸ ಹರ್ಷವರ್ಧನನು (ಶಿಲಾದಿತ್ಯ) ತನ್ನ ಸಂಪತ್ತಿನ ಬಹುಭಾಗವನ್ನು ಪ್ರತೀ ವರ್ಷ ಪೊ ಲೊ ಯೆ ಕಿಯಾ (ಪ್ರಯಾಗ) ಎಂಬಲ್ಲಿ ದಾನ ಮಾಡುತ್ತಿದ್ದ ಹಾಗು ಅಲ್ಲಿನ ನದಿಯಲ್ಲಿ ನೂರಾರು ಜನ ಸ್ನಾನ ಮಾಡಿ ತಮ್ಮ ಪಾಪಗಳನ್ನು ತೊಳೆದುಕೊಳ್ಳುತ್ತಿದ್ದರು ಎಂದಿದ್ದಾನೆ.



ಆತನ ಪ್ರಕಾರ ಈ ಪವಿತ್ರ ಸ್ನಾನ ಪ್ರತೀ ಐದು ವರ್ಷಗಳಿಗೆ ಒಮ್ಮೆ ನಡೆಯುತ್ತಿತ್ತು. ಕ್ರಿ.ಶ. 644 ರ ಸುಮಾರಿನ ಈ ಬರಹ ಕುಂಭಮೇಳದ ಪುರಾತನ ಅಧಿಕೃತ ದಾಖಲೆ.

ಕ್ರಿ.ಶ. 1399 ಭಾರತದ ಮೇಲೆ ದಾಳಿಗಾಗಿ ಬಂದ ತೈಮೂರ್‌ಲಂಗ್ ಕುಂಭಮೇಳದಲ್ಲಿ ಹಾಜರಿದ್ದ ಎಲ್ಲರನ್ನೂ ಕತ್ತರಿಸಿ ಹಾಕುವಂತೆ ತನ್ನ ಸೈನಿಕರಿಗೆ ಆಜ್ಞಾಪಿಸಿದ್ದ ಎನ್ನಲಾಗುತ್ತದೆ. ಈ ಆಕ್ರಮಣವನ್ನೂ ಸಹಿಸಿಕೊಂಡ ಹಿಂದೂಗಳಿಗೆ ಪ್ರಯಾಗವೆಂಬ ಪುರಾತನ ನಗರದ ಹೆಸರನ್ನು ಅಲ್ಲಾಹಾಬಾದ್ ಎಂದು ಬದಲಿಸುವ ಮುಖೇನ ಮತ್ತೂ ಪರೀಕ್ಷಿಸಲಾಯ್ತು. 1896 ರಲ್ಲಿ ಖ್ಯಾತ ಆಂಗ್ಲ ಲೇಖಕ ಮಾರ್ಕ್‌ಟ್ವೈನ್ ಕುಂಭಮೇಳಕ್ಕೆ ನೀಡಿದ್ದ ಭೇಟಿಯ ಬಗ್ಗೆ ತಮ್ಮ ಪುಸ್ತಕ– ಎ ಜರ್ನಿ ಅರೌಂಡ್ ದ ವರ್ಲ್ಡ್‌ನಲ್ಲಿ ಇದು ಕಲ್ಪನೆಗೆ ಮೀರಿದ ಮಹಾನ್ ಆಚರಣೆ ಎಂದು ಬರೆದಿದ್ದಾರೆ. ನ್ಯಾಶನಲ್ ಜಿಯೋಗ್ರಾಫ್ಲಿಕ್ ಸೇರಿದಂತೆ ಅನೇಕ ವಿದೇಶಿ ಪತ್ರಿಕೆಗಳು ಹಾಗೂ ಭಾರತದ ಎಲ್ಲಾ ಭಾಷೆಯ ಪತ್ರಿಕೆಗಳು ಈ ಮಹಾಮೇಳದ ಬಗ್ಗೆ ಮಾಹಿತಿ ನೀಡುವಲ್ಲಿ ಹಿಂದೆ ಬಿದ್ದಿಲ್ಲ. ಕುಂಭಮೇಳದ ಜನಪ್ರಿಯತೆಗೆ ಇದೂ ಒಂದು ಮಾನದಂಡವಾಗಿದೆ.

ಮೇಳದ ಮುಹೂರ್ತಗಳು

ಕುಂಭ ಮೇಳವು ಪಂಚಾಂಗದ ಪ್ರಕಾರ ನಿರ್ದಿಷ್ಟ ದಿನಗಳಂದು ನಡೆಯುತ್ತದೆ. ಮೊದಲನೆಯದಾಗಿ ಗುರು ಗ್ರಹವು ಕುಂಭ ರಾಶಿಯನ್ನು ಪ್ರವೇಶಿಸಿದಾಗ ಮತ್ತು ಸೂರ್ಯನು ಮೇಷ ರಾಶಿಯಲ್ಲಿರುವ ದಿನದಂದು ಹರಿದ್ವಾರದಲ್ಲಿ ಕುಂಭ ಮೇಳ ಸಂಭವಿಸುತ್ತದೆ.

ಗುರು ಗ್ರಹವು ಮೇಷ ರಾಶಿಯಲ್ಲಿದ್ದಾಗ ಮತ್ತು ಸೂರ್ಯ ಹಾಗೂ ಚಂದ್ರರು ಮಕರ ರಾಶಿಯಲ್ಲಿದ್ದಾಗ ಸಂಭವಿಸುವ ಮಹೂರ್ತದಲ್ಲಿ ಪ್ರಯಾಗದಲ್ಲಿ ಕುಂಭಮೇಳ ನಡೆಯುತ್ತದೆ. ಗುರುಗ್ರಹವು ವೃಷಭ ರಾಶಿಗೆ ಬಂದಾಗಲೂ ಕೂಡಾ ಪ್ರಯಾಗದಲ್ಲಿ ಕುಂಭಮೇಳ ನಡೆಯುತ್ತದೆ.

"ಅಂತ್ಯಕ್ಷೇತ್ರೇ ಕೃತಂ ಪಾಪಂ ಪುಣ್ಯ ಕ್ಷೇತೇ ವಿನಶ್ಯತಿ
ಪುಣ್ಯಕ್ಷೇತ್ರೆ ಕೃತಂ ಪಾಪಂ ಪ್ರಯಾಗ ತೀರ್ಥ ನಾಯಕೆ ವಿನಶ್ಯತಿ "

ಎಂದು ಋಗ್ವೇದ ಕೂಡಾ ತಿಳಿಸುತ್ತದೆ. ಪ್ರಯಾಗದಲ್ಲಿ ಶಾಹಿ ಕುಂಭ ಸ್ನಾನ ಮಾಡುವುದರಿಂದ 1000 ಅಶ್ವಮೇಧ ಯಾಗಗಳನ್ನು ಮಾಡಿದ ಪುಣ್ಯ ಬರುತ್ತದೆ ಎಂಬ ನಂಬಿಕೆ ಇದೆ.



ಪ್ರಯಾಗ ಕುಂಭಮೇಳದ ಉಸ್ತುವಾರಿ, ಕುಂಭಸ್ನಾನದ ಮುಹೂರ್ತ ನಿರ್ಧಾರ ಸ್ಥಳೀಯ ಪ್ರಯಾಗವಾಲ್ ಎಂದು ಕರೆಯಲಾಗುವ ಪುರೋಹಿತರ ಕೈಯ್ಯಲ್ಲಿದೆ. ಇವರನ್ನು ಹೊರತುಪಡಿಸಿ ಕುಂಭಮೇಳದಲ್ಲಿ ಏನೂ ನಡೆಯುವುದಿಲ್ಲ. ಅಕ್ಬರನು ಪ್ರಯಾಗದ ಕೋಟೆಯನ್ನು ಕಟ್ಟುವ ಸಂದರ್ಭದಲ್ಲಿ ಬಲಿದಾನಕ್ಕಾಗಿ ಮುಂದೆ ಬಂದ ಪ್ರಯಾಗದ ಬ್ರಾಹ್ಮಣನ ಗೌರವಾರ್ಥ ಆತನ ಕುಟುಂಬಕ್ಕೆ ಧಾರ್ಮಿಕ ಆಚರಣೆಗಳ ಹಕ್ಕನ್ನು ನೀಡಿದ್ದ. ಆತನ ವಂಶಸ್ಥರನ್ನು ಪ್ರಯಾಗವಾಲರು ಎಂದು ಕರೆಯಲಾಗುತ್ತದೆ.

ಗುರು ಗ್ರಹವು ಸಿಂಹ ರಾಶಿಯಲ್ಲಿದ್ದಾಗ ಗೋದಾವರಿ ನದಿಯ ದಂಡೆಯಲ್ಲಿ ಉತ್ಸವಗಳು ನಡೆಯುತ್ತವೆ. ನಂತರ ಗುರುವು ಸಿಂಹ ರಾಶಿಗೆ ಮತ್ತು ಸೂರ್ಯನು ಮೇಷ ರಾಶಿಗೆ ಪ್ರವೇಶಿಸಿದಾಗ ಉಜ್ಜೈನಿಯಲ್ಲಿ ಕುಂಭ ಮೇಳ ನಡೆಯುತ್ತದೆ. ಗುರು ಮತ್ತು ಚಂದ್ರ ಕರ್ಕಾಟಕ ರಾಶಿಯಲ್ಲಿದ್ದು ಚಂದ್ರ ಗ್ರಹಣವಾದಾಗ ಮೌನಿ ಅಮವಾಸ್ಯೆಯಂದು ಗೋದಾವರಿ ನದಿ ದಡದಲ್ಲಿ ಕುಂಭ ಸ್ನಾನ ನಡೆಯುತ್ತದೆ. ವಿಶೇಷ ಸ್ನಾನಗಳಲ್ಲಿ ಮೌನಿ ಅಮವಾಸ್ಯೆಯಂದು ನಡೆಯುವ ಸ್ನಾನ ಪ್ರಮುಖವಾದುದು. ಮನು ಋಷಿಯು ಮೌನಿ ಅಮವಾಸ್ಯೆಯಂದು ವಿಶ್ವದ ಸೃಷ್ಟಿಗೆ ಆರಂಭಿಸಿದ ಎಂಬ ನಂಬಿಕೆ ಇದೆ. ಅಂದು ನಡೆಸುವ ಮೌನ ವೃತ ಮತ್ತು ಸ್ನಾನ ಅನೇಕ ಫಲಗಳನ್ನು ನೀಡುತ್ತದೆ ಎಂದು ಭಕ್ತರು ನಂಬುತ್ತಾರೆ.

ಗುರುವು ತುಲಾ ರಾಶಿಯಲ್ಲಿದ್ದಾಗ ಸೂರ್ಯ ಮತ್ತು ಚಂದ್ರರು ಒಟ್ಟಾಗಿರುವ ಕಾರ್ತೀಕ ಅಮವಾಸ್ಯೆಯ ದಿನ ಕುಂಭಸ್ನಾನವು ಮೋಕ್ಷದಾಯಕ ಎಂದು ಪ್ರತೀತಿ ಇದೆ. ಈ ಸಂದರ್ಭದಲ್ಲಿ ಉಜ್ಜೈನಿಯಲ್ಲಿ ಕುಂಭ ಸ್ನಾನ ನಡೆಯುತ್ತದೆ.

ಗುರು ಗ್ರಹವು ಸಿಂಹ ರಾಶಿಗೆ ಪ್ರವೇಶಿಸಿದಾಗ ನಾಸಿಕ್ – ತ್ರಯಂಬಕೇಶ್ವರ ನಗರದಲ್ಲಿ ಸಿಂಹಸ್ಥ ಕುಂಭಮೇಳ ನಡೆಯುತ್ತದೆ. ಕಳೆದ 2015 ಸೆಪ್ಟೆಂಬರ್ ತಿಂಗಳಿನಲ್ಲಿ ಇಲ್ಲಿ ಕುಂಭಮೇಳ ನಡೆದಿದೆ.

ಸಮುದ್ರ ಮಥನ

ದೇವತೆಗಳ ಅರಸ ಇಂದ್ರ ತನ್ನ ಇಬ್ಬಂದಿತನಗಳಿಗೆ ಹೆಸರಾಗಿದ್ದಾನೆ. ಒಮ್ಮೆ ಆತ ತನ್ನ ವಾಹನ ಐರಾವತದ ಮೇಲೆ ಸಾಗುವಾಗ ದಾರಿಯಲ್ಲಿ ದೂರ್ವಾಸ ಮುನಿಗಳು ತಪದಲ್ಲಿದ್ದುದನ್ನು ಕಂಡು ನಮಸ್ಕರಿಸುತ್ತಾನೆ. ಇಂದ್ರನ ನಮಸ್ಕಾರ ಸ್ವೀಕರಿಸಿದ ದೂರ್ವಾಸರು ತನಗೆ ದೇವತೆಗಳಿಂದ ದೊರೆತಿದ್ದ ಪುಷ್ಪ ಹಾರವನ್ನು ಇಂದ್ರನೆಡೆಗೆ




ಎಸೆಯುತ್ತಾರೆ. ಅದನ್ನು ಪಡೆದ ಇಂದ್ರ ಹಾರವನ್ನು ತನ್ನ ಆನೆ ಐರಾವತದ ಮೇಲೆ ಹಾಕುತ್ತಾನೆ. ಅದೇಕೋ ಐರಾವತ ಆ ಹಾರವನ್ನು ತೆಗೆದು ನೆಲಕ್ಕೆ ಹಾಕಿ ಸಿಟ್ಟಿನಿಂದ ತುಳಿಯುತ್ತದೆ. ಇದರಿಂದ ಕೋಪಗೊಂಡ ದೂರ್ವಾಸ ಮುನಿ ಇಂದ್ರನು ತನ್ನ ತೇಜಸ್ಸನ್ನು ಕಳೆದುಕೊಂಡು ಭಿಕ್ಷುಕನಾಗಲಿ ಎಂದು ಶಾಪ ಕೊಡುತ್ತಾರೆ.

ಈ ಸುದ್ಧಿ ಅಸುರರರಿಗೆ ತಿಳಿದಾಗ ಅವರು ಧಾವಿಸಿ ದೇವಲೋಕವನ್ನು ವಶಪಡಿಸಿಕೊಳ್ಳುತ್ತಾರೆ. ಭೂಮಿಯಿಂದ ಬರುತ್ತಿದ್ದ ಯಜ್ಞ–ಯಾಗಾದಿಗಳ ಹವಿಸ್ಸನ್ನು ಸ್ವೀಕರಿಸಲು ಇಂದ್ರನಿಲ್ಲದೇ ದೇವತೆಗಳು ಕಳೆಗುಂದುತ್ತಾರೆ. ನಂತರ ವಿಷ್ಣುವಿನ ಬಳಿ ಸಹಾಯಕ್ಕಾಗಿ ದೇವತೆಗಳು ಯಾಚಿಸಿದಾಗ ಅವರಿಗೆ ವಿಷ್ಣುವು ರಕ್ಕಸರೊಂದಿಗೆ ಸಮುದ್ರ ಮಥನಕ್ಕೆ ಒಪ್ಪಂದ ಮಾಡಿಕೊಳ್ಳಲು ಸೂಚಿಸುತ್ತಾನೆ. ತಮಗೆ ಏನೋ ದೊರೆಯಬಹುದೆಂಬ ಆಸೆಯಿಂದ ರಕ್ಕಸರು ಸಮುದ್ರ ಮಥನದಲ್ಲಿ ಸಹಕರಿಸಲು ಒಪ್ಪುತ್ತಾರೆ.

ಮಹಾಮೇರು ಪರ್ವತಕ್ಕೆ ವಾಸುಕಿಯನ್ನು ಸುತ್ತಿ ಒಂದೆಡೆ ದೇವತೆಗಳು ಮತ್ತೊಂದೆಡೆ ರಕ್ಕಸರು ಮಥನ ಪ್ರಾರಂಭಿಸುತ್ತಾರೆ. ಹನ್ನೆರಡು ವರ್ಷಗಳ ಕಾಲ ಮಥಿಸಿದ ನಂತರ ಮೊದಲನೆಯದಾಗಿ ಹಾಲಾಹಲ ಉದ್ಭವವಾಗುತ್ತದೆ ಶಿವ ಅದನ್ನು ಸ್ವೀಕರಿಸುವಾಗ ಆತನಿಗೆ ತೊಂದರೆಯಾಗಬಾರದೆಂದು ಗಿರಿಜೆ ಆತನ ಕುತ್ತಿಗೆ ಒತ್ತಿ ಹಿಡಿಯುತ್ತಾಳೆ. ಗಂಟಲಲ್ಲಿ ನಿಂತ ಹಾಲಾಹಲದಿಂದ ಶಿವ ನೀಲಕಂಠನಾಗುತ್ತಾನೆ. ವಿಷದ ಪರಿಣಾಮ ಇಳಿಯಲು ರಾತ್ರಿಯೆಲ್ಲಾ ಎಚ್ಚರವಾಗಿರಬೇಕೆಂದು ಧನ್ವಂತ್ರಿ ಸೂಚಿಸಿದ ಕಾರಣ ಶಿವ ಜಾಗರಣೆಯಲ್ಲಿ ತೊಡಗುತ್ತಾನೆ. ಇದೇ ಶಿವರಾತ್ರಿಯ ಜಾಗರಣೆಯ ಮೂಲ.

ನಂತರ ರತ್ನಗಳು ಕಾಣಿಸಿಕೊಳ್ಳುತ್ತವೆ, ಲಕ್ಷ್ಮಿಯು ಕಾಣಿಸಿಕೊಂಡಾಗ ವಿಷ್ಣು ಆಕೆಯನ್ನು ತನ್ನ ಪತ್ನಿಯಾಗಿ ಪಡೆಯುತ್ತಾನೆ, ಅಪ್ಸರಸಿಯರಾದ ರಂಭಾ, ಮೇನಕೆ ಮತ್ತು ಪುಂಜಿಸ್ಥಳರು ಉದ್ಭವಿಸಿ ಅವರು ಉಪ ದೇವತೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ವಾರುಣಿಯನ್ನು ರಕ್ಕಸರು ಪಡೆಯುತ್ತಾರೆ. ಕಾಮಧೇನು ವಿಷ್ಣುವಿಗೆ ಸೇರುತ್ತದೆ. ಪಾರಿಜಾತವನ್ನು ದೇವತೆಗಳು ತೆಗೆದುಕೊಳ್ಳುತ್ತಾರೆ. ಚಂದ್ರನನ್ನು ಶಿವ ಮುಡಿಗೇರಿಸಿಕೊಳ್ಳುತ್ತಾನೆ. ಅಮೃತವನ್ನು ಪಡೆಯಲು ಉದ್ವಿಗ್ನರಾಗಿದ್ದ ರಕ್ಕಸರು ಉಳಿದ ವಸ್ತುಗಳನ್ನು ಗಮನಿಸುವುದೇ ಇಲ್ಲ.




ಅಮೃತದ ಕುಂಭವು ಹೊರಬಂದಾಗ ರಕ್ಕಸರು ಮತ್ತು ದೇವತೆಗಳು ಅದಕ್ಕಾಗಿ ಮುಗಿಬೀಳುತ್ತಾರೆ. ದೇವತೆಗಳು ಮತ್ತು ರಕ್ಕಸರಲ್ಲಿ ಅಮೃತಕ್ಕಾಗಿ ಭೀಕರ ಕದನ ನಡೆಯುತ್ತದೆ. ವಿಷ್ಣುವು ಅಮೃತದ ಕುಂಭವನ್ನು ತನ್ನ ವಾಹನ ಗರುಡನ ಮೇಲಿಟ್ಟು ತೆರಳುವಂತೆ ಸೂಚಿಸುತ್ತಾನೆ. ಗರುಡ ಹಾರುವಾಗ ನಾಲ್ಕು ಹನಿ ಅಮೃತ ತುಳುಕಿ ಪ್ರಯಾಗ, ಹರಿದ್ವಾರ, ಉಜ್ಜೈನಿ ಮತ್ತು ನಾಸಿಕದಲ್ಲಿ ಬೀಳುತ್ತವೆ. ಅಮೃತದ ಪವಿತ್ರದ ಹನಿಗಳನ್ನು ಹೊಂದಿದ ಈ ನದಿಗಳಲ್ಲಿ ಸೂಕ್ತ ಮಹೂರ್ತದಲ್ಲಿ ಸ್ನಾನ ಮಾಡಿದಲ್ಲಿ ಒಳಿತಾಗುತ್ತದೆ ಎಂಬ ನಂಬಿಕೆ ಅಂದಿನಿಂದ ಬೆಳೆದು ಬಂದಿದೆ. ಸಮುದ್ರ ಮಥನದ ಧಾರ್ಮಿಕ ಅರ್ಥ ಏನೇ ಇದ್ದರೂ ಅದರ ಆಂತರ್ಯ ಮುಖ್ಯವಾಗಿದೆ. ಅಂತರಂಗ ಶುದ್ಧಿಗೆ ಪ್ರಾಶಸ್ತ್ಯ ನೀಡಿ ಬಾಹ್ಯ ಶುದ್ಧಿ ಸಂಕೇತವಾಗುತ್ತಾ ಮನುಷ್ಯನ ಮನಸ್ಸು ಮಾಗುವ ಪ್ರಕ್ರಿಯೆ ಇದು. ಹೊಸತನ್ನು ಸಂಶೋಧಿಸುವ ಅದನ್ನು ಬಳಸಿಕೊಳ್ಳುವ ಆವಿಷ್ಕಾರದ ಪ್ರಯತ್ನ.

ನಾಗಾ ಸಾಧುಗಳ ಪಾತ್ರ

ಕುಂಭ ಮೇಳದಲ್ಲಿ ಬೆತ್ತಲೆ ನಾಗಾ ಸಾಧುಗಳ ಪಾತ್ರ ಬಹಳ ಪ್ರಮುಖವಾದುದು. ಬಹುಶಃ ನಾಗಾ ಸಾಧುಗಳಷ್ಟು ಜನಪ್ರಿಯವಾದ ಮತ್ತು ಅಷ್ಟೇ ಕಡಮೆ ಅರ್ಥವಾದ ಸಮೂಹ ಇತಿಹಾಸದಲ್ಲಿ ಬೇರೊಂದಿಲ್ಲ. ಈ ಪಂಥವು ಬಹುಶಃ ಕ್ರಿ.ಶ. 8 ನೇ ಶತಮಾನದಲ್ಲಿ ಶಂಕರಾಚಾರ್ಯರಿಂದ ಪ್ರಾರಂಭಿಸಲ್ಪಟ್ಟಿತ್ತು ಎನ್ನಲಾಗುತ್ತದೆ. ಅಂದು ಇವರು ಹಿಂದೂ ಧರ್ಮದ ರಕ್ಷಣೆಗೆ ನಿಂತ ಸೈನಿಕರಾಗಿದ್ದರು. ಅದೇಕೋ ತಾಂತ್ರಿಕ ಸಾಧನೆಗಳತ್ತ ತಿರುಗಿ ದಿಗಂಬರರಾಗಿ ಸಮಾಜದ ಮುಖ್ಯ ವಾಹಿನಿಯಿಂದ ಬೇರೆಯಾಗಿ ಹೋದದ್ದು ಇತಿಹಾಸ. ತಮ್ಮ ಗುಟ್ಟನ್ನು ಹೊರಕ್ಕೆ ಬಿಟ್ಟು ಕೊಡದ ಇವರು ದೈಹಿಕ ಸ್ವಚ್ಚತೆಯಿಂದ ಸದಾ ದೂರ. ಮೈಗೆ ಚಿತೆಯ ಬೂದಿ ಹಚ್ಚಿಕೊಂಡ ಉದ್ದ ಜಟೆಯ ಇವರ ಮಾತುಗಳು ಆಚರಣೆಗಳೆಲ್ಲಾ ಒಗಟು.

ಕುಂಭಮೇಳದ ದಿನ ಸೂರ್ಯೋದಯಕ್ಕೆ ಮುನ್ನಾ ಸೂಕ್ತ ಮುಹೂರ್ತದಲ್ಲಿ ಭಗವಂತನ ಕರುಣೆ ಘನೀಭವಿಸಿ ಧನ್ಯತಾ ಭಾವ ಸಚೇತನಗೊಳ್ಳುವ ಸಂದರ್ಭಗಳನ್ನು ಅರಿಯಲು ಧರ್ಮದ ಅಂತಃಚಕ್ಷುಗಳೇ ಬೇಕಾಗುತ್ತದೆ. ಭಾರತದ ಪ್ರಸಿದ್ಧ ನಗ್ನ ಮುನಿಗಳಾದ ನಾಗಾ ಸಾಧುಗಳು ಬಣ್ಣ–ಬಣ್ಣಗಳ ಧ್ವಜಗಳನ್ನು ಹಿಡಿದು ಆನೆಗಳು, ಒಂಟೆಗಳು, ಟ್ರಾಕ್ಟರುಗಳ ಆದ್ದೂರಿ ಮೆರವಣಿಗೆಯಲ್ಲಿ ತಮ್ಮ ಅಖಾಡಾಗಳೊಂದಿಗೆ ಆಗಮಿಸತೊಡಗುತ್ತಾರೆ. ನಂತರ ವೈಷ್ಣವ ವೈರಾಗಿಗಳ ಸರದಿ.






ತದ ನಂತರ ಇತರೆ ಸಾಧು–ಸನ್ಯಾಸಿಗಳು, ಸಂತರು ಮುಂತಾದವರು ಬರುತ್ತಾರೆ. ಎಲ್ಲರೂ ಬಂದು ಸೇರಿದ ನಂತರ ನಿಗದಿತ ಮುಹೂರ್ತಕ್ಕಾಗಿ ಕಾಯಲಾಗುತ್ತದೆ. ಮೊದಲ ಸ್ನಾನದ ಹಕ್ಕು ನಾಗಾ ಸಾಧುಗಳದ್ದು. ಸೂಕ್ತ ಸಮಯದಲ್ಲಿ ಹರಹರ ಮಹಾದೇವ್ ಎಂದು ಗರ್ಜಿಸುತ್ತಾ ಉದ್ವೇಗದಿಂದ ನೀರಿಗೆ ಹಾರಿ ಮುಳುಗು ಹಾಕುವಾಗ ಜ್ಞಾನ–ಭಕ್ತಿಗಳು ಕ್ರಿಯಾ ಪ್ರಪಂಚದಲ್ಲಿ ಮಿಳಿತಗೊಳ್ಳುತ್ತಾ ಆ ದೃಷ್ಟಾರರಿಗೆ ಸಿದ್ಧಿಯ ಸ್ವರೂಪ ಕಾಣತೊಡಗುತ್ತದೆ. ಜನರೆಲ್ಲಾ ನೀರಿಗೆ ಬಿದ್ದೊಡನೇ ನಾಗಾ ಸಾಧುಗಳು ಅದೆಲ್ಲಿಗೋ ಮಾಯವಾಗುತ್ತಾರೆ. ಎಷ್ಟೆಲ್ಲಾ ದುರಂತಗಳು, ಕಾಲ್ತುಳಿತಗಳು ಕುಂಭಮೇಳಗಳಲ್ಲಿ ಸಂಭವಿಸಿದರೂ ನಾಗಾ ಸಾಧುಗಳು, ಅಘೋರಿಗಳು ಅದರಲ್ಲಿ ಮೃತರಾದ ಉದಾಹರಣೆಗಳಿಲ್ಲ.

ಈಗಲೂ ಕೂಡಾ ನಾಗಾ ಸಾಧುಗಳು ಶಂಕರಾಚಾರ್ಯರ ಧ್ವಜ ಹಿಡಿದು ಒಂದು ಕಡೆಯಿಂದ ಮತ್ತೊಂದು ಸ್ಥಳಕ್ಕೆ ನಡಿಗೆಯಲ್ಲಿ ತಲುಪುತ್ತಾರೆ. ತಾವು ವಿಶ್ವದಲ್ಲಿ ಅದೆಲ್ಲೇ ಇದ್ದರೂ ಕುಂಭಸ್ನಾನಕ್ಕೆ ಸರಿಯಾದ ಸಮಯದಲ್ಲಿ ಬಂದು ಸೇರುವ ನಾಗಾ ಸಾಧುಗಳು ಕುಂಭಮೇಳದ ಸಮಯವನ್ನು ಅದ್ಯಾವ ಲೆಕ್ಕಾಚಾರದ ಮೇಲೆ ಅರಿತುಕೊಳ್ಳುತ್ತಾರೋ ತಿಳಿಯದು. ಪ್ರತೀ ಬಾರಿ ಕುಂಭ ಮೇಳಕ್ಕೆ ಬರುವ ಮುನ್ನ ತಮಗೆ ಪರಮ ಪವಿತ್ರವಾದ ನಾಗಪುರದ ನಾಗಾ ನದಿಯಲ್ಲಿ ಮಿಂದೇ ಬರುತ್ತಾರೆ. ಗುಂಪು ವಾಸಿಗಳಾದ ಇವರಲ್ಲಿನ ಸಮೂಹಗಳನ್ನು ಅಖಾಡಗಳೆಂದು ಕರೆಯಲಾಗುತ್ತದೆ. ಆಯಾಯಾ ಗುಂಪಿಗೆ ಪ್ರತ್ಯೇಕವಾದ ಗುರುಗಳಿದ್ದು ಅವರೊಂದಿಗೆ ಅದ್ದೂರಿ ಮೆರವಣಿಗೆಯಲ್ಲಿ (ಪೇಶ್ವಾಯ್ ಮೆರವಣಿಗೆ) ಕುಂಭ ಮೇಳಕ್ಕೆ ಬರುತ್ತಾರೆ. ಕುಂಭ ಮೇಳದಲ್ಲಿ ಪ್ರಥಮ ಸ್ನಾನದ ಹಕ್ಕು ನಾಗಾ ಸಾಧುಗಳಿಗೆ ಮಾತ್ರಾ ಎಂಬುದು ಬಹಳ ಹಿಂದಿನಿಂದ ಒಪ್ಪಿಕೊಂಡು ಬಂದ ಅಲಿಖಿತ ನಿಯಮ.

ನಾಗಾ ಸಾಧುಗಳಲ್ಲಿ 14 ಅಖಾಡಾಗಳಿವೆ. ಅವುಗಳನ್ನು ಶಿವ ಅಖಾಡ (ಶಿವ ಭಕ್ತ ಸಂತರು), ಭೈರಾಗಿ ಅಖಾಡ (ವಿಷ್ಣು ಭಕ್ತರು–ವೈಷ್ಣವ), ಕಲ್ಪವಾಸಿ (ಬ್ರಹ್ಮನ ಆರಾಧಕರು), ಮಹಾನಿರ್ವಾಣಿ ಅಖಾಡಾ, ನಿರಂಜನಿ ಅಖಾಡ, ಅತುಲ್, ಆವಾಹನ್, ಅಗ್ನಿ ಮತ್ತು ಉದಾಸೀನ ಅಖಾಡಾ ಪಂಥ, ಸನ್ಯಾಸಿ ಅಖಾಡಾ, ಬೈರಂಗಿ ಅಖಾಡಾ ಮತ್ತು ನಿರ್ಮಲ್ ಅಖಾಡಾ ಮತ್ತು ಜುನಾ ಅಖಾಡಾ ಎಂದು ಕರೆಯಲಾಗುತ್ತದೆ. ಈ ಮುಖ್ಯ ಗುಂಪುಗಳ ಅಧೀನದಲ್ಲಿ ಮತ್ತಷ್ಟು ಉಪ ಪಂಗಡಗಳಿರುತ್ತವೆ. ಪ್ರತಿ ಅಖಾಡಾಕ್ಕು ಎಂಟು ವಿಭಾಗಗಳು (ದಾವಾ) ಮತ್ತು 52



ಮಠಿ (ಕೇಂದ್ರಗಳು) ಇರುತ್ತವೆ. ಪ್ರತೀ ಮಠಿಯ ಮೇಲ್ವಿಚಾರಣೆಗೆ ಒಬ್ಬ ಮಹಂತನಿರುತ್ತಾನೆ. ಅಖಾಡಾದ ಐದು ಮುಖ್ಯಸ್ಥರನ್ನು ಶ್ರೀ ಪಾಂಚ್ (ಪಂಚರು) ಎಂದು ಕರೆಯುತ್ತಾರೆ. ನಾಗಾ ಸಾಧ್ವಿಯರ ಅಖಾಡಾ ಕೂಡಾ ಇದ್ದು ಇದು ನಾಸಿಕ್ ಕುಂಭಮೇಳದಲ್ಲಿ ಸ್ನಾನಕ್ಕಾಗಿ ತಮಗೆ ಪ್ರತ್ಯೇಕ ಸ್ಥಳ ನೀಡಬೇಕೆಂದು ಸರ್ಕಾರವನ್ನು ಕೇಳಿತ್ತು.

ನಾಗಾ ಸಾಧುಗಳು ಚಳಿ–ಮಳೆ ಅದೇನೆ ಇದ್ದರೂ ಉಡುಪನ್ನು ಧರಿಸದೇ ಜಂಗಮ ಜಗತ್ತಿನಲ್ಲಿ ತಮ್ಮ ದಿನ ನಿತ್ಯದ ಕರ್ತವ್ಯಗಳಲ್ಲಿ ಮಗ್ನರಾಗಿರುತ್ತಾರೆ. ಅವರಿಗೆ ಅದೆಷ್ಟೊ ಖಾಯಿಲೆಗಳ ಪರಿಹಾರದ ಔಷಧಿಗಳು ಗೊತ್ತಿವೆ, ಇವರ ವಯಸ್ಸು ಎಷ್ಟೆಂಬುದು ಯಾರಿಗೂ ಗೊತ್ತಿಲ್ಲ. ಇವರ ಧಾರ್ಮಿಕ ಆಚರಣೆಗಳು, ಪೂಜಾ ವಿಧಾನಗಳು, ಆಹಾರ ಪದ್ಧತಿ, ಮರಣ, ಶವ ಸಂಸ್ಕಾರಗಳ ಬಗ್ಗೆ ಕಿಂಚಿತ್ ಮಾಹಿತಿಗಳೂ ಇಲ್ಲ. ಇವೆಲ್ಲಾ ಜನರಿಗೆ ತಲುಪದೇ ಅವರಲ್ಲೇ ಉಳಿದಿರುವುದರ ಕಾರಣ ರಹಸ್ಯವಾಗಿಯೇ ಇದೆ.

ಕುಂಭ ಮೇಳದ ಮತ್ತೋರ್ವ ಪ್ರಮುಖ ಪಾಲುದಾರರೆಂದರೆ ಅಘೋರಿಗಳು. ಬಹುತೇಕ ಭೌತಿಕ ಜಗತ್ತಿನಿಂದ ದೂರವಿರುವ ಇವರ ಪಂಥ, ಆಚರಣೆಗಳು ಎಲ್ಲವೂ ರಹಸ್ಯವಾಗಿವೆ. ಶಿವನ ಆರಾಧಕರಾದ ಇವರು ತಾಂತ್ರಿಕತೆಯ ಅತ್ಯುನ್ನತ ಮಜಲನ್ನು ಮುಟ್ಟಿ ತಮ್ಮನ್ನು ಈಶ್ವರೇಚ್ಛೆಗೆ ಒಪ್ಪಿಸಿಕೊಂಡು ಆಧ್ಯಾತ್ಮವನ್ನು ವಿಭಿನ್ನ ರೀತಿಯಲ್ಲಿ ಪರಿಭಾವಿಸಿದವರು. ಇವರ ಬದುಕು ಮತ್ತು ಆಚರಣೆಗಳು ಮಾನವ ಮತಿಗೆ ಇನ್ನೂ ನಿಲುಕಿಲ್ಲ.

ಕುಂಭ ಮೇಳಗಳಲ್ಲಿ ಲಕ್ಷಾಂತರ ಭಕ್ತರೊಂದಿಗೆ ನಾಗಾ ಸಾಧುಗಳು, ತಮ್ಮ ದೇಹ ದಂಡನೆಯಲ್ಲೇ ಬದುಕುವ ಸಂತರು, ಮೌನವ್ರತ ಆಚರಿಸುವ ಪರಿವ್ರಾಜಕರು, ಸದಾ ತಲೆಕೆಳಗಾಗಿ ನಿಂತೇ ಧ್ಯಾನ ಮಾಡುವ ಶೀರ್ಷಾಸನಿಗಳು ಮತ್ತು ದಿನದಲ್ಲಿ ಮೂರು ಬಾರಿ ಸ್ನಾನ ಮಾಡುವ ಕಲ್ಪವಾಸಿಗಳು ಮತ್ತು ಲಕ್ಷಾಂತರ ಭಕ್ತರು ಹಾಜರಿರುತ್ತಾರೆ. ಕುಂಭ ಮೇಳ ನಡೆಯುವ ದಿನಗಳು ಬಹಳ ಚಳಿಯ ದಿನಗಳಾಗಿದ್ದು ಇವಾವುವೂ ಕೂಡ ಭಕ್ತರಿಗೆ ತಮ್ಮ ಭಕ್ತಿ ಪ್ರದರ್ಶನಕ್ಕೆ ಅಡ್ಡಿಯಾಗುವುದಿಲ್ಲ. ಆಧ್ಯಾತ್ಮದ ಅನಂತ ರೂಪದಿಂದ ಪ್ರೇರಿತರಾದ ಸಮೂಹದಲ್ಲಿ ಉಚ್ಚ–ನೀಚ, ಅನುಭಾವಿ–ಸಾಮಾನ್ಯ, ದೇಶೀ–ವಿದೇಶಿ ಎನ್ನುವ ಹಂಗಿಲ್ಲದೇ ಎಲ್ಲವೂ ಐಕ್ಯವಾಗಿ ಒಂದೇ ಆಗಿಹೋಗುವ ಚೋದ್ಯವನ್ನು ಇಲ್ಲಿ ಕಾಣಬಹುದು.







ಕುಂಭ ಮೇಳದ ಅಗಾಧತೆ


ಕೆಲವು ವಿಶಿಷ್ಟ ದಿನಗಳಲ್ಲಿ ವಿಶಿಷ್ಟ ಸ್ಥಳಗಳಲ್ಲಿ ನಡೆಯುವ ಕುಂಭ ಮೇಳದಲ್ಲಿ ಕೋಟ್ಯಾಂತರ ಜನ ಒಮ್ಮೆಗೇ ಸೇರುವುದರಿಂದ ಇಷ್ಟೂ ಜನರನ್ನು ನಿಭಾಯಿಸುವ ಹೊಣೆ ಸರ್ಕಾರಗಳಿಗೆ ಭಾರಿ ತ್ರಾಸದಾಯಕವಾದುದು. ನಾಸಿಕ್ ನಗರದಲ್ಲಿ ಇತ್ತೀಚೆಗಷ್ಟೇ ನಡೆದ ಕುಂಭ ಮೇಳದಲ್ಲಿ ಅನೇಕ ಸವಾಲುಗಳು ಎದುರಾದವು. ಲಕ್ಷಾಂತರ ಜನ ಒಮ್ಮೆಗೇ ಒಂದೆಡೆ ಸೇರುವುದರಿಂದ ಅವರ ವಸತಿ, ಊಟ, ಶೌಚ ಇತ್ಯಾದಿಗಳ ಏರ್ಪಾಡಿಗೆ ಸರ್ಕಾರ ಸೂಕ್ತ ಕ್ರಮ ಕೈಗೊಂಡಿತ್ತು.

ಕುಂಭಮೇಳದಲ್ಲಿ ಮಿಂದು ಜನರ ಪಾಪ ನಿವೃತ್ತಿಯಾದ ನಂತರ ಪರಿಸರ ತನಗಾದ ಘೋರ ಆಘಾತದಿಂದ ಚೇತರಿಸಿಕೊಳ್ಳಲಾಗದೇ ನದಿಯ ನೀರು ಕಲುಷಿತವಾಗಿ ಅದರಲ್ಲಿನ ಆಮ್ಲಜನಕದ ಪ್ರಮಾಣ ಕುಸಿದು ಜಲಚರಗಳಿಗೆ ಹಾನಿಯಾಗಿತ್ತು. ನದೀ ಪಾತ್ರದಲ್ಲಿ ಹೆಚ್ಚಿದ್ದ ಕೊಳಕು ಅಲ್ಲೇ ಉಳಿದು ಅನೇಕ ಖಾಯಿಲೆಗಳಿಗೂ ಕಾರಣವಾಗಿತ್ತು. ಯಾವ ಕಾರಣ ಏನೇ ಇದ್ದರು ಧಾರ್ಮಿಕ ಆಚರಣೆಗಳಿಗೆ ಭಾರತದಲ್ಲಿ ಯಾವುದೂ ಅಡ್ಡಿಯಾಗುವುದಿಲ್ಲ. ಪರಿಸರ ಕಾಳಜಿ ಅಷ್ಟೇ ಏಕೆ ಪ್ರಾಣದ ಕಾಳಜಿಯೂ ಇವುಗಳಲ್ಲಿ ಭಾಗವಹಿಸುವವರಿಗೆ ಇರುವುದಿಲ್ಲ.

ಕುಂಭ ಮೇಳ ಎಲ್ಲೆಲ್ಲಿ ?

ಕುಂಭ ಮೇಳಗಳಲ್ಲಿ ಐದು ವಿಧ. ಮಹಾ ಕುಂಭ ಮೇಳವು ಪ್ರತಿ 144 ವರ್ಷಗಳಿಗೆ ಅಂದರೆ 12 ವರ್ಷಗಳ 12 ಆವರ್ತಗಳ ವರ್ಷಗಳಿಗೆ ಒಮ್ಮೆ ನಡೆಯುತ್ತದೆ. ಪೂರ್ಣ ಕುಂಭ ಮೇಳ ಪ್ರತೀ 12 ವರ್ಷಗಳಿಗೆ ಒಮ್ಮೆ ನಡೆಯುತ್ತದೆ. ಹಿಂದಿನ ಕುಂಭ ಮೇಳವು ಅಲಹಾಬಾದ್ ನಗರದಲ್ಲಿ 2013 ರ ಜನವರಿಯಿಂದ ಮಾರ್ಚ್ 10 ರವರೆಗೆ ನಡೆದಿತ್ತು. ಅರ್ಧ ಕುಂಭ ಮೇಳವು ಆರು ವರ್ಷಗಳಿಗೆ ಒಮ್ಮೆ ನಡೆಯುತ್ತದೆ. ಕುಂಭಮೇಳವು ಪ್ರತೀ ಮೂರು ವರ್ಷಗಳಿಗೆ ಒಮ್ಮೆ ಸರದಿಯ ಪ್ರಕಾರ ಪ್ರಯಾಗ, ನಾಸಿಕ್, ಹರಿದ್ವಾರ ಮತ್ತು ಉಜ್ಜೈನ್‌ಗಳಲ್ಲಿ ನಡೆಯುತ್ತದೆ. ಮಾಘ ಮೇಳವು ಪ್ರತೀ ವರ್ಷ ಅರ್ಧ ಕುಂಭ ಮತ್ತು ಕುಂಭ ಮೇಳ ನಡೆಯುವ ಸ್ಥಳಗಳನ್ನು ಹೊರತುಪಡಿಸಿ ಇತರೆ ಸ್ಥಳಗಳಲ್ಲಿ ನಡೆಯುತ್ತದೆ.

ಮುಂದಿನ ದಿನಗಳಲ್ಲಿ 2019 ರಲ್ಲಿ ಪ್ರಯಾಗದಲ್ಲಿ ಅರ್ಧ ಕುಂಭ ಮೇಳ ಮುಂದೆ 2021–2022 ರಲ್ಲಿ ಹರಿದ್ವಾರದಲ್ಲಿ ಕುಂಭ ಮೇಳ ನಡೆಯಲಿದೆ.



ದುರಂತಗಳು

ಕುಂಭ ಮೇಳದಂತಹ ಮಹಾ ಜಾತ್ರೆಗಳಲ್ಲಿ ಸೇರುವ ಲಕ್ಷಾಂತರ ಜನ ಒಮ್ಮೆಲೆ ಉದ್ವಿಗಗೊಂಡಾಗ ಸಂಭವಿಸುವ ಕಾಲ್ತುಳಿತದಲ್ಲಿ ನೂರಾರು ಜನ ಅಸು ನೀಗುತ್ತಾರೆ. ಅಲಹಾಬಾದ್ ನಗರದಲ್ಲಿ 2013 ರಲ್ಲಿ ನಡೆದ ಕುಂಭಮೇಳದಲ್ಲಿ ಸುಮಾರು 39 ಜನ ಅಸುನೀಗಿದ್ದರು. 1954 ರಲ್ಲಿ ಸುಮಾರು 1000 ಜನ ಕೊನೆಯುಸಿರು ಎಳೆದರು ಎಂಬ ವರದಿಗಳಿವೆ. ಇತ್ತೀಚಿನ ಮೆಕ್ಕಾ ದುರಂತ ಕೂಡ ಧಾರ್ಮಿಕ ಅಚರಣೆಗಳ ಮತ್ತೊಂದು ಮುಖ.

ಸುಮಾರು 20 ಮಿಲಿಯನ್‌ಗೂ ಹೆಚ್ಚು ಜನರನ್ನು ಮುಂದಿನ ಉಜ್ಜೈನ್ ಕುಂಭಮೇಳದಲ್ಲಿ ನಿರೀಕ್ಷಿಸಲಾಗಿದೆ. ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಸುಮಾರು ರೂ. 2800 ಕೋಟಿ ವೆಚ್ಚವಾಗಬಹುದು ಎಂದು ನಿರೀಕ್ಷಿಸಲಾಗಿದೆ. ವ್ಯಾಪಾರ ಮತ್ತು ಆದಾಯಗಳು 4–5 ಪಟ್ಟು ಹೆಚ್ಚುವುದರಿಂದ ಸರ್ಕಾರಗಳು ಈ ಮೊತ್ತವನ್ನು ಖರ್ಚು ಮಾಡಲು ಹಿಂದೆ–ಮುಂದೆ ನೋಡುತ್ತಿಲ್ಲ.

ಪ್ರಯಾಗದ ಪಾಂಚ್ ಕೋಸಿ ಪರಿಕ್ರಮಣ

ಪ್ರಯಾಗದ ಕುಂಭಮೇಳದಲ್ಲಿ ಭಾಗವಹಿಸಿದ ನಂತರ ಅಥವಾ ಮೊದಲು ಕೆಲವು ನಿರ್ದಿಷ್ಟ ಸ್ಥಳಗಳನ್ನು ಸಂದರ್ಶಿಸುವ ಪದ್ಧತಿ ಇದೆ. ಇದನ್ನು ಪರಿಕ್ರಮ ಎಂದು ಕರೆಯಲಾಗುತ್ತದೆ. ಮೊದಲ ದಿನ ತ್ರಿವೇಣಿಯಲ್ಲಿ ಮಿಂದು ಅಕ್ಷಯ ವಾಟದಲ್ಲಿ ಪೂಜೆ ಮಾಡಿ ಸುಧಾರಸ ತೀರ್ಥ, ಊರ್ವಶಿ ಕುಂಡ, ಹನುಮಾನ್ ತೀರ್ಥ, ಸೀತಾ ಕುಂಡ, ರಾಮ ತೀರ್ಥ, ವರುಣ ತೀರ್ಥ ಮತ್ತು ಚಕ್ರ ಮಾಧವ ದರ್ಶನದ ನಂತರ ಸೋಮೇಶ್ವರನಾಥದಲ್ಲಿ ವಾಸ್ತವ್ಯ.

ಎರಡನೇ ದಿನ ಸೋಮತೀರ್ಥ, ಸೂರ್ಯತೀರ್ಥ, ಕುಬೇರತೀರ್ಥ, ವಾಯು ತೀರ್ಥ ಮತ್ತು ಅಗ್ನಿ ತೀರ್ಥಗಳಲ್ಲಿ ಸ್ನಾನ ಮಾಡಿ ನಂತರ ನೈನಿ ಹಳ್ಳಿಯಲ್ಲಿ ಗಡ ಮಾಧವನ ದರ್ಶನ ಮಾಡಿ ನಂತರ ಕುಂಭಾಲೇಶ್ವರ ತೀರ್ಥಕ್ಕೆ ಭೇಟಿ ಕೊಟ್ಟು ರಾಮ ಸಾಗರದ ಬಳಿ ರಾತ್ರಿ ವಾಸ್ತವ್ಯ. ಮೂರು, ನಾಲ್ಕು, ಐದನೇ ದಿನಗಳಲ್ಲಿ ಯಮುನಾ ನದಿಯ ಬಳಿ ಘಾಟ್‌ಗಳ ಭೇಟಿ. ಶಿವ ಕೋಟಿ ತೀರ್ಥ, ಪಂಡಿಲ ಮಹಾದೇವ, ಮಾನಸ ತೀರ್ಥ, ನಾಗ ತೀರ್ಥ, ವ್ಯಾಸಾಶ್ರಮ, ಮತ್ತೆ ತ್ರಿವೇಣಿಗೆ ವಾಪಸಾಗಿ ಪರಿಕ್ರಮ ಪೂರ್ತಿ ಮಾಡಲಾಗುತ್ತದೆ.

ಪ್ರಯಾಗದಲ್ಲಿ ಸಮುದ್ರ ಕೂಪ ಎಂದು ಕರೆಯಲಾಗುವ ಬಾವಿಯೊಂದಿದೆ. ಇದನ್ನು ಚಂದ್ರಗುಪ್ತನು ನಿರ್ಮಿಸಿದ ಎನ್ನಲಾಗಿದ್ದು ಎಂದೂ ಒಣಗದ ಬಾವಿಯ



ನೀರಿನ ಮಟ್ಟ ಸದಾ ಸಮುದ್ರ ಮಟ್ಟದಲ್ಲೇ ಇರುತ್ತದೆ ಎಂಬ ಕಾರಣಕ್ಕಾಗಿ ಸಮುದ್ರ ಕೂಪ ಎಂದು ಕರೆಯಲಾಗುತ್ತದೆ. ಪಾಂಡವರನ್ನು ಧುರ್ಯೋಧನ ಕೂಡಿಟ್ಟ ಸ್ಥಳ ಲಾಕ್ಷಾಗೃಹ ಗಂಗಾ ನದಿಯ ದಡದಲ್ಲಿದೆ. ಅಲೋಪಿ ದೇವಿ ದೇವಾಲಯವು ಶಕ್ತಿ ಪೀಠವಾಗಿದ್ದು ನವರಾತ್ರಿಯಲ್ಲಿ ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ.

ಉಜ್ಜೈನಿಯ ಸಿದ್ಧತೆ

ಮಧ್ಯ ಭಾರತದಲ್ಲಿ ಕ್ಷಿಪ್ರಾ ನದಿಯ ದಡದಲ್ಲಿರುವ ಒಂದು ಪುರಾತನ ನಗರ ಉಜ್ಜೈನಿ. ಏಳು ಪವಿತ್ರ ನಗರಗಳ (ಸಪ್ತ ಪುರಿ) ಪಟ್ಟಿಯಲ್ಲಿ ಒಂದಾದ ಉಜ್ಜೈನಿ ನಗರದಲ್ಲಿ ಶ್ರೀ ಕೃಷ್ಣನು ಬಲರಾಮ, ಸುಧಾಮರೊಡನೆ ಮಹರ್ಷಿ ಸಾಂದಿಪಿನಿ ಬಳಿ ವಿದ್ಯಾಭ್ಯಾಸ ಮಾಡಿದ್ದ. ನಂತರ ಅರಸ ಎರಡನೇ ಚಂದ್ರಗುಪ್ತ ಇಲ್ಲಿ ರಾಜ್ಯವಾಳಿದ್ದ. ಆತನ ಆಸ್ಥಾನದಲ್ಲಿ ಮಹಾನ್ ವಿದ್ವಾಂಸರಾದ ಬ್ರಹ್ಮಗುಪ್ತ ಮತ್ತು ಖ್ಯಾತ ಗಣಿತಜ್ಞ ಭಾಸ್ಕರಾಚಾರ್ಯರು ಮತ್ತು ಕವಿ ಕಾಳಿದಾಸ ಇದ್ದರು.

ಮಹಾಕಾಲ ವನ ಎಂದು ಕರೆಯಲಾಗುವ ಶ್ಮಶಾನವೊಂದು ಇಲ್ಲಿದೆ. ವಿಕ್ರಮ–ಭೇತಾಳ ಕಥಾ ಪಾತ್ರವಾದ ರಾಜಾ ವಿಕ್ರಮಾದಿತ್ಯ ಭೇತಾಳನನ್ನು ಮರದಿಂದ ಇಳಿಸಿ ಕೊಂಡೊಯ್ಯುತ್ತಿದ್ದ ಸ್ಮಶಾನ ಇದು. ಅಲ್ಲದೇ ಈ ಕ್ಷೇತ್ರದಲ್ಲಿ ಪಾಶುಪತರು, ಕಾಪಾಲಿಕರು, ಕಾಳಾಮುಖರು, ಭೈರವ ಮತ್ತು ನಾಥ ಪಂಥದ ಸಾಧುಗಳು ಇದ್ದಾರೆ. ನಾಥ ಪಂಥದ ಪರಮ ಗುರು ಗೋರಖನಾಥರು ಇಲ್ಲಿದ್ದರು. ವೈಷ್ಣವ ಸಾಂದೀಪಿನಿ ಆಶ್ರಮದ ಸಂತ ವಲ್ಲಭಾಚಾರ್ಯರು ವಲ್ಲಭ ಸಂಪ್ರದಾಯದ 73 ನೇ ಬೈಠಖ್‌ನ್ನು ಇಲ್ಲಿ ಸ್ಥಾಪಿಸಿದ್ದರು. ಇದಲ್ಲದೇ ಪ್ರಯಾಗದಲ್ಲಿ ಕಾಲ್ಪನಿಕ ಕರ್ಕಾಟಕ ಸಂಕ್ರಾಂತಿ ವೃತ್ತ ಹಾದು ಹೋಗಿದೆ.

ಈ ಪ್ರಖ್ಯಾತ ಕ್ಷೇತ್ರದಲ್ಲಿ 22, 2016 ರ ಏಪ್ರಿಲ್‌ನಿಂದ ಮೇವರೆಗೆ ಸಿಂಹಸ್ಥ ಕುಂಭ ಮೇಳ ನಡೆಯಲಿದೆ. ಅದಕ್ಕಾಗಿ ಸರ್ಕಾರವು ಸಿದ್ಧತಾ ಕ್ರಮಗಳನ್ನು ನಡೆಸಿದೆ. ಬೆಂಗಳೂರು ನಗರದಿಂದ ಅಲಹಾಬಾದ್ ನಗರಕ್ಕೆ ಸುಮಾರು 1732 ಕಿಲೋಮೀಟರ್ ದೂರವಿದೆ. ರೈಲುಗಳು ಸಾಕಷ್ಟಿದ್ದು ನಿರಾಯಾಸವಾಗಿ ಇಲ್ಲಿಗೆ ತಲುಪಬಹುದಾಗಿದೆ.

ಹರಿದ್ವಾರ ಕ್ಷೇತ್ರದಲ್ಲೂ 2016 ರ ಜನವರಿಯಿಂದ ಮೇವರೆಗೆ ಕುಂಭ ಸ್ನಾನ ನಡೆಯಲಿದೆ. ಹರಿದ್ವಾರ ಕೂಡ ಪುರಾತನ ನಗರವಾಗಿದ್ದು ಸೂರ್ಯವಂಶೀಯ ಅರಸ ಭಗೀರಥ ತನ್ನ ಪೂರ್ವಿಕರಿಗೆ ಮುಕ್ತಿ ದೊರಕಿಸುವ ಉದ್ದೇಶದಿಂದ



ಗಂಗೆಯನ್ನು ಭೂಲೋಕಕ್ಕೆ ಕಳುಹಿಸಲು ಶಿವನನ್ನು ಕುರಿತು ತಪಸ್ಸು ಮಾಡಿದ್ದ. ಇದರಿಂದ ಅರಸ ಸಗರ ಮತ್ತು ಆತನ 60,000 ಮಕ್ಕಳು ಮುಕ್ತಿ ಪಡೆದರು ಎಂಬುದು ಐತಿಹ್ಯ.

ಅಲಹಾಬಾದ್ ಮೇಳ

ಇಲ್ಲಿ ಪ್ರತೀ ವರ್ಷ ಮಾಘ ಮಾಸದಲ್ಲಿ ಮಕರ ಸಂಕ್ರಾಂತಿಯಂದು ತ್ರಿವೇಣೀ ಸಂಗಮದಲ್ಲಿ ಭಕ್ತರು ಸ್ನಾನಕ್ಕೆ ಬರುತ್ತಾರೆ. ಮಾಘ ಮಾಸದ ಈ ತಿಂಗಳನ್ನು ಕಲ್ಪವಾಸ ಎಂದು ಕರೆಯಲಾಗುತ್ತದೆ. ಕಲ್ಪ ಎಂದರೆ ಸತ್ಯ ಯುಗ, ತ್ರೇತಾ ಯುಗ, ದ್ವಾಪರ ಯುಗ ಮತ್ತು ಕಲಿ ಯುಗಗಳ ಒಟ್ಟು ಅವಧಿ. ಬ್ರಹ್ಮನ ಒಂದು ದಿನದ ಅವಧಿ (4.32 ಬಿಲಿಯನ್ ವರ್ಷಗಳು) ಈ ಕಲ್ಪವಾಸ. ಕೆಲವು ವ್ಯಕ್ತಿಗಳು ತಮ್ಮ ವಾನಪ್ರಸ್ಥಾಶ್ರಮದಲ್ಲಿದ್ದು ಎಲ್ಲ ಕುಂಭ ಮೇಳಗಳಲ್ಲೂ ಭಾಗವಹಿಸುತ್ತಾ ಕಠಿಣ ಆಚರಣೆಗಳಲ್ಲಿರುತ್ತಾರೆ. ಇಂತಹಾ 12 ಕುಂಭಮೇಳಗಳಲ್ಲಿ ಭಾಗವಹಿಸುವ ಕಲ್ಪವಾಸದ ನಂತರ ತಮ್ಮ ಹಾಸುಗೆಯನ್ನು ಹಾಗು ಇತರೆ ವಸ್ತುಗಳನ್ನು ದಾನ ಮಾಡಬೇಕು. ಇದನ್ನು ಶಯ್ಯಾದಾನ ಎಂದು ಕರೆಯಲಾಗುತ್ತದೆ.

ಇ–ಕುಂಭಮೇಳ

ಕುಂಭಮೇಳದ ಜನಪ್ರಿಯತೆ ಅಂತರಜಾಲವನ್ನೂ ಬಿಟ್ಟಿಲ್ಲ. 2007 ರಲ್ಲಿ ಕುಂಭಮೇಳದ ವಿವರಗಳಿಗಾಗಿ ಅಂತರಜಾಲದಲ್ಲಿ ಹುಡುಕಾಟ ನಡೆಸಿದ್ದವರ ಸಂಖ್ಯೆ 4.2 ಕೋಟಿಯನ್ನು ಮೀರಿತ್ತು. 2013 ರಲ್ಲಿ ಕುಂಭಮೇಳದ ಬಗ್ಗೆ ವಿವರ ಶೋಧಿಸಿದವರ ಸಂಖ್ಯೆ ಸುಮಾರು 13.70 ಕೋಟಿ. ಗೂಗಲ್ ಕುಂಭಮೇಳದ ಬಗ್ಗೆ ಸುಮಾರು 11.50 ಲಕ್ಷ ಪುಟಗಳಷ್ಟು ಮಾಹಿತಿ ಹೊಂದಿದೆ. ಯೂಟ್ಯೂಬ್ ವಿಡಿಯೋಗಳ ಸಂಖ್ಯೆ ಸುಮಾರು 53,600 ರಷ್ಟಿದೆ. ಸುಮಾರು 13 ಆಂಡ್ರಾಯ್ಡ್ ಅಪ್ಲಿಕೇಶನ್ನುಗಳು ಕುಂಭಮೇಳದ ಬಗ್ಗೆಯೇ ಇವೆ. ಬಿಬಿಸಿ ಸೇರಿದಂತೆ ಅನೇಕ ವಿದೇಶಿ ಚಾನೆಲ್‌ಗಳು ಕುಂಭಮೇಳಗಳ ಬಗ್ಗೆ ವಿಶೇಷ ಕಾರ್ಯಕ್ರಮಗಳನ್ನು ಮತ್ತು ಸಾಕ್ಷ್ಯ ಚಿತ್ರಗಳನ್ನು ಪ್ರಸಾರಮಾಡಿವೆ.

ಇಲ್ಲಿಗೆ ಬರುವ ಸಾಧುಗಳಾದರೂ ಅಷ್ಟೇ ಬಹುತೇಕರು ಟೆಕ್ಕಿ ಬಾಬಾಗಳು. ಮೊದಲನೆಯ ಇಂತಹಾ ವ್ಯಕ್ತಿ ಪೈಲಟ್ ಬಾಬಾ ಎಂದು ಕರೆಸಿಕೊಳ್ಳುವ ನಿವೃತ್ತ ಪೈಲಟ್ ಕಮ್ಯಾಂಡರ್ ಕಪಿಲ್ ಅದ್ವೈತ್. ಬಹಳಷ್ಟು ಬಾಬಾಗಳು ತಮ್ಮವೇ





ಫೇಸ್‌ಬುಕ್ ಪೇಜುಗಳನ್ನು, ವೆಬ್ ಸೈಟುಗಳನ್ನು ಹೊಂದಿದ್ದಾರೆ. ಆಧುನಿಕ ಸೆಲ್ ಫೋನುಗಳು ಇವರ ಕೈಲಿರುತ್ತವೆ. ಇವರು ಲ್ಯಾಪ್‌ಟಾಪ್ ಬಳಸಬಲ್ಲ ಚತುರರು.


ಕರ್ನಾಟಕದ ಕುಂಭಮೇಳಗಳು


ಕರ್ನಾಟಕದಲ್ಲಿನ ದಕ್ಷಿಣ ಕಾಶಿ ಎಂದು ಹೆಸರಾದ ತಿರುಮಕೂಡಲು ನರಸಿಪುರದ ಗಂಜಾಂ ನರಸಿಂಹ ಸ್ವಾಮಿ ದೇವಾಲಯದ ಬಳಿ ಕಾವೇರಿ, ಕಬಿನಿ ಮತ್ತು ಸ್ಪಟಿಕ ಸರೋವರ ಎಂದು ಕರೆಯಲಾಗುವ ಗುಪ್ತ ಗಾಮಿನಿಗಳ ಸಂಗಮ ಸ್ಥಳದಲ್ಲಿ 2016 ರಲ್ಲಿ ಕುಂಭಮೇಳ ನಡೆಯಲಿದೆ. ಇತ್ತೀಚೆಗೆ ಕೂಡಲ ಸಂಗಮದಲ್ಲಿ ಮತ್ತು ಶ್ರೀ ರಂಗಪಟ್ಟಣದ ಬಳಿಯ ಸಂಗಮದಲ್ಲೂ ಸಹಾ ನಿರ್ದಿಷ್ಟ ದಿನಗಳಂದು ಸ್ನಾನಕ್ಕಾಗಿ ಭಕ್ತರು ಆಗಮಿಸುತ್ತಾರೆ.

ತಮಿಳುನಾಡಿನ ಕುಂಭಕೋಣಂನಲ್ಲಿ ಮಕರ ಸಂಕ್ರಾಂತಿಯಂದು ಮಹಾಮಹಂ ಎಂದು ಕರೆಯಲಾಗುವ ಕೆರೆಯಲ್ಲಿ ತೀರ್ಥ ಸ್ನಾನದ ಆಚರಣೆ ನಡೆಯುತ್ತದೆ. ಪ್ರತೀ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಕುಂಭಸ್ನಾನದಲ್ಲಿ ಕನಿಷ್ಟ 20 ಲಕ್ಷ ಜನ ಭಾಗವಹಿಸುತ್ತಾರೆ.

❖







6. ಸರ್ಕಸ್– ದಶಾವತಾರಗಳ ದರ್ಶನ

ಅದು 1950 ರ ದಶಕದಲ್ಲಿ ಬಿಡುಗಡೆಯಾದ ರಾಜಕುಮಾರ್ ಸಿನೆಮಾ. ದೃಶ್ಯವೊಂದರಲ್ಲಿ ಖಳನಾಯಕ ನಾಯಕನ ಬಳಿ ಬಂದು ಧಮಕಿ ಹಾಕುತ್ತಾನೆ. ನಿನ್ನ ಸರ್ಕೋಸೆಲ್ಲಾ ನಂತಾವ ನಡೆಯಾಕಿಲ್ಲ ಸುಮ್ಮನೆ ವೋಗು ಅಂತ. ಸರ್ಕೋಸು ಪದಕ್ಕೆ ಅಚ್ಚರಿ ಪಡುತ್ತಾ ರಾಜಕುಮಾರ್ ಬಂದು ತನ್ನ ಪ್ರೇಮಿಯ ಬಳಿ ಅನ್ನುತ್ತಾರೆ ನಿನ್ನ ಸರ್ಕೋಸೆಲ್ಲಾ ನಂತಾವ ನಡೆಯಾಕಿಲ್ಲ ಅಂತ. ಆ ಪದಕ್ಕೆ ಅರ್ಥ ತಿಳಿಯದ ನಾಯಕಿ ಕೇಳುತ್ತಾಳೆ ಸರ್ಕೋಸು ಅಂದರೇನು ? ನಾಯಕನಿಗೂ ಸರ್ಕೋಸು ಅಂದರೇನು ಅಂತ ಗೊತ್ತಿಲ್ಲದೇ ಮಾತು ತೇಲಿಸುತ್ತಾನೆ, ಅದೇ ಸರ್ಕೋಸು ಗೊತ್ತಿಲ್ಲವಾ ?. ಸರ್ಕಸ್ ಅನ್ನುವ ಪದ ಅರ್ಥ ತಿಳಿಯದೆ ಹೀಗೇ ಬಳಕೆಯಾಗುತ್ತಿತ್ತು. ಅದು ಸಹಜ ಕೂಡ, ಏಕೆಂದರೆ ಭಾರತಕ್ಕೆ ಸರ್ಕಸ್ ಆಗಮನದ ಮುಂಗೋಳಿಕೂಗುತ್ತಿದ್ದ ಸಮಯ ಅದು.

ಮೈಯ್ಯನ್ನು ರಬ್ಬರಂತೆ ಬಾಗಿಸಿ ಬಳುಕಿಸುತ್ತಿದ್ದ ಸುಂದರಿಯರು, ಸಿಂಹವನ್ನು ಮಣಿಸುತ್ತಿದ್ದ ರಿಂಗ್ ಮಾಸ್ಟರ್, ಗೋಳದೊಳಗೆ ಬೈಕ್ ಓಡಿಸುತ್ತಿದ್ದ ಸ್ಟಂಟ್ ಮ್ಯಾನ್, ಕುಳ್ಳ–ಲಂಬೂ ಜೋಕರುಗಳು ! ಅಪೂರ್ವ ಅನುಭವಗಳ ಸರಮಾಲೆ. ಅದ್ಭುತ ಕಾಲ್ಪನಿಕ ಕಥೆಯೊಂದನ್ನು ನೋಡಿದ ಅನುಭವ. ಭರಪೂರ ಮನರಂಜನೆಯನ್ನು ಕಟ್ಟಿಕೊಡುತ್ತಿತ್ತು ಸರ್ಕಸ್. ಸರ್ಕಸ್ ಬದುಕು ನೋಡುಗರಿಗೆ ರೋಮಾಂಚಕವಾಗಿ ಕಂಡರೂ ಕೂಡಾ ತೆರೆಯ ಹಿಂದಿನ ಬದುಕು ಗ್ಲಾಮರಸ್ ಆಗಿಲ್ಲ. ಬಹುತೇಕ ಕಷ್ಟ–ಕೋಟಲೆಗಳ ಜಗತ್ತು ಅದು. ಲಕ್ಷಾಂತರ ಕಲಾವಿದರಿಗೆ ಬದುಕು ಕೊಟ್ಟಿದ್ದ ಸರ್ಕಸ್ ಕಣ್ಣು ಮುಚ್ಚುತ್ತಾ ಸಾಂಪ್ರದಾಯಿಕ ಕಲೆಯೊಂದು ಮರೆಯಾಗುತ್ತಿರುವುದು ದುರಂತ.

ಸರ್ಕಸ್‌ನಲ್ಲಿ ಅಭಿನಯಿಸುವವರೆಲ್ಲಾ ಅಂದು ಮಹಾನ್ ವ್ಯಕ್ತಿಗಳಾಗಿದ್ದರು ನೋಡುಗರ ದೃಷ್ಟಿಯಲ್ಲಿ. ಟ್ರಿಪೀಝ್‌ನಲ್ಲಿ ತೂಗುತ್ತಾ ಹಾರುವಾಗ ನೋಡುತ್ತಿದ್ದವರ



ಜೀವ ಬಾಯಿಗೆ ಬರುತ್ತಿತ್ತು. ತಮ್ಮ ಜೀವವನ್ನೇ ಪಣಕ್ಕೊಡ್ಡಿ ಪ್ರಖರ ದೀಪಗಳ ಬೆಳಕಿನಲ್ಲಿ ಮಿನುಗುತ್ತಿದ್ದ ತಾರೆಯರು ಸೃಷ್ಟಿಸುತ್ತಿದ ಮಾಯಾಜಾಲಗಳಿಗೆ ಕೊನೆಯಿರಲಿಲ್ಲ. ಕ್ರೂರ ಪ್ರಾಣಿಗಳು ನಾಯಿಮರಿಗಳಂತೆ ಹೇಳಿದ್ದನ್ನು ಮಾಡುವ ರೀತಿ ಮಕ್ಕಳಿಗೆ ಬಲು ಮೆಚ್ಚಿಗೆಯಾಗುತ್ತಿತ್ತು. ಆವತ್ತು ಬಾಲಕರಾಗಿದ್ದ ನಾವೆಲ್ಲಾ ದೊಡ್ಡವರಾದ ಮೇಲೆ ಸರ್ಕಸ್ ಸೇರಲೇಕೆಂದು ಮನಸ್ಸು ಮಾಡಿದ್ದೆವು.

ಮೊದಲ ಸರ್ಕಸ್

ಸರ್ಕಸ್ ಎನ್ನುವ ಪದ ಕ್ರಿಕೋಸ್ ಎಂಬ ಗ್ರೀಕ್ ಮೂಲದಿಂದ ಬಂದಿದೆ. ಕ್ರಿಕೋಸ್ ಎಂದರೆ ವೃತ್ತ ಅಥವಾ ರಿಂಗ್ ಎಂದರ್ಥ. ಅಧುನಿಕ ಸರ್ಕಸ್ ಚಮತ್ಕಾರಿಕ ಕಲೆಗಳ, ಸಾಂಪ್ರದಾಯಿಕ ಸಾಹಸ ಪ್ರದರ್ಶನಗಳ, ನಗೆಯುಕ್ಕಿಸುವ ವಿದೂಷಕರ ಮಂಗಾಟಗಳ ಮತ್ತು ಜಾದೂ ಪ್ರದರ್ಶನಗಳ ಒಂದು ಸಂಘಟಿತ ಪ್ರದರ್ಶನ. ಕಾಡು ಪ್ರಾಣಿಗಳನ್ನು ಪಳಗಿಸಿ ಅವುಗಳಿಂದ ಕವಾಯತು ಮಾಡಿಸುವ ವಿಧಾನ ಸರ್ಕಸ್ ಜನಿಸಿದ ಕಾಲದಿಂದ ಬಂದ ಕ್ರಮ. ಬಹಳ ಹಿಂದೆ ರೋಮನರು ಕುದುರೆ ಸವಾರಿ ಸಾಹಸ, ಈಕ್ವೆಸ್ಟ್ರೀಯನ್ ಮುಂತಾದುವುಗಳನ್ನು ನಡೆಸುತ್ತಿದ್ದರೂ ಕೂಡಾ ಅದಕ್ಕೆ ಒಂದು ನಿರ್ದಿಷ್ಟ ರೂಪ ಬಂದಿರಲಿಲ್ಲ. ಅವರು ಕುದುರೆ ಓಟವನ್ನು ಸರ್ಕಸ್ ಮ್ಯಾಕ್ಸಿಮಸ್ ಅಥವಾ ಸರ್ಕೋ ಮ್ಯಾಸಿಮೋ ಎನ್ನುತ್ತಿದ್ದರು. ಇದರ ಮುಂದುವರೆದ ರೂಪಗಳು ಸರ್ಕಸ್ ಫ್ಲೆಮಿನಿಯಸ್, ಸರ್ಕಸ್ ನೆರೋನಿಸ್ ಎಂದು ಕರೆಯಲ್ಪಟ್ಟವು. ನಂತರ ರೋಮ್ ದೊರೆ ಮ್ಯಾಕ್ಸೆಂಟಿಯಸ್ ಇವೆಲ್ಲಾ ಪ್ರದರ್ಶನಗಳನ್ನು ಜನ ಕುಳಿತು ನೋಡಲು ಅನುಕೂಲವಾಗುವಂತೆ ಸ್ಟೇಡಿಯಂ ಒಂದನ್ನು ನಿರ್ಮಿಸಿದ್ದ.

ಆದಿಕಾಲದಲ್ಲಿ ಸರ್ಕಸ್ ಎಂದರೆ ಕುದುರೆಗಳ ಕವಾಯತು ಮತ್ತು ಕುಣಿತಗಳ ಪ್ರದರ್ಶನವಾಗಿತ್ತು. ಮುಂದೆ ಆಕ್ರೋಬ್ಯಾಟ್ ಮತ್ತು ಮನುಷ್ಯರ ಕವಾಯತು ಪ್ರದರ್ಶನ ಸೇರಿಕೊಂಡಿತು. ಹಳಬರು ಇಂತಹಾ ಹೊಸ ಹೊಸ ಆಟಗಳನ್ನು ಸೇರಿಸಲು ಹಿಂದೇಟು ಹಾಕುತ್ತಿದ್ದರು. ಕ್ರಮೇಣ ವನ್ಯಮೃಗಗಳ ಆಗಮನದೊಂದಿಗೆ ಸರ್ಕಸ್ ತನ್ನ ವೈಭವವನ್ನು ಪಡೆಯಿತು.

ವಿಶ್ವದ ಮೊದಲ ಸರ್ಕಸ್ ಪ್ರಾರಂಭವಾದದ್ದು ಕ್ರಿ.ಶ.1768 ರಲ್ಲಿ. ಇಂಗ್ಲೆಂಡ್ ದೇಶದಲ್ಲಿ ಫಿಲಿಪ್ ಆಶ್ಲೇ ಎಂಬಾತ ಜಾದೂಗಾರರ, ಸೈಕಲ್ ಟ್ರಿಕ್‌ಗಳ, ಹಗ್ಗದ ಮೇಲೆ ನಡೆಯುವವರ ಒಂದು ಸಂಘಟಿತ ಶೋ ಪ್ರಾರಂಭಿಸಿದ್ದ. ಈತನ ಪ್ರಯತ್ನ

ಯಶಸ್ವಿಯಾಗಿ ಮುಂದೆ ಅನೇಕ ಸರ್ಕಸ್ ಕಂಪನಿಗಳ ಉದಯಕ್ಕೆ ಅನುವು ಮಾಡಿತ್ತು. ಹಾಗಾಗಿ ಫ಼ಿಲಿಪ್ ಆಶ್ಟ್ಲೇಯನ್ನು ಆಧುನಿಕ ಸರ್ಕಸ್‌ನ ಪಿತಾಮಹ ಎಂದು ಕರೆಯುತ್ತಾರೆ. ಜಾನ್ ಬಿಲ್ ರಿಕೆಟ್ಸ್ 1793 ರಲ್ಲಿ ಅಮೇರಿಕಾ ದೇಶದಲ್ಲಿ ಪ್ರಥಮ ಸರ್ಕಸ್ ಕಂಪನಿಯನ್ನು ಪ್ರಾರಂಭಿಸಿದ. ಮುಂದೆ ವಿಕ್ಟರ್ ಪೆಪಿನ್, ಜೋಶುವ ಪುರ್ಡಿ ಬ್ರೌನ್, ಪಿ.ಟಿ.ಬಾರ್ನಂ, ಥಾಮಸ್ ಟಾಪ್ಲಿನ್ ಕುಕ್, ಪಾಬ್ಲೋ ಫ್ರಾಂಕ್ ಮುಂತಾದವರು ಸರ್ಕಸ್ ಬೆಳವಣಿಗೆಗೆ ಕಾರಣೀಭೂತರಾದರು.

ಕ್ರಿ.ಶ. 1919 ರಲ್ಲಿ ಅಂದಿನ ಯು.ಎಸ್.ಎಸ್.ಆರ್ ಮುಖ್ಯಸ್ಥನಾಗಿದ್ದ ಲೆನಿನ್ ಜನ ಸಾಮಾನ್ಯರ ಕಲೆಯಾಗಿ ಸರ್ಕಸ್ ಬೆಳೆಯಬೇಕು ಎಂದು ಆಶಿಸಿದ್ದರು. ಅವರ ಮಾತಿನಂತೇ 1927 ರಲ್ಲಿ ಮಾಸ್ಕೋ ಸ್ಟೇಟ್ ಸರ್ಕಸ್ ಪ್ರಾರಂಭವಾಯಿತು. 1970 ರ ವೇಳೆಗಾಗಲೆ ರಶ್ಯನ್ ಸರ್ಕಸ್ ತನ್ನ ಔನ್ನತ್ಯವನ್ನು ಮುಟ್ಟಿತ್ತು. ದೇಶ–ವಿದೇಶಗಳಲ್ಲೆಲ್ಲಾ ತನ್ನ ಪ್ರದರ್ಶನ ನೀಡಿ ಎಲ್ಲರನ್ನೂ ಬೆರಗುಗೊಳಿಸಿತ್ತು. ಖ್ಯಾತ ಚಿತ್ರನಟ ರಾಜಕಪೂರ್ ಕೂಡಾ ತಮ್ಮ ಪ್ರಸಿದ್ಧ ಸಿನೆಮಾ ಮೇರಾ ನಾಮ್ ಜೋಕರ್‌ನಲ್ಲಿ ಸರ್ಕಸ್ ಜೀವನದ ಒಳ–ಹೊರಗನ್ನು ಅದ್ಭುತವಾಗಿ ಚಿತ್ರಿಸಿದ್ದರು. ಸರ್ಕಸ್ ಪ್ರದರ್ಶನದಲ್ಲಿ ಚೀನಾ ಕೂಡಾ ಹಿಂದೆ ಬೀಳಲಿಲ್ಲ. ಆಕ್ರೋಬ್ಯಾಟಿಕ್ಸ್ ಕಲೆಯಲ್ಲಿ ನುರಿತಿದ್ದ ಕಲಾವಿದರ ಪ್ರದರ್ಶನದ ಚೀನಿ ಸ್ಟೇಟ್ ಸರ್ಕಸ್ ಪ್ರಾರಂಭಿಸಿತು.

ಟೈಮಿಂಗ್ ಮತ್ತು ಸಮನ್ವಯತೆಗಳೊಡನೆ ಏರ್ಪಡುವ ಅಪಾಯಕಾರಿ ಕರಾರುವಾಕ್ ಕಾರ್ಯಕ್ರಮ ಇದು. ಸ್ವಲ್ಪ ಆಯ ತಪ್ಪಿದರೂ ಪ್ರಾಣಾಪಾಯ ಗ್ಯಾರಂಟಿ. ಟ್ರಿಪೀಝುಗಳಲ್ಲಿ ತೂಗುವ ಕಲಾವಿದರು ಅತ್ತ ಕೈಬಿಟ್ಟು ಇತ್ತ ಹಾರುತ್ತಾ ಸರಿಯಾದ ರೀತಿಯಲ್ಲಿ ಸರಿಯಾದ ಕಡೆ ಹಿಡಿದು ನಗೆ ಬೀರುತ್ತಾರೆ. ಕೆಲವೊಂದು ದುರದೃಷ್ಟವಂತರು ಟ್ರಿಪೀಝ್ ಮೇಲಿನಿಂದ ಬಿದ್ದು ಪ್ರಾಣ ಕಳೆದುಕೊಂಡ ಘಟನೆಗಳು ಅಲ್ಲಲ್ಲೇ ಮುಚ್ಚಿ ಹೋಗುತ್ತವೆ.

ಸರ್ಕಸ್‌ನ್ನು ರಿಂಗ್‌ಗಳ (ವೃತ್ತ) ಆಧಾರದ ಮೇಲೆ ವಿಂಗಡಿಸಲಾಗುತ್ತದೆ. ಎರಡು ರಿಂಗ್, ಮೂರು ರಿಂಗ್ ಇತ್ಯಾದಿ. ಮಾಸ್ಕೋ ಸ್ಟೇಟ್ ಸರ್ಕಸ್ ಗರಿಷ್ಟ ಆರು ರಿಂಗ್‌ಗಳನ್ನು ಹೊಂದಿತ್ತು. ಸರದಿಯ ಮೇಲೆ ಒಂದೊಂದು ರಿಂಗ್‌ಗಳ ಒಳಗೆ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಆ ರಿಂಗ್‌ನ ಕಾರ್ಯಕ್ರಮ ಮುಗಿದ ನಂತರ ಮತ್ತೊಂದು ರಿಂಗ್. ರಿಂಗ್ ಒಳಗೆ ಪ್ರವೇಶಿಸಿದ ರಿಂಗ್ ಮಾಸ್ಟರ್

ಸರ್ಕಸ್ ಕಾರ್ಯಕ್ರಮ ನಡೆಸುತ್ತಾನೆ. ಸರ್ಕಸ್ ಕಾರ್ಯಕ್ರಮಗಳಿಗೆ ಅನುಗುಣವಾಗಿ ಸೂಕ್ತ ಸಂಗೀತವನ್ನು ಒದಗಿಸುವ ಬ್ಯಾಂಡ್ ಇರುತ್ತದೆ. ಕಲಾವಿದರು ಬಂದು ತಮ್ಮ ಕೌಶಲ್ಯ ಪ್ರದರ್ಶಿಸಿ ಹೋಗುತ್ತಿರುತ್ತಾರೆ. ನಡುವಿನ ಕಾಲಾವಕಾಶಗಳಲ್ಲಿ ಬಫೂನ್, ಜೋಕರ್‌ಗಳು ತಾವು ಸಹ ಕ್ಲಿಷ್ಟ ಸಾಧನೆ ತೋರಿಸಲು ಹೋಗಿ ಸೋತು ಓಡುವ ಅಭಿನಯ ಮಾಡಿ ಪ್ರೇಕ್ಷಕರನ್ನು ನಗಿಸುತ್ತಾರೆ. ಪ್ರಾಣಿಗಳು ರಂಗ ಪ್ರವೇಶ ಮಾಡಿದಾಗ ಸುತ್ತಲೂ ಬಲೆ ಅಥವಾ ಜಾಲರಿಯನ್ನು ಹಾಕಲಾಗುತ್ತದೆ. ರಿಂಗ್ ಮಾಸ್ಟರ್ ಆಜ್ಞೆಗೆ ಅನುಗುಣವಾಗಿ ಪ್ರಾಣಿಗಳು ಕೌಶಲ್ಯ ತೋರುತ್ತವೆ. ಸರ್ಕಸ್‌ನ ಮುಖ್ಯ ಜೀವನಾಡಿಯೇ ಪ್ರಾಣಿಗಳು ಮತ್ತು ಅವುಗಳ ಪ್ರದರ್ಶನ. ಅದರಲ್ಲೂ ಆನೆಗಳಿಲ್ಲದೇ ಸರ್ಕಸ್ ಇಲ್ಲವೆಂದೇ ಹೇಳಬೇಕು.

ಸರ್ಕಸ್ ಕೌಶಲ್ಯಗಳು

ಸರ್ಕಸ್ ಕಲಾವಿದರು ಅನೇಕ ರೀತಿಯ ಹೊಸ ಕೌಶಲ್ಯಗಳನ್ನು ನಿರಂತರವಾಗಿ ಕಲಿಯುತ್ತಲೇ ಇರಬೇಕಾಗುತ್ತದೆ. ಅವುಗಳೇ ಕಲಾವಿದರನ್ನು ವೃತ್ತಿಯಲ್ಲಿ ಚಾಲ್ತಿಯಲ್ಲಿಡುತ್ತದೆ. ಅಂತಹ ಕೆಲವು ಕೌಶಲ್ಯಗಳಲ್ಲಿ ನೂರಾರು ವಿಧಾನಗಳಿದ್ದು ಅವುಗಳಲ್ಲಿ ಕೆಲವನ್ನು ನೋಡಿ.

ಸರ್ಕಸ್‌ನಲ್ಲಿ ಪ್ರದರ್ಶಿಸಲಾಗುವ ಕೌಶಲ್ಯಗಳನ್ನು ಹೋವಿ ಬರ್ಗೆಸ್ ವಿಧಾನಗಳಲ್ಲಿ ಸ್ಥೂಲವಾಗಿ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯದಾಗಿ ವಸ್ತುಗಳನ್ನು ಸಮತೋಲನದಲ್ಲಿಟ್ಟು ಎಸೆಯುವ ಚಮತ್ಕಾರ. ಇದರಲ್ಲಿ ಟಾಸ್ ಮಾಡುವ ಚಮತ್ಕಾರ, ಚೆಂಡುಗಳ ಎಸೆತದ ಚಮತ್ಕಾರ, ರಿಂಗ್‌ಗಳ ಚಮತ್ಕಾರ ಮತ್ತು ದೊಣ್ಣೆ ವರಸೆಗಳ ಚಮತ್ಕಾರಗಳಿವೆ. ಭ್ರಾಮಕ ನೋಟಗಳನ್ನು ಉಂಟು ಮಾಡುವ ತಟ್ಟೆಗಳ ಎಸೆತ ಚಾಕು ಎಸೆಯುವ ಕೌಶಲ್ಯ ಕೂಡಾ ಇಲ್ಲಿದೆ.

ಸಮತೋಲನದ ಸವಾರಿ ಎರಡನೆಯ ಪದ್ಧತಿ. ತಲೆಯ ಮೇಲೆ ಅಥವಾ ಕೈ ಮೇಲೆ ವಸ್ತುಗಳನ್ನಿರಿಸಿಕೊಂಡು ಅವು ಬೀಳದಂತೆ ಓಡುತ್ತಾ ಅಥವಾ ಕುದುರೆ ಸವಾರಿ ಮಾಡುತ್ತಾ ಕೌಶಲ್ಯ ಪ್ರದರ್ಶನ ಮಾಡಲಾಗುತ್ತದೆ. ಸೈಕಲ್ ಮೇಲೆ ಸಮತೋಲನ, ಏಣಿಯ ಮೇಲೆ ಸಮತೋಲನ, ಟ್ರಿಪೀಝ್ ಸಮತೋಲನ, ಹಗ್ಗದ ಮೇಲೆ ನಡಿಗೆಯ ಸಮತೋಲನ ಇತ್ಯಾದಿಗಳು ಈ ವರ್ಗದಲ್ಲಿವೆ.





ಮೂರನೆಯದಾಗಿ ದೇಹವನ್ನು ಅಕ್ಷದ ಮೇಲೆ ತಿರುಗಿಸುತ್ತಾ ಲಾಗ ಹಾಕುವ ಕಷ್ಟಕರ ಕೌಶಲ್ಯವಿದೆ.

ಇವೆಲ್ಲಾ ಕೌಶಲ್ಯಗಳನ್ನು ಹೋವಿ ಬರ್ಗೆಸ್ ನ್ಯೂಟನ್ನನ ಮೂರನೇ ನಿಯಮದ ಆಧಾರದ ಮೇಲೆ ಪ್ರತಿಪಾದಿಸುತ್ತಾನೆ. ಆತನ ಪ್ರಕಾರ ಎಲ್ಲಾ ಕ್ರಿಯೆಗೂ ಪ್ರತಿಯಾದ ಕ್ರಿಯೆಯೊಂದಿದೆ ಎನ್ನುವ ನಿಯಮ ಆಧಾರವಾಗಿದೆ.

ಸರ್ಕಸ್ ಕೌಶಲ್ಯಗಳಲ್ಲಿ ನೂರಾರು ಉಪ ವಿಧಾನಗಳಿವೆ. ಸೈಕಲ್ ಸವಾರಿ, ಬಫೂನ್ ಅಭಿನಯ, ಬಂಗೀ ನೆಗೆತ, ಬೆಂಕಿ ನುಂಗುವ, ಉಗುಳುವ ಸಾಹಸಗಳು, ಗಾಜು ನುಂಗುವುದು, ತಲೆಗೂದಲ ಭಾರದ ಮೇಲೆ ತೂಗಾಡುವುದು, ಪ್ರಾಣಿಗಳೊಂದಿಗೆ ಸಾಹಸ, ಪಕ್ಷಿಗಳಿಂದ ಸಾಹಸ ಮಾಡಿಸುವುದು ಹೀಗೆ ನೂರಾರು ವಿಧಾನಗಳಿವೆ. ಇವನ್ನು ನಿರಂತರವಾಗಿ ಕಲಾವಿದರು ಪ್ರತಿದಿನ ಅಭ್ಯಾಸ ಮಾಡುತ್ತಲೇ ಇರಬೇಕಾದ ಅನಿವಾರ್ಯತೆ ಇದೆ. ಸರ್ಕಸ್ ಕಲಾವಿದರು ಪ್ರತಿದಿನ ಕವಾಯತು ಮಾಡುತ್ತಾ ತಮ್ಮ ನಲವತ್ತನೇ ವಯಸ್ಸಿಗೇ ವೃದ್ಧರಾಗಿಬಿಡುತ್ತಾರೆ.

ಭಾರತೀಯ ಸರ್ಕಸ್ ಇತಿಹಾಸ

ಭಾರತದಲ್ಲಿ ಸರ್ಕಸ್ ಉದ್ಯಮ ಕಣ್ಣುಬಿಟ್ಟದ್ದು ಸುಮಾರು 1880 ರಲ್ಲಿ ಎಂದು ಹೇಳಲಾಗುತ್ತದೆ. ಗ್ರೇಟ್ ಇಂಡಿಯನ್ ಸರ್ಕಸ್ ಎಂಬ ಹೆಸರಿನ ಸರ್ಕಸ್ ಪ್ರಾರಂಭಿಸಿದ್ದು ವಿಷ್ಣು ಪಂಥ್ ಛತ್ರೆ ಎಂಬಾತ. ಈತ ಕುರ್ದುವಾಡಿ ಅರಸರ ಬಳಿ ಕೆಲಸದಲ್ಲಿದ್ದು ಆಗಾಗ ಅರಸರ ಖುಷಿಗಾಗಿ ಕೆಲವಾರು ಕುದುರೆ ಸವಾರಿ ಚಮತ್ಕಾರಗಳನ್ನು ಮಾಡುತ್ತಿದ್ದ. ಇಲ್ಲಿ ಸಿಕ್ಕ ಪ್ರೋತ್ಸಾಹದಿಂದ ಖುಷಿಯಾದ ಛತ್ರೆ ತನ್ನ ಪತ್ನಿಯ ಜೊತೆಗೂಡಿ ಕಂಪನಿಯೊಂದನ್ನು ಪ್ರಾರಂಭಿಸಲು ಬಯಸಿದ್ದ.

ಅದು 1879 ರ ಸಮಯ. ಆಗ ಭಾರತಕ್ಕೆ ಬಂದಿದ್ದ ರಾಯಲ್ ಇಟಾಲಿಯನ್ ಸರ್ಕಸ್ ಮಾಲೀಕ ಗಿಸೆಪ್ಪೆ ಚಿಯಾರಿನಿಯ ಸರ್ಕಸ್ ಭಾರತದ ಮುಂಬೈನಲ್ಲಿ ಕ್ಯಾಂಪ್ ಹಾಕಿತ್ತು. ಪ್ರಾರಂಭದ ಶೋ ನೋಡಲು ಕುರ್ದುವಾಡದ ಅರಸ ಬಾಳಾಸಾಹೇಬ್ ಪಟವರ್ಧನ್, ವಿಷ್ಣುಪಂಥ್ ಮೋರೇಶ್ವರ್ ಛತ್ರೆ, ನಾರಾಯಣರಾವ್ ಮುಂತಾದವರು ಹಾಜರಿದ್ದರು. ಗಿಸೆಪ್ಪೆ ತನ್ನ ಪ್ರದರ್ಶನ ಆರಂಭಿಸಿದ– 'ಮಹನೀಯರೆ ಮತ್ತು ಮಹಿಳೆಯರೆ, ನಾನು ಗಿಸೆಪ್ಪೆ ಚಿಯಾರಿನಿ ಇಟಲಿಯಿಂದ ಬಂದಿದ್ದೇನೆ. ಮೊದಲಿಗೆ ನನ್ನ ಅರಸ ವಿಕ್ಟರ್

ಇಮ್ಯಾನ್ಯುಯಲ್‌ರವರಿಗೆ ಮತ್ತು ಮುಂಬೈನಲ್ಲಿ ಪ್ರದರ್ಶನ ನೀಡಲು ಅನುಮತಿಸಿದ ಬ್ರಿಟೀಷ್ ಸರ್ಕಾರಕ್ಕೆ ವಂದಿಸುತ್ತೇನೆ. ಭಾರತದ ಜನ ಈವರೆಗೆ ಸರ್ಕಸ್ ನೋಡಿಯೇ ಇಲ್ಲ ಎಂದು ನನಗೆ ಗೊತ್ತು. ಅದಕ್ಕಾಗಿಯೇ ನಿಮ್ಮ ಮುಂದೆ ಕುದುರೆಗಳ ಸಾಹಸದ ಅದ್ಭುತ ಪ್ರದರ್ಶನ ನೀಡಲು ಬಂದಿದ್ದೇನೆ. ಈ ಸಮಯದಲ್ಲಿ ಇಲ್ಲಿ ನೆರೆದವರಲ್ಲಿ ಒಂದು ಸವಾಲು ಯಾರೇ ಆಗಲಿ ನಾನು ಪ್ರದರ್ಶಿಸುವ ಸಾಹಸಗಳನ್ನು ತಾವೂ ತೋರಿಸಿದರೆ ಅವರಿಗೆ ಒಂದು ಸಾವಿರ ರುಪಾಯಿಗಳನ್ನು ಇನಾಮಾಗಿ ನೀಡುತ್ತೇನೆ. ಅದಕ್ಕೆ ಸಿದ್ಧವಾಗಲು ಆರು ತಿಂಗಳ ಸಮಯ ನೀಡುತ್ತೇನೆ. ಯಾರಾದರೂ ಧೈರ್ಯವಂತರು ಇದ್ದರೆ ಮುಂದೆ ಬನ್ನಿ.'

ಜನಸಾಗರ ನಿಶ್ಯಬ್ದವಾಗಿತ್ತು. ಗಿಸೆಪ್ಪೆ ತನ್ನ ಕುದುರೆ ಏರಿ ಎರಡು ಸುತ್ತು ಬಂದ. ಅರಸ ಬಾಳಾಸಾಹೇಬ್ ಪಟವರ್ಧನ್ ನಾರಾಯಣರಾವ್ ಕಿವಿಯಲ್ಲಿ ಪಿಸುಗುಟ್ಟಿದರು, ' ನಮ್ಮ ಛತ್ರೆ ಈ ಸವಾಲು ಸ್ವೀಕರಿಸಲಾರನೇ ?'

'ಮೊದಲು ಪ್ರದರ್ಶನ ನೋಡೋಣ ಮಹಾಸ್ವಾಮಿ ನಂತರ ಪ್ರತಿಕ್ರಿಯಿಸೋಣ ' ಅಂದ ಛತ್ರೆ. ಕುದುರೆಗಳು ಮುಂಗಾಲೆತ್ತಿ ನಿಲ್ಲುವ ಮತ್ತು ಸವಾರಿಯ ಕೆಲವು ಝಲಕ್‌ಗಳನ್ನು ಗಿಸೆಪ್ಪೆ ತೋರಿಸಿದ ಅಷ್ಟೇ. ಗಿಸೆಪ್ಪೆಯ ಬೊಗಳೆಯನ್ನು ಎದುರಿಸಲು ಸಿದ್ದನಾದ ಛತ್ರೆ ಎದ್ದು ನಿಂತ–

'ಸನ್ಮಾನ್ಯ ಗಿಸೆಪ್ಪೆಯವರೇ ನಾನು ವಿಷ್ಣುಪಂಥ್ ಮೋರೇಶ್ವರ ಛತ್ರೆ ಅಂತ. ಕುರ್ದುವಾಡ ರಾಜ್ಯದ ಕುದುರೆ ತರಪೇತುದಾರ. ತಮ್ಮ ಕಾರ್ಯಕ್ರಮದ ಮುನ್ನ ತಾವು ಅಭಿಮಾನದಿಂದ ಭಾರತೀಯರನ್ನು ಹೊಗಳಿದ್ದರಿಂದ ನಾನು ತಮಗೆ ಆಭಾರಿ. ತಾವು ಭಾರತೀಯರಿಗೆ ಹಾಕಿದ ಸವಾಲನ್ನು ನಾನು ಸ್ವೀಕರಿಸಿದ್ದೇನೆ. ತಾವು ಕೊಡಬಯಸಿದ ಆರು ತಿಂಗಳು ಸಮಯ ಬೇಡ ಕೇವಲ ಮೂರು ತಿಂಗಳು ಮಾತ್ರಾ ಸಾಕು. ಈ ಸವಾಲಲ್ಲಿ ನಾನು ಸೋತರೆ ತಮಗೆ ಹತ್ತು ಸಾವಿರ ಭಾರತೀಯ ರುಪಾಯಿಗಳನ್ನು ನೀಡುತ್ತೇನೆ . ಈ ಒಪ್ಪಂದಕ್ಕೆ ನಮ್ಮ ಮಹಾರಾಜರೇ ಸಾಕ್ಷಿ ಮತ್ತು ಇದೇ ಸಮಯದಲ್ಲಿ ತಾವು ಹೇಳಿದಿರಿ ಭಾರತೀಯರು ಸರ್ಕಸ್ ಕಟ್ಟಲು ವರ್ಷಗಟ್ಟಲೆ ಬೇಕು ಎಂದು, ಇದು ನನ್ನ ಪ್ರತಿಜ್ಞೆ. ಇನ್ನೊಂದು ವರ್ಷದಲ್ಲಿ ನಿಮ್ಮ ಸರ್ಕಸ್‌ಗಿಂತಾ ಉತ್ತಮ ತಂಡವನ್ನು ನಾನು ಕಟ್ಟುತ್ತೇನೆ.' ಛತ್ರೆಯ ಮಾತು ಕೇಳಿ ಇಡೀ ಸಭಾಂಗಣ ಸ್ಥಬ್ದವಾಯಿತು. ಗಿಸೆಪ್ಪೆ ಈ ಕರಿಯರ ಕೊಬ್ಬಿಗೇನೂ ಕಮ್ಮಿಯಿಲ್ಲ ಎಂದು ಗೊಣಗಿಕೊಂಡ.

ಅನೇಕ ಕಲಾವಿದರನ್ನು ಒಟ್ಟುಗೂಡಿಸಿಕೊಂಡು ಪ್ರಾರಂಭಿಸಿದ ಗ್ರೇಟ್ ಇಂಡಿಯನ್ ಸರ್ಕಸ್ ದೇಶದಲ್ಲಿಡೀ ಯಶಸ್ವಿ ಪ್ರದರ್ಶನಗಳನ್ನು ನೀಡಿತು. ಈ ಗೆಲುವಿನಿಂದ ಉಬ್ಬಿದ ಛತ್ರೆ ಅಮೇರಿಕಾ ದೇಶದಲ್ಲಿ ತನ್ನ ಸರ್ಕಸ್ ಪ್ರದರ್ಶನ ಆರಂಭಿಸಿದ. ಅದೇಕೋ ಅಮೇರಿಕಾ ಈತನ ಸರ್ಕಸ್ಸನ್ನು ಖುಷಿಯಿಂದ ಸ್ವಾಗತಿಸಲಿಲ್ಲ.

ಬೇಸರದಿಂದ ಭಾರತಕ್ಕೆ ವಾಪಸಾದ ಛತ್ರೆ ಕೀಲೇರಿ ಕುನ್ನಿಕಣ್ಣನ್ ಎಂಬಾತನನ್ನು ಸಂಪರ್ಕಿಸಿ ತನ್ನ ಕಲಾವಿದರಿಗೆ ತರಬೇತು ನೀಡಲು ಕೋರಿಕೊಂಡ. ಛತ್ರೆಯ ಕೋರಿಕೆಗೆ ಒಪ್ಪಿದ ಕುನ್ನಿಕಣ್ಣನ್ ಕೇರಳದ ಕೊಲ್ಲಂ ಬಳಿ ಆಕ್ರೋಬ್ಯಾಟ್ ತರಬೇತಿ ಶಾಲೆಯನ್ನೇ ಪ್ರಾರಂಭಿಸಿದ. ಹಾಗಾಗಿ ಈತನನ್ನು ಭಾರತೀಯ ಸರ್ಕಸ್ ಪಿತಾಮಹ ಎಂದು ಗುರುತಿಸಲಾಗುತ್ತದೆ. ಈತನ ಶಾಲೆಯಲ್ಲಿ ತರಬೇತಾದ ವಿದ್ಯಾರ್ಥಿಗಳು ಸಾಕಷ್ಟು ಖ್ಯಾತಿಗಳಿಸಿದರು ಮತ್ತು ಮುಂದೆ ತಮ್ಮದೇ ಆದ ಸರ್ಕಸ್ ಕಂಪನಿಗಳನ್ನೂ ಪ್ರಾರಂಭಿಸಿದರು. ಕುನ್ನಿಕಣ್ಣನ್ ಮರಣದ ನಂತರ ಆತನ ಶಿಷ್ಯ ಎಂ.ಕೆ.ರಾಮನ್ ಶಾಲೆಯ ನಿರ್ವಹಣೆ ಕೈಗೆ ತೆಗೆದುಕೊಂಡರು. ಸರ್ಕಸ್ ಕ್ಷೇತ್ರದಲ್ಲಿ ಕುನ್ನಿಕಣ್ಣನ್ ಕೊಡುಗೆಯನ್ನು ಪರಿಗಣಿಸಿದ ಕೇಂದ್ರ ಸರ್ಕಾರ 2008 ರಲ್ಲಿ ಆತನ ಸ್ಮರಣಾರ್ಥ ಸರ್ಕಸ್ ಅಕಾಡೆಮಿಯನ್ನು ಪ್ರಾರಂಭಿಸಿದೆ.

ನಂತರ ಪ್ರಾರಂಭವಾದ ಕೆ. ದಾಮೋದರನ್‌ರವರ ಕಮಲಾ ತ್ರೀ ರಿಂಗ್ ಸರ್ಕಸ್ ಸಾಕಷ್ಟು ಖ್ಯಾತಿ ಗಳಿಸಿತು. ಜೊತೆಗೆ ವೈಟ್‌ವೇ ಸರ್ಕಸ್, ಗ್ರೇಟ್ ರೇಮನ್ ಸರ್ಕಸ್, ಫೇರಿ ಸರ್ಕಸ್, ಈಸ್ಟ್ರನ್ ಸರ್ಕಸ್, ಓರಿಯಂಟಲ್ ಸರ್ಕಸ್, ಗ್ರೇಟ್ ಬಾಂಬೇ ಸರ್ಕಸ್ ಮತ್ತು ಜೆಮಿನಿ ಸರ್ಕಸ್ ಖ್ಯಾತಿ ಪಡೆದವು. ಇವುಗಳೊಂದಿಗೆ ಪರಶುರಾಂ ಲಯನ್ ಸರ್ಕಸ್, ಕಾರ್ಲೆಕರ್ ಗ್ರಾಂಡ್ ಸರ್ಕಸ್, ಶೆಲ್ಲರ್ ಗ್ರೇಟ್ ರಾಯಲ್ ಮುಂತಾದುವುಗಳು ಕೂಡಾ ಪುರಾತನ ಕಂಪನಿಗಳು.

ಪ್ರಸ್ತುತ ಭಾರತದಲ್ಲಿ 23 ಸರ್ಕಸ್ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ ಎಂಬ ಅಂದಾಜಿದೆ. ಇವೆಲ್ಲವೂ ಸೇರಿ ತಮ್ಮ ಸಮಸ್ಯೆಗಳ ಪರಿಹಾರಕ್ಕೆ ತಮ್ಮದೇ ಆದ ಒಂದು ಫೆಡರೇಶನ್ ಕಟ್ಟಿಕೊಂಡಿವೆ.

ಕಳೆದುಹೋಗುತ್ತಿರುವ ಕಲೆ

ಸರ್ಕಸ್ ಉದ್ಯಮ ಈಗ ಕೊನೆಯುಸಿರು ಎಳೆಯುವ ಹಂತದಲ್ಲಿದೆ. ಒಂದೊಂದಾಗಿ ಸರ್ಕಸ್ ಕಂಪನಿಗಳು ಪ್ರದರ್ಶನ ನಿಲ್ಲಿಸುತ್ತಿವೆ. ಇದಕ್ಕೆ ಕಾರಣಗಳು

ಅನೇಕ. ರಾಂಬೋ ಸರ್ಕಸ್ ಕಂಪನಿಯ ಮಾಲೀಕ ಸುಜಿತ್ ದಿಲೀಪ್ ತನ್ನ ಸರ್ಕಸ್‌ನ ಕೊನೆಯ ಪ್ರದರ್ಶನದ ನಂತರ 'ಶುಭಾಶಯಗಳು ನನ್ನ ಮುದ್ದು ಪ್ರಾಣಿಗಳೇ ...' ಅಂದ. ಆತನ ಕಣ್ಣಲ್ಲಿ ನೀರು ತುಂಬಿತ್ತು. ಆತನ ಬಳಿ ಇದ್ದ ಆನೆಗಳು, ಸಿಂಹಗಳು, ಕರಡಿಗಳು ಮತ್ತು ಅನೇಕ ಕಲಾವಿದರು ಮಾತು ಹೊರಡದೆ ನಿಂತಿದ್ದರು. ಅವರ ಸರ್ಕಸ್‌ನಲ್ಲಿದ್ದ ಪ್ರಾಣಿಗಳನ್ನು ಸರ್ಕಾರ ಕೋರ್ಟ್ ಆದೇಶದ ಮೇರೆಗೆ ವಶಪಡಿಸಿಕೊಂಡು ಝೂನಲ್ಲಿ ಬಿಡಲು ಮುಂದಾಗಿತ್ತು. ಜಗತ್ತು ಪ್ರಾಣಿಗಳ ಬಗ್ಗೆ ಅದೇಕೆ ಹೆಚ್ಚು ದಯೆ ತೋರಿಸುತ್ತಿದೆ ಎನ್ನುವುದು ಅವರಿಗೆ ಅರ್ಥವಾಗದ ವಿಷಯವಾಗಿತ್ತು.

ಸೊನ್ನೆಯಿಂದ ಸೊನ್ನೆಗೆ ನಡೆದು ಬಂದಿದ್ದ ಸರ್ಕಸ್ ಉದ್ಯಮದ ಮುಂದಿನ ಹಾದಿ ಮುಚ್ಚಿ ಹೋಗಲಿತ್ತು. ಈ ಹಾದಿಯ ಪಡಿಪಾಟಲುಗಳು ನಡೆದವರಿಗೇ ಗೊತ್ತಿತ್ತು. ಸರ್ಕಸ್ ಪ್ರದರ್ಶನಕ್ಕೆ ಬಂದು ಖುಷಿಪಟ್ಟು ಹೋಗುತ್ತಿದ್ದ ಜನ ಕಲಾವಿದರ ಪರದೆಯ ಹಿಂದಿನ ಬದುಕಿನ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡಲೇ ಇಲ್ಲ. ಸರ್ಕಸ್ ಕಲಾವಿದರ ಬದುಕಿನ ಮತ್ತು ಸರ್ಕಸ್ ಮಾಲೀಕರ ಕಷ್ಟ–ಕೋಟಲೆಗಳನ್ನು ಶಾರುಖ್ ಖಾನ್ ನಾಯಕತ್ವದಲ್ಲಿ ಕಿರುತೆರೆ ಸೀರಿಯಲ್ ಸರ್ಕಸ್ ಅದ್ಭುತವಾಗಿ ಮೂಡಿಸಿತ್ತು.

ಬಾಲ ಕಾರ್ಮಿಕ ಸಮಸ್ಯೆ

ಸರ್ಕಸ್ ಕಂಪನಿಗಳ ಕಲಾವಿದರಲ್ಲಿ ಕೇರಳೀಯರು ಹೆಚ್ಚು ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇತೀಚೆಗೆ ಸರ್ಕಸ್ ಕಂಪನಿಗಳಿಗೆ ತಮ್ಮ ಮಕ್ಕಳನ್ನು ಸೇರಿಸಲು ತಂದೆ–ತಾಯಿಗಳು ಹಿಂಜರಿಯುವುದು ಒಂದು ಪ್ರಮುಖ ಹಿನ್ನಡೆ. ತಲಶ್ಯೇರಿ ಮತ್ತು ಕಣ್ಣೂರುಗಳಿಂದ ಯುವತಿಯರು ಹೆಚ್ಚು ಸಂಖ್ಯೆಯಲ್ಲಿ ಬಂದು ಸರ್ಕಸ್ ಸೇರುತ್ತಿರುವುದು ಅಚ್ಚರಿಯ ಬೆಳವಣಿಗೆ. ಈ ಯುವತಿಯರು ಕಂಬಕಲಿ ಎನ್ನುವ ಸಾಂಪ್ರದಾಯಿಕ ಕಲೆಯಲ್ಲಿ ನುರಿತವರಾಗಿದ್ದಾರೆ.

ಸರ್ಕಸ್ ಉದ್ಯಮಕ್ಕೆ ಬಾಲ ಕಾರ್ಮಿಕ ಕಾಯ್ದೆ ದೊಡ್ಡ ಹೊಡೆತ ನೀಡಿತು. ಆಕ್ರೋಬ್ಯಾಟಿಕ್ಸ್ ಮುಂತಾದ ದೈಹಿಕ ಕಸರತ್ತುಗಳನ್ನು ಬಾಲ್ಯದಿಂದ ಕಲಿತಲ್ಲಿ ಮಾತ್ರಾ ಮೈ ಬಾಗುತ್ತದೆ. ಇಲ್ಲವಾದಲ್ಲಿ ದೈಹಿಕ ಊನ ಖಂಡಿತ. ಸರ್ಕಾರ ಮತ್ತು ಎನ್.ಜಿ.ಒಗಳು ಬಾಲಕರು ಮತ್ತು ಬಾಲಕಿಯರನ್ನು ಇಂತಹಾ ದೈಹಿಕ ಕಸರತ್ತುಗಳಿಗೆ ಬಳಸಿಕೊಳ್ಳುವುದು ಕಾನೂನು ಬಾಹಿರ ಎಂಬ ಕಾಯ್ದೆ ಜಾರಿಗೆ

ತಂದು ಸರ್ಕಸ್ ಭವಿಷ್ಯಕ್ಕೆ ಕಲ್ಲು ಹಾಕಿತು. ವನ್ಯ ಜೀವಿಗಳ ಬಳಕೆಯನ್ನು 2013 ರಲ್ಲಿ ಸರ್ಕಾರ ನಿಷೇಧಿಸಿದ ಮೇಲೆ ಸರ್ಕಸ್ ರಂಗು ಉಳಿಯಲಿಲ್ಲ. ಜೊತೆಗೆ ನಗರಗಳಲ್ಲಿ ಸೂಕ್ತ ಸ್ಥಳಗಳ ಆಯ್ಕೆ, ಅನೇಕ ಇಲಾಖೆಗಳ ಅನುಮತಿ, ಪಾರ್ಕಿಂಗ್ ಇತ್ಯಾದಿ ಸಮಸ್ಯೆಗಳು ಸರ್ಕಸ್ ಉದ್ಯಮವನ್ನು ಕಾಡುತ್ತಿವೆ. ಅನೇಕ ಸರ್ಕಸ್‌ಗಳು ನಷ್ಟದಲ್ಲಿ ನಡೆಯುತ್ತಿವೆ. ಆದರೂ ಈ ಒಟ್ಟು ಕುಟುಂಬವನ್ನು ವಿಘಟಿಸಲು ಮನಸ್ಸಿಲ್ಲದೇ ಸರ್ಕಸ್ ಮಾಲೀಕರು ಹೇಗೋ ಬದುಕು ದೂಡುತ್ತಿದ್ದಾರೆ.

ಸರ್ಕಸ್ ಕಲಾವಿದರು ಎಳೆಯ ಪ್ರಾಯದಲ್ಲಿದ್ದಾಗ ಮಾತ್ರಾ ರೋಮಾಂಚಕ ಪ್ರದರ್ಶನ ನೀಡಲು ಸಾಧ್ಯ. ವಯಸ್ಸಾದಂತೆ ಕಂಪನಿಗೆ ಹೊರೆಯಾಗ ಲಾರಂಭಿಸುತ್ತಾರೆ. ಅನಿವಾರ್ಯವಾಗಿ ಹೊರಹೋಗಬೇಕಾದಾಗ ಅಂತಹಾ ಕಲಾವಿದರ ಕೈಯ್ಯಲ್ಲಿ ಬಿಡಿಗಾಸು ಸಹಾ ಇರದ ಸಂದರ್ಭಗಳಿವೆ. ಪ್ರದರ್ಶನದ ಸಮಯದಲ್ಲಿ ಅಪಘಾತವಾದಾಗ ಇವರ ರಕ್ಷಣೆಗೆ ಯಾವ ವಿಮಾ ಕಂಪನಿಯಾಗಲಿ ಅಥವಾ ಸರ್ಕಾರವಾಗಲೀ ಬರುವುದಿಲ್ಲ. ಏಕೆಂದರೆ ಸರ್ಕಸ್ಸನ್ನು ಸರ್ಕಾರ ಉದ್ಯಮ ಎಂದು ಮಾನ್ಯ ಮಾಡಿಲ್ಲ. ಸರ್ಕಸ್ ಮಾಲೀಕರು ತಮ್ಮ ವೃದ್ಧ ಕಲಾವಿದರನ್ನು ಹೊರ ಕಳಿಸದೇ ಇತರೆ ಕೆಲಸಗಳಲ್ಲಿ ತೊಡಗಿಸಿಕೊಂಡಿರುವುದೂ ಉಂಟು. ಪ್ರತಿ ಸರ್ಕಸ್‌ನಲ್ಲು ಇಂತಹಾ ಸುಮಾರು 100–200 ಕಲಾವಿದರ ಗುಂಪು ಮತ್ತು 50 ಸಹಾಯಕರಿರುತ್ತಾರೆ. ಇಲ್ಲಿನ ಬಹುತೇಕ ಕಲಾವಿದೆಯರು ಮತ್ತು ಕಲಾವಿದರು ಪರಸ್ಪರ ವಿವಾಹವಾಗಿ ಇಲ್ಲಿಯೇ ತಮ್ಮ ಜೀವನ ಮುಂದುವರೆಸುತ್ತಾರೆ.

ಮಕ್ಕಳು ಸರ್ಕಸ್ ಸೇರಿದರೆ ಅವರೊಂದಿಗೆ ಅವರ ತಂದೇ ತಾಯಿಗಳು ಕೂಡಾ ಇರುತ್ತಾರೆ. ಇಡೀ ಸರ್ಕಸ್ ಒಂದು ಕುಟುಂಬದ ರೀತಿ ಕಾರ್ಯ ನಿರ್ವಹಿಸುತ್ತದೆ. ಹಾಗಾಗಿ ಇಲ್ಲಿ ಶೋಷಣೆಯ ಪ್ರಶ್ನೆ ಬರುವುದಿಲ್ಲ ಎನ್ನುತ್ತಾರೆ ದಿಲೀಪ್. ಅವರ ಸರ್ಕಸ್‌ನಿಂದ 14 ಸಿಂಹಗಳನ್ನು ಮತ್ತು ಆನೆಗಳನ್ನು ಕೊಂಡೊಯ್ದು ತಿರುಪತಿಯ ಝೂನಲ್ಲಿ ಬಿಡಲಾಯ್ತು. ಕೆಲವು ತಿಂಗಳ ನಂತರ ದಿಲೀಪ್ ಅಲ್ಲಿಗೆ ಹೋಗಿ ನೋಡಿದಾಗ ಎಲ್ಲಾ ಪ್ರಾಣಿಗಳು ಸತ್ತಿದ್ದವು. ದಿಲೀಪ್ ಅನ್ನುತ್ತಾರೆ 'ನಾವು ಪ್ರಾಣಿಗಳನ್ನು ನಮ್ಮ ಮಕ್ಕಳ ಹಾಗೆ ನೋಡಿಕೊಳ್ಳುತ್ತೇವೆ. ಸರ್ಕಸ್ ಪರಿಸರಕ್ಕೆ ಹೊಂದಿಕೊಂಡಿರುವ ಪ್ರಾಣಿಗಳು ಝೂಗಳಲ್ಲಿ ಬದುಕುವುದಿಲ್ಲ ಎನ್ನುತ್ತಾರೆ.

ಪ್ರಾಣಿದಯಾ ಸಂಘಗಳ ಕಾರ್ಯಕರ್ತರು ವನ್ಯಜೀವಿಗಳು ಸಹಜ ಪರಿಸರದಲ್ಲಿ ಬದುಕಿದ ಹಾಗೆ ಬೇರೆಲ್ಲೂ ಬದುಕಲು ಸಾಧ್ಯವಿಲ್ಲ, ಸರ್ಕಸ್‌ನಿಂದ ಕೊಂಡೊಯ್ದು ಕಾಡಿನಲ್ಲಿ ಬಿಡಲಾಗುವುದಿಲ್ಲ. ಏಕೆಂದರೆ ಅವು ಬೇಟೆಯಾಡಿ ಬದುಕುವ ವಿಧಾನವನ್ನೇ ಅರಿತಿರುವುದಿಲ್ಲ ಎನ್ನುತ್ತಾರೆ. ಇತ್ತೀಚೆಗೆ ನ್ಯಾಶನಲ್ ಜಿಯೋಗ್ರಾಫ಼ಿಕ್ ಸಂಸ್ಥೆಯ ನೆರವಿನಿಂದ ಪೆರು ಮತ್ತು ಕೊಲಂಬಿಯಾದ ಸರ್ಕಸ್‌ಗಳಿಂದ ರಕ್ಷಿಸಿದ 33 ಸಿಂಹಗಳನ್ನು ವಿಮಾನದಲ್ಲಿ ತಂದು ದಕ್ಷಿಣ ಆಫ್ರಿಕಾದ ವನ್ಯಜೀವಿಧಾಮದಲ್ಲಿ ಬಿಡಲಾಯ್ತು. ಈ ಸಿಂಹಗಳ ಪಂಜಾಗಳು ಮತ್ತು ಹಲ್ಲುಗಳನ್ನು ತೆಗೆದು ಹಾಕಲಾಗಿತ್ತು. ಅವುಗಳು ಬೇಟೆಯಾಡುವ ಪರಿಸ್ಥಿತಿಯಲ್ಲಿರಲಿಲ್ಲ.

ಪ್ರಾಣಿದಯಾ ಸಂಘಗಳ ಚಳುವಳಿ

ಪ್ರಾಣಿದಯಾ ಸಂಘದ ಸದಸ್ಯರು ಪ್ರಾಣಿಗಳನ್ನು ಹೊಂದಿರುವ ಸರ್ಕಸ್‌ಗಳಿಗೆ ಹೋಗದಂತೆ ಸಾರ್ವಜನಿಕರನ್ನು ಮನವಿ ಮಾಡುತ್ತಿದ್ದಾರೆ. ಅಲ್ಲದೇ ಪತ್ರಿಕೆಗಳಿಗೆ ಇಂತಹಾ ಸರ್ಕಸ್ ಜಾಹಿರಾತುಗಳನ್ನು ಪ್ರಕಟಿಸದಂತೆ ಮನವಿಗಳನ್ನು ಸಲ್ಲಿಸಲು ಮತ್ತು ಸರ್ಕಾರಕ್ಕೆ ಇಂತಹ ಸರ್ಕಸ್‌ಗಳನ್ನು ನಿಷೇಧಿಸುವಂತೆ ಮನವಿಗಳನ್ನು ಸಲ್ಲಿಸುವಂತೆ ಸೂಚಿಸುತ್ತಿದ್ದಾರೆ. ಪ್ರಾಣಿಗಳಿಗೆ ಚಿಂತಿಸುವ ಶಕ್ತಿ ಇಲ್ಲದೇ ಅವು ತಮ್ಮ ಮನಬಂದಂತೆ ವರ್ತಿಸುತ್ತವೆ. ಅವುಗಳ ಪರಿಸರದಿಂದ ವಿಭಿನ್ನವಾದ ಪರಿಸರ ಮತ್ತು ವರ್ತನೆಗೆ ಅವನ್ನು ಒಗ್ಗಿಸುವುದು ಕಷ್ಟ. ಪ್ರಾಣಿಗಳಿಗೆ ಬೆಂಕಿ ಎಂದರೆ ಅತೀವ ಭಯ. ಸರ್ಕಸ್‌ಗಳಲ್ಲಿ ಸಿಂಹಗಳಿಗೆ ಬೆಂಕಿಯ ರಿಂಗ್ ನಡುವೆ ಹಾರುವಂತೆ ಚಾವಟಿ ಹಿಡಿದು ಹೆದರಿಸಲಾಗುತ್ತದೆ.

ಅಮೇರಿಕಾದ ಕೃಷಿ ಸಚಿವಾಲಯ, ನೆದರ್‌ಲ್ಯಾಂಡಿನ ಆಹಾರ ಗುಣಮಟ್ಟ ಸಂಸ್ಥೆ ಮತ್ತು ವೇಗನಿಂಗೆನ್ ವಿಶ್ವವಿದ್ಯಾಲಯಗಳು ಜಂಟೀ ಸರ್ವೇಯೊಂದನ್ನು ಕೈಗೊಂಡು ಸರ್ಕಸ್‌ನಲ್ಲಿ ಪ್ರಾಣಿಗಳ ಸ್ಥಿತಿ–ಗತಿ ಹೇಗಿವೆ ಎಂಬ ಬಗ್ಗೆ ವರದಿಯೊಂದನ್ನು ಪ್ರಕಟಿಸಿದವು. ಅದರ ಪ್ರಕಾರ ಶೇ. 71 ರಷ್ಟೂ ಪ್ರಾಣಿಗಳು ವೈದ್ಯಕೀಯ ಸಮಸ್ಯೆಗಳಿಂದ ನರಳುತ್ತಿವೆ. ಶೇ. 33 ರಷ್ಟು ಹುಲಿ ಮತ್ತು ಸಿಂಹಗಳಿಗೆ ಸರ್ಕಸ್‌ನ ಹೊರ ದಾರಿಯೇ ತಿಳಿದಿರಲಿಲ್ಲ. ಸಿಂಗಗಳು ದಿನದ ಶೇ. 98 ರಷ್ಟು ಸಮಯವನ್ನು ತಮ್ಮ ಬೋನಿನ ಒಳಗಡೆಯೇ ಕಳೆಯುತ್ತಿದ್ದವು. ಬಹುತೇಕ ಹುಲಿಗಳ ಬೋನಿನ ಒಳಗಿನ ಸ್ಥಳ ಸುಮಾರು 5 ಮೀಟರುಗಳಿಗೂ ಕಡಿಮೆ ಇತ್ತು. ಆನೆಗಳು ದಿನದ ಸುಮಾರು 17 ಗಂಟೆಗಳಿಗು ಹೆಚ್ಚುಕಾಲ ಸರಪಳಿಗಳಿಂದ ಬಂಧಿಸಲ್ಪಟ್ಟಿರುತ್ತಿದ್ದವು.

ಆನೆಗಳು ದಿನದ 10 ಗಂಟೆಗಳಿಗೂ ಹೆಚ್ಚುಕಾಲ ಒಂದೇ ರೀತಿಯ ಪ್ರದರ್ಶನಗಳನ್ನು ಯಾಂತ್ರಿಕವಾಗಿ ನೀಡುತ್ತಿದ್ದವು. ಸರ್ಕಸ್ ಹುಲಿಗಳು ಬೆಂಕಿಗೆ ಭಯಪಟ್ಟರೂ ಕೂಡಾ ಬೆಂಕಿಯ ರಿಂಗ್ ಮೂಲಕ ಹಾರುವಂತೆ ಆಜ್ಞಾಪಿಸಲಾಗುತ್ತಿತ್ತು. 1990 ರಿಂದ ಈಚೆಗೆ ಸಿಂಹಗಳು ದಾಳಿ ಮಾಡಿದ ಸುಮಾರು 123 ಪ್ರಕರಣಗಳು ಕಂಡು ಬಂದವು. ಸರ್ಕಸ್ ಪ್ರಾಣಿಗಳನ್ನು ಶಿಸ್ತಿನಿಂದ ಇರುವಂತೆ ಮಾಡಲು ತರಬೇತು ಮಾಡಲಾಗುತ್ತಿತ್ತು. (ಮಾಹಿತಿ: ವಿಕಿಪೀಡಿಯಾ.ಸರ್ಕಸ್)

ಈ ವರದಿಯನ್ನಾಧರಿಸಿ ಸರ್ಕಸ್ ಪ್ರಾಣಿಗಳ ಶೋಷಣೆಯನ್ನು ತಡೆಗಟ್ಟಲು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಯ್ತು. ಡಚ್ ಸರ್ಕಾರ ಸರ್ಕಸ್‌ನಲ್ಲಿ ಪ್ರಾಣಿಗಳ ಬಳಕೆಯನ್ನು ನಿಷೇಧಿಸಿತು. ಅಮೇರಿಕಾ ಕೋರ್ಟ್ ಒಂದಕ್ಕೆ ಸಲ್ಲಿಸಿದ ದಾಖಲೆಯಂತೆ ಪ್ರಾಣಿಗಳನ್ನು ವಿದ್ಯುತ್ ಶಾಕ್ ನೀಡುವ ಸಾಧನಗಳಿಂದ ನಿಯಂತ್ರಿಸಲಾಗುತ್ತಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಫ಼ೆಲ್ಡ್ ಎಂಟರ್‌ಟೈನ್‌ಮೆಂಟ್ ಇಂಕ್ ಸುಮಾರು 2,70,000 ಡಾಲರ್ ದಂಡ ತೆರಬೇಕಾಯ್ತು.

ಸರ್ಕಸ್ ಹೊರೆ

ಸರ್ಕಸ್ ಮಾಲೀಕರು ತಾವೇನು ಇದರಿಂದ ಲಾಭ ಮಾಡುತ್ತಿಲ್ಲ ಎನ್ನುತ್ತಾ ತಮ್ಮ ಆಗಾಧ ಖರ್ಚುಗಳ ಲೆಕ್ಕ ಮುಂದಿಡುತ್ತಾರೆ. ಸರ್ಕಸ್ ಟೆಂಟ್‌ಗಳು ಸುಮಾರು ರೂ.10,00,000–00 ಕ್ಕೂ ಹೆಚ್ಚು ಬೆಲೆ ಬಾಳುತ್ತವೆ. ಇವನ್ನು ಪ್ರತೀ ಮೂರು ವರ್ಷಗಳಿಗೊಮ್ಮೆ ಬದಲಿಸುವ ಅವಶ್ಯಕತೆ ಇದೆ. ಕಲಾವಿದರ ಊಟ–ಉಪಚಾರ ಮತ್ತು ಪ್ರಾಣಿಗಳ ಆಹಾರದ ಖರ್ಚು ಪ್ರತಿ ದಿನ ಕನಿಷ್ಟ ರೂ. 25,000–00 ದಷ್ಟಿರುತ್ತದೆ. ವಿದ್ಯುತ್, ನೀರು, ಪ್ರಚಾರ ಇತ್ಯಾದಿಗಳು ಸೇರಿ ಪ್ರತಿ ದಿನ ರೂ.2,00,000–00 ಖರ್ಚು ಬರುತ್ತದೆ. ಕ್ಯಾಂಪ್ ಬದಲಿಸುವಾಗ ಸಾಗಣೆ ಖರ್ಚು ರೂ. 5,00,000–00 ಕ್ಕೂ ಹೆಚ್ಚು ಎನ್ನುತ್ತಾರೆ ಜೆಮಿನಿ ಸರ್ಕಸ್‌ನ ಅಜಯ್ ಶಂಕರ್.

ಕೇರಳ ಸರ್ಕಾರ ಸರ್ಕಸ್ ಕಲಾವಿದರಿಗೆ ಸ್ವಲ್ಪ ಅನುಕೂಲ ಮಾಡಿದೆ. ಸರ್ಕಸ್‌ಗಳಲ್ಲಿ ಕೆಲಸ ನಿರ್ವಹಿಸುವ ಕಲಾವಿದರನ್ನು ವೈದ್ಯಕೀಯ ವಿಮೆ ಯೋಜನೆಯಲ್ಲಿ ತರಲಾಗಿದೆ. ಅಪಘಾತ ಮತ್ತು ಅನಾರೋಗ್ಯದ ಸಂದರ್ಭಗಳಲ್ಲಿ





ಗರಿಷ್ಠ ರೂ. 1,00,000–00 ಮೊತ್ತದ ಧನ ಸಹಾಯ ಮತ್ತು ರೂ.1000–00 ವೆಚ್ಚಗಳಿಗಾಗಿ ನೀಡುತ್ತಿದೆ. ಕೇರಳದ ಸಂಗೀತ ನಾಟಕ ಅಕಾಡೆಮಿಯ ನಿರ್ಧಾರ ಇದು.

ಭಾರತದ ಖ್ಯಾತ ಸರ್ಕಸ್ ಕಂಪನಿಗಳು

ಭಾರತದಲ್ಲಿ ಹತ್ತಾರು ಸರ್ಕಸ್ ಕಂಪನಿಗಳು ಜನರನ್ನು ನೂರಾರು ವರ್ಷಗಳಿಂದ ರಂಜಿಸಿದ್ದವು. ತಮ್ಮ ಪ್ರೇಕ್ಷಕರನ್ನು ಹೆಚ್ಚಿಸಿಕೊಳ್ಳಲು ರಶ್ಯಾ, ಅಮೇರಿಕಾ, ಫ್ರಾನ್ಸ್, ಇಟಲಿಗಳಿಂದ ಕಲಾವಿದರನ್ನು ಕರೆಸಲಾಗುತ್ತಿತ್ತು. ಈ ಅತಿಥಿ ಕಲಾವಿದರು ಕೆಲವು ತಿಂಗಳು ಇಲ್ಲಿ ನೆಲೆಸಿ ನಂತರ ಸ್ವದೇಶಕ್ಕೆ ವಾಪಸಾಗುತ್ತಿದ್ದರು.

ಗ್ರೇಟ್ ರಾಯಲ್ ಸರ್ಕಸ್

ಸುಮಾರು ನೂರು ವರ್ಷಗಳಿಗೂ ಹಳತಾದ ಗ್ರೇಟ್ ರಾಯಲ್ ಸರ್ಕಸ್ ಮೊದಲು ಮಧುಸ್ಕರ್ ಸರ್ಕಸ್ ಎಂಬ ಹೆಸರನ್ನು ಹೊಂದಿತ್ತು. ಮುಂದೆ ಎನ್.ಆರ್.ವಾಲಾವಾಕರ್ ಎಂಬುವವರ ಕೈಗೆ ಸರ್ಕಸ್ ಬಂದ ಮೇಲೆ ಗ್ರೇಟ್ ರಾಯಲ್ ಸರ್ಕಸ್ ಎಂಬ ಹೆಸರು ಪಡೆಯಿತು. 2002 ರಲ್ಲಿ ಮಾಲೀಕ ಪ್ರತಾಪ್ ವಾಲಾವಾಕರ್ ನಿಧನರಾದ ನಂತರ ಅವರ ಪತ್ನಿ ಸರ್ಕಸ್ ಮುಂದುವರೆಸಲು ತೀರ್ಮಾನಿಸಿದ್ದರು. ಆದರೆ ಸರ್ಕಸ್ ಕಂಪನಿಯ ವಿರುದ್ಧ ಪ್ರಾಣಿದಯಾ ಸಂಘಗಳು ಸಲ್ಲಿಸಿದ ದೂರಿನ ಮೇರೆಗೆ ಸರ್ಕಸ್ ಅನುಮತಿಯನ್ನು ರದ್ದು ಮಾಡಲಾಯ್ತು.

ಗ್ರೇಟ್ ರೇಮನ್ ಸರ್ಕಸ್

ಇದು ಭಾರತದ ಹಳೆಯ ಸರ್ಕಸ್ ಕಂಪನಿ. ಕಲ್ಲನ್ ಗೋಪಾಲನ್ ಎಂಬುವವರು 1920 ರಲ್ಲಿ ಈ ಸಂಸ್ಥೆಯನ್ನು ಕಟ್ಟೀದರು. ಇವರು ಮೂಲತಃ ಕೀಲೇರಿ ಕುನ್ಹಿಕಣ್ಣನ್ ಶಿಷ್ಯ. ಮುಂದೆ ಗೋಪಾಲನ್ ಕಟ್ಟಿದ ಅಮರ್ ಸರ್ಕಸ್ ಇಂದಿಗೂ ಕೆ.ಪಿ. ಹೇಮರಾಜ್ ಮಾಲೀಕತ್ವದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಗ್ರೇಟ್ ಬಾಂಬೇ ಸರ್ಕಸ್

ಕೀಲೇರಿ ಕುನ್ಹಿಕಣ್ಣನ್ ಸೋದರಳಿಯ ಬಾಬುರಾವ್ ಕದಂ 1920 ರಲ್ಲಿ ಸ್ಥಾಪಿಸಿದ ಸರ್ಕಸ್ ಆಗ ಪಂಜಾಬ್ ಮತ್ತು ಸಿಂಧ್ ಪ್ರಾಂತ್ಯಗಳಲ್ಲಿ ಖ್ಯಾತವಾಗಿತ್ತು. ಮುಂದೆ ವೈಟ್‌ವೇ ಸರ್ಕಸ್ ಮತ್ತು ಗ್ರೇಟ್ ಲಯನ್ ಸರ್ಕಸ್‌ಗಳು ಗ್ರೇಟ್ ಬಾಂಬೇ ಸರ್ಕಸ್‌ನಲ್ಲಿ ವಿಲೀನವಾದವು. ಈಗ ಗ್ರೇಟ್ ಬಾಂಬೇ ಸರ್ಕಸ್

ಸುಮಾರು 300 ಕಲಾವಿದರು ಮತ್ತು 60 ಪ್ರಾಣಿಗಳನ್ನು ಹೊಂದಿದೆ. ಇತ್ತೀಚೆಗೆ ಗ್ರೇಟ್ ಬಾಂಬೇ ಸರ್ಕಸ್ ಶ್ರೀಲಂಕಾ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಪ್ರದರ್ಶನ ನೀಡಿತ್ತು.

ಜೆಮಿನಿ ಸರ್ಕಸ್

ಗುಜರಾತ್ ರಾಜ್ಯದ ಬಿಲ್ಲಿಮೋರಿಯ ಎಂಬಲ್ಲಿ ಪ್ರಾರಂಭವಾದ ಜೆಮಿನಿ ಸರ್ಕಸ್ ಮಾಲೀಕ ಮೂರ್ಕೂತ್ ವೆಂಗಕಂಡಿ ಶಂಕರನ್. ಕೇರಳ ಮೂಲದ ಇವರು ರಾಮನ್ ಸರ್ಕಸ್ ಶಾಲೆಯಲ್ಲಿ ಜಿಮ್ನಾಸ್ಟಿಕ್ಸ್ ಮತ್ತು ಬಾರ್ ಪ್ರದರ್ಶನದಲ್ಲಿ ತರಪೇತು ಪಡೆದು ಸ್ವಲ್ಪ ಕಾಲ ಕಲ್ಲನ್ ಗೋಪಾಲನ್ ಸರ್ಕಸ್ ಕಂಪನಿಯಲ್ಲಿ ಕಾರ್ಯ ನಿರ್ವಹಿಸಿದರು. ನಂತರ 1951 ರಲ್ಲಿ ಅಂತರ ರಾಷ್ಟ್ರೀಯ ಸರ್ಕಸ್ ಹಬ್ಬದಲ್ಲಿ ಪಾಲ್ಗೊಂಡು ಮಾಸ್ಕೋ, ಸೋಚಿ ಮತ್ತು ಯಲ್ತಾ ಮುಂತಾದೆಡೆಗಳಲ್ಲಿ ಪ್ರದರ್ಶನ ನೀಡಿದರು. ಜೊತೆಗೆ ಶಂಕರನ್ ಅಪೋಲೋ ಸರ್ಕಸ್, ವಾಹಿನಿ ಸರ್ಕಸ್ ಮತ್ತು ಜಂಬೋ ಸರ್ಕಸ್ ಕಂಪನಿಗಳಲ್ಲಿ ಪಾಲುದಾರರಾಗಿದ್ದರು. ಜೆಮಿನಿ ಸರ್ಕಸ್ ಸಿನೆಮಾ ರಂಗದೊಂದಿಗೂ ನಂಟು ಬೆಳೆಸಿಕೊಂಡಿದ್ದು ರಾಜಕಪೂರ್ ನಟಿಸಿದ ಮೇರಾ ನಾಮ್ ಜೋಕರ್, ಕಮಲ ಹಾಸನ್ ನಟಿಸಿದ ಅಪೂರ್ವ ಸಹೋದರರ್‌ಗಳ್ ಮತ್ತು ಮಿಥುನ್ ಚಕ್ರವರ್ತಿಯ ಶಿಕಾರಿ ಚಿತ್ರಗಳಲ್ಲಿ ಜೆಮಿನಿ ಸರ್ಕಸ್ ಪ್ರದರ್ಶನ ಕಾಣಬಹುದು.

ರಾಜಕಮಲ್ ಸರ್ಕಸ್

ಗೋಪಾಲನ್ ಮುಲ್ಲೋಲಿ ಎಂಬುವವರು 1958 ರಲ್ಲಿ ತನ್ನ ಪುತ್ರ ರಾಜ್ ಮತ್ತು ಪತ್ನಿ ಕಮಲಾ ಹೆಸರಿನಲ್ಲಿ ಪ್ರಾರಂಭಿಸಿದ ರಾಜಕಮಲ್ ಸರ್ಕಸ್ ಬಲು ಬೇಗ ಖ್ಯಾತಿಗಳಿಸಿತು. ಭಾರತದಾದ್ಯಂತ ಮಾತ್ರವಲ್ಲದೇ ವಿಶ್ವದ ನಾನಾ ಕಡೆ ಪ್ರದರ್ಶನ ನೀಡಿ ಇಂದಿಗೂ ಯಶಸ್ವಿ ಸರ್ಕಸ್ ಕಂಪನಿ ಎನ್ನಿಸಿಕೊಂಡಿದೆ.

ರಶ್ಯನ್ ಸರ್ಕಸ್

ರಶ್ಯಾ ದೇಶ ತನ್ನ ಬ್ಯಾಲೆ ನೃತ್ಯಕ್ಕೆ ಹೆಸರಾದಂತೆ ಸರ್ಕಸ್ ಪ್ರದರ್ಶನಗಳಿಗೂ ಹೆಸರಾಗಿದೆ. ಸರ್ಕಸ್‌ನ್ನೂ ಕೂಡಾ ಒಂದು ಕಲೆ ಎಂದು ಪರಿಭಾವಿಸಿಕೊಂಡು ಪ್ರಸ್ತುತ ಪಡಿಸುತ್ತಿರುವ ರಶ್ಯನ್ ಕಲಾವಿದರು ನಿಜಕ್ಕೂ ಅಭಿನಂದನಾರ್ಹರು.

1927 ರಲ್ಲಿ ಸರ್ಕಸ್ ಶಾಲೆಗಳು ಪ್ರಾರಂಭವಾಗಿ ಸರ್ಕಸ್ ಒಂದು ಕಲಾ ಮಾಧ್ಯಮವಾಗಿ ಜನರ ಮುಂದೆ ಬಂದಿತ್ತು. 1960 ರ ದಶಕದ ವೇಳೆಗಾಗಲೇ ಸುಮಾರು 50 ಕ್ಕೂ ಹೆಚ್ಚು ಸರ್ಕಸ್ ಪ್ರದರ್ಶನ ಕಂಪನಿಗಳು ರಶ್ಯಾದಲ್ಲಿ ಕಾರ್ಯ

ನಿರ್ವಹಿಸುತ್ತಿದ್ದವು. ಸರ್ಕಸ್ ನಿಕುಲಿನ್ ಮತ್ತು ಬೋಲ್ಶೋಯ್ ಸರ್ಕಸ್ ಅಂದಿನ ಖ್ಯಾತ ಸರ್ಕಸ್ ಕಂಪನಿಗಳು. ರಶ್ಯನ್ ಸರ್ಕಾರ ತನ್ನ ನಿಯಮದಂತೆ ಎಲ್ಲಾ ಸರ್ಕಸ್ ಕಂಪನಿಗಳನ್ನೂ ರಾಷ್ಟ್ರೀಕೃತಗೊಳಿಸಿತು. ಕಲಾವಿದರು ನೌಕರರ ಹಾಗೆ ದುಡಿಯಬೇಕಿತ್ತು. ಉತ್ತಮ ಸರ್ಕಸ್ ಕಲಾವಿದನಿಗೆ ಪೀಪಲ್ಸ್ ಆರ್ಟಿಸ್ಟ್ ಆಫ್ ದಿ ಯು.ಎಸ್.ಎಸ್.ಆರ್ ಎಂಬ ಪ್ರಶಸ್ತಿ ನೀಡಲಾಗುತ್ತಿತ್ತು.

ರಶ್ಯಾದ ಮೊದಲ ಸರ್ಕಸ್ ಸ್ಥಾಪನೆ ಮಾಡಿದ್ದು ಜಾಕ್ವೆಸ್ ಟೋರ್ನಿಯರೆ ಎಂಬಾತ ಸೈಂಟ್ ಪೀಟರ್ಸ್‌ಬರ್ಗ್ ನಗರದಲ್ಲಿ (1827) ಸರ್ಕ್ಯೂ ಒಲಂಪಿಕ್ ಎಂಬ ಕಂಪನಿ ಪ್ರಾರಂಭಿಸಿದ್ದ. ನಂತರ ಝಗೋಸ್ಕಿನ್ (ಸಮ್ಮರ್ ಸರ್ಕಸ್), ಲಾರ ಬಸ್ಸಿನ್, ಕಾರ್ಲ್ ಮ್ಯಾಗ್ನಸ್ ಹಿನ್ನೆ, ಸ್ವೆಟ್ನೋಯ್ ಬೂಲೆವಾರ್ಡ್, ನಿಕಿತಿನ್ ಸೋದರರು ರಶ್ಯನ್ ಸರ್ಕಸ್ ಆದ್ವರ್ಯುಗಳು.

ದಾಮುಧೋತ್ರೆ

ಭಾರತೀಯ ಸರ್ಕಸ್ ಉದ್ಯಮ ದಾಮೋದರ ಗಂಗಾರಾಮ್ ಧೋತ್ರೆ ಆಲಿಯಾಸ್ ದಾಮು ಧೋತ್ರೆಯ ಹೆಸರನ್ನು ಮರೆಯುವಂತಿಲ್ಲ. ದಾಮೂ ಎಂದೇ ಖ್ಯಾತನಾಗಿದ್ದ ಈತ 1902 ರಲ್ಲಿ ಬಡಕುಟುಂಬವೊಂದರಲ್ಲಿ ಜನಿಸಿ ಮುಂದೆ ಅನೇಕ ಖ್ಯಾತ ಸರ್ಕಸ್ ಕಂಪನಿಗಳಲ್ಲಿ ಪ್ರಾಣಿ ತರಪೇತುದಾರನಾಗಿ ಕೆಲಸ ನಿರ್ವಹಿಸಿದ್ದ. ಪ್ರಾಣಿಗಳ ಮನಸ್ಸನ್ನು ಚೆನ್ನಾಗಿ ತಿಳಿದುಕೊಂಡಿದ್ದ ದಾಮೂ ಸರ್ಕಸ್ ಕಂಪನಿಯೊಂದಿಗೆ ಅನೇಕ ದೇಶಗಳ ಪ್ರವಾಸ ಮಾಡಿದ.

ಮುಂದೆ ಆತ ಇಶಾಕೋ ರಶ್ಯನ್ ಸರ್ಕಸ್ ಕಂಪನಿ ಸೇರಿಕೊಂಡ. ನಂತರ ಫ್ರಾನ್ಸ್‌ನ ಬೆರ್ಟ್ರಾಮ್ ಮಿಲ್ಸ್ ಸರ್ಕಸ್, ಅಮೇರಿಕಾದ ರಿಂಗ್ಲಿಂಗ್ ಬೆಲ್ಸ್ ಬ್ರದರ್ಸ್ ಬಾರ್ನಂ ಮತ್ತು ಬೈಲೀ ಸರ್ಕಸ್ ಕಂಪನಿಯ ಸದಸ್ಯನಾದ.

ಈತನ ಖ್ಯಾತಿಗೆ ತಕ್ಕಂತೆ ಅಮೇರಿಕನ್ ಸರ್ಕಾರ ಸೇನೆಗೆ ಭರ್ತಿ ಮಾಡಿಕೊಂಡು ಎರಡನೇ ಮಹಾಯುದ್ಧದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿತು. ಸುಮಾರು 40 ವರ್ಷಗಳು ಸರ್ಕಸ್ ಕಂಪನಿಯಲ್ಲಿ ಸಾರ್ಥಕ ಸೇವೆ ಸಲ್ಲಿಸಿ ಪುಣೆ ನಗರಕ್ಕೆ ಬಂದು ವಿಶ್ರಾಂತ ಜೀವನ ನಡೆಸಿ 1973 ರಲ್ಲಿ ಕೊನೆಯುಸಿರು ಎಳೆದ. ಈತನ ಮನೆಯ ಹೆಸರು ಸರ್ಕಸ್ ವಿಲ್ಲಾ.

ಬೆಂಗಳೂರು ಸರ್ಕಸ್ ದುರಂತ

ರಾಜಾಜಿನಗರದ ಎಂಟ್ರೆನ್ಸ್ ಬಳಿ ರೇಲ್ವೇ ಲೈನ್ ಮಗ್ಗುಲಲ್ಲಿ ಬೀಡುಬಿಟ್ಟಿದ್ದ ವೀನಸ್ ಸರ್ಕಸ್ ಪ್ರದರ್ಶನ ನೀಡುತ್ತಿತ್ತು. ಅಂದು ಫೆಬ್ರುವರಿ 8, 1981 ರ ದುರ್ದಿನ. ಸಂಜೆ 6–30 ರ ಸಮಯ. ಅದೇಕೋ ಸರ್ಕಸ್ ಟೆಂಟಿಗೆ ಹತ್ತಿದ ಬೆಂಕಿ ತಕ್ಷಣ ಎಲ್ಲೆಡೆ ಹರಡಿ ಒಳಗಿದ್ದ ಜನರನ್ನು ಗಾಬರಿಗೊಳಿಸಿತು. ಸ್ಫೋಟದ ಸದ್ದಿಗೆ ಜನ ಒಮ್ಮೆಗೇ ಹೊರ ನುಗ್ಗತೊಡಗಿದರು. ಬಹುತೇಕ ಮಕ್ಕಳೇ ಹೆಚ್ಚಾಗಿದ್ದ ಈ ಸಂದರ್ಭದಲ್ಲಿ ಕಾಲ್ತುಳಿತದಿಂದಲೇ ಅನೇಕ ಮಕ್ಕಳು ಅಸುನೀಗಿದ್ದರು. ತೀವ್ರಸುಟ್ಟ ಗಾಯಗಳಿಂದ ನರಳುತ್ತಿದ್ದ ನೂರಾರು ಮಕ್ಕಳು ಮತ್ತು ಹಿರಿಯರು ಅಸಹಾಯಕರಾಗಿದ್ದರು.

ಕೇವಲ 10 ನಿಮಿಷಗಳಲ್ಲಿ ಎಲ್ಲಾ ಮುಗಿದಿತ್ತು. ಬಹುತೇಕ ಎಲ್ಲಾ ಪ್ರಾಣಿ–ಪಕ್ಷಿಗಳೂ ತಮ್ಮ ಪಂಜರದೊಳಗೇ ಆರ್ತನಾದ ಮಾಡುತ್ತಾ ಅಸುನೀಗಿದ್ದವು. ಸರ್ಕಸ್ ಮಾಲೀಕರು ಮತ್ತು ಕಲಾವಿದರು ತಮ್ಮೆಲ್ಲವನ್ನೂ ಕಳೆದುಕೊಂಡಿದ್ದರು.

ಅಂದಿನ ಸಾವಿನ ಸಂಖ್ಯೆ ಸುಮಾರು 200 ಕ್ಕೂ ಹೆಚ್ಚಿಗೆ ಇತ್ತು. ಈ ಸಾವಿನಲ್ಲಿ ಮಕ್ಕಳ ಸಂಖ್ಯೆಯೇ ಜಾಸ್ತಿ ಇತ್ತು. ವಿದ್ಯುತ್ ಇಲಾಖೆ ಬೆಂಕಿಗೆ ಕಾರಣ ಶಾರ್ಟ್ ಸರ್ಕ್ಯೂಟ್ ಎಂದು ಕೈತೊಳೆದುಕೊಂಡಿತು. ಅಂದಿನ ಮುಖ್ಯಮಂತ್ರಿ ಗುಂಡೂರಾವ್ ನ್ಯಾಯಾಂಗ ತನಿಖೆಗೆ ಆದೇಶ ನೀಡಿದರು. ಅಪಾಯಕಾರಿ ಸ್ಥಳದಲ್ಲಿ ಪ್ರದರ್ಶನ ನಡೆಸಲು ಅನುಮತಿ ನೀಡಿದ್ದು ಯಾರು, ಯಾವ ಇಲಾಖೆ ಎಂಬ ಪ್ರಶ್ನೆಗಳೆದ್ದವು. ಉತ್ತರ ನೀಡಲು ಯಾರೂ ಇರಲಿಲ್ಲ.

ಕರ್ನಾಟಕದ ಸರ್ಕಸ್

ಕರ್ನಾಟಕ ಮೂಲದ ಎಲ್ಲಾ ಸರ್ಕಸ್ ಕಂಪನಿಗಳೂ ಮುಚ್ಚಿಹೋಗಿ ಗ್ರೇಟ್ ಪ್ರಭಾತ್ ಸರ್ಕಸ್ ಮಾತ್ರಾ ಜೀವ ಉಳಿಸಿಕೊಂಡಿತ್ತು. ಈಗ ಇನ್ನೊಂದು ತಿಂಗಳಲ್ಲಿ ಇದೂ ಸಹ ಮುಚ್ಚುವ ಸೂಚನೆ ನೀಡಿದೆ. ಈಗ ಬೆಳಗಾವಿಯಲ್ಲಿ ತನ್ನ ಕೊನೆಯ ಕ್ಯಾಂಪ್ ಹಾಕಿರುವ ಗ್ರೇಟ್ ಪ್ರಭಾತ್ ಸರ್ಕಸ್ 1951 ರಲ್ಲಿ ಪ್ರಾರಂಭವಾಗಿತ್ತು. ದಿನೇದಿನೇ ಆದಾಯ ಕಡಮೆಯಾಗುತ್ತಾ ಬಂದು ಖರ್ಚು ಹೆಚ್ಚುತ್ತಿದೆ ಎಂಬುದು ಸರ್ಕಸ್ ಮಾಲೀಕ ಸಾಯಿಬಾಬಾರವರ ಅಳಲು. ತಮ್ಮಲ್ಲಿ 150 ಕ್ಕೂ ಹೆಚ್ಚು ಸಿಬ್ಬಂದಿ, ವಿದೇಶಿ ಕಲಾವಿದರು ಮತ್ತು ಹತ್ತಾರು ಪ್ರಾಣಿ–ಪಕ್ಷಿಗಳಿವೆ. ಪ್ರತಿದಿನದ ಖರ್ಚು ರೂ. 60,000–00 ಕ್ಕೂ ಹೆಚ್ಚು ಎನ್ನುತ್ತಾರೆ. ಜನ ಹೊಸಾ ಮನರಂಜನಾ ಮಾಧ್ಯಮಗಳೆಡೆಗೆ ಹೋಗಿರುವುದರಿಂದ ಸರ್ಕಸ್ ಪ್ರೇಕ್ಷಕರು ಕಡಮೆ ಎಂಬುದು ಇವರ ಅಭಿಪ್ರಾಯ.

ಸರ್ಕಸ್ ದುರಂತಗಳು

ಫೆಬ್ರುವರಿ 1, 1992 ರಲ್ಲಿ ಫ್ಲಾರಿಡಾದಲ್ಲಿ ಪ್ರದರ್ಶನ ನೀಡುತ್ತಿದ್ದ ಗ್ರೇಟ್ ಅಮೇರಿಕನ್ ಸರ್ಕಸ್‌ನಲ್ಲಿ ಒಬ್ಬ ಮಹಿಳೆ ಮತ್ತು ಐದು ಜನ ಮಕ್ಕಳನ್ನು ಸವಾರಿ ಮಾಡಿಸುತ್ತಿದ್ದ ಆನೆಯೊಂದು ಇದ್ದಕ್ಕಿದ್ದಂತೆ ಹುಚ್ಚೆದ್ದು ಅನೇಕರನ್ನು ತುಳಿದು ಹಾಕಿತು. ಹೊನಲುಲುವಿನ ಸರ್ಕಸ್ ಇಂಟರ್‌ನ್ಯಾಶನಲ್‌ನ ಆನೆ ತನ್ನ ತರಬೇತುದಾರನನ್ನು ತುಳಿದುಕೊಂದು ಹಾಕಿತು. ನಂತರ ಆನೆಯನ್ನು ಗುಂಡಿಟ್ಟು ಕೊಲ್ಲಲಾಯ್ತು.

ಕಣ್ಣನ್ ಬಂಬಾಯೋ

ಕೀಲೇರಿ ವೈಟ್ ವೇ ಸರ್ಕಸ್‌ನಲ್ಲಿ ಖ್ಯಾತನಾಗಿದ್ದ ಕಣ್ಣನ್ ತನ್ನ ಆಕ್ರೋಬ್ಯಾಟ್ ಕವಾಯತಿಗೆ ಹೆಸರುವಾಸಿಯಾಗಿದ್ದ. ಆತನ ಚುರುಕು ಚಲನೆಗಳು ಕಣ್ಣನ್‌ಗೆ ಒಳ್ಳೆಯ ಹೆಸರು ನೀಡಿದ್ದವು. ಒಮ್ಮೆ ಅಡಾಲ್ಫ್ ಹಿಟ್ಲರ್ ಬರ್ಟ್ರಾಂ ಸರ್ಕಸ್‌ನಲ್ಲಿ ಕಣ್ಣನ್‌ನ ಪ್ರದರ್ಶನ ನೋಡಿ ಆತನ ಚಲನೆಗೆ ಬೆರಗಾಗಿ ಅತನನ್ನು ಕರೆದು ಧರಿಸಿದ ಶೂಗಳನ್ನು ಪರಿಶೀಲಿಸಿ 'ನೀನು ಭಾರತದ ಹಾರುವ ಭೂತ' ಎಂದು ಹೊಗಳಿ ಆಟೋಗ್ರಾಫ್ ನೀಡಿದ್ದ. ಕಣ್ಣನ್ ಹಗ್ಗದ ಮೇಲಿನ ನಡಿಗೆಯಲ್ಲಿ ಹೆಸರುವಾಸಿಯಾಗಿದ್ದ. ರೋಮಾಂಚನ ಹುಟ್ಟಿಸುತ್ತಿದ್ದ ಆತನ ನಡಿಗೆಗೆ ಬೆರಗಾಗದವರೇ ಇರಲಿಲ್ಲ. ಕಣ್ಣನ್ 1920 ರಲ್ಲೇ ಪ್ರತೀ ವಾರ 400 ಡಾಲರ್ ಸಂಬಳ ಪಡೆಯುತ್ತಿದ್ದ. ಅಂದರೆ ಆಗಿನ ರೂ. 4000–00 ಬಹು ದೊಡ್ಡ ಮೊತ್ತ.

ಸರ್ಕಸ್ ಭಾವನೆಂಟರುಗಳು

ಸರ್ಕಸ್ ಮಾಹಿತಿ ನೀಡುವ ನಿಯತಕಾಲಿಕಗಳಲ್ಲಿ ಅಮೇರಿಕಾದ ಬ್ಯಾಂಡ್‌ವ್ಯಾಗನ್, ಸ್ಪೆಕ್ಟಕಲ್ ಮತ್ತು ದಿ ವೈಟ್ ಟಾಪ್ಸ್, ಫ್ರಾನ್ಸ್‌ನ ಬ್ರೆಟಾಗ್ನೆ ಸರ್ಕಸ್, ಯು.ಎಸ್.ಎನ ಸರ್ಕಸ್ ರಿಪೋರ್ಟ್, ಜರ್ಮನಿಯ ಸರ್ಕಸ್ ಜೈತುಂಗ್ ಮತ್ತು ಕಾಸ್ಕೇಡ್, ಯುಕೆಯ ಕಿಂಗ್ ಪೋಲ್ ಮುಖ್ಯವಾದವುಗಳು. ಸರ್ಕಸ್ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡುವ ಸರ್ಕೋಪೇಡಿಯ ಎಂಬ ವೆಬ್ ಪುಟ ಒಂದಿದೆ.

ಸರ್ಕಸ್‌ಗೆ ಸಂಬಂಧಿಸಿದಂತೆ ಯು.ಎಸ್.ಎನಲ್ಲಿ ಸರ್ಕಸ್ ಸಿಟಿ ಮ್ಯೂಸಿಯಂ, ಸರ್ಕಸ್ ವರ್ಲ್ಡ್, ದಿ ಜಾನ್ ಮತ್ತು ಮೇಬೆಲ್ ರಿಂಗ್ಲಿಂಗ್ ಮ್ಯೂಸಿಯಂ ಆಫ್ ಆರ್ಟ್, ಇಂಟರ್‌ನ್ಯಾಶನಲ್ ಕ್ಲೌನ್ ಹಾಲ್ ಆಫ್ ಫೇಮ್ ಪ್ರಮುಖ

ವಸ್ತುಸಂಗ್ರಹಾಲಯಗಳು. ಇಂತಹ ಮಾಹಿತಿ ಕೇಂದ್ರಗಳು ಹಾಲೆಂಡಿನ ಸರ್ಕಸ್ ಮ್ಯೂಸಿಯಂ, ಜರ್ಮನಿಯ ಸರ್ಕಸ್ ಮ್ಯೂಸಿಯಂ, ರಶ್ಯಾದ ಸರ್ಕಸ್ ಮ್ಯೂಸಿಯಂ ಆಫ್ ಸೈಂಟ್ ಪೀಟರ್ಸ್‌ಬರ್ಗ್, ಆಸ್ಟ್ರೇಲಿಯಾದ ಸರ್ಕಸ್ ಅಂಡ್ ಕ್ಲೌನ್ ಮ್ಯೂಸಿಯಂ, ಫ್ರಾನ್ಸಿನ ಸರ್ಕ್ಯೂ ಅಲಿನ್ ಫ್ಲೆರೆ, ಸರ್ಕ್ಯೂ ದೆ ಇಲ್ಯೂಶನ್ ಮತ್ತು ಸರ್ಕ್ಯೂ ದೆ ವತಾನ್ ಪ್ರಮುಖವಾದ ಮ್ಯೂಸಿಯಂಗಳು. ಇವು ಸರ್ಕಸ್ ಬಗ್ಗೆ ಅಗತ್ಯ ಮಾಹಿತಿಗಳನ್ನು ನೀಡುತ್ತಿವೆ.

ಪ್ರತೀ ವರ್ಷ ಸರ್ಕಸ್‌ಗಾಗಿಯೇ ಮೀಸಲಾದ ಹಬ್ಬಗಳು ವಿಶ್ವದ ಹಲವಾರು ಕಡೆ ನಡೆಯುತ್ತವೆ. ಸ್ಪೇನ್ ದೇಶದ ಫೆಸ್ಟಿವಲ್ ಇಂಟರ್‌ನ್ಯಾಶನಲ್ ದೆಲ್ ಸರ್ಕ್, ಕ್ಯೂಬಾದ ಫೆಸ್ಟಿವಲ್ ಇಂಟರ್‌ನ್ಯಾಶನಲ್ ದೆ ವೆರಾನೋ, ಫ್ರಾನ್ಸ್ ದೇಶದ ಫೆಸ್ಟಿವಲ್ ಇಂಟರ್‌ನ್ಯಾಶನಲ್ ದು ಸರ್ಕ್ ದೆ ಮಸ್ಸೆ ಮತ್ತು ಫೆಸ್ಟಿವಲ್ ಮೋನ್ಡಿಯಾಲ್ ದು ಸರ್ಕ್, ಇಟಲಿಯ ಫೆಸ್ಟಿವಲ್ ಇಂಟರ್‌ನ್ಯಾಶನಲ್ ದೆಲ್ ಸರ್ಕೋ ಮತ್ತು ಚೀನ ದೇಶದ ವುಕಿಯೋ ಇಂಟರ್‌ನ್ಯಾಶನಲ್ ಸರ್ಕಸ್ ಫೆಸ್ಟಿವಲ್ ಪ್ರಮುಖವಾದ ಅಂತರರಾಷ್ಟ್ರೀಯ ಹಬ್ಬಗಳು.

ಸರ್ಕಸ್ ಕಥೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಅನೇಕ ಸಿನೆಮಾಗಳು ನಾನಾ ಭಾಷೆಗಳಲ್ಲಿ ತೆರೆಕಂಡವು. ಅವುಗಳಲ್ಲಿ ಮುಖ್ಯವಾದವು ಚಾರ್ಲಿ ಚಾಪ್ಲಿನ್‌ನ ಸರ್ಕಸ್ ಮುಖ್ಯವಾದ ಸಿನೆಮಾ. ಸರ್ಕಸ್ ಕುಕೀಸ್, ಟ್ರಿಪೀಜ್, ಫ್ರೀಕ್ಸ್, ಅಟ್ ದ ಸರ್ಕಸ್, ತ್ರೊಂಬಾ, ದ ಗ್ರೇಟೆಸ್ಟ್ ಶೋ ಆನ್ ಅರ್ಥ್, ಥ್ರೀ ರಿಂಗ್ ಸರ್ಕಸ್, ಜಂಬೋ, ಸರ್ಕಸ್ ವರ್ಲ್ಡ್ ಇತ್ಯಾದಿಗಳೂ ಕೂಡಾ ಪ್ರಸಿದ್ಧವಾದ ಚಲನಚಿತ್ರಗಳು. ಸೂಪರ್ ಕಮ್ಯಾಂಡೋ ಧ್ರುವ ಎಂಬುದು ಭಾರತದ ಖ್ಯಾತ ಸರ್ಕಸ್ ಕಾಮಿಕ್ ಬುಕ್.

ಜೊತೆಗೆ 1970 ರಲ್ಲಿ ಬಿಡುಗಡೆಯಾದ ರಾಜಕಪೂರ್ ಅಭಿನಯದ ಮೇರಾ ನಾಮ್ ಜೋಕರ್ ಚಿತ್ರದ ಭಗ್ನ ಪ್ರೇಮಿ ನಾಯಕನಲ್ಲಿ ತಮ್ಮನ್ನೇ ತಾವು ಕಂಡುಕೊಳ್ಳದ ಯುವಕರಿರಲಿಲ್ಲ. ಅಪೂರ್ವ ರಾಗಂಗಳ್ ಚಿತ್ರದ ಬಫೂನ್ ಕುಳ್ಳ ಕಮಲ ಹಾಸನ್ ಹೃದಯಕ್ಕೆ ಹತ್ತಿರವಾಗಿದ್ದ. ಸರ್ಕಸ್ಸನ್ನು ಜನರ ಬದುಕಿಗೆ ಒಗ್ಗಿಸಿದ ಚಿತ್ರಗಳಿವು.

ಸರ್ಕಸ್ ತಾರೆಗಳು

ಈ ಶತಮಾನದ ಮೊದಲ ಮತ್ತು ಎರಡನೇ ದಶಕದಲ್ಲಿ ತಲಶ್ಶೈರಿ, ಕಣ್ಣೂರು ಪ್ರದೇಶಗಳಿಂದ ಬಂದ ಅನೇಕ ಕಲಾವಿದರು ಸರ್ಕಸ್ ತಾರೆಗಳಾಗಿ ಬೆಳಗಿದರು.



ಇವರಲ್ಲಿ ಕೀಲೇರಿ ಕುನ್ಹಿಕಣ್ಣನ್ (ಜೂನಿಯರ್), ಕಲ್ಲನ್ ಗೋಪಾಲನ್, ಚೀರಮ್ಮಾಳ್ ಕರುಂತನ್‌ಕಂಡಿ ಅಂಬು, ಕೀಜಾಂತಿ ಗೋಪಾಲನ್, ಪದಿಕ್ಕಲ್ ಕುನ್ಹಿಯನಾದನ್, ಮಂದನ್ ಟೀಚರ್, ಕುಮರನ್ ಟೀಚರ್, ಎಂ.ಕೆ.ರಾಮನ್, ಪೂವದನ್ ಕುನ್ಹಂಬು, ಗೋವಿಂದನ್, ನೆಲ್ಲೋಲಿ ಸೋದರರು, ಗೋವಿಂದನ್ ನಾಯರ್, ಕೆ.ಎಂ.ಕುನ್ಹಿಕಣ್ಣನ್ ನಾಯರ್, ಒ.ಕೆ.ಅಪ್ಪ, ಒ.ಕೆ.ಚಂದು, ಒ.ಕೆ.ಕುನ್ಹಂಬು, ಓ.ಕೆ. ಅಂಬುಕುಟ್ಟಿ, ಕುನ್ನತ್ ಯಶೋದ, ವಂದ್ಯಾಯಿ ಕುನ್ಹಿಮಾತಾ, ಕಲ್ಯಾಣಿ, ನಾನಿ, ಕೌಸಲ್ಯ ಇತ್ಯಾದಿ ಕಲಾವಿದರು ಆದಿಕಾಲದಲ್ಲಿ ಸರ್ಕಸ್ ರಂಗದಲ್ಲಿ ಬೆಳಗಿದವರು.


ವಿಶ್ವದ ಖ್ಯಾತ ಸರ್ಕಸ್ ಕಂಪನಿಗಳು

ಇಪ್ಪತ್ತೊಂದನೇ ಶತಮಾನದಲ್ಲೂ ಕೂಡಾ ಸರ್ಕಸ್ ಜನಪ್ರಿಯತೆ ಕಡಮೆಯಾಗಿಲ್ಲ. ಮಕ್ಕಳಷ್ಟೇ ಅಲ್ಲದೆ ಎಲ್ಲಾ ವಯಸ್ಸಿನ ಜನ ಕೂಡಾ ರೋಮಾಂಚಕ ಸಾಹಸಗಳನ್ನು ನೋಡಲು ಇಷ್ಟಪಡುತ್ತಾರೆ. ಈ ಹಿನ್ನೆಲೆಯಲ್ಲಿ ವಿಶ್ವದಲ್ಲಿ ಖ್ಯಾತಿ ಗಳಿಸಿದ ಸರ್ಕಸ್ ವಿವರಗಳನ್ನು ನೋಡೋಣ.

1. ಸರ್ಕ್ಯು ಡ್ಯೂ ಸೋಲೆಲಿ– ಕೆನಡಾ.
2. ಸೆವೆನ್ ಫ್ಲಿಂಗರ್ಸ್ ಸರ್ಕಸ್ –ಕೆನಡಾ.
3. ಸರಕ್ಸ್ ವರ್ಗಾಸ್ –ಅಮೇರಿಕಾ.
4. ಸರ್ಕ್ಯೂ ಎಲೋಇಜೆ –ಕೆನಡಾ.
5. ಫ್ಲಯಿಂಗ್ ಫ್ರೂಟ್ ಫ್ಲೈ ಸರ್ಕಸ್– ಆಸ್ಟ್ರೇಲಿಯಾ.
6. ಲೆಸ್ ಕೋಲ್‌ಪೋರ್ಟೆಯುರಸ್ – ಫ್ರಾನ್ಸ್.
7. ಸ್ವಾಂಪ್ ಸರ್ಕಸ್– ಇಂಗ್ಲೆಂಡ್.
8. ಫ್ಲಯಿಂಗ್ ಸರ್ಕಸ್ – ಅಮೇರಿಕಾ.
9. ನ್ಯೂ ಶಾಂಗೈ ಸರ್ಕಸ್ –ಚೀನಾ.
10. ಸರ್ಕ್ಯೂ ಪ್ಲೂಮೆ– ಫ್ರಾನ್ಸ್.

❖





7. ಬ್ಲೂಝೋನ್ ಮತ್ತು ದೀರ್ಘಾಯುಷ್ಯದ ಪ್ರಪಂಚ

ಸಹಸ್ರಾರು ವರ್ಷಗಳಿಂದ ಮನುಷ್ಯನ ಅಸೆ ಚಿರಂಜೀವತ್ವವನ್ನು ಪಡೆಯುವುದು. ಅದಕ್ಕಾಗಿ ಅವ ಮಾಡದ ತಪಸ್ಸುಗಳಿಲ್ಲ, ಪೂಜೆಗಳಿಲ್ಲ, ಪ್ರಯೋಗಗಳಿಲ್ಲ, ಸಾಹಸಗಳಿಲ್ಲ. ಆದರು ಆತನಿಗೆ ಅಮರತ್ವ ನಿಲುಕದ ಕುಸುಮವೇ ಆಗಿದೆ. ಕೇವಲ ಮನುಷ್ಯ ಮಾತ್ರವಲ್ಲದೇ ದೇವತೆಗಳೂ ಅಮರರಾಗುವ ಆಸೆಯಿಂದ ಅಸುರರೊಡನೆ ಸೇರಿ ಸಮುದ್ರ ಮಂಥನ ಮಾಡಿ ಬಂದ ಅಮೃತವನ್ನು ದೇವತೆಗಳು ತಾವೇ ದಕ್ಕಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಪುರಾಣ ಪುರುಷ ಯಯಾತಿಯಂತಹಾ ಮಹಾರಾಜನೇ ತನ್ನ ಮಗನಾದ ಪುರುವಿನಿಂದ ಯೌವ್ವನವನ್ನು ಪಡೆಯಲು ಮುಂದಾಗುತ್ತಾನೆ. ಇನ್ನು ಈಜಿಪ್ಟಿನ ಫೆರೋಗಳು ತಮ್ಮ ಮೃತ ದೇಹವನ್ನು ಮರಳಿ ಬದುಕುವ ಆಸೆಯಿಂದ ರಕ್ಷಿಸಿಟ್ಟುಕೊಂಡರು. ಇವೆಲ್ಲದರ ನಡುವೆಯೂ ಯಾವುದೇ ಇತಿಹಾಸದಲ್ಲೂ ಅತೀ ದೀರ್ಘಕಾಲ ಬದುಕಿದವರ ಅಧಿಕೃತ ದಾಖಲೆಗಳಿಲ್ಲ. ಆದರೂ ದೀರ್ಘಾಯುವಾಗುವ ಯತ್ನಗಳು ನಿಲ್ಲದೇ ನಡೆದೇ ಇವೆ.

ಭಾರತದ ಧರ್ಮಗ್ರಂಥಗಳು ಮಾರ್ಕಂಡೇಯ, ಬಲಿ, ವ್ಯಾಸ, ಅಶ್ವತ್ಥಾಮ, ಹನುಮಾನ್, ವಿಭೀಷಣ, ಕೃಪಾಚಾರ್ಯ ಮತ್ತು ಪರಶುರಾಮರನ್ನು ಚಿರಂಜೀವಿಗಳು ಎಂದು ಪರಿಗಣಿಸಿವೆ. ಈ ಸಾಲಿಗೆ ಮುಂದೆ ಮತ್ತಾರು ಸೇರಲಿಲ್ಲ.

ದೀರ್ಘಾಯುವಾಗಬೇಕೆಂಬ ಅಸೆಗೆ ಕಾರಣ ಏನು ಎಂಬುದು ಈಗ ಅಪ್ರಸ್ತುತ. ದೀರ್ಘಾಯುವಾಗುವುದು ಹೇಗೆ ಎನ್ನುವುದು ಇನ್ನೂ ರಹಸ್ಯವಾಗಿಯೇ ಉಳಿದಿದೆ. ಯೋಗ, ವಿಜ್ಞಾನ ಇನ್ನೂ ಅದರ ಹುಡುಕಾಟದಲ್ಲಿಯೇ ಇವೆ. ಬೈಬಲ್ ಮಾನವನ ಆಯುಸ್ಸು ಮೂರಿಪ್ಪತ್ತು ಮತ್ತು ಹತ್ತು ಎನ್ನುತ್ತದೆ. ಆದರೂ ಮನುಷ್ಯ ತನ್ನ

ಪಾಪಗಳಿಗಾಗಿ ಸಾಯಬೇಕಾಗುತ್ತದೆ ಎನ್ನುತ್ತದೆ. ಹಿಂದೂ ಧರ್ಮದ ಪ್ರಕಾರ ಪೂರ್ವಜನ್ಮದ ಕರ್ಮಗಳ ಅನುಸಾರ ಸಾವು ಅನಿವಾರ್ಯ. ಮಾರ್ಟಿನ್ ಹೀಡ್ಗರ್ 'ನಾನು ಸಾಯುವುದರಿಂದಲೇ ನಾನಿದ್ದೇನೆ' ಎಂದು ಘೋಷಿಸಿದ್ದ. ಸಾವು ಮತ್ತು ಹುಟ್ಟು ಇಂದಿಗೂ ಮಾನವನ ಉದ್ದೇಶಿತ ಕ್ರಿಯೆಗಳಲ್ಲ. ಇವೆರಡರ ನಡುವಿನ ಬದುಕನ್ನು ಸಹನೀಯವಾಗಿಟ್ಟುಕೊಳ್ಳುವುದೇ ಬದುಕಿನ ಮತ್ತು ಬ್ಲೂಜ಼ೋನ್ ರಹಸ್ಯ.

ಸಾವಿನ ಕಾರಣಗಳು

ಬ್ಲೂಜ಼ೋನ್ ಮತ್ತು ದೀರ್ಘಾಯುಷ್ಯದ ಪ್ರಪಂಚಕ್ಕೆ ಕಾಲಿಡುವ ಮುನ್ನ ಸಾವಿನ ಬಗ್ಗೆ ಕೆಲವು ಮಾಹಿತಿಗಳನ್ನು ತಿಳಿಯುವುದು ಅವಶ್ಯಕ. ಏಕೆಂದರೆ ದೀರ್ಘಾಯುಷ್ಯಕ್ಕೆ ಸಾವು ಯಾವಾಗಲೂ ಅಂತ್ಯ ಹಾಡುತ್ತದೆ. ಹಾಗಾದರೆ ನಾವು ಸಾಯುವುದೇಕೆ ?

ದೇಹದ ಡಿಎನ್‌ಎಗಳು, ಜೀವಕೋಶಗಳು ವರ್ಷಕಳೆದಂತೆ ಹಾನಿಗೊಳಗಾಗುವುದರಿಂದ ಹಾಗೂ ವಿಕಾಸದ ಹಾದಿಯಲ್ಲಿ ಜೀವಗಳು ನಶಿಸಬೇಕಾಗುತ್ತದೆ. ಡಿಎನ್‌ಎ ಜಖಂಗೊಳ್ಳುವುದನ್ನು ತಡೆದರೆ ಸಾವನ್ನು ದೂರ ಇಡಬಹುದು. ಆದರೆ ಮಾನವನಿಗೆ ಈವರೆಗೆ ತಿಳಿಯಲಾಗದ ಸಂಗತಿ ಇದೊಂದೇ! ಆದರೂ ವಿಜ್ಞಾನ ಮಾನವನ ದೇಹದಲ್ಲಿ ನಾಲ್ಕು ವಿಧಗಳ ಜೀನ್‌ಗಳು ದೀರ್ಘಾಯುಷ್ಯದೊಂದಿಗೆ ತಳುಕು ಹಾಕಿಕೊಂಡಿರುವುದನ್ನು ಪತ್ತೆ ಮಾಡಿದೆ. ದೇಹದಲ್ಲಿ ABO ಎಂದು ಕರೆಯಲಾಗುವ ಜೀನ್ ರಕ್ತದ ಮಾದರಿ ನಿರ್ಧರಿಸುವಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಇನ್ನು CDKN2B ಎಂಬ ಜೀನ್ ಜೀವಕೋಶ ವಿಭಜನೆಗೆ ಕಾರಣವಾಗುತ್ತದೆ. APOE ಜೀನ್ ಅಲ್ಜೀಮರ್ಸ್ ಖಾಯಿಲೆಗೆ ಕಾರಣವಾಗುತ್ತದೆ. SH2B3 ಎಂಬ ಜೀನ್ ಅಯುಷ್ಯವನ್ನು ವೃದ್ಧಿಸುವ ಕಾರ್ಯ ಮಾಡುತ್ತದೆ ಎನ್ನಲಾಗಿದೆ. ದೀರ್ಘಾಯುಷಿಗಳ ರಕ್ತದ ಮಾದರಿಗಳನ್ನು ಪರಿಶೀಲಿಸಿದಾಗ ಓ ಗುಂಪಿನ ರಕ್ತ ಹೊಂದಿರುವವರು ಹೆಚ್ಚಾಗಿ ಕಂಡು ಬಂದರಂತೆ. ಏಕೆಂದರೆ ಓ ಗುಂಪಿನ ರಕ್ತದ ಜನರಿಗೆ ಹೃದಯದ ಖಾಯಿಲೆ ಮತ್ತು ಕ್ಯಾನ್ಸರ್ ತಗಲುವ ಸಾಧ್ಯತೆ ಕಡಮೆ ಇದೆ ಎಂದು ಪ್ರಯೋಗಗಳು ತಿಳಿಸಿವೆ.

ಜಗತ್ತಿನಲ್ಲಿ ಜನ ಯಾವ ಕಾರಣಗಳಿಂದ ಸಾವನ್ನಪ್ಪುತ್ತಾರೆ ಎಂದು ಜಾಲತಾಣವೊಂದು (ವರ್ಲ್ಡ್ ಲೈಫ್ ಎಕ್ಸ್‌ಪೆಕ್ಟೆನ್ಸಿ.ಕಾಂ) ಸಂಶೋಧನೆ ನಡೆಸಿ

ಫಲಿತಾಂಶವನ್ನು ಹರಿಯಬಿಟ್ಟಿದೆ. ಇದರ ಪ್ರಕಾರ ನಮ್ಮ ದೇಹದ ಬಹುತೇಕ ಖಾಯಿಲೆಗಳು ಜೀನ್ ರೂಪಾಂತರಗಳಿಂದ ಹಾಗೂ ಜೀನ್ ಹಾನಿಗೊಳಗಾಗುವುದರಿಂದ ಬರುತ್ತವೆ. ಅಸಹಜ ಆಹಾರ ಮತ್ತು ಜೀವನ ಶೈಲಿಗಳಿಂದ ನಮ್ಮ ಜೀನ್ ಹಾಳಾಗಲು ನಾವೇ ಕಾರಣರಾಗುತ್ತಿದ್ದೇವೆ.

ಜಾಲತಾಣದ ವರದಿಯ ಪ್ರಕಾರ ಜಪಾನ್ ದೇಶದ ಸರಾಸರಿ ಆಯುಃಪ್ರಮಾಣ 83.7 ವರ್ಷ ಇದ್ದು ಜಗತ್ತಿನಲ್ಲಿ ಮೊದಲನೇ ಸ್ಥಾನದಲ್ಲಿದೆ. ಎರಡನೇ ಸ್ಥಾನ ಸ್ವಿಟ್ಜರ್ಲ್ಯಾಂಡ್ (83.4) ಮತ್ತು ಮೂರನೇ ಸ್ಥಾನ ಸಿಂಗಪುರದ್ದು (83.1). ಭಾರತ 126 ನೇ ಸ್ಥಾನದಲ್ಲಿದ್ದು ಇಲ್ಲಿನ ಸರಾಸರಿ ಅಯಸ್ಸು 68.3ರಷ್ಟಿದೆ. ವಿಚಿತ್ರವೆಂದರೆ ನೆರೆಯ ಶ್ರೀಲಂಕಾ 70ನೇ ಸ್ಥಾನದಲ್ಲಿದ್ದು ಅಲ್ಲಿನ ಜನರು ಸರಾಸರಿ 74.9 ವರ್ಷ ಜೀವಿಸುತ್ತಾರೆ. ಪಾಕಿಸ್ತಾನ 130 ನೇ ಸ್ಥಾನದಲ್ಲಿದ್ದು ಜನರ ಸರಾಸರಿ ಅಯುಃಪ್ರಮಾಣ 66.4 ವರ್ಷ. ಕೊನೆಯ ಸ್ಥಾನದಲ್ಲಿರುವ ಸೈಬೀರಿಯಾ ಲಿಓನ್ ದೇಶದ ಜನರ ಅಯುಃಪ್ರಮಾಣ 46 ವರ್ಷ.

ಜನ ಯಾವ ಕಾರಣಗಳಿಂದ ಸಾವನ್ನಪ್ಪುತ್ತಾರೆ ಎಂಬ ವರದಿ ಇದ್ದು ವಿಶ್ವದ ಅಂಕಿಅಂಶಗಳೊಂದಿಗೆ ಭಾರತದ ಅಂಕಿಅಂಶಗಳನ್ನು ಹೋಲಿಸಿ ನೋಡಿದಾಗ ಸಾವಿಗೆ ಟಾಪ್ 10 ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದು.

ಕೊರೊನರಿ ಮತ್ತು ಹೃದಯದ ಖಾಯಿಲೆ ಟಾಪ್ 1 ನೇ ಸ್ಥಾನದಲ್ಲಿದ್ದು ವಿಶ್ವದ 73.56 ಲಕ್ಷ ಜನ ಇದರಿಂದ ಜೀವ ತೊರೆದಿದ್ದರೆ ಭಾರತದಲ್ಲಿ 12.15 ಲಕ್ಷ ಜನ ಸತ್ತಿದ್ದರು. ವಿಶ್ವದಲ್ಲಿ ಪಾರ್ಶ್ವವಾಯುವಿನಿಂದ 66.70 ಲಕ್ಷ ಜನ ಸತ್ತಿದ್ದರೆ ಭಾರತದಲ್ಲಿ 8.81 ಲಕ್ಷ ಜನ ಸತ್ತರು. ವಿಶ್ವದ ಮೂರನೇ ಕಿಲ್ಲರ್ ಶ್ವಾಸಕೋಶದ ಖಾಯಿಲೆಯಿಂದ ವಿಶ್ವದಲ್ಲಿ 31.04 ಲಕ್ಷ ಜನ ಸತ್ತರೆ ಭಾರತದಲ್ಲಿ 10.61ಲಕ್ಷ ಜನ ಪ್ರಾಣ ಬಿಟ್ಟಿದ್ದರು. ವಿಶ್ವದ ನಾಲ್ಕನೇ ಕಿಲ್ಲರ್ ವಿಷಮಶೀತ ಜ್ವರ ಮತ್ತು ನ್ಯುಮೋನಿಯ ವಿಶ್ವದಲ್ಲಿ 30.51 ಲಕ್ಷ ಜನರನ್ನು ಕೊಂದಿತ್ತು. ಭಾರತದಲ್ಲಿ ಇದರಿಂದ 4.81 ಲಕ್ಷ ಜನ ಪ್ರಾಣಬಿಟ್ಟರು. ವಿಶ್ವದ ಐದನೇ ಕೊಲೆಗಡುಕ ಶ್ವಾಶಕೋಶದ ಕ್ಯಾನ್ಸರ್ ವಿಶ್ವದಲ್ಲಿ 15.99 ಲಕ್ಷ ಜನರನ್ನು ಸಾವಿಗೆ ತಳ್ಳಿದೆ. ಭಾರತದಲ್ಲಿ ಇದರಿಂದ 63,762ಜನ ನಿಧನರಾದರು. ಟಾಪ್‌ಟೆನ್ ಖಾಯಿಲೆಗಳಾದ ಕೊರೊನರಿ ಹೃದಯದ ಖಾಯಿಲೆ, ಶ್ವಾಸಕೋಶದ ಖಾಯಿಲೆ, ಪಾರ್ಶ್ವವಾಯು, ಅತಿಸಾರ, ವಿಷಮಶೀತಜ್ವರ ಮತ್ತು ನ್ಯುಮೋನಿಯಾ, ಅಪೌಷ್ಟಿಕತೆ, ಕ್ಷಯ, ಆತ್ಮಹತ್ಯೆ, ಬೀಳುವುದರಿಂದ ಸಾವು ಮತ್ತು ರಸ್ತೆ

ಅಪಘಾತಗಳಿಂದ ಭಾರತದಲ್ಲಿ 60.96 ಲಕ್ಷ ಜನ ಸತ್ತಿದ್ದರೆ ಚೀನಾದಲ್ಲಿ ಇದೇ ಖಾಯಿಲೆಗಳಿಂದ 56.69 ಲಕ್ಷ ಜನ ಸಾಯುತ್ತಾರೆ.

ಭಾರತದಲ್ಲಿ ಬೊಜ್ಜು ಮತ್ತು ಸಂಬಂಧಿತ ಖಾಯಿಲೆಗಳು ಹೆಚ್ಚುತ್ತಾ ಹೋಗುತ್ತಿರುವುದರಿಂದ ನಮ್ಮ ಜೀವಿತಾವಧಿ ಕಡಮೆಯಾಗುತ್ತಾ ಹೋಗುತ್ತಿದೆ. ಅಸ್ಥವ್ಯಸ್ಥ ಜೀವನ ಶೈಲಿ, ಅನಿಯಮಿತ ಡಯೆಟ್, ಧೂಮಪಾನ, ಜಂಕ್ ಫುಡ್ ಮತ್ತು ರಾಸಾಯನಿಕ ಮಿಶ್ರಿತ ಆಹಾರ ಹಾಗು ವ್ಯಾಯಾಮ ರಹಿತ ಆಲಸಿ ಜೀವನ ಕೂಡಾ ಇದಕ್ಕೆ ತನ್ನ ಕೊಡುಗೆ ನೀಡುತ್ತಿದೆ.

ಗ್ರೀಸಿನಲ್ಲಿ ಕೊರೊನರಿ ಹೃದಯದ ಖಾಯಿಲೆಯ ಪ್ರಮಾಣ ಕಡಮೆ ಇದೆ. ಇದಕ್ಕೆ ಅವರು ಬಳಸುವ ಎಕ್‌ಸ್ಟ್ರಾ ವರ್ಜಿನ್ ಆಲಿವ್ ಎಣ್ಣೆಯ ಬಳಕೆ ಕಾರಣ ಎಂದು ಹೇಳಲಾಗುತ್ತದೆ. ಸುರಕ್ಷಿತ ಲೈಂಗಿಕತೆ ಮೆದುಳಿನ ಪ್ಲೆಶರ್ ಪಾಥ್‌ವೇಯನ್ನು ಉದ್ದೀಪನಗೊಳಿಸುವುದರಿಂದ ಹೃದಯದ ಕಾರ್ಯ ಚಟುವಟಿಕೆ ಉತ್ತಮಗೊಳ್ಳುತ್ತದೆ ಎನ್ನುತ್ತದೆ ವಿಜ್ಞಾನ.

ಈ ಹಿನ್ನೆಲೆಯಲ್ಲಿ ನಮ್ಮ ಬದುಕಿನ ಅವಧಿಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನ ನಡೆಸಲೇಬೇಕಾದ ಅನಿವಾರ್ಯತೆ ಬಂದಿದೆ. ಈ ಹಿನ್ನೆಲೆಯಲ್ಲಿ ಬ್ಲೂಝೋನ್ ಅಥವಾ ನೀಲಿನೆಲೆಯ ಅನುಸರಣೆ ಅನಿವಾರ್ಯವಾಗುತ್ತಿದೆ.

ವಿಶ್ವದಲ್ಲಿ ಕೆಲವು ಪ್ರದೇಶಗಳಲ್ಲಿ ವಾಸಿಸುವ ಜನ ಉಳಿದ ಪ್ರದೇಶಗಳಿಗಿಂತಾ ಸ್ವಲ್ಪ ಮಟ್ಟಿಗೆ ದೀರ್ಘಾಯುಷ್ಯ ಹೊಂದಿರುವುದು ಕಂಡು ಬಂದಿದೆ. ಅವರ ದೀರ್ಘಾಯುಸ್ಸಿಗೆ ಕಾರಣ ಏನು ಎಂದು ತಲೆಕೆಡಿಸಿಕೊಂಡಿರುವ ಸಮಾಜ ಅಂತಹಾ ಸ್ಥಳಗಳನ್ನು ಬ್ಲೂ ಝೋನ್ ಎಂದು ಗುರುತಿಸಿ ಅಲ್ಲಿನ ರಹಸ್ಯ ತಿಳಿಯಲು ಪ್ರಯತ್ನ ನಡೆಸಿದೆ. ಇದರಿಂದ ಸಾವನ್ನು ಸ್ವಲ್ಪ ಕಾಲ ಮುಂದೂಡಬಹುದು.

ಏನಿದು ಬ್ಲೂ ಝೋನ್ ?

2004 ರಲ್ಲಿ ನ್ಯಾಶನಲ್ ಜಿಯೋಗ್ರಾಫಿಕ್ ಮತ್ತು ದೀರ್ಘಾಯುಸ್ಸಿನ ಸಂಶೋಧಕರು ಒಟ್ಟುಗೂಡಿ ದೀರ್ಘಾಯುಸ್ಸಿನ ರಹಸ್ಯ ಕಂಡುಹಿಡಿಯಲು ಬ್ಲೂ ಝೋನ್ ಪ್ರಾಜೆಕ್ಟ್ ಎಂಬ ಸಮಿತಿಯೊಂದನ್ನು ರಚಿಸಿಕೊಂಡರು. ಈ ಸಮಿತಿ ಸಾಕಷ್ಟು ಅಧ್ಯಯನ ನಡೆಸಿ ವಿಶ್ವದಲ್ಲಿ ಜನ ಹೆಚ್ಚು ಕಾಲ ಬದುಕುವ 5 ಪ್ರದೇಶಗಳನ್ನು ಗುರುತಿಸಿ ಅವನ್ನು ಬ್ಲೂ ಝೋನ್ ಎಂದು ಕರೆದರು. ಇಂತಹ ಸ್ಥಳಗಳಲ್ಲಿ ವಾಸಿಸುವ ಜನ ಉಳಿದವರಿಗಿಂತಾ 10 ಪಟ್ಟು ಹೆಚ್ಚು ಕಾಲ





ಬದುಕುತ್ತಾರೆ. ಜನಸಂಖ್ಯಾ ಶಾಸ್ತ್ರದ ಆಧಾರದ ಮೇಲೆ ಭೌಗೋಳಿಕವಾಗಿ ಅರ್ಥೈಸಲಾದ ಈ ಅಧ್ಯಯನದ ಪ್ರಕಾರ ಇಂತಹಾ ಸ್ಥಳಗಳಲ್ಲಿ ಜನ ನಿರಾಯಾಸವಾಗಿ 100 ವರ್ಷಗಳಿಗೂ ಹೆಚ್ಚು ಕಾಲ ಬದುಕಿರುವುದು ಕಂಡು ಬಂದಿತ್ತು. ಆಗ ವಿಜ್ಞಾನಿಗಳ ಮುಂದೆ ಇದ್ದ ಪ್ರಶ್ನೆ ಒಂದೇ ! ಇವರ ದೀರ್ಘಾಯುಸ್ಸಿಗೆ ಕಾರಣವೇನು ?

ಈ ಪ್ರಶ್ನೆಗೆ ಉತ್ತರ ಕೊಟ್ಟವರೂ ಬ್ಲೂ ಝೋನ್‌ನಲ್ಲಿ ವಾಸಿಸುತ್ತಿದ್ದ ಜನರೇ ! ದೀರ್ಘಾಯುಸ್ಸಿಗೆ ಕಾರಣ 9 ರ ಶಕ್ತಿಯಂತೆ. ಇದರ ಬಗ್ಗೆ ಯೋಜನೆಯ ಸದಸ್ಯ ಡ್ಯಾನ್ ಬ್ಯುಟ್ನೆರ್ ಬರೆದ ದಿ ಬ್ಲೂ ಝೋನ್ಸ್ ಪುಸ್ತಕ ಬೆಸ್ಟ್ ಸೆಲ್ಲರ್ ಆಗಿ ಓಪ್ರಾ ವಿನ್‌ಫ್ರೇಯಿಂದ ಬಿಲ್ ಕ್ಲಿಂಟನ್‌ವರೆಗೂ ಓದುಗ ಸಮೂಹ ಬೆಳೆಯಿತು. ನಂತರ ಒಂದು ವರ್ಷದ ಸಮಯದಲ್ಲಿ ನಗರವಾಸಿಗಳ ಆಯು ಪ್ರಮಾಣ ಕನಿಷ್ಠ 2.9 ವರ್ಷ ಹೆಚ್ಚಿತಂತೆ. ಹೆಲ್ತ್ ಕೇರ್ ವಿಮಾ ಕ್ಲೈಮ್ ಶೇ.49 ರಷ್ಟು ಕಡಮೆಯಾಯಿತು ಎಂಬ ಮಾಹಿತಿ ನೀಡಲಾಗಿದೆ.

ಬ್ಲೂ ಝೋನ್ ಯೋಜನೆ ಜನರ ಆಯುಃ ಪ್ರಮಾಣ ಹೆಚ್ಚಳ, ಉತ್ತಮ ಹಾಗೂ ದೀರ್ಘ ಜೀವನ ತನ್ನ ಮೂಲ ಉದ್ದೇಶ ಎಂದು ಹೇಳಿಕೊಂಡು ಆ ನಿಟ್ಟಿನಲ್ಲಿ ಸಾಗಿದೆ. ತಾನು ಕಂಡು ಹಿಡಿದ ಕಠತಿಜಡಿ ಠಜಿ 9 ಮಹತ್ವವನ್ನು ಸಾರುತ್ತಾ ಹೊರಟಿದೆ.

ನವ ಮಂತ್ರ

ದೈಹಿಕ ಮತ್ತು ಮಾನಸಿಕ ಜೀವನ ವಿಧಾನದ ಮೇಲೆ ಆಧರಿಸಿದ 9 ಸೂತ್ರಗಳು ಜೀವಾವಧಿಯ ಹೆಚ್ಚಳಕ್ಕೆ ಕಾರಣವಾಗಿದ್ದು ಅವುಗಳನ್ನು ಡ್ಯಾನ್ ಬ್ಯುಟ್ನೇರ್ ಕೆಳಕಂಡಂತೆ ಪಟ್ಟಿ ಮಾಡಿದ್ದಾರೆ.

1. ವೇಗದ ಓಟ ಮತ್ತು ದೈಹಿಕ ಶ್ರಮದ ಕೆಲಸ ಬೇಡ. ಮನೆಯ ಸುತ್ತಲ ಕೈತೋಟದ ನೋಡಿಕೊಳ್ಳಿ, ನಡೆಯುವ, ಸೈಕಲ್ ತುಳಿಯುವ, ಕಸ ಗುಡಿಸುವ ಸಣ್ಣ–ಸಣ್ಣ ಕೆಲಸಗಳನ್ನು ಪ್ರತಿದಿನ ಮಾಡಿರಿ.

2. ನಡಿಗೆಯ ಅಭ್ಯಾಸ ಮಾಡಿಕೊಳ್ಳಿ, ಬೆಳಗಿನ ನಡಿಗೆಗೆ ಕಾರಣವೊಂದನ್ನು ಕಂಡುಕೊಳ್ಳಿ, ನಿಮ್ಮ ಆರೋಗ್ಯದ ಬಗ್ಗೆ ಎಚ್ಚರಿಕೆ ಇಡಿ.

3. ಮಾನಸಿಕ ಒತ್ತಡ ಇಳಿಸಿಕೊಳ್ಳೀ. ಅದಕ್ಕಾಗಿ ಧ್ಯಾನ ಅಥವಾ ಸಣ್ಣ ನಿದ್ರೆಯ ನೆರವು ಪಡೆಯಿರಿ.



4. ಕಡಮೆ ಉಣ್ಣಿರಿ. ನಿಮ್ಮ ಹೊಟ್ಟೆ ಶೇ. 80 ರಷ್ಟು ತುಂಬಿದೆ ಎಂಬ ಅನುಭವವಾದಾಗ ತಿನ್ನುವುದನ್ನು ನಿಲ್ಲಿಸಿ. ನಿಮ್ಮ ಊಟದ ಶೇ. 20 ಕ್ಯಾಲೋರಿ ಕಡಮೆ ಮಾಡಿ.

5. ಮಾಂಸ ಕಡಮೆ ತಿನ್ನಿ. ಶತಾಯುಷಿಗಳ ಮುಖ್ಯ ಆಹಾರ ಬೀನ್ಸ್ ಅನ್ನು ದಿನಕ್ಕೆ ಎರಡು ಹಿಡಿಯಷ್ಟು ತಿನ್ನಿ.

6. ನಿಮ್ಮ ಮದ್ಯಪಾನ ಮಿತಿಯಲ್ಲಿರಲಿ. ಇದ್ದುದರಲ್ಲಿ ರೆಡ್ ವೈನ್ ಉತ್ತಮ.

7. ನೀವು ಮಾಡುತ್ತಿರುವ ಕೆಲಸದಲ್ಲಿ ನಂಬಿಕೆ ಇರಲಿ. ಪ್ರತೀ ದಿನ ಹೊಸತೊಂದು ಉದ್ದೇಶ ಹುಡುಕಿಕೊಂಡು ಪೂರ್ಣಗೊಳಿಸಿ.

8. ಪ್ರೀತಿಗೆ ಪ್ರಾಶಸ್ತ್ಯ ಇರಲಿ. ಏಕೈಕ ಸಂಗಾತಿಯನ್ನು ಹೊಂದಿರಿ. ನಿಮ್ಮ ಕುಟುಂಬದ ಹಿರಿಯರೊಂದಿಗೆ ವಾಸ ಮಾಡಿ.

9. ಸುತ್ತಲ ಸಮಾಜದೊಂದಿಗೆ ಉತ್ತಮ ಬಾಂಧವ್ಯ ಇರಲಿ. ಅರ್ಥಪೂರ್ಣ ಸಂಬಂಧಗಳನ್ನು ಹೊಂದಿರಿ. ಆಧ್ಯಾತ್ಮಿಕ ಚಿಂತನೆ ಇರಲಿ.

ನವಮಂತ್ರದ ಪ್ರಭಾವದಿಂದ ಬ್ಲೂ ಝೋನ್ ಪ್ರಾಜೆಕ್ಟಿನಲ್ಲಿ 37 ಸಮೂಹಗಳು, 1685 ಸಂಸ್ಥೆಗಳು ಭಾಗವಹಿಸುತ್ತಿದ್ದು 1,65,028 ಜನ ತಾವು 9 ರ ಮಂತ್ರಕ್ಕೆ ಬದ್ಧವಾಗಿರುವುದಾಗಿ ಪ್ರಮಾಣ ಮಾಡಿದ್ದಾರೆ ಹಾಗೂ 22.50 ಲಕ್ಷ ಜನ ಇದರ ಪ್ರಯೋಜನ ಪಡೆದಿದ್ದಾರೆ ಮತ್ತು 9 ರ ಲೈಫ್ ಸ್ಟೈಲ್ ಸೂತ್ರಗಳನ್ನು ಪಾಲಿಸಿದವರ ಆಯು ಪ್ರಮಾಣ 10–12 ವರ್ಷಗಳಷ್ಟು ಹೆಚ್ಚಿದೆ ಎಂದು ಬ್ಲೂ ಝೋನ್ ಜಾಲತಾಣ ಪ್ರಕಟಿಸಿದೆ.

ಬ್ಲೂಝೋನ್ ಎಂಬ ನೀಲಿ ನೆಲೆ

ವಿಶ್ವ ಐದು ಸ್ಥಳಗಳನ್ನು ಬ್ಲೂಝೋನ್ ಎಂದು ಗುರುತಿಸಿ ಒಪ್ಪಿಕೊಂಡಿದೆ. ಅವುಗಳೆಂದರೆ–

1. ಸಾರ್ಡೀನಿಯಾ, ಇಟಲಿ
2. ಇಕಾರಿಯಾ, ಗ್ರೀಸ್
3. ಓಕಿನಾವಾ, ಜಪಾನ್
4. ನಿಕೋಯಾ, ಕೋಸ್ಟರೀಕಾ
5. ಲೋಮಾ ಲಿಂಡಾ, ಕ್ಯಾಲಿಫ಼ೋರ್ನಿಯಾ.



ಇಟಲಿ ದೇಶದ ಬೆಟ್ಟ ಪ್ರದೇಶದಲ್ಲಿರುವ ಸಾರ್ಡೀನಿಯಾ ದ್ವೀಪ ವಿಶ್ವದಲ್ಲಿ ಅತೀ ಹೆಚ್ಚು ಶತಾಯುಷಿಗಳನ್ನು ಹೊಂದಿದೆ. ಇಲ್ಲಿನ ಜನರ ಪ್ರಮುಖ ಆಹಾರವೆಂದರೆ ಕಡಮೆ ಪ್ರೋಟೀನ್ ಉಳ್ಳ ಬೀನ್ಸ್, ಮ್ಯಾಸ್ಟಿಕ್ ಎಣ್ಣೆ, ಹಸಿರು ಹುಲ್ಲು ಮಾತ್ರಾ ತಿನ್ನುವ ಕುರಿಗಳ ಹಾಲಿನ ಚೀಸ್‌ನಂತಹಾ ಆರೋಗ್ಯಪೂರ್ಣ ತಿನಿಸು ಮಾತ್ರ. ಇವರಿಗೆ ಮಧುಮೇಹ, ಕ್ಯಾನ್ಸರ್ ಮುಂತಾದ ಖಾಯಿಲೆಗಳು ಕಾಡುತ್ತಿಲ್ಲ. ಮಾಂಸಾಹಾರ ಇವರ ದಿನನಿತ್ಯದ ಆಹಾರವಾಗಿಲ್ಲ. ಇಲ್ಲಿನ ಜನರಲ್ಲಿ ಆಯುಸ್ಸನ್ನು ಹೆಚ್ಚಿಸುವ ಒ26 ಎಂಬ ವಿಶಿಷ್ಟ ಅನುವಂಶೀಕ ಮಾರ್ಕರ್ ಕಂಡು ಬಂದಿದೆ. ದಿನನಿತ್ಯ ಸಾಕಷ್ಟು ನಡೆಯುತ್ತಾ ತಮ್ಮ ಬಳಗದೊಂದಿಗೆ ಕಾಲ ಕಳೆಯುತ್ತಾ ಬದುಕುತ್ತಿರುವ ಸಾರ್ಡೀನಿಯನರು ವಿಶ್ವದ ಟಾಪ್ ದೀರ್ಘಾಯುಷಿಗಳು.

ಟರ್ಕಿ ದೇಶದ ಏಜಿಯನ್ ಸಮುದ್ರದ ಬಳಿಇರುವ ಇಕಾರಿಯಾ ಎಂಬ ಸುಂದರ ದ್ವೀಪದಲ್ಲಿ ಜನ ನಡು ವಯಸ್ಸಿನಲ್ಲಿ ಸಾವನ್ನಪ್ಪುವುದು ತೀರಾ ವಿರಳವಾಗಿದೆ. ಇವರ ಡಯೆಟ್ ಸಸ್ಯಾಹಾರ, ಆರೋಗ್ಯಕಾರಿ ಡೈರಿ ವಸ್ತುಗಳು ಮತ್ತು ಕಡಮೆ ಪ್ರಮಾಣದ ಮಾಂಸದಿಂದ ಕೂಡಿದೆ. ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುವ ಇಲ್ಲಿನ ಪ್ರತೀ ಮೂವರಲ್ಲಿ ಒಬ್ಬರು ಶತಾಯುಷಿಗಳು. ಮೇಕೆಯ ಹಾಲು ಮತ್ತು ಕೆಂಪು ವೈನ್ ಇವರ ಮೆಚ್ಚಿನ ಪಾನೀಯಗಳು. ಬೀನ್ಸ್ ಕಾಳು, ಹಸಿರು ಸೊಪ್ಪು, ಗ್ರೀನ್ ಟೀ ಮತ್ತು ಮಧ್ಯಾಹ್ನದ ಕಿರು ನಿದ್ರೆ ತಮ್ಮನ್ನು ಹೃದಯದ ಖಾಯಿಲೆಗಳಿಂದ ದೂರವಿಟ್ಟಿದೆ ಎನ್ನುತ್ತಾರೆ. ಪಾನಿಗಿರಿಯಾ ಎಂಬ ಹಬ್ಬದಲ್ಲಿ ಹಾಡಿ–ಕುಣಿದು ಮುಕ್ತವಾಗಿ ನಗುವ ಇವರ ವಯಸ್ಸು ಏರುತ್ತಲೇ ಇಲ್ಲ.

ಜಪಾನ್ ದೇಶದ ಒಂದು ದೊಡ್ಡ ದ್ವೀಪ ಓಕಿನಾವದ ಮಹಿಳೆಯರು ದೀರ್ಘಾಯುಷಿಗಳು. ಇವರ ಮುಖ್ಯ ಆಹಾರ ಸಿಹಿ ಬಟಾಟೆ, ಸೋಯಾಬೀನ್, ಅರಿಶಿನ, ಕಹಿಹಾಗಲ, ಹಸಿರು ಸೊಪ್ಪು ಇತ್ಯಾದಿ ತರಕಾರಿಗಳು, ಮೀನು ಮತ್ತು ಅನ್ನ. ಇವರು ಕೆಂಪು ಮಾಂಸ ತಿನ್ನುವುದೇ ಇಲ್ಲ. ತಮ್ಮ ಆಹಾರ ಸೂತ್ರವನ್ನು ಓಕಿನಾವ ಜನ ಹರಾ ಹಚಿ ಬೂ ಎನ್ನುತ್ತಾರೆ. ಇದು ಕನ್ಫ್ಯೂಷಿಯಸ್‌ನ ಮಂತ್ರ. ಹಾಗೆಂದರೆ ನನ್ನ ಹೊಟ್ಟೆಯ 80 ಭಾಗ ಮಾತ್ರ ತುಂಬಿರಲಿ ಎಂದರ್ಥ. ಇಲ್ಲಿನ 42,000 ಜನಸಂಖ್ಯೆಯಲ್ಲಿ 457 ಶತಾಯುಷಿಗಳಿದ್ದಾರೆ. ಇಲ್ಲಿನ ಮಹಿಳೆಯರ ಸರಾಸರಿ ಆಯುಸ್ಸು 86 ವರ್ಷಗಳಾದರೆ ಪುರುಷರ ಸರಾಸರಿ ವಯಸ್ಸು



78ವರ್ಷಗಳು. ಈ ಜನ ತಮ್ಮ ಹಿರಿ ವಯಸ್ಸಿನಲ್ಲಿ ದಿನಕ್ಕೆ ಕನಿಷ್ಟ 11 ಗಂಟೆಗಳು ಹೊಲಗಳಲ್ಲಿ ಕೆಲಸ ಮಾಡುತ್ತಾರೆ. ಇವರಲ್ಲಿ ವಯೋ ಸಹಜ ಖಾಯಿಲೆಗಳಿಂದ ನರಳುತ್ತಿರುವವರು ಇಲ್ಲವೇ ಇಲ್ಲ. ಇವರು ತಮ್ಮನ್ನು 70 ರ ಬಾಲಕ, 80 ರ ಯುವಕ ಎಂದು ಕರೆದುಕೊಳ್ಳುತ್ತಾರೆ.

ಮಧ್ಯ ಅಮೇರಿಕಾದ ಕೋಸ್ಟರೀಕಾದ ಬಳಿಯ ಒಂದು ಅದ್ಭುತ ದ್ವೀಪಕಲ್ಪ ನಿಕೋಯಾ. ದ್ವೀಪದಲ್ಲಿ 24,946 ಜನ ವಾಸ ಮಾಡುತ್ತಿದ್ದಾರೆ. ಇಲ್ಲಿ ಸಾವಿನ ಪ್ರಮಾಣ ಅತೀ ಕಡಮೆ ಇದೆ. ಪುರುಷ ಶತಾಯುಷಿಗಳ ಸಂಖ್ಯೆ ಇಲ್ಲಿ ಹೆಚ್ಚಾಗಿದೆ. ಇಲ್ಲಿನ ಜನ ಸ್ವಭಾವತಃ ಶ್ರಮಜೀವಿಗಳು. ಅವರ ಸಾಮಾಜಿಕ ಸಂಬಂಧಗಳ ಮಟ್ಟ ಉತ್ತಮವಾಗಿದೆ.

ಅಮೇರಿಕಾದ ಲೋಮಲಿಂಡಾ ಎಂಬ ಬೆಟ್ಟ ಪ್ರದೇಶದಲ್ಲಿ ವಾಸಿಸುವ ಜನ ಉಳಿದ ಅಮೇರಿಕನರಿಗಿಂತಾ ಕನಿಷ್ಟ 10 ವರ್ಷ ದೀರ್ಘಾಯುಷಿಗಳು.ಇವರ ಮುಖ್ಯ ಆಹಾರ ಧಾನ್ಯಗಳು, ಹಣ್ಣು–ಹಂಪಲು ಮತ್ತು ತರಕಾರಿ. ಇಲ್ಲಿನ ಬಹುತೇಕ ಜನ 80–90 ವರ್ಷಗಳವರೆಗೆ ಜೀವಿಸುವುದು ಸಾಮಾನ್ಯ ಸಂಗತಿಯಾಗಿದೆ. ತಮ್ಮ ದೀರ್ಘಾಯುಷ್ಯಕ್ಕೆ ಶುದ್ಧ ನೀರು, ಶುದ್ಧ ಗಾಳಿ ಮತ್ತು ಧಾರಾಳ ಸೂರ್ಯನ ಬಿಸಿಲು ಕಾರಣ ಎನ್ನುತ್ತಾರೆ. ಲೋಮಾಲಿಂಡಾದಲ್ಲಿ ಯಾರು ಕೆಂಪುಮಾಂಸವನ್ನು ಮಾರುವುದಿಲ್ಲ ಮತ್ತು ಜಂಕ್ ಫ಼ೂಡ್ ಮತ್ತು ಪ್ಯಾಕ್ಡ್ ಸೇವನೆ ಮಾಡುತ್ತಿಲ್ಲ.

ಇವೆಲ್ಲಾ ಬ್ಲೂಝೋನುಗಳ ಮುಖ್ಯ ಆಹಾರ ಪದ್ಧತಿ ಸಸ್ಯಾಹಾರ ಮತ್ತು ಉತ್ತಮ ನಾರಿನಂಶ ಹೊಂದಿದ ಆಹಾರ ವಸ್ತುಗಳ ಸೇವನೆಯನ್ನು ಒಳಗೊಂಡಿದೆ. ಇದನ್ನು ಬ್ಲೂಝೋನ್ ಡಯಟ್ ಅಥವಾ ದೀರ್ಘಾಯುಷಿ ಡಯೆಟ್ ಎಂದು ಕರೆಯಲಾಗುತ್ತಿದೆ.

ದೀರ್ಘಾಯುಷೀ ಡಯೆಟ್

ಡಾ.ಜೋಯಲ್ ವಲ್ಲಾಚ್ ಎಂಬ ಆರೋಗ್ಯ ಮತ್ತು ವೆಲ್‌ನೆಸ್ ಸಂಶೋಧಕ ನಮ್ಮ ಅನುವಂಶಿಕ ಸಾಮರ್ಥ್ಯ ನಮ್ಮನ್ನು ಸುಮಾರು 120–140 ವರ್ಷಗಳವರೆಗೆ ಜೀವಿಸಬಲ್ಲಷ್ಟು ಶಕ್ತಿಯನ್ನು ಹೊಂದಿದೆ ಎನ್ನುತ್ತಾರೆ. ಅದಕ್ಕೆ ಅವರು ರಶ್ಯನ್, ಅಮೇರಿಕನ್ ಮತ್ತು ಎಬ್ಕಾನಿಯನ್ನರ ಉದಾಹರಣೆ ನೀಡುತ್ತಾರೆ. ಸಿರಿಯನ್ ಮನುಷ್ಯನೊಬ್ಬ 133 ವರ್ಷ ಬದುಕಿದ್ದು ದಾಖಲೆಯಾಗಿದೆ. ಹಾಗಾದರೆ ದೀರ್ಘಾಯುಷ್ಯದ ರಹಸ್ಯ ಎಲ್ಲಿದೆ ಎಂಬ ಪ್ರಶ್ನೆಗೆ ವಿಜ್ಞಾನಿಗಳು ಅದು ನಮ್ಮ ಆಹಾರ





ಪದ್ಧತಿಯಲ್ಲಿದೆ ಎನ್ನುತ್ತಾರೆ. ಖೂಳರು ತಿನ್ನಲು ಮತ್ತು ಕುಡಿಯಲು ಬದುಕುತ್ತಾರೆ, ಆದರೆ ಸಜ್ಜನರು ಬದುಕಿಗಾಗಿ ತಿನ್ನುತ್ತಾರೆ ಮತ್ತು ಕುಡಿಯುತ್ತಾರೆ ಎನ್ನುತ್ತಾನೆ ಸಾಕ್ರೆಟಿಸ್.

ದೀರ್ಘಾಯುಷಿಗಳು ತಮ್ಮ ಆಹಾರದ ಶೇ.73 ಭಾಗ ಕಾರ್ಬೋಹೈಡ್ರೇಟ್, ಶೇ.15–18 ಭಾಗ ಸಸ್ಯಜನ್ಯ ಕೊಬ್ಬು ಮತ್ತು ಶೇ. 10–13 ಭಾಗ ಪ್ರೋಟೀನ್ ಮೂಲಕ ದೇಹಕ್ಕೆ ಬೇಕಾದ ಸುಮಾರು 1700–1800ಕ್ಯಾಲೋರಿಗಳನ್ನು

ಪಡೆಯುತ್ತಾರೆ. ಇವರ ಆಹಾರದಲ್ಲಿ ಕಡಮೆ ಉಪ್ಪು, ಸಕ್ಕರೆ ರಹಿತ ಹಾಗೂ ಸಂಸ್ಕರಿತ ಆಹಾರ ಇರುವುದಿಲ್ಲ. ಓಕಿನಾವನರು ಮಾಂಸಾಹಾರಿಗಳಾದರೂ ಮೇಲಿನ ಡಯಟ್ಟಿಗೆ ನಿಷ್ಠರಾಗಿರುತ್ತಾರೆ.

ವಿಲ್ಕಬಂಬಾದ ಜನ ದೀರ್ಘಾಯುಷಿಗಳಾಗಿರಲು ಅವರ ಶ್ರಮಭರಿತ ಜೀವನ ಶೈಲಿ, ತಾಜಾ ತರಕಾರಿ–ಹಣ್ಣು, ಕಾಳು ಸೇವನೆ ಕಾರಣ. ಹುಂಜಾದ ಜನ ಆದಷ್ಟೂ ಹಸಿ ತರಕಾರಿ ಮತ್ತು ಕಾಳುಗಳನ್ನು ಬಳಸುತ್ತಾರೆ. ಗ್ರೀನ್ ಟೀ, ಸ್ಪಿನಾಚ್ (ಬಸಳೆ) ಸೊಪ್ಪು, ಹುರಿದ ಬೆಳ್ಳುಳ್ಳಿ ಅವರ ದೈನಂದಿನ ಆಹಾರವಾಗಿದೆ.

ದೀರ್ಘಾಯುಷ್ಯಕ್ಕೆ ಮೊದಲನೆಯದಾಗಿ ಸಾವಯವ ಮತ್ತು ತಾಜಾ ಆಹಾರ ಸೇವನೆ ಅಗತ್ಯ. ಕಾರ್ಬೋಹೈಡ್ರೇಟ್ ಜಾಸ್ತಿ ಮತ್ತು ಪ್ರೋಟೀನ್ ಮತ್ತು ಕೊಬ್ಬು ಕಡಮೆ ಇರಬೇಕು. ಸಂಸ್ಕರಿತ ಆಹಾರದ ಬಳಕೆ ಬಿಡಬೇಕು. ಕುಲಾಂತರಿ ಆಹಾರ, ಕೃತಕ ಬಣ್ಣ ಸೇರಿಸಿದ, ಹೆಚ್ಚುವರಿ ಸತ್ವಗಳನ್ನು ಸೇರಿಸಿ ಸಂಸ್ಕರಿಸಿದ ದೇಹಕ್ಕೆ ಒಳ್ಳೆಯದಲ್ಲ. ಆಹಾರವನ್ನು ಔಷಧಿಯಂತೆ ಬಳಸಿ ಎನ್ನುವ ಹಿಪ್ಪೋಕ್ರೇಟಸ್ ಮಾತು ಸ್ಮರಣೀಯವಾಗಿದೆ.

ಎರಡನೆಯದಾಗಿ ವಿಟಮಿನ್–ಡಿ ಮತ್ತು ವ್ಯಾಯಾಮ ದೇಹಕ್ಕೆ ಅಗತ್ಯ ಎನ್ನುವುದನ್ನು ಮರೆಯಬಾರದು. ಆದಷ್ಟೂ ಸೂರ್ಯನ ಬೆಳಕಿನಿಂದ ಸಹಜವಾದ ವಿಟಮಿನ್–ಡಿ ಪಡೆಯುವುದು ಒಳ್ಳೆಯದು. ಹೊರಗೆ ಕನಿಷ್ಠ 20 ನಿಮಿಷ ವ್ಯಾಯಮ ಮಾಡುವುದು ದೇಹಕ್ಕೆ ಬಲ ನೀಡುತ್ತದೆ. ವ್ಯಾಯಾಮಕೆ ಸಮಯ ಮೀಸಲಿಡದಿದ್ದವರು ಖಾಯಿಲೆಗಾಗಿ ಸಮಯ ಖರ್ಚು ಮಾಡಲೇ ಬೇಕಾಗುತ್ತದೆ.

ಮೂರನೆಯದಾಗಿ ನಮ್ಮ ಸಾಮಾಜಿಕ ಸಂಬಂಧಗಳೂ ಕೂಡಾ ನಮ್ಮ ಆರೋಗ್ಯವನ್ನು ಉತ್ತಮವಾಗಿಡಬಲ್ಲವು. ದೀರ್ಘಾಯುಷಿಗಳು ಸಾಮನ್ಯವಾಗಿ ತಮ್ಮ ಸುತ್ತಲ ಜಗತ್ತಿನೊಂದಿಗೆ ಅವಿನಾಭಾವ ಸಂಬಂಧ ಬೆಳೆಸಿಕೊಂಡಿರುತ್ತಾರೆ, ಅದರ ಆಗು–ಹೋಗುಗಳಿಗೆ ಕ್ರಿಯಾಶೀಲವಾಗಿ ಸ್ಪಂದಿಸುತ್ತಾರೆ.

ನಾಲ್ಕನೆಯದಾಗಿ ಆಧ್ಯಾತ್ಮಿಕ ಜ್ಞಾನ ಮತ್ತು ಏನಾದರೂ ಧ್ಯೇಯ–ಉದ್ದೇಶಗಳನ್ನು ಹೊಂದಿರಬೇಕು. ಆಧ್ಯಾತ್ಮಿಕ ಜ್ಞಾನದಿಂದ ಆಂತರಿಕವಾಗಿ ಮನಸ್ಸು ಮತ್ತು ಪ್ರಾಣ ಬಲವಾಗುತ್ತವೆ. ಸಾಮಾಜಿಕ ಧ್ಯೇಯೋದ್ದೇಶಗಳಿಂದ ಜಗತ್ತಿಗೆ ಮತ್ತು ಬದುಕಿಗೆ ಬಲ ಸಿಗುತ್ತದೆ. ಕಷ್ಟ ಸಹಿಷ್ಣುತೆ ಹೆಚ್ಚುತ್ತದೆ.

ಮೇಲಿನ ಡಯೆಟ್ ಮತ್ತು ಜೀವನಶೈಲಿಯನ್ನು ಅಳವಡಿಸಿಕೊಂಡ ಬದುಕಿಗೆ ವಿಶ್ವದ ಟಾಪ್ ಕಿಲ್ಲರ್‌ಗಳಾದ ಹೃದಯದ ಖಾಯಿಲೆ, ಕ್ಯಾನ್ಸರ್, ಪಾರ್ಶ್ವವಾಯು, ಶ್ವಾಸಕೋಶ ಸಂಬಂಧೀ ಖಾಯಿಲೆ, ನ್ಯುಮೋನಿಯಾ, ಮಧುಮೇಹ, ಆಲ್ಜೀಮರ್ಸ್ ಕಾಡುವುದಿಲ್ಲ.

ದೀರ್ಘಾಯುಷ್ಯದ ಒಲವನ್ನು ಹೊಂದುವುದರಿಂದ ಜೆನೆಟಿಕ್ ಲಾಟರಿ ಗೆದ್ದಂತಾಗುವುದಿಲ್ಲ. ಅದಕ್ಕೆ ಕಟು ಪ್ರಯತ್ನ ಬೇಕಾಗುತ್ತದೆ. ಕೆಲವು ಓಕಿನಾವರು ಬ್ರೆಜಿಲ್ ದೇಶಕ್ಕೆ ವಲಸೆ ಹೋಗಿ ಅಲ್ಲಿನ ಡಯೆಟ್ ಅಭ್ಯಾಸ ಮಾಡಿಕೊಂಡದ್ದರಿಂದ ಅವರ ಜೀವಿತಾವಧಿ ಸುಮಾರು 17 ವರ್ಷ ಕಡಮೆಯಾಯಿತು ಎಂದು ವರದಿಗಳು ತಿಳಿಸುತ್ತವೆ.

ಆರೋಗ್ಯವೆಂಬ ಐಶ್ವರ್ಯವನ್ನು ಹೊಂದಲು ಸಸ್ಯಾಹಾರ ಉತ್ತಮ. ಆಹಾರವು ಆದಷ್ಟು ಕಚ್ಚಾ ರೂಪದಲ್ಲಿದ್ದರೆ ಒಳ್ಳೆಯದು. ದೇಹದ ತೂಕ ಮಿತಿಯಲ್ಲಿದ್ದರೆ ಅನೇಕ ಅನುಕೂಲಗಳಿವೆ. ಮಾಂಸಹಾರಿ, ಸಸ್ಯಾಹಾರಿ ಪ್ರಾಣಿಗಳ ದೇಹ ರಚನೆಯಲ್ಲಿ ಅಗಾಧ ವ್ಯತ್ಯಾಸವಿದೆ. ಮನುಷ್ಯ ಮೂಲತಃ ಸಸ್ಯಾಹಾರಿಯಾಗಿದ್ದು ಅದನ್ನೇ ಅಳವಡಿಸಿಕೊಳ್ಳುವುದು ಸೂಕ್ತ.

ಭಾರತ ಮತ್ತು ದೀರ್ಘಾಯುಷ್ಯ

ವಿಶ್ವದ ಇತರೆಡೆಗಳಿಗೆ ಹೋಲಿಸಿದರೆ ಭಾರತೀಯರ ಆಯುಃಪ್ರಮಾಣ ಕಡಮೆ ಇದ್ದು ಸುಮಾರು 66 ವರ್ಷದಷ್ಟಿದೆ. ಕೆಲವು ಶತಮಾನಗಳ ಹಿಂದೆ ಭಾರತದಲ್ಲೂ ದೀರ್ಘಾಯುಷಿಗಳಿದ್ದರು. ಬ್ರಿಟೀಷ್ ಆಡಳಿತದ ಕಾಲದಲ್ಲಿ ಸಾಮಾಜಿಕ ಪರಿಸ್ಥಿತಿಗಳ ಬದಲಾವಣೆ, ಬಡತನ, ಕ್ಷಾಮ, ಕೈಗಾರಿಕೀಕರಣ ಮುಂತಾದ ಅಂಶಗಳು ಬದುಕಿನ ಹಾದಿ ಕೆಡಿಸಿದವು. ಖ್ಯಾತ ಗಾಂಧಿವಾದಿ ಜೆ.ಸಿ.ಕುಮಾರಪ್ಪ (1892–1960) ಬ್ಯಾಕ್ ಟು ಬೇಸಿಕ್ಸ್ ಎಂಬ ತತ್ವ ಪ್ರತಿಪಾದಿಸಿ ಮೆಗಾ ಕೈಗಾರಿಕೆಗಳ ಸ್ಥಾಪನೆ, ಗುಡಿ ಕೈಗಾರಿಕೆಗಳ ನಾಶವನ್ನು ವಿರೋಧಿಸಿದರು.

ಆಯುರ್ವೇದವು ಅತಿಯೋಗ, ಹೀನಯೋಗ, ಮಿಥ್ಯಯೋಗ, ಕಾಲ, ಅರ್ಥ ಮತ್ತು ಬುದ್ಧಿಗಳು ಖಾಯಿಲೆಗೆ ಕಾರಣವಾಗುತ್ತವೆ ಎನ್ನುತ್ತದೆ. ತ್ರಿದೋಷಗಳಾದ ವಾತ, ಪಿತ್ಥ ಮತ್ತು ಕಫಗಳನ್ನು ಸರಿಯಾಗಿಟ್ಟುಕೊಳ್ಳಬೇಕಾಗುತ್ತದೆ. ಈ ದೋಷಗಳು ಮಧುರ (ಸಿಹಿ), ಹುಳಿ (ಆಮ್ಲ), ಉಪ್ಪು (ಲವಣ), ಕಟು (ಖಾರ), ತಿಕ್ತ (ಕಹಿ) ಮತ್ತು ಕಷಾಯ (ಸಂಕೋಚಕ)ಗಳ ಅತಿ ಬಳಕೆಯಿಂದ ಉಂಟಾಗುತ್ತದೆ.

ದೇಹ ಪ್ರಕೃತಿಗಾಗಿ ನಾಲ್ಕು ವಿಧಗಳ ಕೊಬ್ಬು ಪದಾರ್ಥಗಳಿವೆ. ಅವುಗಳೆಂದರೆ ತುಪ್ಪ, ಎಣ್ಣೆ, ಪ್ರಾಣಿಗಳ ಕೊಬ್ಬು ಮತ್ತು ಅಸ್ಥಿ ಮಜ್ಜೆ ಇವುಗಳ ಮಿತ ಬಳಕೆ ಉತ್ತಮ. ನಾಲ್ಕು ವಿಧಗಳ ಲವಣಗಳ (ಉಪ್ಪು) ಉಲ್ಲೇಖವಿದೆ. ಸೌವರ್ಚಲ, ಸೈಂಧವ, ವಿತ, ಔದ್ಭಿದ ಮತ್ತು ಸಮುದ್ರ. ಇವುಗಳ ಅತಿ ಬಳಕೆ ದೇಹ ಪ್ರಕೃತಿಗೆ ಮಾರಕ.

ಭಾರತದ ಋಗ್ವೇದದ ಒಂಬತ್ತನೇ ಅಧ್ಯಾಯದಲ್ಲಿ ಸೋಮ ಸಸ್ಯದ ಬಗ್ಗೆ ಹೇಳಲಾಗಿದೆ. ಇದು ದೀರ್ಘಾಯುಷ್ಯವನ್ನು ನೀಡುತ್ತಿತ್ತು ಎನ್ನಲಾಗಿದೆ. ಆಯುರ್ವೇದದಲ್ಲಿ ನವ ಯೌವ್ವನವನ್ನು ನೀಡುವ ಕೂಡಾ ರಸಾಯನಗಳ ಬಗ್ಗೆ ಹೇಳಲಾಗಿದೆ. ಇವುಗಳ ಸೇವನೆಯಿಂದ ಕನಿಷ್ಠ 100 ವರ್ಷ ಬದುಕಬಹುದು. ಬ್ರಾಹ್ಮಿ ರಸಾಯನ ಮತ್ತು ವಿಡಂಗ ಕಲ್ಪಗಳ ಸೇವನೆಯಿಂದ 500 ರಿಂದ 800 ವರ್ಷಗಳ ಬದುಕು ಸಾಧ್ಯ ಎನ್ನುತ್ತವೆ ಈ ಗ್ರಂಥಗಳು. ಇನ್ನು ಅಮಲಕಾಯಸ ಬ್ರಹ್ಮ ರಸಾಯನದ ಬಳಕೆಯು ಆಯುಷ್ಯವನ್ನು 1000 ವರ್ಷಗಳಿಗೆ ಹೆಚ್ಚಿಸಬಲ್ಲದು ಎಂಬ ಹೇಳಿಕೆಗಳಿವೆ. ಸಂಜೀವಿನಿ ಸಸ್ಯ ಸತ್ತವರನ್ನೂ ಬದುಕಿಸಿ ಬದುಕಿದ್ದವರನ್ನು ಅಮರರಾಗಿಸಬಲ್ಲದು ಎನ್ನಲಾಗಿದೆ. ಅದೆಷ್ಟೋ ಮರೆತು ಹೋದ ಔಷಧೀಯ ಸಸ್ಯಗಳ ಪುನರ್ಬಳಕೆ ಸಾಧ್ಯವಾದಾಗ ಮಾತ್ರಾ ಅಯುರ್ವೇದ ಮತ್ತು ಋಗ್ವೇದದ ಸೂಚನೆಗಳ ಫಲ ಪಡೆಯಲು ಸಾಧ್ಯ.

ನಮ್ಮ ಆಹಾರ: ಅಂದು–ಇಂದು

ಅಂದು ಅನ್ನತೋ ಪ್ರಾಣಃ–ಅನ್ನತೋ ದೈವಃ ಎಂದು ಅನ್ನಕ್ಕೆ ನಮಿಸಿ ಉಣ್ಣುತ್ತಿದ್ದೆವು. ಇಂದು ಅನ್ನ ಬಾಯಿಗಿಡುವ ಮುನ್ನ ಅದರ ಮೂಲದ, ರೂಪದ ಬಗ್ಗೆ ಪರಿಶೀಲಿಸಿ ತಿನ್ನುವ ದರ್ದು ಬಿದ್ದಿದೆ. ನಮ್ಮ ಡಯಟ್ಟನ್ನೇ ಕುಲಗೆಡಿಸಿದ ಅಂಶಗಳು ನಮ್ಮ ಆಯುಸ್ಸಿನ ಕೆಲವು ವರ್ಷಗಳನ್ನು ತಿನ್ನುತ್ತಾ ನಡೆದಿದ್ದು ಭಾರತೀಯರ ಆಯು ಪ್ರಮಾಣ ಇಳಿಯುತ್ತಿದೆ. ನಮ್ಮ ಜೈವಿಕ ಗಡಿಯಾರ ಗೊಂದಲದಲ್ಲಿದೆ. ಇದನ್ನು ವಿಜ್ಞಾನಿಗಳು ಸೋಶಿಯಲ್ ಜೆಟ್‌ಲ್ಯಾಗ್ ಎಂದು ಹೆಸರಿಸಿದ್ದಾರೆ.

ಕೆಲವು ದಶಕಗಳ ಹಿಂದೆ ನಮ್ಮ ಹಿಟ್ಟು–ಸೊಪ್ಪುಗಳು ಸಾವಯವ ಶೈಲಿಯಲ್ಲಿ ಬೆಳೆಯಲ್ಪಟ್ಟು ತಾಜಾ ಆಗಿ ಮನೆ ಸೇರುತ್ತಿದ್ದವು. ಇಂದು ಹಾಗಲ್ಲ ಕೊಳಚೆ ನೀರಿನಲ್ಲಿ ರಸಗೊಬ್ಬರಗಳ ಬಳಕೆಯಿಂದ ಬೆಳೆಯಲಾದ ಹಾಗೂ ಕುಲಾಂತರಿ ಜಿಎಂ ತರಕಾರಿಗಳು ಅರಿವಿಲ್ಲದೇ ನಮ್ಮ ಹೊಟ್ಟೆ ಸೇರುತ್ತಿವೆ.



ಆವತ್ತಿನ ಧಾನ್ಯಗಳಲ್ಲಿ ಕಲಬೆರಕೆ ಎಂದರೆ ಕಲ್ಲು ಸೇರಿಸುವುದು ಮಾತ್ರವಾಗಿತ್ತು. ಆದರೆ ಇಂದು ಅದೇ ರೂಪದ ವಿಷಕಾರಿ ವಸ್ತುಗಳು ಬೆರಕೆಯಾಗುತ್ತಿವೆ. ನಕಲಿ ಅಕ್ಕಿ, ನಕಲಿ ಬೇಳೆ, ನಕಲಿ ಎಣ್ಣೆ, ನಕಲಿ ಮೊಟ್ಟೆ, ಕೀಟನಾಶಕ ಹೊಂದಿದ ಹಣ್ಣುಗಳು ಇತ್ಯಾದಿ ನಮ್ಮ ಆಹಾರದ ಭಾಗವಾಗುತ್ತಿವೆ. ಕಲಬೆರಕೆ ರಾಕ್ಷಸ ಆಗಾಧವಾಗಿ ಬೆಳೆದಿದ್ದಾನೆ.

ಅಂದು ಹೋಟೇಲುಗಳಲ್ಲಿ, ಕೆರೆ–ಕಟ್ಟೆಗಳಲ್ಲಿ ಸಹಜವಾಗಿ ನೀರುಕುಡಿಯುತ್ತಿದ್ದೆವು. ಇಂದು ನೀರು ವಿಷಪೂರಿತವಾಗಿದೆ. ರಾಸಾಯನಿಕಗಳು ಸೇರುತ್ತಾ ನೀರಿಗೆ ಬೆಂಕಿ ಬೀಳುತ್ತಿದೆ. ಮಿನರಲ್ ವಾಟರ್ ಎಂಬ ನಲ್ಲಿ ನೀರಿಗೆ ಅಡಿಕ್ಟ್ ಆಗಿದ್ದೇವೆ.

ಹಿಂದೆ ನಮ್ಮ ಹೋಟೇಲುಗಳಲ್ಲಿ ರಾಸಾಯನಿಕ ಸೇರಿಸಿರದ ಮಸಾಲೆದೋಸೆ, ವಡೆ ದೊರೆಯುತ್ತಿತ್ತು. ಇಂದು ಅವೆಲ್ಲಾ ಕೊನೆಯುಸಿರು ಎಳೆಯುತ್ತಿವೆ. ಪಿಜ್ಜಾ, ಬರ್ಗರ್, ಡೋನಟ್, ಫ್ರೈಸ್, ಕಾರ್ಬೋನೇಟೆಡ್ ಡ್ರಿಂಕ್ ನಮ್ಮ ಹೊಟ್ಟೆ ಕೆಡಿಸುತ್ತಿವೆ.

ಆವತ್ತು ಮದುವೆ ಮನೆ ಊಟ ಎಂದರೆ ಬಾಯಲ್ಲಿ ನೀರು ಬರುತ್ತಿತ್ತು. ಇಂದು ಮದುವೆ ಊಟದಲ್ಲಿ ಬೇಕಾಬಿಟ್ಟಿ ಬಳಸುತ್ತಿರುವ ಟೇಸ್ಟ್ ಪೌಡರ್ (ಅಜಿನೊಮೋಟೊ) ಉಂಡ ಕೂಡಲೆ ಕರುಳನ್ನು ಕತ್ತರಿಸುತ್ತದೆ. ಸಾವಿರ ಮಂದಿಯ ಊಟಕ್ಕೆ ಒಂದು ಚಮಚ ಬಳಸಬೇಕಾದ ಕಡೆ ಕೇಜಿಗಟ್ಟಲೆ ಸುರಿಯಲಾಗುತ್ತಿದೆ.

ಬೀದಿಬದಿಯ ಚಾಟ್ಸ್‌ನಲ್ಲಿ ಬಳಸುವ ಕೊಳೆತ ಟೊಮ್ಯಾಟೊದ ಕೆಚಪ್, ಹಿಟ್ಟು ಸೇರಿಸಿದ ಚಿಲ್ಲಿ ಸಾಸ್ ಮತ್ತು ರುಚಿಕಾರಕ ರಾಸಾಯನಿಕಗಳು ನಮ್ಮನ್ನು ನಿಧಾನವಾಗಿ ಕೊಲ್ಲುತ್ತಿವೆ.

ಅಂದು ಬೆಲ್ಲ ತಿನ್ನುತ್ತಿದ್ದ ನಾವು ಇಂದು ಅದನ್ನು ಮರೆತು ರಾಸಾಯನಿಕ ಸೇರಿದ ಸಕ್ಕರೆ ತಿನ್ನುತ್ತಾ ಡಯಾಬೆಟಿಕ್ ಆಗಿದ್ದೇವೆ. ಹೃದಯದ ಖಾಯಿಲೆ, ಕ್ಯಾನ್ಸರ್ ಹೊಂಚು ಹಾಕುತ್ತಾ ಕೂತಿವೆ.

ಮಾಂಸಾಹಾರಿಗಳು ಖುಷಿಯಿಂದ ಚಪ್ಪರಿಸಿ ಉಣ್ಣುತ್ತಿದ್ದ ಕಾಲ ಮುಗಿದಿದೆ. ಸ್ಟೀರಾಯ್ಡ್ ಇಂಜೆಕ್ಷನ್ ಪಡೆದ ಕೋಳಿ–ಕುರಿಗಳು ತಮ್ಮ ಮಾಂಸದಲ್ಲಿನ ರಾಸಾಯನಿಕ ಅಂಶಗಳನ್ನು ನಮ್ಮ ಹೊಟ್ಟೆಗೆ ಸೇರಿಸುತ್ತಿವೆ.

ಹಿಂದೆ ನಮ್ಮ ಖಾಯಿಲೆಗಳಿಗೆ ವೈದ್ಯೋ ನಾರಾಯಣೋ ಹರಿಃ ಎಂದು ಚಿಕಿತ್ಸೆ ಪಡೆಯುತ್ತಿದ್ದ ನಾವು ಇಂದು ಸೆಕೆಂಡ್ ಒಪೀನಿಯನ್ ಪಡೆಯುವ ಅನಿವಾರ್ಯತೆ ಬಂದಿದೆ. ಅಗತ್ಯವಿಲ್ಲದ ಔಷಧಿಗಳು, ಸ್ಟಿರಾಯ್ಡ್‌ಗಳು ವ್ಯಾಪಾರಿ ದೃಷ್ಟಿಯಿಂದ ಪ್ರಿಸ್ಕ್ರೈಬ್ ಮಾಡಲ್ಪಡುತ್ತಿವೆ. ವೈದ್ಯವೃತ್ತಿ ವ್ಯಾಪಾರವಾಗಿದೆ.



ನಿಧಾನವಾಗಿ ಕೊಲ್ಲುತ್ತಿರುವ ಇವುಗಳಿಂದ ಹೊರಬರಲು ನಮ್ಮ ಬದುಕಿಗೀಗ ಬ್ಯಾಕ್ ಟು ಬೇಸಿಕ್ಸ್ ಪ್ರಜ್ಞೆ ಬರಬೇಕಿದೆ. ತಮ್ಮ ಜೇಬನ್ನು ಉಬ್ಬಿಸಿಕೊಳ್ಳುವ ಪ್ರಯತ್ನದಲ್ಲಿ ಹಗಲು ರಾತ್ರಿಗಳ ಪರಿವೆಯಿಲ್ಲದೆ ಕೆಲಸ ನಿರ್ವಹಿಸುವ ಯುವಜನ ತಮ್ಮ ದೇಹವನ್ನು ಉಬ್ಬಿಸಿಕೊಳ್ಳುತ್ತಾ ಬದುಕನ್ನು ಪ್ರೋಗ್ರಾಂ ಮಾಡಿಕೊಳ್ಳುವಲ್ಲಿ ಸೋಲುತ್ತಿದ್ದಾರೆ. ಟೈಂ ಮ್ಯಾನೇಜ್‌ಮೆಂಟ್ ಮರೆತುಹೋಗಿದೆ.

ಬೆಂಗಳೂರು ಮಧುಮೇಹಿಗಳ, ಹೃದಯರೋಗಿಗಳ ತವರು ಮನೆಯಾಗುತ್ತಿದೆ. ತಮ್ಮ ಸಂದರ್ಶನವೊಂದರಲ್ಲಿ ಖ್ಯಾತ ಹೃದಯರೋಗ ತಜ್ಞ ಡಾ. ದೇವಿಪ್ರಸಾದ್ ಶೆಟ್ಟಿ ಹೇಳುತ್ತಾರೆ– ಹಿಂದೆ ಮಗ ತಂದೆಯನ್ನು ಹೃದಯದ ಖಾಯಿಲೆಯ ಚಿಕಿತ್ಸೆಗೆ ಕರೆತರುತ್ತಿದ್ದನಂತೆ. ಇಂದು ತಂದೆ ಮಗನನ್ನು ಹೃದಯದ ಚಿಕಿತ್ಸೆಗೆ ಕರೆತರುತ್ತಿರುವ ದುರಂತವನ್ನು ನೋಡುತ್ತಿದ್ದೇನೆ ಎಂದ ಅವರ ಮಾತು ಕಠೋರ ಸತ್ಯವೊಂದನ್ನು ತೆರೆದಿಟ್ಟಿಲ್ಲವೇ ?

ಬ್ಲೂಝೋನ್ ಆಹಾರ

ಹಸಿ ತರಕಾರಿ

ರಾಸಾಯನಿಕ ಮುಕ್ತ ಹಣ್ಣುಗಳು

ವನಸ್ಪತಿಗಳು

ಬಾದಾಮಿ/ ಅಗಸೆ ಬೀಜಗಳು

ಬೀನ್ಸ್ ಮತ್ತು ದ್ವಿದಳ ಧಾನ್ಯಗಳು

ಆಲಿವ್ ಎಣ್ಣೆ

ಮೇಕೆ ಹಾಲು, ಮನೆಯ ಗಿಣ್ಣು

ಒಡೆಯದ ಧಾನ್ಯಗಳು

ಸಿಹಿ ಆಲೂಗಡ್ಡೆ

ಆಲಿವ್ ಎಣ್ಣೆ

ಬಾರ್ಲಿ / ಓಟ್ಸ್

ಗ್ರೀನ್ ಟೀ

ಅರಿಶಿನ

ಬ್ಲೂಝೋನ್ ಡಯೆಟ್

ಬ್ಲೂಝೋನ್ ಡಯಟ್ ಮಾದರಿಯನ್ನು ವಿವರವಾಗಿ ತಿಳಿಸಲಾಗಿದ್ದು ಅದು ಮಾದರಿ ಆಹಾರ ಪದ್ಧತಿ ಕೂಡಾ ಆಗಿದೆ.



ದೈನಂದಿನ ಆಹಾರದಲ್ಲಿ ಬೆಳಗಿನ ತಿಂಡಿಯನ್ನು ಹೊಟ್ಟೆ ತುಂಬಾ ತಿನ್ನಿ. ಅದರಲ್ಲಿ ಪ್ರೋಟೀನ್, ಕಾರ್ಬೋಹೈಡ್ರೇಟ್ ಮತ್ತು ಸಾಕಷ್ಟು ತರಕಾರಿ ಇರಲಿ. ಮಧ್ಯಾಹ್ನದ ಊಟವನ್ನು ಸ್ವಲ್ಪ ಪ್ರಮಾಣದಲ್ಲಿ ಮಾಡಿ. ರಾತ್ರಿ ಊಟ ಅತೀ ಕಡಮೆ ಇರಲಿ. ಮಧ್ಯದಲ್ಲಿ ಬಾದಾಮಿ, ಆಲ್ಮಂಡ್‌ನಂತಹ ಬೀಜಗಳನ್ನು ತಿನ್ನಿ. ಆಹಾರ ಸೇವನೆಯನ್ನು ಕುಳಿತು ನಿಧಾನವಾಗಿ ಮಾಡಿ. ನಿಮ್ಮ ಆಹಾರದಲ್ಲಿ ಯಾವಾಗಲೂ ಶೇ.95 ಸಸ್ಯಾಧಾರಿತ ಮತ್ತು ಶೇ. 5 ಪ್ರಾಣಿಜನ್ಯ ಮೂಲದ್ದಾಗಿರಲಿ.


ಸೊಪ್ಪು ತರಕಾರಿಗಳು, ಕಾಲಿಫ್ಲವರ್, ಹುರುಳಿ, ಟೊಮಾಟೊ, ಸೌತೆ, ಈರುಳ್ಳಿ–ಬೆಳ್ಳುಳ್ಳಿ, ಅಣಬೆ, ಹಣ್ಣುಗಳು, ಇಡಿ ಧಾನ್ಯಗಳು, ಜೇನುತುಪ್ಪ, ಕಾಫ್ಹಿ, ಹಸಿರು ಚಹಾ, ಸೋಯಾ ಹಾಲು ಆಹಾರದಲ್ಲಿ ಧಾರಾಳವಾಗಿರಬೇಕು. ಹಸಿ ತರಕಾರಿಗಳಿಗೆ ಕಪ್ಪು ಮೆಣಸು, ಮೆಣಸಿನಕಾಯಿ, ಶುಂಠಿ, ಮುಂತಾದ ಸಂಬಾರ ಪದಾರ್ಥಗಳನ್ನು ಬಳಸಿ.

ಮಾಂಸ ಬಳಕೆ ಕಡಮೆ ಇರಲಿ. ವಾರಕ್ಕೆ ಮೂರು ಮೊಟ್ಟೆಗಳಿಗಿಂತಾ ಹೆಚ್ಚು ಸೇವಿಸುವುದು ಒಳ್ಳೆಯದಲ್ಲ. ಕೃತಕ ಸಕ್ಕರೆ ಬಳಕೆ ಬಿಟ್ಟುಬಿಡಿ. ದಿನಕ್ಕೆ ಏಳು ಚಮಚೆಗಿಂತಾ ಹೆಚ್ಚು ಸಕ್ಕರೆ ಸೇವನೆ ಮಾಡಬೇಡಿ. ಆಗಾಗ ಮಾತ್ರ ಸಿಹಿ ಸೇವನೆ ಮಾಡಬಹುದು.


ಬ್ಲೂಝೋನ್ ಆಹಾರ ಪದ್ಧತಿಯಲ್ಲಿ ಸಂಸ್ಕರಿತ, ಪ್ಯಾಕ್ಡ್ ಆಹಾರ, ಕುಕೀಸ್, ಮಫ್ಫಿನ್ಸ್, ಸಾಸೇಜ್, ಚಿಪ್ಸ್, ಏರೇಟೆಡ್ ಪಾನೀಯ, ಸಂಸ್ಕರಿಸಿದ ಮಾಂಸ, ಶಾರ್ಕ್, ಸ್ವೋರ್ಡ್ ಫ್ಲಿಶ್ ಮತ್ತು ಟ್ಯೂನಾ ಫ್ಲಿಶ್ ಬಳಕೆ ಅತೀ ಕಡಮೆ ಇರಲಿ. ಕೃತಕ ಹಣ್ಣಿನ ರಸ (ಸಿಂತೆಟಿಕ್) ಬಳಕೆ ನಿಲ್ಲಿಸಿ. ಹೆಚ್ಚು ಸೋಡಾ ಪಾನಿಯ ಬಳಕೆ ಒಳ್ಳೆಯದಲ್ಲ. ಕೃತಕ ಬಣ್ಣ ಬಳಸಿದ ಆಹಾರ ಸೇವನೆ ನಿಲ್ಲಿಸಿ. ಅಜಿನೊಮೋಟೋ ಬೇಡವೇ ಬೇಡ.

ಪಾಲಿಶ್ ಮಾಡದ ಅಕ್ಕಿಯನ್ನು ಬಳಸಿ. ಗೋಧಿಯನ್ನು ಹಿಟ್ಟು ಮಾಡಿದ ನಂತರ ಅದನ್ನು ಜರಡಿ ಹಿಡಿಯಬೇಡಿ. ರಾಗಿ–ಜೋಳ ಬಳಸಿ. ಆದಷ್ಟು ಸರಳ ಆಹಾರ ಉಪಯೋಗ ಆರಂಭಿಸಿ.

❖



ಸದ್ಗುರು ಜಗ್ಗಿ ವಾಸುದೇವ್




೮. ಗೌರವ ಸೂಚಕಗಳ ಗಮ್ಮತ್ತಿನ ಜಗತ್ತು

ಒಬ್ಬ ಮನುಷ್ಯ ಮತ್ತೊಬ್ಬನಿಗೆ ವಂದಿಸುವ ಮತ್ತು ಅಭಿನಂದಿಸುವ ವಿಧಾನದಲ್ಲಿ ಆತನ ಆತ್ಮ ಸಂಸ್ಕಾರವೆಷ್ಟಿದೆ ಎಂದು ತಿಳಿಯುತ್ತದೆ. ನಮಸ್ಕಾರದಲ್ಲಿ ಪ್ರೀತಿ ಪೂರ್ವಕವಾದ, ಗೌರವ ಪೂರ್ವಕವಾದ, ಭಕ್ತಿ ಪೂರ್ವಕವಾದ ನಮಸ್ಕಾರಗಳನ್ನು ಕಾಣುತ್ತೇವೆ. ನಮಸ್ಕಾರ ಮತ್ತು ವಂದಿಸುವ ಕ್ರಿಯೆಗಳು ದೇಹದ ಅಂಗಗಳನ್ನು ಉಪಯೋಗಿಸಿ ಪ್ರದರ್ಶಿಸುವ ಅಭಿವ್ಯಕ್ತಿ ಸೂಚಕಗಳಾಗಿದೆ. ಇವುಗಳಲ್ಲಿ ಆಂಗಿಕ ಸೂಚನೆಗಳು, ದೈಹಿಕ ಸೂಚನೆಗಳು, ಮೂಕಾಭಿನಯಗಳು, ಸಂಜ್ಞಾ ಸೂಚನೆಗಳು ಮುಂತಾದ ಭಾವ ಪ್ರೇರಿತ ಕ್ರಿಯೆಗಳಿವೆ. ಇವುಗಳ ಹಿನ್ನೆಲೆಯಲ್ಲಿ ಗಾಂಭೀರ್ಯ, ಗತ್ತು, ಸ್ವಾಭಿಮಾನ, ನಿರಾಶೆಗಳೊಂದಿಗೆ ನವರಸಗಳೂ ಬೆರೆತಿರುತ್ತವೆ. ಇವೆಲ್ಲಾ ದೈಹಿಕ ವರ್ತನೆಯ ಕ್ರಿಯೆಗಳಾಗಿವೆ. ಇವುಗಳ ಬಗ್ಗೆಯೇ ಬಿಹೇವಿಯರಲ್ ಸೈನ್ಸ್ ಎಂಬ ವಿಜ್ಞಾನ ವಿಷಯವಿದೆ. ಮೊದಲನೆಯದಾಗಿ ಭಾರತೀಯ ನಮಸ್ಕಾರದ ಬಗ್ಗೆ ನೋಡೋಣ.

ಧ್ಯಾನಲೀನ ನಮಸ್ಕಾರ


ಕೈ ಬೆರಳುಗಳನ್ನು ಬಳಸಿ ನೂರಾರು ರೀತಿಯ ಗೌರವ ಸೂಚನೆಯ ಅಭಿವ್ಯಕ್ತಿಗಳನ್ನು ಮಾಡಲಾಗುತ್ತದೆ. ಎರಡೂ ಕೈ ಜೋಡಿಸಿ ನಮಸ್ಕರಿಸುವ ವಿಧಾನ ಸಂಪೂರ್ಣ ಭಾರತೀಯ ಪರಿಕಲ್ಪನೆ. ಇದು ಸಾಂಸ್ಕೃತಿಕ ಮತ್ತು ಸನಾತನ ಸಂಸ್ಕೃತಿಯಿಂದ ಪ್ರೇರಿತವಾದದ್ದು ಎಂಬುದನ್ನು ಗ್ರಂಥಗಳು ಶೃತಪಡಿಸುತ್ತವೆ. ಹಾಗೆ ನೋಡಿದರೆ ನಾವು ಯಾರಿಗೆ ಹೇಗೆ ನಮಸ್ಕರಿಸಬೇಕು ಎಂಬುದನ್ನು ಶಾಸ್ತ್ರೀಯವಾಗಿ ತಿಳಿದೇ ಇಲ್ಲ. ಶಾಸ್ತ್ರೀಯ ನಮಸ್ಕಾರಗಳು ಕೇವಲ ದೇವಾಲಯಗಳು ಮತ್ತು



ಸಂತರಿಗೆ ನಮಸ್ಕರಿಸುವ ಮಟ್ಟಿಗೆ ಮಾತ್ರಾ ಸೀಮಿತವಾಗಿದೆ. ಉಳಿದಂತೆ ಬಲಗೈ ಎದೆಯ ಬಳಿ ತಂದು ಅಥವಾ ಬಲಗೈ ಮೇಲೆತ್ತಿ ಬೀಸುವ ನಮಸ್ಕಾರಗಳನ್ನೇ ಈಗ ಕಾಣುತ್ತೇವೆ. ಹಾಗೆ ನೋಡಿದರೆ ಇವು ನಮಸ್ಕಾರಗಳೇ ಅಲ್ಲ ಕೇವಲ ಅರ್ಥಹೀನ ಕ್ರಿಯೆಗಳಷ್ಟೇ !

ನಮಸ್ಕಾರದ ಕ್ರಿಯೆ ಸುಮಾರು ಕ್ರಿ.ಪೂ.2000 ದಿಂದ 3000 ಗಳಷ್ಟು ಹಳತು ಎನ್ನಲಾಗುತ್ತದೆ. ಹರಪ್ಪ ಮತ್ತು ಮೊಹೆಂಜದಾರೋ ನಾಗರೀಕತೆಗಳ ಉತ್ಖನನದಲ್ಲಿ ಅಂಜಲಿ ಮುದ್ರೆಯಲ್ಲಿ ನಮಸ್ಕಾರದ ಭಂಗಿಯಲ್ಲಿ ಕುಳಿತಿರುವ ಟೆರ್ರಕೋಟಾ ವಿಗ್ರಹವೊಂದು ದೊರಕಿದ್ದು ಅಂದಿನ ಸಾಮಾಜಿಕ ಜೀವನದಲ್ಲಿ ನಮಸ್ಕಾರದ ಅರ್ಥಪೂರ್ಣ ಸಂಬಂಧವನ್ನು ಪ್ರಸ್ತುತ ಪಡಿಸುತ್ತದೆ. ಏಶ್ಯಾ ಖಂಡದ ಸುತ್ತ–ಮುತ್ತಲ ದೇಶಗಳಲ್ಲಿ ಕೈ ಜೋಡಿಸಿ ನಮಸ್ಕರಿಸುವ ಪದ್ಧತಿಯನ್ನು ಕಾಣಬಹುದು. ನಮಸ್ಕಾರದ ಕ್ರಿಯೆ ಆಧ್ಯಾತ್ಮಿಕ ಹಿನ್ನೆಲೆಯಿಂದ ಪ್ರೇರಿತವಾದದ್ದು. ನಮಸ್ಕರಿಸುವಾತನ ಮನೋಸ್ಥಿತಿಯ ಆಧಾರದ ಮೇಲೆ ಅದರಿಂದ ಪ್ರೇರಿತವಾಗುವ ಅಂತಃಶಕ್ತಿಯು ನಮಸ್ಕಾರವನ್ನು ಸ್ವೀಕರಿಸುವಾತನನ್ನೂ ತಲುಪುತ್ತದೆ. ಹಾಗಾದರೆ ಈ ಅಂತಃಶಕ್ತಿ ಎಲ್ಲಿಂದ ಬರುತ್ತದೆ ? ಅದರ ಮೂಲ ಯಾವುದು ? ನಮಸ್ಕರಿಸಲು ಅದರದ್ದೇ ಆದ ರೀತಿ–ನೀತಿಗಳಿವೆಯೇ ಎಂಬುದರ ವಿಸ್ಕೃತ ಅಧ್ಯಯನದ ವಿವರಗಳು ಅನೇಕ ಗ್ರಂಥಗಳಲ್ಲಿ ದೊರೆಯುತ್ತವೆ.

ನಮಸ್ತೆ ಎನ್ನುವ ಪದದ ಮೂಲ ಸಂಸ್ಕೃತದ ನಮಃ ಎಂಬುದರಿಂದ ಬಂದಿದೆ. ಇದರ ಸರಿಯಾದ ಪದ ಪ್ರಯೋಗ ನಮಸ್ತೇ ಎಂದು. ಹಾಗೆಂದರೆ ನಿಮಗೆ ವಂದಿಸುತ್ತೇನೆ ಎಂದರ್ಥ. ಒಬ್ಬರಿಗೆ ನಮಸ್ಕರಿಸುವಾಗ ನಮಸ್ತೇ ಎಂದರೆ ಒಬ್ಬರಿಗಿಂತಾ ಹೆಚ್ಚು ವ್ಯಕ್ತಿಗಳಿದ್ದಾಗ ನಮೋ ವಾ ಎಂದು ಉಚ್ಚರಿಸಬೇಕು ಎನ್ನುತ್ತವೆ ಧರ್ಮ ಗ್ರಂಥಗಳು. ನಮಸ್ಕಾರದ ಕ್ರಿಯೆಗೆ ಹಿಂದಿ ಭಾಷೆಯಲ್ಲಿ ನಮಶ್ಕಾರ್ ಎಂದರೆ ಬೆಂಗಾಲಿಯಲ್ಲಿ ನೊಮೊಶ್ಕಾರ್ ಎನ್ನುತಾರೆ. ಕನ್ನಡದಲ್ಲಿ ನಮಸ್ಕಾರ, ತಮಿಳಿನಲ್ಲಿ ಕುಂಪಿತು ಅಥವಾ ವಣಕ್ಕಂ ಎಂದರೆ ತೆಲುಗಿನಲ್ಲಿ ನಮಸ್ಕಾರಮುಲು ಎನ್ನುತಾರೆ. ಉತ್ತರ ಭಾರತದಲ್ಲಿ ಬಹುತೇಕ ಕಡೇ ರಾಮ್ ರಾಮ್ ಎನ್ನುತ್ತಾರೆ. ಉರ್ದೂವಿನಲ್ಲಿ ಸಲಾಂ, ಪಂಜಾಬಿನಲ್ಲಿ ಸತ್ ಶ್ರೀ ಅಕಾಲ್ ಎನ್ನುವ ಪದ್ಧತಿ ಇದೆ.



ಆಧ್ಯಾತ್ಮದ ಪ್ರವಾಹ


ನಮಸ್ಕರಿಸುವಾಗ ಎರಡು ಕೈಗಳನ್ನು ಜೋಡಿಸಿ ಹೃದಯದ ಬಳಿ ತಂದು ಚಕ್ರಗಳನ್ನು ಉದ್ದೀಪಿಸಿಕೊಂಡು ನಮಸ್ಕರಿಸಬಹುದು ಇಲ್ಲವೇ ಎರಡೂ ಕೈಗಳನ್ನು ಜೋಡಿಸಿ ಹಣೆಗೆ ತಾಗಿಸಿ ತಲೆ ಬಗ್ಗಿಸಿ ನಮಸ್ಕರಿಸಬಹುದು. ಇವೆರಡೂ ಪದ್ಧತಿಗಳು ನಮಸ್ಕರಿಸುವ ವ್ಯಕ್ತಿಯ ಚೈತನ್ಯದ ಸ್ಪಂದನವನ್ನು ಉದ್ದೀಪಿಸಿ ಅದನ್ನು ಸ್ವೀಕರಿಸುವ ವ್ಯಕ್ತಿಯ ಚೈತನ್ಯದೊಂದಿಗೆ ಸಂಪರ್ಕ ಸಾಧಿಸುತ್ತವೆ.

ಪರಸ್ಪರ ಸಂಧಿಸಿದಾಗ ಅಥವಾ ಬೀಳ್ಕೊಡುವಾಗ ನಮಸ್ಕರಿಸುವ ಪದ್ಧತಿ ಅನೂಚಾನವಾಗಿ ಬೆಳೆದು ಬಂದಿದೆ. ದೇವಾಲಯಗಳಲ್ಲಿ ಹೇಗೆ ನಮಸ್ಕಾರ ಮಾಡಬೇಕು ಎಂಬುದರ ಬಗ್ಗೆ ಪುರಾತನ ತೈತ್ತಿರೀಯ ಉಪನಿಶದ್ ಗ್ರಂಥದಲ್ಲಿ ದೇವರ ಪೂಜೆ ಮಾಡಬೇಕಾದಾಗ ನಿರ್ವಹಿಸಬೇಕಾದ 16 ಉಪಚಾರಗಳೆಂದು ಕರೆಯಲಾಗುವ ಆಚರಣೆಗಳಿವೆ. ಅದರಲ್ಲಿ 14 ನೇ ಉಪಚಾರವನ್ನು ನಮಸ್ಕಾರ ಎನ್ನುತ್ತಾರೆ. ತಲೆಯನ್ನು ಸ್ವಲ್ಪ ಬಾಗಿಸಿ ಎರಡು ಕೈಗಳನ್ನು ಜೋಡಿಸಿ ಎದೆಯ ಬಳಿ ತಂದು ನಮಸ್ಕರಿಸುವ ವಿಧಾನಕ್ಕೆ ಅಂಜಲಿ ಮುದ್ರೆ ಅಥವಾ ಪ್ರಣಾಮಾಸನ ಎನ್ನುತ್ತಾರೆ. ಇದರಿಂದ ನಾಡಿಗಳು ಉದ್ದೀಪನಗೊಂಡು ಜ್ಞಾನಾಂಜನ ಎಚ್ಚರಗೊಳ್ಳುತ್ತದೆ. ದೈವಕ್ಕೆ, ಸಾಧು–ಸಂತರಿಗೆ, ಧಾರ್ಮಿಕ ವ್ಯಕ್ತಿಗಳಿಗೆ, ಗುರುವರೇಣ್ಯರಿಗೆ ಮತ್ತು ಹಿರಿಯರಿಗೆ ಅಂಜಲಿ ಮುದ್ರೆಯಲ್ಲಿ ನಮಸ್ಕರಿಸುವುದರಿಂದ ಶ್ರೇಯಸ್ಸು ಎಂಬ ನಂಬಿಕೆ ಇದೆ.

ಕಿರಿಯರು ಹಿರಿಯರಿಗೆ ಮತ್ತು ಗುರುಗಳಿಗೆ ನಮಸ್ಕರಿಸುವಾಗ ದೇಹದಲ್ಲಿನ ಪರಮೋಚ್ಚ ಶಕ್ತಿಗಳು ಜಾಗೃತವಾಗುತ್ತವೆ. ರಜೋ ಮತ್ತು ತಮೋ ಗುಣಗಳು ಕಡಮೆಯಾಗಿ ಸತ್ವ ಉಜ್ವಲವಾಗುತ್ತವೆ. ಇದನ್ನು ಮನುಸ್ಮೃತಿ ಅಧ್ಯಾಯ: 2.120 ರಲ್ಲಿ, ಮಹಾಭಾರತ ಉದ್ಯೋಗ ಪರ್ವದ ಅಧ್ಯಾಯ 38.1 ರಲ್ಲಿ ಹೇಳಲಾಗಿದೆ.

ನಮಸ್ಕರಿಸುವ ಸರಿಯಾದ ಪದ್ಧತಿ

ದೇವರಿಗೆ ನಮಸ್ಕರಿಸುವಾಗ ಕೈ ಬೆರಳುಗಳನ್ನು ಸಡಿಲವಾಗಿ ಬಿಡಬೇಕು, ಬೆರಳುಗಳು ಒಂದಕ್ಕೊಂದು ಸೇರಿಕೊಂಡಿರಬೇಕು, ಹೆಬ್ಬೆರಳು ಉಳಿದ ಬೆರಳುಗಳಿಂದ ದೂರವಿರಬೇಕು, ಹಸ್ತದ ಒಳಭಾಗ ಪರಸ್ಪರ ಒತ್ತಿಕೊಂಡಂತೆ ಇರದೆ ಸ್ವಲ್ಪ ಸ್ಥಳವಿರಬೇಕು. ಎಡ ಮತ್ತು ಬಲ ಹಸ್ತಗಳಲ್ಲಿ ಶಕ್ತಿಗಳು ಕೇಂದ್ರೀಕರಿಸಲ್ಪಟ್ಟಿರುತ್ತವೆ. ಎಡ ಹಸ್ತದಲ್ಲಿ ತಟಸ್ಥ, ನ್ಯಾಯ, ಚಂದ್ರ, ಭಾವುಕ, ಸ್ವೀಕೃತ ಮತ್ತು ಅಪ್ರಜ್ಞತೆಗಳಿದ್ದರೆ ಬಲ ಹಸ್ತದಲ್ಲಿ ನಿಶ್ಚಿತತೆ, ದಯೆ, ಸೂರ್ಯ, ತಾತ್ವಿಕ, ಅರ್ಪಣೆ ಮತು ಪ್ರಜ್ಞೆಗಳು ನೆಲೆಯಾಗಿರುತ್ತವೆ.





ನಂತರ ತಲೆಯನ್ನು ಸ್ವಲ್ಪ ಬಾಗಿಸಿ ಕೈಗಳನ್ನು ಹಣೆಯ ಬಳಿ ತರಬೇಕು. ಹೆಬ್ಬೆರಳುಗಳನ್ನು ಭ್ರೂ ಮಧ್ಯವನ್ನು ತಾಕುವಂತೆ ಇರಿಸಬೇಕು. ದೃಷ್ಟಿಯು ದೈವದ ಪಾದಗಳ ಮೇಲೆ ಕೇಂದ್ರೀಕರಿಸಲ್ಪಟ್ಟಿರಬೇಕು. ಇದರಿಂದ ನಾಭಿಯ ಮೇಲೆ ಒತ್ತಡ ಬಿದ್ದು ಆತ್ಮಶಕ್ತಿ ಜಾಗೃತವಾಗುವುದರಿಂದ ಭವ ಮತ್ತು ಭಾವಗಳು ಉದ್ಭವವಾಗುತ್ತವೆ. ದೈವದ ಆಶೀರ್ವಾದವು ಆಜ್ಞಾಚಕ್ರದ ಮೂಲಕ ಹಾಗೂ

ಶಿರಸ್ಸಿನ ಬ್ರಹ್ಮರಂಧ್ರದ ಮೂಲಕ ಎದೆಯ ಭಾಗದಲ್ಲಿನ ಅನಾಹತ ಚಕ್ರದಲ್ಲಿ ಪ್ರವೇಶಿಸಿ ದೇಹದಲ್ಲಿ ಹರಡಿಕೊಳ್ಳುತ್ತದೆ. ನಂತರ ಕೈಗಳನ್ನು ಬಿಡಿಸದೇ ಹಾಗೇಯೇ ಕೆಳ ತಂದು ಎದೆಯ ಭಾಗಕ್ಕೆ ತರಬೇಕು. ಆಗ ಧನಾತ್ಮಕ ಶಕ್ತಿಯು ಸೃಷ್ಟಿಯಾಗಿ ಅದರ ಫಲ ನಮಸ್ಕರಿಸುವ ವ್ಯಕ್ತಿಗೆ ದೊರೆಯುತ್ತದೆ. ಇದು ನಮಸ್ಕಾರದ ಕ್ರಿಯೆಯನ್ನು ಪೂರ್ಣಗೂಳಿಸುತ್ತದೆ.

ನಮಸ್ಕರಿಸುವಾಗ ಹಸ್ತಗಳು ಬಿಗಿದುಕೊಂಡಿದ್ದಲ್ಲಿ ಮನಸ್ಸು ಉದ್ವಿಜ್ಞತೆಗೊಳಗಾಗಿ ಸತ್ವದ ಅಂಶ ಬಿಡುಗಡೆಯಾಗುವುದಿಲ್ಲ. ಒಟ್ಟುಗೂಡಿಸಲ್ಪಟ್ಟ ಶಕ್ತಿಯ ಅಂಶ ಚದುರಿ ಹೋಗುತ್ತದೆ.

ಅಂಜಲಿ ಮುದ್ರೆಯಲ್ಲಿ ನಮಸ್ಕರಿಸುವಾಗ ನಮಸ್ಕಾರ ಸ್ವೀಕರಿಸುವವರು ಪೂರ್ವಕ್ಕೆ ಮುಖ ಮಾಡಿ ಕುಳಿತಿದ್ದಾಗ ನಮಸ್ಕರಿಸುವವರು ಪಶ್ಚಿಮಾಭಿಮುಖವಾಗಿ ನಮಸ್ಕರಿಸಿದಲ್ಲಿ ಶಾಂತಿ ಮತ್ತು ನೆಮ್ಮದಿಗಳು ದೊರೆಯುತ್ತವೆ ಎಂದು ಯೋಗ ಗ್ರಂಥಗಳು ತಿಳಿಸುತ್ತವೆ. ಅಂಜಲಿ ಮುದ್ರೆಯಲ್ಲಿ ಶರಣುಭಾವ ಇದ್ದು ನಮಸ್ಕಾರ ಸ್ವೀಕರಿಸುವವರ ಅಂತಃಶಕ್ತಿಯು ಸತ್ವವನ್ನು ಹೆಚ್ಚಿಸುತ್ತದೆ.

ದೇಹದ ಮೇಲ್ಭಾಗದಲ್ಲಿನ ಚಕ್ರಗಳಾದ ವಿಶುದ್ಧ ಚಕ್ರವು ಉದ್ದೀಪನಗೊಳ್ಳಲೆಂಬ ಉದ್ದೇಶದಿಂದ ದೇವಾಲಯದ ಸುತ್ತಾ ಪ್ರದಕ್ಷಿಣೆ ಹಾಕುವಾಗ ಮತ್ತು ದೈವದ ಮುಂದೆ ನಿಂತಾಗ ಕುತ್ತಿಗೆ ಸುತ್ತಾ ವಸ್ತ್ರ ಮುಚ್ಚಿಕೊಳ್ಳುವುದನ್ನು ಮತ್ತು ಅಂಗಿ ಧರಿಸುವುನ್ನು ನಿಷೇಧಿಸಲಾಗುತ್ತದೆ.

ಅಂಜಲಿ ಮುದ್ರೆ ಅಥವಾ ಪ್ರಣಾಮಾಸನ ಒಂದು ಯೋಗ ಮುದ್ರೆ. ಕೈಗಳನ್ನು ಒತ್ತಿ ಹಿಡಿದು ಮಾನಸಿಕ ಮತ್ತು ಬೌದ್ಧಿಕ ಅನುಸಂಧಾನವನ್ನು ಸಾಧಿಸಿ ಹೃದಯ ಚಕ್ರದ ಮೂಲಕ ತಮ್ಮ ಗೌರವವನ್ನು ಸಲ್ಲಿಸುವ ಅಭೂತ ಪೂರ್ವ ವಿಧಾನ ಇದು. ಅಂಜಲಿ ಮುದ್ರೆಯು ಸುಮಾರು 3000 ವರ್ಷಗಳಷ್ಟು ಪುರಾತನವಾಗಿದ್ದು ಸಿಂಧೂ ನಾಗರೀಕತೆಯ ಕಾಲದಲ್ಲೂ ಸಹಾ ಅಂಜಲೀ ಮುದ್ರೆಯ ವಂದನೆ ಇತ್ತು ಎನ್ನಲು ಉತ್ಖನನದಲ್ಲಿ ದೊರೆತ ಅಂಜಲಿ ಮುದ್ರೆಯಲ್ಲಿರುವ ಒಂದು ಟೆರ್ರಕೋಟ ವಿಗ್ರಹವನ್ನು ನೋಡಬಹುದು.

ಪ್ರಣಾಮವೆಂಬ ಅನುಭೂತಿ

ಪ್ರಣಾಮ ಎಂಬ ಪದವು ಸಂಸ್ಕೃತದ ಪ್ರ ಮತ್ತು ಆಣಮ ಎಂಬ ಪದಗಳಿಂದ ಬಂದಿದೆ. ಪ್ರ ಎಂದರೆ ಮುಂದಕ್ಕೆ ಹಾಗೂ ಆಣಮ ಎಂದರೆ ಬಾಗುವ ಕ್ರಿಯೆ ಎಂಬ



ಅರ್ಥಗಳಿವೆ. ಒಟ್ಟಾರೆಯಾಗಿ ಗೌರವದಿಂದ ವಂದಿಸುವ ಚರಣ ಸ್ಪರ್ಶ ಕ್ರಿಯೆ ಎಂದರ್ಥ. ಪ್ರಣಾಮದಲ್ಲಿ ಆರು ವಿಧಗಳಿವೆ–

1. ಅಷ್ಟಾಂಗನ– ಮಂಡಿಗಳನ್ನು ನೆಲಕ್ಕೆ ತಾಗಿಸಿ, ಹೊಟ್ಟೆ, ಎದೆ, ಕೈಗಳು, ಕೆನ್ನೆ, ನಾಸಿಕ ಮತ್ತು ಹಣೆ ಸೇರಿದಂತೆ ದೇಹದ ಎಂಟು ಭಾಗಗಳು ನೆಲಕ್ಕೆ ಸ್ಪರ್ಶಿಸಬೇಕು.

2. ಸಾಷ್ಟಾಂಗ– ಉದ್ದಂಡ ನಮಸ್ಕಾರ ಎಂದು ಕರೆಯಲಾಗುವ ಈ ಶೈಲಿಯಲ್ಲಿ ಎರಡು ಉಂಗುಷ್ಟಗಳು, ಎರಡೂ ಮಂಡಿಗಳು, ಎರಡೂ ಕೈಗಳು, ಕೆನ್ನೆ ಮತ್ತು ನಾಸಿಕ ನೆಲವನ್ನು ಸ್ಪರ್ಶಿಸಬೇಕು. ಇದು ದೈವಕ್ಕೆ ಶರಣಾಗತಿಯ ಸೂಚಕ. ಸ್ತ್ರೀಯರು ಸಾಷ್ಟಾಂಗ ನಮಸ್ಕಾರ ಮಾಡುವುದಿಲ್ಲ.

3. ಪಂಚಾಂಗ – ಎರಡೂ ಮಂಡಿಗಳು, ಎದೆ, ಕೆನ್ನೆ, ಹಣೆಯ ಮಧ್ಯ ಭಾಗ ಮತ್ತು ಹಣೆ ನೆಲವನ್ನು ಸ್ಪರ್ಶಿಸಬೇಕು. ಸ್ತ್ರೀಯರು ಪಂಚಾಂಗ ನಮಸ್ಕಾರ ಮಾಡಲು ಶಾಸ್ತ್ರಗಳು ಅನುಮತಿಸುತ್ತವೆ.


4. ದಂಡವತ – ಬಾಗಿ ಹಣೆಯನ್ನು ನೆಲಕ್ಕೆ ಸ್ಪರ್ಶಿಸಬೇಕು. ದಂಡ ಎಂದರೆ ಕೋಲಿನಂತೆ ನೆಲದ ಮೇಲೆ ಬಿದ್ದಿರುವುದು.

5. ನಮಸ್ಕಾರ – ಎರಡೂ ಕೈಗಳನ್ನು ಜೋಡಿಸಿ ಹಣೆಯ ಬಳಿಗೆ ತರುವ ಕ್ರಮ. ಇದರಿಂದ ದೇಹದಲ್ಲಿ ಶಕ್ತಿ ಸಂಚಾರವಾಗುತ್ತದೆ.

6. ಅಭಿನಂದನ– ಮುಂದೆ ಬಾಗಿ ಎರಡೂ ಕೈಗಳನ್ನು ಜೋಡಿಸಿ ಎದೆಯ ಬಳಿ ತಂದು ವಂದಿಸುವ ಕ್ರಮ.

ಹಿರಿಯರಿಗೆ ವಂದಿಸುವ ವಿಧಾನ.

ಹೀಗೆ ಹಿರಿಯರಿಗೆ ಅಥವಾ ಗುರುಗಳಿಗೆ ನಮಸ್ಕರಿಸುವಾಗ ತಮ್ಮ ಗೋತ್ರ ಮತ್ತು ಹೆಸರನ್ನು ಹೇಳುತ್ತಾ ಅಂಗೈಗಳನ್ನು ಕಿವಿಯ ಬಳಿ ಇರಿಸಿಕೊಂಡೂ ದೇಹವನ್ನು ನಡುವಿನವರೆಗೆ ಬಾಗಿಸಿ ಶ್ಲೋಕವನ್ನು ಹೇಳಿ ತಮ್ಮ ಪರಿಚಯವನ್ನು ಮಾಡಿಕೊಳ್ಳುತ್ತಾರೆ. ನಂತರ ಬಲ ಹಸ್ತವನ್ನು ಸಂತರ ಎಡ ಪಾದದ ಮೇಲೂ ಎಡ ಹಸ್ತವನ್ನು ಬಲ ಪಾದದಮೇಲೂ ಇಟ್ಟೂ ಹಣೆಯ ಭಾಗ ಅವರ ಪಾದದ ಉಂಗುಷ್ಟದ ಮೇಲೆ ಇರುವಂತೆ ಇಟ್ಟು ನಮಸ್ಕರಿಸಲಾಗುತ್ತದೆ. ಈ ಸಂದರ್ಭಗಳಲ್ಲಿ ಕೆಲವರು ಹಸ್ತಗಳನ್ನು ನೆಲದ ಮೇಲೆ ಇಡುವುದುಂಟು. ಹಾಗೆ ಮಾಡುವುದರಿಂದ ಚೈತನ್ಯ ಭೂಮಿಯ ಒಡಲನ್ನು ಸೇರುತ್ತದೆ. ನಮಸ್ಕರಿಸುವಾಗ ತಮ್ಮ ಹೆಸರು, ಗೋತ್ರಗಳನ್ನು ಪ್ರವರ ಹೇಳುತ್ತಾ ವಂದಿಸಲಾಗುತ್ತದೆ.



ಚತುಸ್ಸಾಗರ ಪರ್ಯಂತಮ್ ಗೋಬ್ರಾಹ್ಮಣೆಭ್ಯಃ ಶುಭಮ್ ಭವತು

ಅಭಿವಾಧಯೆ ಅತ್ರೇಯ ಅರ್ಚನನಸ ಶ್ರ್ಯವ ಸ್ವತ್ರೇಯರುಶಯಃ

ಪ್ರವರಾನ್ವಿತಾತ್ರೇಯ ಗೋತ್ರ ಅಪಸ್ಥಂಭ ಸೂತ್ರ ತೈತ್ರೀಯ

ಕೃಷ್ಣ ಯಜುಶ್ಯಖಾಧ್ಯಯೇ (ಹೆಸರು) ಶರ್ಮಹ ನಮಃ ಅಹಂಭೊ ಅಭಿವಾಧಯೆ


ಈ ಶ್ಲೋಕದಲ್ಲಿ ಹೆಸರು, ಗೋತ್ರ, ಋಷಿ, ಸೂತ್ರಗಳು ಬದಲಾದರೂ ನಮಸ್ಕರಿಸುವ ವಿಧಾನ ಒಂದೇ ಆಗಿರುತ್ತದೆ.

ನಮಸ್ಕರಿಸುವಾತನ ಹೆಸರೂ ಕೂಡಾ ಪ್ರಾತಿನಿಧಿಕವಾಗಿರುತ್ತದೆ. ವ್ಯಕ್ತಿಯ ಹೆಸರಿಗೂ ಮತ್ತು ಆತನ ವ್ಯಕ್ತಿತ್ವಕ್ಕೂ ಸಂಬಂಧಗಳಿರುತ್ತವೆ ಎಂಬ ನಂಬಿಕೆ ಇದೆ. ಈ ಹಿನ್ನೆಲೆಯಲ್ಲಿ ಹೆಸರನ್ನಿಡುವಾಗ ಬಹಳ ಎಚ್ಚರಿಕೆ ವಹಿಸಲಾಗುತ್ತಿತ್ತು. ಇದಕ್ಕೆ ಆತ ಅಥವಾ ಅಕೆ ಜನಿಸಿದ ನಕ್ಷತ್ರ, ಗ್ರಹಗತಿಗಳನ್ನು ಆಧಾರವಾಗಿಟ್ಟು ಕೊಳ್ಳಲಾಗುತ್ತಿತ್ತು. ಬಾಲಕರಿಗೆ ಶೌರ್ಯವನ್ನು ಸೂಚಿಸುವ ಮತ್ತು ಬಾಲಕಿಯರಿಗೆ ಸ್ತ್ರೀ ದೇವತೆಯ ಅಥವಾ ಹೂವುಗಳ ಹೆಸರನ್ನಿಡಲಾಗುತ್ತಿತ್ತು. ಕೆಲವೊಮ್ಮೆ ಕುಲ ಗುರು ಸೂಚಿಸಿದ ಹೆಸರನ್ನು ಮಗುವಿನ ಕಿವಿಯಲ್ಲಿ ಉಚ್ಚರಿಸುವ ಮುಖೇನ ಹೆಸರಿಗೆ ಧಾರ್ಮಿಕ ಮಹತ್ವವನ್ನು ತರಲಾಗುತ್ತಿತ್ತು.

ಸಂತರ ಪಾದುಕೆಗಳಿಗೆ ನಮಸ್ಕರಿಸುವ ವಿಧಾನ ಮೇಲಿನದ್ದಕ್ಕಿಂತಾ ಬೇರೆಯಾಗಿರುತ್ತದೆ. ಪಾದುಕೆಗಳಲ್ಲಿ ಎಡಗಾಲಿನ ಪಾದುಕೆ ಶಿವನನ್ನು ಹಾಗೂ ಆತನ ರಕ್ಷಕ ಶಕ್ತಿಯನ್ನು ಪ್ರತಿನಿಧಿಸುತ್ತದೆ ಮತ್ತು ಬಲ ಪಾದುಕೆಯು ದೈವೀಕ ಶಕ್ತಿ ಹಾಗೂ ದೈವದ ವಿನಾಶಕ ಶಕ್ತಿಯನ್ನು ಪ್ರತಿನಿಧಿಸುತ್ತದೆ ಎಂದು ಧರ್ಮಗ್ರಂಥಗಳು ತಿಳಿಸುತ್ತವೆ. ವಿನಾಶಕ ಶಕ್ತಿಗಳು ಪಾದುಕೆಯ ಮುಂಭಾಗದ ಹಿಡಿಕೆಯಿಂದ ಸತತವಾಗಿ ಹೊರ ಹೊಮ್ಮುತ್ತಿರುತ್ತವೆ. ಆದುದರಿಂದ ನಮಸ್ಕರಿಸುವಾಗ ಪಾದುಕೆಯ ಹಿಡಿಕೆಯ ಮೇಲೆ ತಲೆಯಿಟ್ಟಾಗ ಕೆಲವರಿಗೆ ಅಸ್ವಸ್ಥ ಭಾವನೆ ಉಂಟಾಗಬಹುದು. ಆದುದರಿಂದ ಪಾದುಕೆಯ ಮುಂಭಾಗದ ಮೇಲೆ ತಲೆಯಿಟ್ಟು ನಮಸ್ಕರಿಸುವುದು ಒಳಿತು.

ಸತ್ತವರಿಗೆ ನಮಸ್ಕರಿಸಬಹುದೇ ?

ಸತ್ತವರು ದೇವರಿಗೆ ಸಮಾನ ಎಂಬ ನಂಬಿಕೆ ಇದೆ. ಅಲ್ಲದೇ ತಂದೆ–ತಾಯಿ ಅಥವಾ ಹಿರಿಯರು ಎಂಬ ಭಾವನಾತ್ಮಕ ಹಿನ್ನೆಲೆಯಲ್ಲಿ ಮೃತರಿಗೆ ನಮಸ್ಕರಿಸುವುದು ಸೂಕ್ತ. ಆದರೆ ದೇಹದ ಆಧ್ಯಾತ್ಮಿಕ ಶಕ್ತಿಗಳನ್ನು



ಜಾಗೃತಗೊಳಿಸುವ ಪ್ರಣಾಮ ಅಥವಾ ಅಂಜಲಿ ಮುದ್ರಾ ನಮಸ್ಕಾರಗಳನ್ನು ಮೃತ ದೇಹಕ್ಕೆ ಮಾಡಬಾರದು. ದೇಹದಲ್ಲಿ ಪ್ರಾಣವಿದ್ದಾಗ ಎಲ್ಲಾ ಶಕ್ತಿಗಳೂ ಜಾಗೃತವಾಗಿರುತ್ತವೆ. ಪ್ರಾಣವಾಯುವು ಪ್ರಜ್ಞೆಯ ರೂಪದಲ್ಲಿ ಹೊರಹೋದ ನಂತರ ದೇಹದಲ್ಲಿ ಸತ್ವವಿರುವುದಿಲ್ಲ, ಅದು ಯಾವುದೇ ಎನರ್ಜಿಯನ್ನೂ ಹೊರಹಾಕಲಾರದು. ಆದರೂ ಮೃತರ ನೆನಪಿನಲ್ಲಿ ನಮಸ್ಕಾರ ಮಾಡಿದಾಗ ಹೊರಡುವ ಧನಾತ್ಮಕ ಶಕ್ತಿಯ ಅರಿವು ಪ್ರಜ್ಞೆಗಾಗುತ್ತದೆ.

ನಿದ್ರಿಸುವವರಿಗೆ ನಮಸ್ಕರಿಸಬಹುದೇ?

ನಿದ್ರಿಸುವ ಸಮಯದಲ್ಲಿ ಮನುಷ್ಯನ ಪ್ರಜ್ಞೆ ದೇಹದಿಂದ ಹೊರ ಹೋಗಿ ಕಾಣುವ ದೃಶ್ಯಗಳೇ ಕನಸು ಎಂದು ನ್ಯಿಂಗ್ಮಾಪಾ ಬೌದ್ಧ ಧರ್ಮ ನಂಬುತ್ತದೆ. ಪ್ರಜ್ಞೆ ಇಲ್ಲದ ದೇಹಕ್ಕೆ ನಮಸ್ಕರಿಸುವುದರಿಂದ ನಿದ್ರಿಸುತ್ತಿರುವವರಿಗೆ ಅಶ್ರೇಯಸ್ಸು ಎನ್ನಲಾಗುತ್ತದೆ.


ದೇವಾಲಯಗಳ ಮೆಟ್ಟಿಲುಗಳಿಗೆ ನಮಸ್ಕಾರ ಹೇಗೆ ?

ಬಲಗೈನ ಬೆರಳುಗಳಿಂದ ಮೆಟ್ಟಿಲನ್ನು ಮುಟ್ಟಿ ಹಣೆಗೆ ತಾಗಿಸಿಕೊಳ್ಳುವುದು ಸರಿಯಾದ ವಿಧಾನ. ದೇವಾಲಯಗಳ ಇಡೀ ಪ್ರಾಂಗಣ ಧನಾತ್ಮಕ ಚೈತನ್ಯದಿಂದ ಪ್ರೇರಿತವಾಗಿರುತ್ತದೆ. ಮೆಟ್ಟಿಲಿಗೆ ನಮಸ್ಕರಿಸುವುದರಿಂದ ದೇಹದಲ್ಲಿನ ಸೂರ್ಯ ನಾಡಿ ಜಾಗೃತವಾಗುತ್ತದೆ ಹಾಗೂ ರಾಜಸಿಕ ಅಂಶ ಹೆಚ್ಚುತ್ತದೆ. ಇದರಿಂದಲೇ ದೇವಾಲಯದ ಸುತ್ತಾ ಸ್ವಚ್ಛವಾಗಿರಬೇಕು ಎಂಬ ನಂಬಿಕೆ ಬಂದು ದೇವಾಲಯಗಳ ಮೆಟ್ಟಿಲುಗಳಿಗೆ ನಮಸ್ಕರಿಸುವ, ಅದನ್ನು ಸ್ವಚ್ಛಗೊಳಿಸುವ ಹರಕೆ ಮುಂತಾದ ಕ್ರಿಯೆಗಳು ಹುಟ್ಟಿಕೊಂಡಿವೆ.

ನಮಸ್ಕರಿಸುವಾಗ ನೆನಪಿಡಬೇಕಾದ ಅಂಶಗಳು

ದೇವರ ವಿಗ್ರಹಕ್ಕೆ ಅಥವಾ ಸಂತರಿಗೆ ನಮಸ್ಕರಿಸುವಾಗ ಕಣ್ಣುಗಳನ್ನು ಮುಚ್ಚಿರಬೇಕು. ಇದರಿಂದ ದೇಹದಲ್ಲಿನ ದೈವೀಕ ಪ್ರಜ್ಞೆ ಜಾಗೃತವಾಗುತ್ತದೆ. ದೈವದ ಚಿತ್ರವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ದೇವರ ಪರಿಧಿಯಲ್ಲಿ ತಮ್ಮನ್ನು ಸ್ಥಾಪಿಸಿಕೊಳ್ಳಬಹುದು.ನಮಸ್ಕರಿಸುವಾಗ ಕೈಗಳಲ್ಲಿ ಯಾವುದೇ ವಸ್ತುಗಳನ್ನು ಹಿಡಿದಿರಬಾರದು. ಬೆರಳುಗಳು ನೇರವಾಗಿ ತುದಿಗಳು ಪರಸ್ಪರ ತಾಗುವಂತಿರಬೇಕು.

ನಮಸ್ಕರಿಸುವಾಗ ಪಾದರಕ್ಷೆಗಳನ್ನು ಧರಿಸಿರಬಾರದು. ಕುಳಿತಿರುವಾಗ, ಊಟ ಮಾಡುವಾಗ, ನಿದ್ರಿಸುವಾಗ, ಗುರು–ಹಿರಿಯರಿಗೆ ನಮಸ್ಕರಿಸುವಾಗ ಪಾದರಕ್ಷೆಗಳನ್ನು




ಧರಿಸಿದ್ದರೆ ದೇಹದಲ್ಲಿನ ದುಶ್ಶಕ್ತಿಗಳು ದೇಹದಲ್ಲೇ ಉಳಿದುಹೋಗುತ್ತವೆ ಮತ್ತು ರಾಜಸಿಕ ಹಾಗೂ ತಾಮಸಿಕ ಶಕ್ತಿಗಳು ಪ್ರಯೋಜನಕ್ಕೆ ಬಾರದೇ ಹೋಗುತ್ತವೆ ಎಂದು ಗುರುಸ್ಮೃತಿಯ 9 ನೇ ಅಧ್ಯಾಯ ತಿಳಿಸುತ್ತದೆ.

ದೇವಾಲಯಗಳಲ್ಲಿ ನಮಸ್ಕರಿಸುವಾಗ ಪುರುಷರು ತಲೆಗೆ ವಸ್ತ್ರಗಳನ್ನು ಧರಿಸಿರಬಾರದು ಹಾಗೂ ಸ್ತ್ರೀಯರು ತಮ್ಮ ತಲೆಯನ್ನು ವಸ್ತ್ರದಿಂದ ಮುಚ್ಚಿರಬೇಕು ಎಂದು ಶಾಸ್ತ್ರಗಳು ಸೂಚಿಸುತ್ತವೆ. ನಮಸ್ಕರಿಸುವಾಗ ದೇಹದಲ್ಲಿನ ಕುಂಡಲಿನಿ ಶಕ್ತಿಗಳು ಜಾಗೃತವಾಗುತ್ತಾ ಹೋಗುವುದರಿಂದ ಅವು ಪುರುಷರ ಬ್ರಹ್ಮರಂಧ್ರದಿಂದ ದೇಹವನ್ನು ಪ್ರವೇಶಿಸುತ್ತವೆ. ಕುಂಡಲಿನಿ ಶಕ್ತಿಯ ಪ್ರಮಾಣ ಪುರುಷರಲ್ಲಿ ಹೆಚ್ಚಾಗಿರುತ್ತದೆ ಹಾಗೂ ಸ್ತ್ರೀಯರಲ್ಲಿ ಕಡಮೆ ಇರುತ್ತದೆ. ತಲೆಯನ್ನು ಮುಚ್ಚಿಕೊಂಡಿದ್ದಾಗ ದುಷ್ಟ ಶಕ್ತಿಗಳು ಪ್ರವೇಶಿಸದಂತೆ ಹೊದ್ದ ಸೆರಗು ಕಾಪಾಡುತ್ತದೆ ಎಂದು ಅಪಸ್ಥಂಭ ಧರ್ಮಶಾಸ್ತ್ರ (1.4.14.19) ಹೇಳುತ್ತದೆ.

ದೇವಾಲಯದಲ್ಲಿ ದೇವರಿಗೆ ನಮಸ್ಕರಿಸಿದ ನಂತರ ಹೊರಡುವ ಮುನ್ನ ಮತ್ತೊಮ್ಮೆ ನಮಸ್ಕರಿಸಿ ಅನುಮತಿ ಕೋರಬೇಕು. ನಂತರ ಬೆನ್ನು ತಿರುಗಿಸಿ ಹೊರಡದೇ ಏಳು ಹೆಜ್ಜೆ ಹಿಂದಕ್ಕೆ ನಡೆದು ನಂತರ ಹೊರ ಹೋಗಬೇಕು. ಇದರಿಂದ ದೇವರ ವಿಗ್ರಹದಿಂದ ಹೊರಡುವ ಸತ್ವವನ್ನು ದೇಹ ಸ್ವೀಕರಿಸಲು ಸಾಧ್ಯವಾಗುತ್ತದೆ. ಇಲ್ಲವಾದಲ್ಲಿ ಸತ್ವ ವ್ಯಕ್ತಿಯಿಂದ ವಾಪಾಸ್ ಹಿಂದಿರುಗುತ್ತದೆ ಎಂದು ಸನಾತನ ಫೌಂಡೇಶನ್ ತಿಳಿಸುತ್ತದೆ. ನಂತರ ಹೊರಬಂದು ದೇವಾಲಯದ ಗೋಪುರದ ಕಲಶವನ್ನು ನೋಡಿ ನಮಸ್ಕರಿಸಬೇಕು.

ಪರಸ್ಪರ ನಮಸ್ಕರಿಸುವಾಗ ಕೆಲವು ಕ್ರಿಯೆಗಳು ನಮಸ್ಕರಿಸಿದವರಲ್ಲಿ ಮತ್ತು ನಮಸ್ಕಾರವನ್ನು ಸ್ವೀಕರಿಸಿದವರಲ್ಲಿ ಸಂಭವಿಸುತ್ತವೆ. ನಮಸ್ಕರಿಸಿದಾಗ ವ್ಯಕ್ತಿಯ ದೇಹದಲ್ಲಿನ ಕಂಪನಗಳು ಹೃದಯದ ಕೇಂದ್ರವನ್ನು ತಲುಪಿ ನಂತರ ನಮಸ್ಕಾರ ಸ್ವೀಕರಿಸುವವರ ಪ್ರಭಾವಲಯಕ್ಕೆ ತಲುಪುತ್ತವೆ. ಅದನ್ನು ಸ್ವೀಕರಿಸುವ ಆತನ ಪ್ರಭಾವಲಯ ತನ್ನಲ್ಲಿನ ಶಕ್ತಿಯನ್ನು ಜಾಗೃತಗೊಳಿಸಿ ಪಸರಿಸುತ್ತದೆ. ಎರಡು ಪ್ರಭಾವಲಯಗಳು ಸೇರಿದಾಗ ದಿವ್ಯಾನಂದದ ಅನುಭವ ಪ್ರಾಪ್ತವಾಗುತ್ತದೆ. ಇದನ್ನು ಕೆಲವಾರು ಪ್ರಯೋಗಗಳ ಮೂಲಕ ಪ್ರಮಾಣಪಡಿಸಿರುವುದಾಗಿ ಪ್ರಿಯಾಂಕ ಲೋಟ್ಲಿಕರ್ ಎಂಬುವವರು ತಮ್ಮ ಜಾಲತಾಣದಲ್ಲಿ ತಿಳಿಸುತ್ತಾರೆ. (www. spiritualscienceresearchfoundation.org)



ಇತರೇ ದೇಶಗಳಲ್ಲಿ ನಮಸ್ಕಾರ

ಪರಸ್ಪರ ವಂದಿಸುವಾಗ ಮತ-ಮೌಢ್ಯದ ಪ್ರಶ್ನೆ ಉದ್ಭವಿಸುವುದಿಲ್ಲ. ಅದು ಮನಸ್ಸು ಮತ್ತು ಪ್ರಜ್ಞೆಗೆ ಸಂಬಂಧಿಸಿದ ನಾಗರೀಕ ಅಭ್ಯಾಸ. ಜಗತ್ತಿನ ಎಲ್ಲಾ ದೇಶಗಳಲ್ಲೂ ವಂದಿಸುವ ಕ್ರಿಯೆ ಮಹತ್ವದ ಪಾತ್ರ ವಹಿಸಿದೆ.


ಟಿಬೆಟ್ ಗ್ಯಾಂಗ್ ಚೋಂಗ್

ಕೈ ಜೋಡಿಸಿ ನಮಸ್ಕರಿಸುವ ವಿಧಾನ ಭಾರತೀಯರ ವಿಶಿಷ್ಟ ಬೌದ್ಧಿಕ ಕ್ರಿಯೆ. ಇತರೇ ದೇಶಗಳಲ್ಲೂ ಕೂಡಾ ಅವುಗಳದ್ದೇ ಆದ ನಮಸ್ಕರಿಸುವ ಪದ್ಧತಿಗಳನ್ನು ಕಾಣಬಹುದು. ಟಿಬೆಟ್ ಭಾರತದ ನೆರೆಯ ರಾಷ್ಟ್ರ. ಭಾರತೀಯರ ಪರಮ ಪವಿತ್ರ ಯಾತ್ರಾ ಸ್ಥಳ ಕೈಲಾಸ ಪರ್ವತ ಮತ್ತು ಮಾನಸ ಸರೋವರ ಇಲ್ಲೇ ಇರುವುದು. ಇವು ಕೇವಲ ಭಾರತೀಯರಿಗೆ ಮಾತ್ರವಲ್ಲದೇ ಟಿಬೇಟಿಯನ್ ಬೌದ್ಧರಿಗೂ ಕೂಡ ಪವಿತ್ರ ಸ್ಥಳಗಳು. ಇಲ್ಲಿಗೆ ಯಾತ್ರೆ ಕೈಗೊಳ್ಳುವುದು ಪ್ರತೀ ಟಿಬೇಟಿಯನರ ಜೀವನದ ಮಹದಾಸೆಗಳಲ್ಲೊಂದು.

ಸಾಮಾನ್ಯವಾಗಿ ಲ್ಹಾಸಾದ ಬೌದ್ಧ ದೇವಾಲಯದಿಂದ ಪ್ರಾರಂಭವಾಗುವ ಕೈಲಾಸ ಪರ್ವತ ಯಾತ್ರೆಯಲ್ಲಿ ಸುಮಾರು 940 ಕಿಲೋಮೀಟರುಗಳನ್ನು 90 ದಿನಗಳ ಕಾಲ ನಡಿಗೆಯಲ್ಲಿ ಕ್ರಮಿಸುತ್ತಾರೆ. ಇದು ಅಂತಿಂತಹಾ ನಡಿಗೆಯಲ್ಲ ಒಂದು ಹೆಜ್ಜೆ ನಡೆದು ಕೈಲಾಸ ಪರ್ವತದ ದಿಕ್ಕಿನೆಡೆಗೆ ಕೈಮುಗಿದು ದೇಹವನ್ನು ಬಾಗಿಸಿ ದೀರ್ಘದಂಡ ನಮಸ್ಕಾರ ಹಾಕಿ ಎದ್ದು ನಿಂತು ಮತ್ತೊಂದು ಹೆಜ್ಜೆ ಇಟ್ಟು ಕೈಲಾಸದತ್ತ ತಿರುಗಿ ನಮಸ್ಕರಿಸಿ ದೀರ್ಘದಂಡ ನಮಸ್ಕಾರ ಹಾಕುತ್ತಾ ಬರುವ ವಿಶಿಷ್ಟ ಪದ್ದತಿ. ಇದನ್ನು ಗ್ಯಾಂಗ್ ಚಾಂಗ್ ಎಂದು ಕರೆಯುತ್ತಾರೆ. ಬಹುತೇಕ ಅಂಜಲಿ ಮುದ್ರೆಯ ನಕಲಿನಂತೆ ಇರುವ ಕುಂ ಚಾಂಗ್ ಸೂರ್ಯ ನಮಸ್ಕಾರದ ರೀತಿಯ ನಮಸ್ಕಾರ. ಟಿಬೇಟಿಯನರಲ್ಲಿ ತಾಶಿ ಡೆಲೆಕ್ ಎಂದು ವಂದಿಸಿಕೊಳ್ಳುವ ಪದ್ಧತಿ ಇದೆ.

ಇಸ್ಲಾಂ ಸುಜುದ್

ಇಸ್ಲಾಂ ಧರ್ಮದಲ್ಲಿ ಮಸೀದಿಗಳಲ್ಲಿ ಪ್ರಾರ್ಥನೆ ಮಾಡುವಾಗ ಕೆಲವು ನಮಸ್ಕಾರಗಳ ವಿಧಾನಗಳನ್ನು ನಾವು ಕಾಣಬಹುದು. ಇದನ್ನು ಸಜಾದತ್ ಅಥವಾ ಸುಜುದ್ ಎನ್ನುತ್ತಾರೆ. ನಿಂತು, ಬಾಗಿ, ಮಂಡಿಯೂರಿ ಹಣೆಯನ್ನು ನೆಲಕ್ಕೆ ತಾಗಿಸಿ ಸುಜುದ್ ಪ್ರಾರ್ಥನೆ ಮಾಡಲಾಗುತ್ತದೆ. ಅಲ್ಲಾನಿಗೆ ಶರಣು ಬರುವ ಸಜಾದತ್ ಉಲ್ಲೇಖ ಕುರಾನ್ ಗ್ರಂಥದಲ್ಲೂ ಕಂಡು ಬರುತ್ತದೆ. ಪ್ರವಾದಿ ಮುಹಮ್ಮದರು ಹದಿತ್ ಗ್ರಂಥದಲ್ಲಿ ಸುಜುದ್ ಅನೇಕ ಖಾಯಿಲೆಗಳಿಗೆ ದಿವ್ಯೌಷಧ ಎಂದು ತಿಳಿಸಿದ್ದಾರೆ.





ಇಸ್ಲಾಂ ಧರ್ಮದಲ್ಲಿ ವ್ಯಕ್ತಿಗಳು ಪರಸ್ಪರ ಭೇಟಿಯಾದಾಗ ಅಸ್ಸಲಾಮಲೈಕುಂ (ಅಲ್ಲಾನ ಆಶೀರ್ವಾದವಿರಲಿ) ಎಂದು ವಂದಿಸುವ ಅಭ್ಯಾಸವಿದೆ. ಅಲಾಹಿ ಅಸ್ಸಲಾಮ್ ಎಂಬ ಪದ ಸಹಾ ಬಳಕೆಯಲ್ಲಿದೆ. ಹಬ್ಬಗಳಲ್ಲಿ ಈದ್ ಮುಬಾರಕ್ ಎಂದು ಪರಸ್ಪರ ಅಪ್ಪಿಕೊಂಡು ಶುಭಾಶಯ ವಿನಿಮಯ ಮಾಡಿಕೊಳ್ಳುತ್ತಾರೆ.

ತೇರಾವಾದ ಪತಿತ್ತಿತ ಪಂಚ

ತೇರಾವಾದ ಪಂಥದ ಬೌದ್ಧರು ತಮ್ಮ ಪ್ರಾರ್ಥನೆ ಮತ್ತು ಧ್ಯಾನದ ಮುನ್ನ ಮತ್ತು ನಂತರ ನಮಸ್ಕಾರ ಹಾಕುತ್ತಾರೆ. ಇದು ಐದು ಹಂತಗಳ ನಮಸ್ಕಾರವಾಗಿದ್ದು ಪತಿತ್ತಿತ ಪಂಚ (ಐದು ಅಂಗಗಳ ನಮಸ್ಕಾರ– ಎರಡು ಹಸ್ತ, ಎರಡು ಮೊಣಕೈ, ಎರಡು ಉಂಗುಷ್ಟಗಳು, ಮಂಡಿಗಳು ಮತ್ತು ಹಣೆ) ಎನ್ನುತ್ತಾರೆ. ಪಂಚಾಂಗ ವಂದನ ಎಂಬ ಹೆಸರೂ ಇದಕ್ಕಿದೆ. ಅಂಜಲಿ ಮುದ್ರೆಯಲ್ಲಿ ಕೈ ಜೋಡಿಸಿ ನಿಧಾನವಾಗಿ ಕೆಳಗಿಳಿಸಿ ನಮಸ್ಕಾರ ಹಾಕುವ ಮೂರು ಹಂತಗಳಲ್ಲಿ ಪಾಲಿ ಶ್ಲೋಕವನ್ನು ಉಚ್ಚರಿಸಲಾಗುತ್ತದೆ.

ಮಹಾಯಾನ ಬೌದ್ಧರಲ್ಲಿ ನಮಸ್ಕರಿಸುವ ವಿಧಾನವನ್ನು ರೈಹೈ ಎನ್ನುತ್ತಾರೆ. ವಜ್ರಯಾನ ಬೌದ್ಧ ಪದ್ಧತಿಯಲ್ಲಿ ದೇಹ (ನಿರ್ಮಾಣಕಾಯ), ಮಾತು (ಸಂಭೋಗಕಾಯ) ಮತ್ತು ಮನಸ್ಸನ್ನು (ಧರ್ಮಕಾಯ) ಶುದ್ಧೀಕರಿಸುವ ವಿಧಾನದಲ್ಲಿ ಮೊದಲು ಹಸ್ತಗಳನ್ನು ಕಮಲದ ಮೊಗ್ಗಿನ ಮುದ್ರೆಗೆ ತಂದು ನಮಸ್ಕರಿಸಲಾಗುತ್ತದೆ. ಸಾಮಾನ್ಯವಾಗಿ 1,7,21 ಅಥವಾ 108 ಬಾರಿ ನಮಸ್ಕರಿಸಲಾಗುತ್ತದೆ. ತಾಂತ್ರಿಕರು ಸುಮಾರು 1,00,000 ಕ್ಕೂ ಹೆಚ್ಚು ಬಾರಿ ನಮಸ್ಕರಿಸುತ್ತಾ ರಕ್ಷಣಾ ಪ್ರಾರ್ಥನೆ, ಮಂಡಲ ಸೇವೆ, ವಜ್ರಸತ್ವ ಮುಂತಾದ ಎಂಗೊಂಡ್ರೋ ಎಂದು ಕರೆಯಲಾಗುವ ಹಂತಗಳಲ್ಲಿ ಸಾಧನೆ ಪ್ರಾರಂಭಿಸುತ್ತಾರೆ.

ಸಿಖ್ ನಮಸ್ಕಾರ

ಸಿಖ್ ಧರ್ಮೀಯರು ತಮ್ಮ ಪವಿತ್ರ ಗ್ರಂಥವನ್ನು ಕಂಡಾಗ ಮಂಡಿ ಊರಿ ತಲೆ ಬಾಗಿ ಮಾಡುವ ನಮಸ್ಕಾರವನ್ನು ನಿತ್ನೆಂ ಎಂದೂ ಹೊರಡುವ ಮುನ್ನ ಮತ್ತೊಮ್ಮೆ ಗ್ರಂಥಕ್ಕೆ ನಮಿಸುವ ರೀತಿಯನ್ನು ರೆಹ್ರಾಸ್ ಎನ್ನುತ್ತಾರೆ. ಒಟ್ಟಾರೆಯಾಗಿ ಗುರು ಗ್ರಂಥ ಸಾಹಿಬ್‌ನ್ನು ನಮಿಸುವ ರೀತಿಗೆ ಮುಥಾ ತೆಕ್ನ ಎನ್ನುತ್ತಾರೆ.

ಜಪಾನ್ ನಮಸ್ಕಾರ

ಜಪಾನೀಯರು ಕೂಡ ಬೌದ್ಧರಾಗಿದ್ದು ತಮ್ಮ ಹಿರಿಯರಿಗೆ ಹಾಕುವ ದೀರ್ಘದಂಡ ನಮಸ್ಕಾರದಲ್ಲಿ ಮಂಡಿ ಊರುವ ಹಂತ ಸೆಇಝಾ ಮತ್ತು ನಮಸ್ಕಾರವನ್ನು ದೊಗೆಝಾ ಎನ್ನುತ್ತಾರೆ. ಇದು ಜಪಾನೀಯರು ತಮ್ಮ ಹಿರಿಯರಿಗೆ ತೋರುವ ಅತ್ಯುನ್ನತ ಗೌರವ.



ಹವಾಯ್

ಪುರಾತನ ಕಾಲದಲ್ಲಿನ ಹವಾಯ್ ಜನರ ದೀರ್ಘದಂಡ ನಮಸ್ಕಾರವನ್ನು ಕಾಪು ಮೋಯ್ ಎನ್ನುತ್ತಾರೆ. ಇದು ಸೇನಾ ನಾಯಕರಿಗೆ ಸಾಮಾನ್ಯರು ಸಲ್ಲಿಸುತ್ತಿದ್ದ ಅತ್ಯುನ್ನತ ಗೌರವ.

ಗೌರವ ಸೂಚನೆಗಳ ಪ್ರಪಂಚ

ಗೌರವ ನಿವೇದನೆಗಳಲ್ಲಿ ಹತ್ತಾರು ವಿಧಾನಗಳಿವೆ. ಇವನ್ನು ನಿಗದಿತ ಸಮಯದಲ್ಲಿ ಮಾತ್ರಾ ಸೂಚಿಸಬೇಕೆಂಬ ನಿಯಮವಿದ್ದು ಅದರಂತೆ ಪಾಲಿಸಲಾಗುತ್ತದೆ. ಗೌರವ ಸೂಚನೆಗಳಲ್ಲೂ ಹಲವಾರು ವಿಧಾನಗಳಿವೆ. ಇವುಗಳಲ್ಲಿ ಹಸ್ತ ಚಲನೆ, ಭಾವನಾತ್ಮಕ ಸೂಚನೆಗಳನ್ನು, ಭಾಷಾ ಸೂಚನೆಗಳನ್ನು ಮತ್ತು ಸಂಜ್ಞಾ ಸೂಚನೆಗಳನ್ನು ನಾವು ಕಾಣಬಹುದು. ಇಂಡೋನೇಶಿಯಾದಲ್ಲಿ ವಾಯ್, ಲಾವೋಸ್ ಮತ್ತು ಕಾಂಬೋಡಿಯಾದಲ್ಲಿ ನೋಪ್ ಅಥವಾ ಸಾಮ್ವಿಯಾ ಎಂಬ ಪದಗಳಿಂದ ನಮಸ್ಕರಿಸುತ್ತಾರೆ. ಆಯುಬೋವಾನ್ ಎಂಬ ಪದವನ್ನು ಶ್ರೀಲಂಕಾದಲ್ಲಿ ಬಳಸುತ್ತಾರೆ. ಇದು ಭಾರತದ ಆಯುಶ್ಮಾನ ಭವ ಎಂಬುದರ ಮತ್ತೊಂದು ರೂಪ.

ಗೆಳೆತನದ ನಿವೇದನೆಗಳು

ಕೈಗೆ ಮುತ್ತಿಟ್ಟುಕೊಂಡು ಗಾಳಿಯಲ್ಲಿ ತೇಲಿ ಬಿಡುವ ಜನಪ್ರಿಯ ವಿಧಾನ ಮುತ್ತು ಹಾರಿಸುವುದು. ಪಾಶ್ಚಿಮಾತ್ಯರಲ್ಲಿ ಜನಪ್ರಿಯವಾಗಿದ್ದು ಇತ್ತೀಚೆಗೆ ಭಾರತದಲ್ಲೂ ಹರಡುತ್ತಿದೆ. ಇದು ಫ್ಲಯಿಂಗ್ ಕಿಸ್ ಎಂದು ಇಲ್ಲಿ ಜನಪ್ರಿಯ.

ಕರತಾಡನ ಗೌರವ ಮತ್ತು ಅಭಿನಂದನೆಯ ಸೂಚನೆ. ಮಾತಿನ ಗೋಜಿಲ್ಲದೇ ಚಪ್ಪಾಳೆ ಹೊಡೆಯುವ ಮೂಲಕ ಗೌರವ ಸಲ್ಲಿಸಲಾಗುತ್ತದೆ. ಈ ಪದ್ಧತಿಯು ಪುರಾತನ ರೋಮನರ ಕಾಲದಲ್ಲಿ ಜಾರಿಗೆ ಬಂದಿತು ಎನ್ನಲಾಗುತ್ತದೆ. ಕಲಾವಿದರಿಗೆ ತಮ್ಮ ಪ್ರತಿಭಾ ಪ್ರದರ್ಶನದ ನಂತರ ದೊರೆಯುವ ಕರತಾಡನ ಅವರ ಪ್ರತಿಭೆಗೆ ಸಲ್ಲುವ ಗೌರವ ಎಂಬ ನಂಬಿಕೆ ಇದೆ. ಜರ್ಮನಿಯಲ್ಲಿ ಚಪ್ಪಾಳೆ ಹೊಡೆಯುವುದು ದುರಭ್ಯಾಸ ಎಂಬ ನಂಬಿಕೆ ಕೆಲವು ಕಡೆ ಇದೆ.

ದಕ್ಷಿಣ, ಕೇಂದ್ರ, ಪೂರ್ವ ಯುರೋಪ್, ಮೆಡಿಟರೇನಿಯನ್, ಲ್ಯಾಟಿನ್ ಅಮೇರಿಕಾ, ಕೆನಡಾ, ಅಮೇರಿಕ ಸಂಯುಕ್ತ ಸಂಸ್ಥಾನ, ಏಷ್ಯಾ ಮುಂತಾದೆಡೆಗಳಲ್ಲಿ ಗೆಳೆಯರ ನಡುವೆ, ಪ್ರೇಮಿಗಳ ನಡುವೆ ಮುತ್ತಿಟ್ಟು ಅಭಿನಂದನೆ ಸಲ್ಲಿಸುವ ಮತ್ತು ಬೀಳ್ಕೊಡುವ ಪದ್ಧತಿ ಇದೆ.



ಸಾಂಪ್ರದಾಯಿಕ ಕ್ಯಾಥೋಲಿಕ್ ಕ್ರೈಸ್ತರಲ್ಲಿ ಪಾಸ್ಚಲ್ ಹಾರೈಕೆ ಎಂಬ ಪದ್ಧತಿಯಿದೆ. ಪರಸ್ಪರರು ಎದುರಾದಾಗ ಕ್ರಿಸ್ತನ ಹೆಸರಿನಲ್ಲಿ ಕ್ರಿಸ್ತನ ಪುನರುತ್ಥಾನ ಎಂದು ಹೇಳಲಾಗುತ್ತದೆ. ಎದುರಿದ್ದವರು ಅದನ್ನು ಸ್ವೀಕರಿಸಿ ಸತ್ಯ ಎನ್ನುತ್ತಾರೆ.

ಸಲ್ಯೂಟ್ ಮಿಲಿಟರಿಯಲ್ಲಿ ಹಿರಿಯ ಅಧಿಕಾರಿಗಳಿಗೆ ಕಿರಿಯ ಅಧಿಕಾರಿಗಳು ಸಲ್ಲಿಸುವ ಗೌರವ ವಂದನೆ. ಕೇವಲ ಸಲ್ಯೂಟ್ ಮಾತ್ರವಲ್ಲದೇ ರೈಫ಼ಲ್ ವಂದನೆ, ಧ್ವಜ ವಂದನೆ, ಫ಼ಿರಂಗಿ ವಂದನೆ ಮುಂತಾದ ಗೌರವ ಸೂಚಕ ಪದ್ಧತಿಗಳು ಮಿಲಿಟರಿಯಲ್ಲಿವೆ. ವಿಶೇಷ ಸಂದರ್ಭಗಳಲ್ಲಿ ಕುಶಾಲು ತೋಪು ಹಾರಿಸುವ ಪದ್ಧತಿ ಇದೇ ಮೂಲದ್ದು. ದೇಶದ ಪ್ರತಿಷ್ಠಿತ ವ್ಯಕ್ತಿಗಳು ನಿಧನರಾದಾಗ ಅಂತ್ಯಕ್ರಿಯೆಯ ಸಂದರ್ಭದಲ್ಲಿ ರೈಫ಼ಲ್ ದಳ ಆಕಾಶಕ್ಕೆ ಗುಂಡು ಹಾರಿಸಿ ಗೌರವ ಸೂಚಿಸುತ್ತದೆ.

ಡ್ಯಾಪ್ ಗ್ರೀಟಿಂಗ್ ಎಂಬುದು ಇಬ್ಬರು ಪರಸ್ಪರ ಮುಷ್ಟಿಗಳನ್ನು ತಗುಲಿಸುವ ಮೂಲಕ ಶುಭಾಶಯಗಳ ವಿನಿಮಯ ಮಾಡುವ ಪದ್ಧತಿ. ಅಸಾಂಪ್ರದಾಯಿಕವಾದ ಡ್ಯಾಪ್ ಗ್ರೀಟಿಂಗ್ ಸ್ನೇಹಿತರ, ತಂಡದ ಆಟಗಾರರ ನಡುವೆ ವಿನಿಮಯವಾಗುತ್ತದೆ.

ಮೊಣಕೈ ತಗುಲಿಸುವ ಎಲ್ಬೋ ಬಂಪ್ ಮುಖೇನ ವಂದನೆಗಳನ್ನು ವಿನಿಮಯ ಮಾಡಿಕೊಳ್ಳುವ ಪದ್ಧತಿಯು ವಿಚಿತ್ರವಾದ ಸಂದರ್ಭದಲ್ಲಿ ಚಾಲ್ತಿಗೆ ಬಂದಿತ್ತು. ಆಗ ಹಂದಿ ಜ್ವರದ ಭಯ ಜಗತ್ತಿನಲ್ಲೆಲ್ಲಾ ಹಬ್ಬಿತ್ತು. ಪರಸ್ಪರ ಕೈ ಕುಲುಕುವುದರಿಂದ ವೈರಾಣುಗಳು ಹರಡುತ್ತವೆ ಎಂದು ತಿಳಿದಿದ್ದ ಜನತೆ ತಮ್ಮ ಮೊಣಕೈಗಳನ್ನು ಮುಂದೆ


ಮಾಡಿ ಪರಸ್ಪರರಿಗೆ ಗೌರವ ಸೂಚಿಸುತ್ತಿದ್ದರು. ಇದು ಒಂದು ಪದ್ಧತಿಯಾಗಿಯೇ ಮುಂದುವರೆದಿದೆ.

ಎಸ್ಕಿಮೋ ಕಿಸ್ಸಿಂಗ್ ಎಂಬುದು ಆತ್ಮೀಯ ಗೆಳೆಯರು ಹಾಗೂ ಪ್ರೇಮಿಗಳು ಪರಸ್ಪರರ ಮೂಗಿನ ತುದಿಗಳನ್ನು ಮುಟ್ಟಿಸಿಕೊಂಡು ಲಘುವಾಗಿ ಕೆನ್ನೆಗಳನ್ನು ತಾಕಿಸಿಕೊಂಡು ಪ್ರೀತಿ ವಿಶ್ವಾಸವನ್ನು ತೋರಿಸುವ ಕ್ರಿಯೆ. ಇದರ ಮೂಲ ಬಹುಶಃ 1922 ರಲ್ಲಿ ಬಿಡುಗಡೆಯಾದ ರಾಬರ್ಟ್ ಫ್ಲಾಹರ್ಟಿ ಎಂಬಾತನ ನನೂಕ್ ಆಫ್ ದಿ ನಾರ್ತ್ ಎಂಬ ಸಿನೆಮಾ ಎನ್ನಲಾಗುತ್ತದೆ. ಸಮುದ್ರದ ಮೇಲೆ ಯಾತ್ರೆ ಮಾಡುತ್ತಿದ್ದ ಸಂಶೋಧಕರು ಗೆಳೆಯರನ್ನು ಕಂಡಾಗ ಖುಷಿಯಿಂದ ಪರಸ್ಪರರ ಮೂಗುಗಳನ್ನು ಉಜ್ಜಿಕೊಳ್ಳುತ್ತಿರುವ ಚಿತ್ರಗಳನ್ನು ಹಳೆಯ ಸಿನೆಮಾಗಳಲ್ಲಿ ಕಾಣಬಹುದು.

ಪ್ರಸಿದ್ಧರು ತಮ್ಮ ಕಾರ್ಯಕ್ರಮ ಮುಗಿದ ನಂತರ ಅಭಿಮಾನಿಗಳನ್ನು ತಾವು ಪ್ರೀತಿಸುವುದಾಗಿ ಹೇಳಲು ಕೈ ಬೆರಳುಗಳಲ್ಲಿ ಹೃದಯದ ಚಿಹ್ನೆ ಮಾಡಿ ತೋರಿಸುವ ಪದ್ಧತಿ ಹಿಂದಿನಿಂದ ಚಾಲ್ತಿಯಲ್ಲಿದೆ. ಈ ಚಿಹ್ನೆಯನ್ನು ಕಂಡೊಡನೆ ಅಭಿಮಾನಿಗಳು ಹುಚ್ಚೆದ್ದು ಕುಣಿಯುತ್ತಾರೆ. ಸೆಲೆಬ್ರಿಟಿಗಳು ಮತ್ತು ಜನಪ್ರಿಯ ರಾಜಕೀಯ ನಾಯಕರು ತಮ್ಮ ಅಭಿಮಾನಿಗಳನ್ನು ಕಂಡಾಗ ಬಲಗೈ ಎತ್ತಿ ಬೀಸುವುದು ಅಭಿಮಾನದ ಸಂಕೇತ.

ಪರಸ್ಪರು ಕೈ ಕುಲುಕುವುದರ ಮೂಲಕ ಗೌರವ ಸಲ್ಲಿಸುವ ಅತಿ ಜನಪ್ರಿಯ ಪದ್ಧತಿ ಇಂದಿಗೂ ಚಾಲ್ತಿಯಲ್ಲಿದೆ. ಕೈ ಕುಲುಕುವ ಪದ್ಧತಿಯು ಬಹುಶಃ ಕ್ರಿ.ಪೂ. 3–4 ನೇ ಶತಮಾನದ್ದು ಎನ್ನಲಾಗಿದೆ. ಪುರಾತನ ಗ್ರೀಕರ ಕಾಲದ ಕೆಲವು ಶಿಲ್ಪಗಳು ಹಸ್ತಲಾಘವದ ಶೈಲಿಯಲ್ಲಿವೆ ಎಂಬುದು ಅಚ್ಚರಿಯ ವಿಷಯ. ಕೈ ಕುಲುಕುವುದರಲ್ಲೂ ಸೀಕ್ರೆಟ್ ಹ್ಯಾಂಡ್ ಶೇಕ್ ಎಂಬ ವಿಧಾನವಿದೆ. ಗೆಳೆಯರು, ಸಹೋದ್ಯೋಗಿಗಳು ಮತ್ತು ಆತ್ಮೀಯರ ನಡುವೆ ಸೀಕ್ರೇಟ್ ಹ್ಯಾಂಡ್ ಶೇಕ್ ಬಳಕೆಯಾಗುತ್ತದೆ.

ಪಾಶ್ಚಿಮಾತ್ಯರಲ್ಲಿ ಹ್ಯಾಟ್ ಧರಿಸುವ ಪದ್ಧತಿಯು 19–20 ನೇ ಶತಮಾನದಲ್ಲಿ ವ್ಯಾಪಕವಾಗಿತ್ತು. ಮಿತ್ರರು ಎದುರಾದಾಗ ಹ್ಯಾಟ್ ತೆಗೆದು ಬಾಗಿ ಗೌರವ ತೋರಿಸುತ್ತಿದ್ದರು. ಮುಂದಿದ್ದ ವ್ಯಕ್ತಿ ತಾನೂ ಸಹಾ ಹ್ಯಾಟ್ ತೆಗೆದು ನಡು ಬಾಗಿ ಗೌರವವನ್ನು ಹಿಂದಿರುಗಿಸುತ್ತಿದ್ದ. ಇದೊಂದು ನಾಗರೀಕ ಸಂಪ್ರದಾಯ ಎಂಬ ಹಾಗೆ ಚಾಲ್ತಿಯಲ್ಲಿತ್ತು ಈ ಹ್ಯಾಟ್ ಟಿಪ್ಪಿಂಗ್.



ಖುಷಿಯಿಂದ ಮಿತ್ರರ ಕೈಗಳನ್ನು ಹಿಡಿದು ತಬ್ಬಿಕೊಳ್ಳುವ ಪೌಂಡ್ ಹಗ್ ಸಾಂಪ್ರದಾಯಿಕವಲ್ಲದಿದ್ದರೂ ಪರಸ್ಪರರನ್ನು ಹತ್ತಿರ ಮಾಡುವ ಗುಣವುಳ್ಳದ್ದು. ಇಲ್ಲಿ ಖುಷಿಯೇ ಮುಖ್ಯ. ಕೈ ಕುಲುಕುತ್ತಾ ಹಾಗೆ ತಬ್ಬಿಕೊಳ್ಳುವ ಈ ಕ್ರಿಯೆ ಆತ್ಮೀಯರಲ್ಲಿ ಸಾಧ್ಯ.

ಹವಾಯ್ ಮೂಲದ ಜನತೆ ತಮ್ಮ ಹೆಬ್ಬೆರಳು ಮತ್ತು ಕಿರು ಬೆರಳನ್ನು ನೇರವಾಗಿಟ್ಟು ನಡುವಿನ ಮೂರು ಬೆರಳುಗಳನ್ನು ಮಡಿಸಿ ಕೈ ಎತ್ತಿ ಗೌರವ ಸಲ್ಲಿಸುವ ಪದ್ಧತಿಯನ್ನು ಶಾಕಾ ಸೂಚನೆ ಎನ್ನುತ್ತಾರೆ. ಪಾಶ್ಚಿಮಾತ್ಯ ದೇಶಗಳ ಹಲವೆಡೆ ಈಗಲೂ ಶಾಕಾ ಪದ್ದತಿಯಂತೆ ಅಭಿನಂದಿಸಿಕೊಳ್ಳುತ್ತಾರೆ.


ಥಮ್ಸ್ ಅಪ್ ಬಲು ಜನಪ್ರಿಯ ಸಂಜ್ಞೆ, ಮುಷ್ಟಿ ಹಿಡಿದು ಹೆಬ್ಬೆರಳು ಮೇಲೆತ್ತಿ ಸೂಚಿಸುವ ಚಿಹ್ನೆ ಈಗ ಎಲ್ಲಾ ದೇಶಗಳಲ್ಲೂ ಸಾಮಾನ್ಯವಾಗಿ ಹೋಗಿದೆ. ಭಾಷೆಯ ಗೋಜಿಲ್ಲದ ಖುಷಿಯ ಸೂಚಕ ಇದು. ಮತ್ತೊಬ್ಬರನ್ನು ಬೀಳ್ಕೊಡುವಾಗ ಬಲಗೈ ಮೇಲೆತ್ತಿ ಕೈ ಬೀಸುವುದು ಖುಷಿಯ, ವಿಷಾದದ, ನೋವಿನ ಸೂಚನೆಯಾಗಿದೆ.

ಗೌರವ ಸೂಚಕಗಳು

ದೇವತೆಗಳನ್ನು, ಹಿರಿಯರನ್ನು, ಸಂತರನ್ನು ಕಂಡಾಗ ಗೌರವಿಸುವ ಪದ್ಧತಿ ಎಲ್ಲೆಡೆ ಇದೆ. ಆದರೆ ಈ ಗೌರವ ಸೂಚಕಗಳು ದೇಶದಿಂದ ದೇಶಕ್ಕೆ ಬೇರೆ ಬೇರೆಯಾಗುತ್ತವೆ. ಈಗಾಗಲೇ ನೋಡಿದಂತೆ ಭಾರತದಲ್ಲಿ ನಮಸ್ಕರಿಸುವ, ಟಿಬೇಟಿನಲ್ಲಿ ದೀರ್ಘದಂಡ ನಮಸ್ಕಾರ ಹಾಕುವ ಮತ್ತು ಇಸ್ಲಾಂ ಧರ್ಮದಲ್ಲಿ ತಲೆ ಬಾಗಿ ನಮಾಜ್ ಮಾಡುವ ಕ್ರಿಯೆಗಳು ಗೌರವ ಸೂಚಕಗಳು. ಇವೇ ಅಲ್ಲದೆ ಮತ್ತೆ ಕೆಲವು ಹಾವಭಾವಗಳು ವಿಶ್ವದಲ್ಲಿನ ಸಂಸ್ಕೃತಿಯ ಭಾಗವೇ ಆಗಿವೆ.

ಆದಾಬ್ ಸಲ್ಲಿಕೆ ದಕ್ಷಿಣ ಏಷ್ಯಾದ ಮುಸ್ಲಿಂ ಪದ್ದತಿ. ಅರೇಬಿಯನ್ ಮೂಲದ ಆದಾಬ್ ಪದ ಹೆಚ್ಚಾಗಿ ಉತ್ತರ ಪ್ರದೇಶ ಮತ್ತು ಹೈದರಾಬಾದಿ ಮುಸ್ಲೀಮರಲ್ಲಿ ಬಳಕೆಯಲ್ಲಿದೆ. ನವಾಬಿ ಶೈಲಿಯಲ್ಲಿ ಬಲ ಮುಂಗೈ ಮೇಲೆತ್ತಿ ಹಣೆಗೆ ಮುಟ್ಟಿಸುತ್ತಾ ಆದಾಬ್ ಹಾಜಿರ್ ಹೈ ಎನ್ನುವ ವ್ಯಕ್ತಿ ಎದುರಿನವರಿಂದಲೂ ಅದೇ ಘನತೆಯ ಗೌರವ ನಿರೀಕ್ಷೆ ಮಾಡುತ್ತಾನೆ. ಅಸ್ಸಲಾಂ ಅಲೈಕುಂ ಎಂದೂ ಸಹಾ ಗೌರವ ಸೂಚಿಸುವ ಪದ್ಧತಿ ಮುಸ್ಲೀಮರಲ್ಲಿದೆ.

ದೇಹದ ಮೇಲ್ಭಾಗವನ್ನು ಬಾಗಿಸಿ ವಂದಿಸುವ ಕ್ರಿಯೆ ಏಷ್ಯಾ, ಯುರೋಪಿಯನ್, ಚೀನ, ಕೊರಿಯಾ, ತೈವಾನ್, ಜಪಾನ್ ಮತ್ತು




ವಿಯೆತ್ನಾಂಗಳಲ್ಲಿ ಬಳಕೆಯಲ್ಲಿದೆ. ರಾಜ ವಂಶಸ್ಥರು ಅಥವಾ ಸಿರಿವಂತರು ಎದುರಾದಾಗ ಈ ರೀತಿಯ ಗೌರವ ಸಲ್ಲಿಸಲಾಗುತ್ತಿತ್ತು. ಈಗ ಹಿರಿಯರಿಗೆ ಬಾಗಿ ನಮಸ್ಕರಿಸುವ ಪದ್ಧತಿಯನ್ನು ಹಿಂದೂಗಳಲ್ಲಿ ಕಾಣಬಹುದು. ವೇದಿಕೆಯ ಮೇಲೆ ಪ್ರೇಕ್ಷಕರ ಕರತಾಡನಗಳಿಗೆ ಕಲಾವಿದ ಬಾಗಿ ಗೌರವ ಸೂಚಿಸುವ ಪದ್ಧತಿ ಇದೆ.

ಸಮರ ಕಲೆಗಳಾದ ಕುಂಗ್ ಫು, ಜುಡೋಗಳಲ್ಲಿ ಎದುರಾಳಿಗೆ ಗೌರವದಿಂದ ದೇಹ ಬಾಗಿಸಿ ವಂದನೆ ಸಲ್ಲಿಸಿದ ನಂತರ ಕಾಳಗ ಮುಂದುವರೆಯುತ್ತದೆ. ಶಿಂಟೊ ಮತ್ತು ಜೆನ್ ಬೌದ್ಧರಲ್ಲಿ ಪ್ರತಿದಿನ ಕನಿಷ್ಠ 108 ಅಥವಾ ಗರಿಷ್ಠ 1080 ಬಾರಿ ಬಾಗಿ ದೀರ್ಘದಂಡ ನಮಸ್ಕಾರ ಹಾಕುವ ಆಚರಣೆ ಇದೆ. ಕ್ರೈಸ್ತರು ಚರ್ಚ್‌ನಲ್ಲಿ ಯೇಸುವಿನ ಪ್ರತಿಮೆಯ ಮುಂದೆ ಬಂದಾಗ ಗೌರವದಿಂದ ಬಾಗಿ ವಂದಿಸುವ ಪದ್ಧತಿ ಇಟ್ಟುಕೊಂಡಿದ್ದಾರೆ. ಜುದಾಯಿಸಂ ಧರ್ಮದಲ್ಲಿ ಅದೋನಾಯ್ (ದೈವ) ಮುಂದೆ ನಿಂತು ವನಾಚ್ನು ಕೋರಿಂ ಉಮಿಶ್ತಚಾವಿಂಉಮೋದಿಂ ಎನ್ನುತಾರೆ. ಹಾಗೆಂದರೆ ನಾನು ಮಂಡಿಯೂರಿ ಬಾಗಿ ನನ್ನ ಗೌರವ ಸಲ್ಲಿಸುತ್ತಿದ್ದೇನೆ ಎಂದರ್ಥ.

ಪಾಶ್ಚಿಮಾತ್ಯ ದೇಶಗಳ ಸ್ತ್ರೀಯರು ನಡು ಬಾಗಿಸಿ ತಮ್ಮ ಉದ್ಯೋಗದಾತರಿಗೆ, ಹಿರಿಯರಿಗೆ, ರಾಣಿಯರಿಗೆ ಗೌರವ ಸಲ್ಲಿಸುವ ಕ್ರಿಯೆಯನ್ನು ಕರ್ಟ್ಸಿ ಎನ್ನುತ್ತಾರೆ. ನೃತ್ಯ ಪ್ರದರ್ಶದ ನಂತರ ಕೂಡ ಮಹಿಳಾ ನರ್ತಕಿಯರು ನಡು ಬಾಗಿಸಿ ಪ್ರೇಕ್ಷಕರಿಗೆ ಗೌರವ ಸಲ್ಲಿಸುವುದುಂಟು.

ಒಂದು ಮೊಳಕಾಲೂರಿ ಗೌರವ ಸಲ್ಲಿಸುವ ಪದ್ಧತಿಯನ್ನು (ಜೆನುಫ್ಲೆಕ್ಶನ್) ಅಲೆಕ್ಸಾಂಡರ್ ತನ್ನ ಆಸ್ಥಾನದಲ್ಲಿ ಜಾರಿಗೆ ತಂದಿದ್ದ. ಆಗ ಅರಸರು ಮತ್ತು ಅವರಿಗೆ ಸಮಾನಾರಾದವರ ಮುಂದೆ ಒಂದು ಮಂಡಿ ಊರಿ ಗೌರವ ಸಲ್ಲಿಸುತ್ತಿದ್ದರು. ಕಾಲಾನಂತರ ಒಂದು ಮಂಡಿ ಊರಿ ಕೈಯ್ಯಲ್ಲಿ ಹೂವು ಹಿಡಿದು ತನ್ನ ಪ್ರೇಮ ನಿವೇದನೆ ಮಾಡುವ ಕ್ರಮ ಇಂದು ವ್ಯಾಪಕವಾಗಿದೆ.

ತನ್ನ ಮುಂದೆ ನಿಂತ ಅತ್ಯುನ್ನತ ವ್ಯಕ್ತಿಯ ಬಲ ಹಸ್ತ ಹಿಡಿದು ಚುಂಬಿಸಿ ತನ್ನ ಗೌರವ, ಶಿಷ್ಟಾಚಾರ ಮತ್ತು ಸಭ್ಯ ನಡವಳಿಕೆ ತೋರಿಸುವ ವಿಧಾನ ಪುರಾತನ ರೋಮನರ ಕಾಲದ್ದು. ಈಗಲೂ ಕೂಡ ಪೋಪರ ಹಸ್ತ ಹಿಡಿದು ಚುಂಬಿಸುವ ಪದ್ಧತಿ ಇದೆ. ಕ್ರಿ.ಶ. 7 ನೇ ಶತಮಾನದಲ್ಲಿ ಖಲೀಫರ ಹಸ್ತ ಚುಂಬಿಸುವ ಪದ್ಧತಿ ಇಸ್ಲಾಂ ಧರ್ಮದಲ್ಲಿತ್ತು.




ಚೀನಿ ಮೂಲದ ಕೌತೌ ಮಂಡಿಯೂರಿ ನೆಲದ ಮೇಲೆ ಹಸ್ತಗಳನ್ನಿಟ್ಟು ತಲೆಯನ್ನು ನೆಲ ಮುಟ್ಟುವಂತೆ ಬಾಗಿ ವಂದಿಸುವ ಪದ್ಧತಿ. ಪುರಾತನ ಕಾಲದಲ್ಲಿ ಚೀನಿಯರು ತಮ್ಮ ಚಕ್ರವರ್ತಿಗೆ ವಂದಿಸುತ್ತಿದ್ದ ಪದ್ಧತಿ ಇದು. ಹಿಂದುಗಳು ಹಿರಿಯರಿಗೆ ಮತ್ತು ದೇವರಿಗೆ ವಂದಿಸುವಾಗ ಇದೇ ರೀತಿಯಲ್ಲಿ ಮಂಡಿ ಊರಿ ವಂದಿಸುವುದುಂಟು.

ಕುಜಿ ಎಂಬುದು ತಾವೋ ಮೂಲದ ಒಂಬತ್ತು ಸ್ವರಗಳ ಮಂತ್ರ. ಒಂದು ಉತ್ತಮ ದಿನದಂದು, ಸೂಕ್ತ ಸಮಯವನ್ನಾಧರಿಸಿ, ಪರ್ವತವನ್ನೇರಿ, ಐದು ಬಣ್ಣಗಳ, ಐದು ಅಂಗುಲ ಅಗಲದ ರೇಶ್ಮೆ ಬಟ್ಟೆಯನ್ನು, ಬಂಡೆಗಳ ಮೇಲೇರಿ ನೇತು ಬಿಡಿ, ಇದರಿಂದ ನಿಮ್ಮಗುರಿ ತಲುಪುವಿರಿ ಎಂಬರ್ಥ ನೀಡುವ ಮಂತ್ರವನ್ನು ನಾವು ತಾವೋ ಗ್ರಂಥ ಬಾವೋ ಪುಜ಼ಿಯಲ್ಲಿ ಕಾಣಬಹುದು. ಚಕ್ರಗಳು ಮತ್ತು ಪಂಚ ತತ್ವಗಳೊಂದಿಗೆ ಸಂಬಂಧಿಸಿದ ಕುಜಿ ತಾಂತ್ರಿಕ ಸಾದನೆಯ ಪ್ರಾರಂಭಿಕ ವಂದನಾ ಮಂತ್ರ.

ಮನಪೋ ಎಂಬುದು ಹಸ್ತ ಚುಂಬನಕ್ಕೆ ಹೋಲಿಕೆಗಳುಳ್ಳ ವಂದನಾ ಕ್ರಿಯೆ. ಫಿಲಿಪಿನೋ ಮೂಲದಲ್ಲಿ ನಮಸ್ಕಾರಕ್ಕೆ ಮುನ್ನ ಹಿರಿಯರನ್ನು ಮನೋ ಪೋ – ನಿಮಗೆ ನಮಸ್ಕರಿಸಲೇ– ಎಂದು ಕೇಳುತ್ತಾರೆ. ಮನೆಯೊಳಕ್ಕೆ ಪ್ರವೇಶಿಸಿದಾಗ ಅಥವಾ ಹಿರಿಯರನ್ನು ಕಂಡಾಗ ಗೌರವ ಸಲ್ಲಿಸುವ ಪಗ್ ಮಮಾನೋ ಮಾಡದಿರುವುದು ಅನಾಗರೀಕ ವರ್ತನೆ ಎಂದು ಭಾವಿಸುತ್ತಾರೆ. ಬೆಸೋ–ಬೆಸೋ ಎಂದು ಕರೆಯಲಾಗುವ ಕೆನ್ನೆಗೆ ಕೆನ್ನೆ ತಗುಲಿಸುವ ಪದ್ಧತಿ ಫಿಲಿಪ್ಪೀನ್ಸ್ ದೇಶದಲ್ಲಿದೆ.

ಮುದ್ರೆ ಯೋಗ ಸಾಧನೆಯ ಕ್ರಿಯೆ. ತಾಂತ್ರಿಕ ಕ್ರಿಯೆಗಳಲ್ಲೂ ಇಂತಹ 108 ಮುದ್ರೆಗಳ ವಿವರಣೆ ಇದೆ. ಮುದ್ರೆಯ ಮುಂದುವರೆದ ಭಾಗವೇ ಪ್ರಾಣಾಯಾಮ ಮತ್ತು ಆಸನಗಳು. ನಾಟ್ಯ ಶಾಸ್ತ್ರದಲ್ಲಿ ಮುದ್ರೆಗಳ ಪಾತ್ರ ದೊಡ್ಡದು. ನಾಟ್ಯ ಶಾಸ್ತ್ರವು 24 ಮುದ್ರೆಗಳ ವಿವರ ನೀಡಿದರೆ ಅಭಿನಯ ದರ್ಪಣ 28 ಮುದ್ರೆಗಳ ಮಾಹಿತಿ ನೀಡುತ್ತದೆ. ಬೌದ್ಧ ಗಂಥಗಳಲ್ಲೂ ಸಹ ಮುದ್ರೆಗಳ ಉಲ್ಲೇಖ ಇದೆ. ಸಮರ ಕಲೆಗಳಲ್ಲೂ ಸಹ ಮುದ್ರೆಗಳನ್ನು ಬಳಸಲಾಗುತ್ತದೆ. ಬೆರಳುಗಳನ್ನು ಒಟ್ಟಾಗಿ ಸೇರಿಸಿ ಅವನ್ನು ತಿರುಗಿಸಿ ಪೂಜಾ ಮುದ್ರೆಗಳ ರೂಪಕ್ಕೆ ತರುವ ರೀತಿಯನ್ನು ನಾವು ಹಿಂದೂ ಪೂಜಾ ಸಂದರ್ಭಗಳಲ್ಲಿ ಕಾಣಬಹುದು.

ಕಾಂಬೋಡಿಯಾ ಮೂಲದ ಸಾಂಪಿಯಾ ಎಂಬುದು ಭಾರತೀಯ ಅಂಜಲಿ ಮುದ್ರೆಯ ಮತ್ತೊಂದು ರೂಪ. ಎರಡು ಹಸ್ತಗಳನ್ನು ಜೋಡಿಸಿ ಬಾಗಿ ನಮಸ್ಕರಿಸುವ ವಿಧಾನ ಇದು.



ಸೆಂಬಾ ಎಂಬುದು ಭಾರತೀಯ ನಮಸ್ಕಾರವನ್ನು ಹೋಲುವ ಗೌರವ ಸಲ್ಲಿಕೆ. ಎರಡು ಹಸ್ತಗಳನ್ನು ಜೋಡಿಸಿ ಬಾಗಿ ನಂತರ ಮುಖದವರೆಗೆ ಹಸ್ತಗಳನ್ನು ತಂದು ಸುಹುನ್ ಎಂದು ಉಚ್ಚರಿಸುತ್ತಾರೆ. ಈ ಪದ್ಧತಿಯು ಇಂಡೋನೇಶಿಯಾ, ಬಾಲಿ, ಜಾವಗಳಲ್ಲಿದೆ. ಇದನ್ನು ಉ ಸೆಂಬಯಾಂಗ್ ಎಂದೂ ಸಹ ಕರೆಯಲಾಗುತ್ತಿದ್ದು ಇಸ್ಲಾಂ ಸಲಾತ್ (ಪ್ರಾರ್ಥನೆ) ಗೆ ಸಮಾನಾಂತರ ಪದವಾಗಿದೆ.

ಜರ್ಮನ್ ಮೂಲದ ಶ್ವುರ್ ಹಾಂತ್ ತೋರು ಬೆರಳು, ನಡು ಬೆರಳುಗಳನ್ನು ನೇರವಾಗಿ ಚಾಚಿ ನಂತರ ಹೆಬ್ಬೆರಳನ್ನು ಓರೆಯಾಗಿ ತೋರಿಸುವ ಈ ಸೂಚನೆಯನ್ನು ಹಿಂದೆ ನ್ಯಾಯಾಲಯಗಳಲ್ಲಿ ಪ್ರಮಾಣ ಸ್ವೀಕಾರ ಮಾಡುವಾಗ ಪ್ರದರ್ಶಿಸಲಾಗುತ್ತಿತ್ತು.


ಥಾಯ್ ಜನ ಅಂಜಲಿ ಮುದ್ರೆಯಲ್ಲಿ ಹಸ್ತಗಳನ್ನು ಜೋಡಿಸಿ ತಲೆಯನ್ನು ಬಾಗಿಸುತ್ತಾ ನಮಸ್ಕಾರ ಭಂಗಿಯಲ್ಲಿರುವ ಹಸ್ತಗಳನ್ನು ಮೇಲೆತ್ತುತ್ತಾ ಹೋಗುತ್ತಾರೆ. ಇದನ್ನು ಥಾಯ್ ವಾಯ್ ಸಾವತ್‌ದಿ ಎಂದು ಸಹಾ ಕರೆಯುತ್ತಾರೆ.

ಝೋಲ್ಕೊಕ್ ಎಂಬುದು ಮಂಗೋಲಿಯಾದ ಸಾಂಪ್ರದಾಯಿಕ ಗೌರವ ಸೂಚಕ ಕ್ರಿಯೆ. ಪರಸ್ಪರ ಅಪ್ಪಿಕೊಂಡು ಅಮರ್ ಮೆಂಡ್ ಉ (ಹೇಗಿದ್ದೀಯೆ?) ಎನ್ನುತ್ತಾರೆ. ಆಗ ಹಿರಿಯನ ತೋಳುಗಳು ಮೇಲ್ಭಾಗದಲ್ಲಿದ್ದರೆ ಕಿರಿಯನ ತೋಳುಗಳು ವಿನೀತವಾಗಿ ಕೆಳ ಮಟ್ಟದಲ್ಲಿರುತ್ತವೆ. ನಂತರ ಪರಸ್ಪರರ ಕೆನ್ನೆಗಳನ್ನು ತಾಗಿಸಿಕೊಳ್ಳುತ್ತಾರೆ.

ವಂದನಾ ಸೂಚಕ ಕ್ರಿಯೆಗಳು

ಮಿಲಿಟರಿಗಳಲ್ಲಿ ಸಲ್ಯೂಟ್ ಬಗ್ಗೆ ಕೇಳಿಯೇ ಇರುತ್ತೇವೆ. ಇವುಗಳಲ್ಲಿ ಬೆಲ್ಲಮಿ ಸಲ್ಯೂಟ್ ಒಂದು. ನಂತರ ಇದು ಧ್ವಜ ವಂದನೆಯ ರೂಪ ತಳೆಯಿತು. ಒಂದು ಕೈಯ್ಯಲ್ಲಿ ದ್ವಜ ಹಿಡಿದು ಮತ್ತೊಂದು ಕೈಯ್ಯನ್ನು ಎದೆಯ ಮೇಲಿರಿಸಿಕೊಂಡು ನನ್ನ ಧ್ವಜಕ್ಕೆ ವಂದನೆಗಳು ಎನ್ನುತ್ತಾರೆ.

ನಾಝಿ ಸಲ್ಯೂಟ್ ಅಥ್ವಾ ಹಿಟ್ಲರ್ ಸಲ್ಯೂಟ್ ನಾಝಿ ಜರ್ಮನಿಯಲ್ಲಿ ಕಡ್ಡಾಯವಾಗಿತ್ತು. ನಮಸ್ಕರಿಸುವ ವ್ಯಕ್ತಿ ತನ್ನ ಕೈ ಮೇಲೆತ್ತಿ ಹಿಡಿದು ಹೈಲ್ ಹಿಟ್ಲರ್, ಹೈಲ್ ಮೈ ಫ಼ುರೆರ್ (ನಾಯಕ), ಸೀಜ್ ಹೈಲ್ (ವಿಜಯವಾಗಲಿ) ಎಂದು ಹೇಳಬೇಕಿತ್ತು. ಈಗ ಜರ್ಮನಿಯಲ್ಲಿ ಹೀಗೆ ವಂದಿಸುವುದನ್ನು ಅಪರಾಧ ಎಂದು ಪರಿಗಣಿಸಲಾಗುತ್ತದೆ.




ಎತ್ತಿದ ಮುಷ್ಟಿ ವಂದನೆಯು ಹಿಂಸೆ ಮತ್ತು ದ್ವೇಷಗಳನ್ನು ವಿರೋಧಿಸುವ ದೃಶ್ಯ ಸಂವಹನವಾಗಿದೆ. ಹಿಂದೆ ಕಮ್ಯುನಿಷ್ಟರು ಕುಡುಗೋಲು–ಸುತ್ತಿಗೆಯ ಚಿಹ್ನೆಯೊಂದಿಗೆ ಮುಷ್ಟಿಯ ಚಿಹ್ನೆಯನ್ನು ಹೊಂದಿದ್ದುದು ಏಕತೆಯ ಸೂಚಕವಾಗಿತ್ತು.

ರೋಮನ್ ಸಲ್ಯೂಟ್ ಹಿಂದೆ ರೋಂ ದೇಶದಲ್ಲಿ ವಂದಿಸುವ ಜನಪ್ರಿಯ ಶೈಲಿಯಾಗಿತ್ತು. ಕೈಗಳನ್ನು ಚಾಚಿ ಮೇಲೆತ್ತಿ ಹಿಡಿದು ಹಸ್ತವನ್ನು ನೆಲಕ್ಕೆ ಸಮಾನಾಂತರವಾಗಿ ಹಿಡಿಯಲಾಗುತ್ತಿತ್ತು. ಅಗಸ್ಟಸ್ ಕಾಲದಿಂದ ಇದು ಬಳಕೆಯಲ್ಲಿತ್ತು.

ಸ್ಕೌಟ್ ವಂದನೆಯು ಬಲಗೈ ಬೆರಳುಗಳನ್ನು ನೇರವಾಗಿಟ್ಟು ಕಿರು ಬೆರಳನ್ನು ಮತ್ತು ಹೆಬ್ಬೆರಳನ್ನು ಮಡಿಸಿ ಹಣೆಯ ಬಳಿ ತಂದು ಸಲ್ಯೂಟ್ ಮಾಡುವ ಸೂಚನೆಯನ್ನು ಮೂರು ಬೆರಳುಗಳ ವಂದನೆ ಎಂದು ಕರೆಯುತ್ತಾರೆ. ಮೇಲೆ ತಿಳಿಸಿದ ಹಾಗೆ ಮೂರು ಬೆರಳುಗಳನ್ನು ಹಿಡಿದು ಭುಜದ ಬಳಿ ತಂದು ನಿಲ್ಲುವ ಗೌರವ ಸೂಚನೆಯನ್ನು ಅರೆ ಸಲ್ಯೂಟ್ ಎನ್ನುತ್ತಾರೆ. ಸರ್ಬಿಯನರಲ್ಲಿ ಇದೇ ರೀತಿ ಮೂರು ಬೆರಳನ್ನು ಗಾಳಿಯಲ್ಲಿ ಎತ್ತಿ ಹಿಡಿದು ವಂದಿಸುವ ಕ್ರಿಯೆಗೆ ಸರ್ಬಿಯನ್ ಸಲ್ಯೂಟ್ ಎನ್ನುತ್ತಾರೆ.

ಪೋಲಿಶ್ ಜನರು ತೋರು ಬೆರಳು ಮತ್ತು ನಡು ಬೆರಳನ್ನು ಚಾಚಿ ಉಳಿದ ಬೆರಳುಗಳನ್ನು ಮಡಿಸಿ ಹಿಡಿದು ಹಣೆಯ ಬಳಿ ತಂದು ಸಲ್ಯೂಟ್ ಮಾಡುವ ವಿಧಾನಕ್ಕೆ ಎರಡು ಬೆರಳುಗಳ ಸಲ್ಯೂಟ್ ಎನ್ನುತ್ತಾರೆ. ಹಾಗೆ ವಂದಿಸುವಾಗ ನನ್ನ ಪಿತೃ ನಾಡಿಗೆ ನನ್ನ ಗೌರವ ಎಂದು ಉಚ್ಚರಿಸುತ್ತಿದ್ದರು.

ವಲ್ಕನ್ ಸಲ್ಯೂಟ್ ಸ್ಟಾರ್ ಟ್ರೆಕ್ ಎಂಬ ಟೀವಿ ಸೀರಿಯಲ್ ನಂತರದಿಂದ ಜನಪ್ರಿಯವಾಯಿತು. ಕಿರು ಬೆರಳು ಮತ್ತು ಉಂಗುರದ ಬೆರಳುಗಳನ್ನು ಮತ್ತು ತೋರು ಬೆರಳು ಹಾಗೂ ಮಧ್ಯದ ಬೆರಳುಗಳನ್ನು ಜೋಡಿಸಿ ಹೆಬ್ಬೆರಳನ್ನು ನೇರವಾಗಿರಿಸಿ ಕೊಳ್ಳುವ ಈ ಪದ್ದತಿಯನ್ನು ನಿಮೋಯ್ ಎಂಬಾತ ತನ್ನ ಜೀವನ ಚರಿತ್ರೆಯಲ್ಲಿ ಉಲ್ಲೇಖಿಸಿ ಇದು ಜ್ಯೂಯಿಶ್ ಆಶೀರ್ವಾದ ಸೂಚಕ ಎಂದು ತಿಳಿಸಿದ್ದ. ಇತ್ತೀಚೆಗೆ ಫ಼ೆಬ್ರುವರಿ 27, 2015 ರಂದು ನಿಮೋಯ್ ನಿಧನನಾದಾಗ ಅಂತರಿಕ್ಷದಲ್ಲಿದ್ದ ನಾಸಾ ಖಗೋಳಯಾತ್ರಿ ಟೆರ್ರಿ ಎಂಬಾತ ವಲ್ಕನ್ ವಂದನೆ ಮಾಡಿ ನಿಮೋಯ್‌ಗೆ ಗೌರವ ಸಲ್ಲಿಸಿದ್ದ.





ಝೋಗಿಸ್ಟ್ ಸಲ್ಯೂಟ್ ಅಲ್ಬೇನಿಯಾ ಮೂಲದ್ದು. ಅಲ್ಲಿನ ನಾಗರೀಕರು ದೇಶಕ್ಕೆ ವಂದಿಸುವಾಗ ಹಸ್ತವನ್ನು ಎದೆಯ ಬಳಿ ತಂದು ಅಂಗೈ ನೆಲ ನೋಡುವಂತೆ ಇರಿಸಿಕೊಂಡು ಗೌರವ ಸಲ್ಲಿಸುತ್ತಿದ್ದರು. ಇದೆ ಶೈಲಿಯಲ್ಲಿ ಭಾರತದ ಆರ್‌ಎಸ್‌ಎಸ್ (ರಾಷ್ಟ್ರೀಯ ಸ್ವಯಂ ಸೇವಕ ಸಂಘ) ಸದಸ್ಯರು ವಂದನೆ ಸಲ್ಲಿಸುತ್ತಾರೆ.


ನ್ಯೂಜಿಲ್ಯಾಂಡ್ ದೇಶದಲ್ಲಿ ಮವೋರಿ ಜನಪದರಲ್ಲಿ ಪರಸ್ಪರರ ಹಣೆ ಮತ್ತು ಮೂಗುಗಳನ್ನು ಮುಟ್ಟಿಸಿಕೊಂಡು ಶುಭಾಶಯಗಳ ವಿನಿಮಯ ಮಾಡಿಕೊಳ್ಳುವ ಹೊಂಗಿ ಒಂದು ಪುರಾತನ ಪದ್ಧತಿಯಾಗಿದ್ದು ಆತ್ಮೀಯತೆ ಮತ್ತು ಪ್ರೀತಿ ತೋರಿಸುವ ವಿಧಾನವಾಗಿದೆ. ಇವರಲ್ಲಿ ಕಿಯಾ ಓರಾ (ಕ್ಷೇಮ ?) ಎಂದು ಕೇಳುವ ಅಭ್ಯಾಸವಿತ್ತು. ಕೋರುವಾ, ಕಿಯಾ ಒರಾನಾ, ಕೌತೌ ಎಂಬ ಪದಗಳನ್ನೂ ಸಹಾ ಕುಶಲ ವಿಚಾರಣೆಗಾಗಿ ಬಳಸುವುದುಂಟು.

ಭಾರತದ ಬೌದ್ಧರು ಮತ್ತು ದಲಿತವರ್ಗದ ಜನ ಬಾಬು ಎಲ್.ಎನ್.ಹರದಾಸ್ ರವರು ಹುಟ್ಟುಹಾಕಿದ ಜೈ ಭೀಮ್ ಎಂಬ ಪದ ಬಳಸಿ ವಂದನೆ ಸಲ್ಲಿಸುತ್ತಾರೆ. ಹರದಾಸ್‌ರವರು ಬಿ.ಆರ್. ಅಂಬೇಡ್ಕರ್‌ರವರ ಅನುಯಾಯಿಯಾಗಿದ್ದು ಭೀಮರಾವ್ ಅಂಬೇಡ್ಕರ ಪದದ ಮೂಲದಿಂದ ಜೈ ಭೀಮ್ ಎಂಬ ಪದದ ಸೃಷ್ಟಿ ಮಾಡಿದರು.

ವಾಟರ್ ಸಲ್ಯೂಟ್ ನೌಕಾದಳದ ಹಡಗು ಅಥವಾ ವಾಯುದಳದ ವಿಮಾನಕ್ಕೆ ಗೌರವ ಸಲ್ಲಿಸುವ ವಿಧಾನ. ಎಡ ಬಲಗಳಿಂದ ಚಿಮ್ಮುವ ನೀರಿನ ನಡುವೆ ಹಾದು ಬರುವ ಹಡಗು ಅಥವಾ ವಿಮಾನವನ್ನು ಪ್ರಸ್ತುತ ಪಡಿಸುವ ಹಾಗೂ ಲೋಕಾರ್ಪಣೆ ಮಾಡುವ ಸಾಂಪ್ರದಾಯಿಕ ವಿಧಾನ ಇದು.

ಜರ್ಮನಿಯಲ್ಲಿ ಗಣಿ ಕೆಲಸಗಾರರು ಗಣಿಯ ಒಳಕ್ಕೆ ಪ್ರವೇಶಿಸುವ ಮುನ್ನಾ ಗ್ಲುಕೌಫ್ ಎಂದು ವಂದಿಸಿಕೊಳ್ಳುವ ಅಭ್ಯಾಸವಿದೆ. ಗ್ಲುಕೌಫ್ ಎಂದರೆ ನಿನಗೆ ಭಾರೀ ಪ್ರಮಾಣದ ಅದಿರು ದೊರೆಯಲಿ ಎಂದರ್ಥ. ಹೆಚ್ಚಿನ ಅಥವಾ ಉತ್ತಮ ಅದಿರನ್ನು ಕಂಡ ಕೆಲಸಗಾರನಿಗೆ ಬಹುಮಾನಗಳು ದೊರೆಯುತ್ತಿದ್ದ ಕಾರಣ ಈ ಅಭಿನಂದನೆ. ಗೆಸೆಗ್ನೆಟೆ ಮೆಹೆಜೀಟ್ ಎಂಬುದು ಜರ್ಮನ್ ಭಾಷೆಯಲ್ಲಿ ಎಲ್ಲರಿಗೂ ನಮಸ್ಕಾರ ಎಂಬರ್ಥ ನೀಡುತ್ತದೆ.

ಸುಮಾರು 300 ವರ್ಷಗಳ ಹಿಂದೆ ಉತ್ತರ ಇಂಗ್ಲೆಂಡ್ ದೇಶದಲ್ಲಿ ಹೌ ಡು ಯೂ ಡು ಎಂಬುದರ ಸಂಕ್ಷಿಪ್ತ ರೂಪವಾಗಿ ಹೌಡೀ ಎಂದು ವಂದಿಸುತ್ತಿದ್ದರು. ಇಂದಿಗೂ ಸಹಾ ಅಲ್ಲಲ್ಲಿ ಹೌಡೀ ಎನ್ನುವ ಪದ ಬಳಕೆಯಲ್ಲಿದೆ.



ಕಮ್ಯೂನಿಸ್ಟರು ಪರಸ್ಪರ ವಂದಿಸಿಕೊಳ್ಳಲು ಲಾಲ್ ಸಲಾಂ ಎಂಬ ವಿಶಿಷ್ಟ ಪದ ಬಳಸುತ್ತಿದ್ದರು. ಮೂಲ ಬೆಂಗಾಲಿ ಪದವಾದ ಲಾಲ್ ಸಲಾಂ ಈಗಲೂ ಬಳಕೆಯಲ್ಲಿದೆ. ಹುತಾತ್ಮರಿಗೆ ವಂದನೆ ಸಲ್ಲಿಸುವಾಗ ಲಾಲ್ ಸಲಾಂ ಎಂದು ಹೇಳುವುದುಂಟು. ಪಾಕಿಸ್ತಾನದಲ್ಲಿ ಸುರ್ಖ್ ಸಲಾಂ ಎಂಬ ಪದ ಬಳಕೆಯಲ್ಲಿದೆ.

ಯೋ ಎಂಬುದು ಇಂಗ್ಲೀಷ್ ಅಡು ಭಾಷೆಯ ಅಭಿನಂದನಾ ಪದ. ಅಲೋಹಾ ಹವಾಯ್ ಭಾಷೆಯ ವಂದನೆ ಸಲ್ಲಿಸುವ ಪದ. ಸಿಯಾವೋ ಎಂಬುದು ಇಟಾಲಿಯನ್ ಭಾಷೆಯಲ್ಲಿ ನಮಸ್ಕಾರಕ್ಕೆ ಸಮಾನವಾದ ಪದ. ಆವೇ ಎಂಬುದು ರೋಮನ್ ಭಾಷೆಯಲ್ಲಿ ಬೀಳ್ಕೊಡುವಾಗ ಹೇಳುವ ಪದ. ಹೀಬ್ರೂ ಭಾಷೆಯಲ್ಲಿ ಶಾಲೋಂ ಅಲೈಖೆಂ ಎಂದರೆ ಸುಖವಾಗಿರು ಎಂದರ್ಥ.

ಸರ್ವಸ್ ಅಥವಾ ಸರ್ಬಸ್ ಎಂಬುದು ಸ್ಲೊವಾಕ್, ಕ್ರೊವೇಶಿಯಾ, ಹಂಗೇರಿ, ಬವೇರಿಯಾ, ರೋಮನ್, ಜ಼ೆಕ್, ಉಕ್ರೇನ್ ದೇಶಗಳಲ್ಲಿ ಬಳಸಲ್ಪಡುತ್ತದೆ. ಹಾಗೆಂದರೆ ತಮ್ಮ ವಿಧೇಯ ಎಂದರ್ಥ

ಪ್ರಶಂಸನಾತ್ಮಕ ಗೌರವಗಳು

ಸಾಮಾನ್ಯವಾಗಿ ಕರತಾಡನದ ಮೂಲಕ ತಮ್ಮ ಪ್ರಶಂಸೆ ಮತ್ತು ಮೆಚ್ಚುಗೆಯನ್ನು ಸಲ್ಲಿಸಲು ಪ್ರೇಕ್ಷಕರು ಮುಂದಾಗುತ್ತಾರೆ. ಅಪ್ಲೌಸ್ ಎಂಬ ಪದ ಲ್ಯಾಟಿನ್ ಮೂಲದ ಅಪ್ಲೌಡರೆ ಎಂಬುದರಿಂದ ಬಂದಿದೆ. ಪುರಾತನ ರೋಮನರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಲು ಹಲವಾರು ರೀತಿಯ ಕರತಾಡನದ ವಿಧಾನಗಳನ್ನು ಅನುಸರಿಸುತ್ತಿದ್ದರು. ಸ್ಕಾಟ್‌ಗಳಲ್ಲೂ ಕೂಡ ಚಪ್ಪಾಳೆಯನ್ನು 2–3 ಪುನರಾವರ್ತನೆಗಳಲ್ಲಿ ಹೊಡೆಯುತ್ತಾರೆ.

ಫ಼ಸ್ಟ್ ಪಂಪ್ ಆಟಗಳಲ್ಲಿ ಗೆದ್ದಾಗ ಉದ್ವೇಗದಲ್ಲಿ ಮುಷ್ಟಿ ಹಿಡಿದು ಕೂಗುವ ಕ್ರಿಯೆ. ಇದನ್ನು ಗಟ್ಸ್ ಸೂಚಕ ಎಂದೂ ಸಹ ಕರೆಯುವುದುಂಟು. ಇದು ಹೆಚ್ಚಾಗಿ ಕ್ರಿಕೆಟ್ ಮತ್ತು ಫುಟ್ಬಾಲ್ ಆಟಗಾರರು ಪ್ರದರ್ಶಿಸುತ್ತಾರೆ.

ಹೈ ಫೈವ್ ಇಬ್ಬರು ವ್ಯಕ್ತಿಗಳು ಭೇಟಿಯಾದಾಗ ತಮ್ಮ ಬಲ ಹಸ್ತಗಳನ್ನು ಮೇಲೆತ್ತಿ ಪರಸ್ಪರ ಹೊಡೆದುಕೊಳ್ಳುವ ಪ್ರೀತಿ ಸೂಚಕ. ಈಗೀಗ ಭಾರತದಲ್ಲೂ ಹೈ ಫೈವ್ ಅಭಿನಂದನೆಗಳು ಯುವಕರಲ್ಲಿ ಕಾಣುತ್ತಿದೆ.

ಸೆಲ್ಫ್ ಕ್ಲಾಸ್ಪಿಂಗ್ ತಮ್ಮ ಎರಡು ಕೈಗಳನ್ನು ಸೇರಿಸಿಕೊಂಡು ಎದೆಯ ಬಳಿ ತಂದು ತಮ್ಮ ಅಭಿನಂದನೆ ಸಲ್ಲಿಸುವ ಕ್ರಿಯೆ ರಶ್ಯನ್ ಮೂಲದ್ದು.

ಬೆರಳುಗಳ ಸಂಕೇತ

ತೋರುಬೆರಳು ಮತ್ತು ಹೆಬ್ಬೆರಳನ್ನು ಕೂಡಿಸಿ ಉಳಿದ ಬೆರಳುಗಳನ್ನು ನೇರವಾಗಿಟ್ಟಾಗ ಕಾಣುವ ಸೊನ್ನೆಯ ಆಕಾರವು ಖುಷಿಯ ಸೂಚಕವಾಗಿದೆ.

ಕಿರು ಬೆರಳು ಮತ್ತು ತೋರು ಬೆರಳನ್ನು ನೇರವಾಗಿಟ್ಟು ಉಳಿದ ಬೆರಳುಗಳನ್ನು ಮಡಿಸಿಕೊಂಡಾಗ ಕಾಣುವ ಆಕಾರವನ್ನು ಕೊಂಬುಗಳು ಎನ್ನುತ್ತಾರೆ. ಇದು ಕರಣ ಮುದ್ರೆ. ಗೌತಮ ಬುದ್ಧ ಈ ಭಂಗಿಯಲ್ಲಿ ಕುಳಿತಿರುವ ಚಿತ್ರಗಳನ್ನು ಕಾಣಬಹುದು. ಇಟಲಿ ಮತ್ತು ಮೆಡಿಟರೇನಿಯನ್ ಸಂಸ್ಕೃತಿಗಳಲ್ಲಿ ದುಷ್ಟ ಶಕ್ತಿಗಳನ್ನು ನಿವಾರಿಸುವ ಸೂಚನೆ ಇದು.

ಮಧ್ಯದ ಬೆರಳನ್ನು ನೇರವಾಗಿರಿಸಿ ಉಳಿದ ಬೆರಳುಗಳನ್ನು ಮಡಿಸಿಕೊಂಡು ಸೂಚಿಸುವ ಚಿಹ್ನೆ ಶಾಕರ್ ಅಶ್ಲೀಲ ಸಂಜ್ಞೆ ಎಂದು ಪರಿಗಣಿತವಾಗಿದೆ. ಇದು ಪುರಾತನ ಗ್ರೀಕರ ಕಾಲದಿಂದ ಚಾಲ್ತಿಯಲ್ಲಿದೆ. ಎಲ್ಲ ಬೆರಳುಗಳನ್ನು ಮಡಿಸಿಕೊಂಡು ಲೋಟದಾಕಾರದಲ್ಲಿ ಪ್ರದರ್ಶಿಸುವುದು ಸಹಾ ಅಶ್ಲಿಲ ಚಿಹ್ನೆಯಾಗಿದೆ. ಪ್ಯಾಂಟೆಳೆದು ಹಿಂಭಾಗವನ್ನು ಪ್ರದರ್ಶಿಸುವ ಅಶ್ಲೀಲ ಸಂಜ್ಞೆಯನು ಮೂನಿಂಗ್ ಎನ್ನುತಾರೆ. ತಿರಸ್ಕಾರಪ್ರದರ್ಶಿಸಲು ಮೂನಿಂಗ್ ಬಳಸಲಾಗುತ್ತಿತ್ತು. ಎಲ್ಲಾ ಬೆರಳುಗಳನ್ನು ಅಗಲಿಸಿ ಇನ್ನೊಬ್ಬರ ಮುಖದ ಮುಂದೆ ಹಿಡಿಯುವ ಮೌಂಟ್ಜಾ ತಿರಸ್ಕಾರದ ಪ್ರದರ್ಶನ. ಮಧ್ಯಕಾಲೀನ ಗ್ರೀಕರೂ ಇದನ್ನು ಶಾಪ ನೀಡುವ ಸೂಚನೆಯಾಗಿ ಬಳಸುತ್ತಿದ್ದರು.

ತೋರುಬೆರಳು ಮತ್ತು ಮಧ್ಯದ ಬೆರಳುಗಳನ್ನು ನೇರವಾಗಿಟ್ಟುಕೊಂಡು ಉಳಿದ ಬೆರಳುಗಳನ್ನು ಮಡಿಸಿ ಗೆಲುವಿನ ಸೂಚಕ ವಿಕ್ಟರಿ ಚಿಹ್ನೆಯನ್ನು ಪ್ರದರ್ಶಿಸುವುದು ಇಂದಿಗೂ ಜನಪ್ರಿಯವಾಗಿದೆ. ಬಲ ಹಸ್ತವನ್ನು ಪ್ರದರ್ಶಿಸುವ ಕ್ರಿಯೆ ಅಭಯ ಹಸ್ತ ಎಂದು ಮುದ್ರೆಗಳಲ್ಲಿ ಪರಿಗಣಿತವಾಗಿದೆ.

ಎರಡೂ ಕೈಗಳ ತೋರುಬೆರಳುಗಳನ್ನು ಶಿಲುಬೆಯ ಆಕಾರದಲ್ಲಿ ಹಿಡಿದುಕೊಳ್ಳುವುದು ಕ್ರಿಸ್ತನಿಂದ ಅಭಯ ಕೋರುವ ಸೂಚನೆ. ಹೆಬ್ಬೆರಳು ಮಡಿಸಿ ನಾಲ್ಕೂ ಬೆರಳುಗಳನ್ನು ಪ್ರದರ್ಶಿಸುವ ರಬಿಯಾ ಚಿಹ್ನೆ ಪ್ರತಿಭಟನಾ ಸೂಚನೆ. ಮತ್ತೊಬರ ಕೈಗಳಲ್ಲಿ ತಮ್ಮ ಮುಖವನ್ನು ಹುದುಗಿಸುವುದು ತೀವ್ರ ನಿರಾಶೆಯ ಸೂಚನೆಯಾಗಿದೆ.

ಬ್ರಾಸ್ ಡಿ ಆನರ್ ಬಲ ತೋಳನ್ನು ಮೇಲೆತ್ತಿ ತನ್ನ ಬಾಹುಬಲವನ್ನು ಪ್ರದರ್ಶಿಸುವ ಕ್ರಿಯೆ. ಇದು ಫ್ರಾನ್ಸ್, ಬ್ರೆಜ಼ಿಲ್, ಸ್ಪೇನ್, ಇಟಲಿ, ಪೋರ್ತುಗಲ್

ಮತ್ತು ಲ್ಯಾಟಿನ್ ಅಮೇರಿಕಾಗಳಲ್ಲಿ ಚಾಲ್ತಿಯಲ್ಲಿದೆ. ಎರಡು ಕೈಗಳನ್ನು ಮೇಲೆತ್ತಿ ನಿಲ್ಲುವುದು ಅಸಹಾಯಕತೆ ಅಥವಾ ಶರಣಾಗತಿಯ ಸೂಚನೆ.

ಹೆಬ್ಬೆರಳು ಮತ್ತು ತೋರುಬೆರಳನ್ನು ಎಲ್ ಆಕಾರದಲ್ಲಿ ನೇರವಾಗಿಟ್ಟು ಆಟಗಳಲ್ಲಿ ಸೋತವರಿಗೆ ಗೆದ್ದವರು ತಿರಸ್ಕಾರ ಸೂಚಕವಾಗಿ ಪ್ರದರ್ಶಿಸುತ್ತಾರೆ. ಅಕಾಂಬೆ ಎಂಬುದು ಜಪಾನ್ ಮತ್ತು ಫ್ರಾನ್ಸ್ ದೇಶಗಳಲ್ಲಿ ಅಣಕದ ಪದ.

ಆಹಾರ ಪಾನೀಯಗಳ ಗೌರವ

ಅತಿಥಿ ದೇವೋಭವ ಎಂಬುದು ಭಾರತೀಯರ ನಾಗರೀಕ ಕರ್ತವ್ಯ ಪ್ರಜ್ಞೆಯ ದ್ಯೋತಕ. ಮನೆಗೆ ಬಂದವನೇ ಮಹಾದೇವ ಎಂದು ಸಲ್ಲಿಸುವ ಆತಿಥ್ಯದ ವ್ಯಾಪ್ತಿ ವಿಶ್ವದೆಲ್ಲೆಡೆ ವಿಶಿಷ್ಟವಾಗಿದೆ.

ಯುರೋಪಿನ ಅನೇಕ ದೇಶಗಳಲ್ಲಿ ಅತಿಥಿಗಳಿಗೆ ಬ್ರೆಡ್ ಮತ್ತು ಉಪ್ಪು ಕೊಡುವುದು ಅವರಿಗೆ ಸಲ್ಲಿಸುವ ಅತ್ಯುನ್ನತ ಗೌರವ ಎಂಬ ನಂಬಿಕೆ ಇದೆ. ರಶ್ಯಾ ದೇಶದಲ್ಲಿ ಅತಿಥಿಗಳಿಗೆ ರಾಷ್ಟ್ರೀಯ ಉಡುಪು ಸರಫನ್ ತೊಟ್ಟು ಕಸೂತಿ ಮಾಡಿದ ಟವೆಲ್ ರುಶ್ನಿಕ್ ಮೇಲೆ ಬ್ರೆಡ್ ಮತ್ತು ಅದರ ಮೇಲೆ ಉಪ್ಪಿನ ಹರಳನ್ನು ಇಟ್ಟು ಕೊಡಲಾಗುತ್ತದೆ.

ಯೆಮೆನ್ ದೇಶದಲ್ಲಿ ಕಾಫಿ ಬೀಜದ ಹೊಟ್ಟು, ಶುಂಠಿ ಸೇರಿಸಿ ತಯಾರಿಸಲಾದ ಕ್ವಿಶ್ರ್ ಎಂಬ ಬಿಸಿ ಪಾನೀಯವನ್ನು ಕೊಡಲಾಗುತ್ತದೆ. ಯೆಮೆನ್ ಜನತೆಯ ಪ್ರಕಾರ ಕ್ವಿಶ್ರ್ ಆರೋಗ್ಯಕರ ಪಾನೀಯ. ವಿಚಿತ್ರವೆಂದರೆ ಈ ಜನ ಕಾಫಿಯನ್ನು ಒಂದು ಪಾನೀಯ ಎಂದು ಪರಿಗಣಿಸುವುದೇ ಇಲ್ಲ.

ಬಾಲ್ಕನ್, ಅಲ್ಬೇನಿಯ, ಹರ್ಜೆಗೋವಿನ, ಬಲ್ಗೇರಿಯಾ, ಸೆರ್ಬಿಯಾ ಮುಂತಾದ ದೇಶಗಳಲ್ಲಿ ರಕಿಜಾ ಅಥವಾ ರಕಿಯಾ ಎಂದು ಕರೆಯಲಾಗುವ ಮದ್ಯವನ್ನು ಅತಿಥಿಗಳಿಗೆ ನೀಡಲಾಗುತ್ತದೆ. ಇದನ್ನು ಹಣ್ಣುಗಳನ್ನು ಕೊಳೆಸಿ ಭಟ್ಟಿ ಇಳಿಸಿ ತಯಾರಿಸಲಾಗುತ್ತದೆ. ಈ ದೇಶಗಳಲ್ಲಿ ಸ್ಟ್ರಾಬೆರ್ರಿ, ಪ್ಲಂ ಮತ್ತು ಚೆರ್ರಿ ಹಣ್ಣುಗಳೊಂದಿಗೆ ಗುಲಾಬಿ ದಳಗಳನ್ನು ಸೇರಿಸಿ ತಯಾರಿಸಲಾದ ಜಾಮ್ ರೀತಿಯ ಸಿಹಿಯನ್ನು ಮೊದಲು ಅತಿಥಿಗಳಿಗೆ ನೀಡಲಾಗುತ್ತದೆ. ಇದನ್ನು ಸ್ಲಾಟ್ಕೋ ಎಂದು ಕರೆಯುತ್ತಾರೆ.

ಚಹಾ ಅಥವಾ ಕಾಫೀ ನೀಡಿ ಸತ್ಕರಿಸುವ ಆತಿಥ್ಯ ಈಗ ದಕ್ಷಿಣ ಭಾರತದಲ್ಲಿ ಬಲು ಜನಪ್ರಿಯ. ಅದೇ ರೀತಿ ಮಧ್ಯ ಪ್ರಾಚ್ಯ ದೇಶಗಳು, ಉತ್ತರ ಆಫ್ರಿಕಾ, ಬಾಲಿ ದೇಶಗಳಲ್ಲಿ ಟರ್ಕಿಶ್ ಕಾಫಿ ಮತ್ತು ಚಾಕೋಲೇಟ್ ನೀಡಿ ಸತ್ಕರಿಸುವ ಜನಪ್ರಿಯ

ವಿಧಾನವಿದೆ. ಕಾಲಾನಂತರ ಬ್ರಿಟನ್ ಮುಂತಾದೆಡೆಗಳಲ್ಲಿ ಅನೇಕ ಕಾಫಿ ಶಾಪ್‌ಗಳು ಪ್ರಾರಂಭವಾಗಿ ರಾಜಕೀಯ, ಸಾಹಿತ್ಯಿಕ ಚರ್ಚೆಗಳಿಗೆ ವೇದಿಕೆಯನ್ನು ಸೃಷ್ಟಿಸಿದವು. ಹಾಗೆಂದೇ ಒಂದು ಕಪ್ ಕಾಫಿಯಿಂದ ಎಲ್ಲಾ ವ್ಯಾಜ್ಯಗಳ ಪರಿಹಾರ ಸಾಧ್ಯ ಎಂಬ ಮಾತು ಹುಟ್ಟಿದೆ.

ಇತರೇ ಸಂಜ್ಞಾತ್ಮಕ ಸೂಚನೆಗಳು

ಕೆಲವು ಸಂಜ್ಞೆಗಳ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ವಿಧಾನಗಳು ಹಲವಾರಿವೆ. ರಸ್ತೆಗಳಲ್ಲಿ ಟ್ರಾಫಿಕ್ ಪೋಲೀಸ್ ನೀಡುವ ಸೂಚನೆಗಳು, ಮೈಮ್, ಮೂಕಾಭಿನಯ ಮುಂತಾದುವುಗಳು ಈ ವರ್ಗದಲ್ಲಿವೆ. ಬಾಡಿ ಲಾಂಗ್ವೇಜ್ ಅಥವಾ ದೇಹ ಅಥವ ಆಂಗಿಕ ಭಾಷೆ ಪ್ರಾಣಿ ಮತ್ತು ಮನುಷ್ಯರಿಬ್ಬರಲ್ಲೂ ಇರುತ್ತವೆ. ಕಣ್ಣು, ಮುಖ, ಕೈ–ಕಾಲು, ದೇಹಗಳನ್ನು ಬಳಸಿ ತಮ್ಮ ಭಾವನೆಗಳನ್ನು ತೋರಿಸುವ ಸಂಜ್ಞಾತ್ಮಕ ಸೂಚನೆಗಳ ಪ್ರಪಂಚ ವಿಸ್ತಾರವಾಗಿದೆ. ಉಪನ್ಯಾಸ ನೀಡುವವರಲ್ಲಿ ಮತ್ತು ರಾಜಕಾರಣಿಗಳಲ್ಲಿ ಆಂಗಿಕ ಭಾಷೆ ಬಹಳ ಪ್ರಮುಖ ಪಾತ್ರ ವಹಿಸುತ್ತದೆ.

ಏರ್ ಕೋಟ್ಸ್ ಎಂದು ಕರೆಯಲಾಗುವ ಸಂಜ್ಞೆಯು ಟಿವಿ ಶೋಗಳಲ್ಲಿ ಮತ್ತು ಚರ್ಚೆಗಳು ನಡೆಯುವಲ್ಲಿ ಹೇಳುವುದನ್ನು ಸಂಕ್ಷಿಪ್ತವಾಗಿ ಹೇಳಬೇಕು ಎಂದು ತಿಳಿಸಲು ಬಳಸಲ್ಪಡುತ್ತದೆ. ಬೆರಳುಗಳನ್ನು ಕ್ರಾಸ್ ಮಾಡಿಕೊಳ್ಳುವ ಫಿಂಗರ್ಸ್ ಕ್ರಾಸ್ ಯಾವುದಾದರೊಂದು ಮಹತ್ವದ ವಿಷಯಕ್ಕಾಗಿ ಕಾಯುವ ಕ್ಷಣಗಳನ್ನು ಸೂಚಿಸಲು ಬಳಸಲಾಗುತ್ತದೆ. ಬಾಯಲ್ಲಿ ಅಕ್ಕಿಕಾಳು ಹಾಕಿಕೊಂಡು ಕಾಯುವುದು ಎಂಬ ಕನ್ನಡದ ಹೇಳಿಕೆಗೆ ಸಮಾನಾರ್ಥಕವಾದ ಅರ್ಥ ನೀಡುತ್ತದೆ.

ಮುಖವನ್ನು ಕೆಳಗೆ ಹಾಕಿ ಕೈಗಳಿಂದ ಮುಖ ಮುಚ್ಚಿಕೊಳ್ಳುವ ಫೇಸ್ ಪಾಮ್ ಖಿನ್ನತೆ, ನಿರಾಶೆಗಳನ್ನು ವ್ಯಕ್ತ ಪಡಿಸುವ ಭಾವ ಸೂಚಕವಾಗಿದೆ. ಹೆಬ್ಬೆರಳು ಮತ್ತು ತೋರು ಬೆರಳುಗಳನ್ನು ಗನ್ ರೀತಿ ಇನ್ನೊಬ್ಬರ ಮುಂದೆ ಹಿಡಿದು ಗುಂಡು ಹಾರಿಸುವಂತೆ ಅಭಿನಯಿಸುವ ರೀತಿಯೇ ಫಿಂಗರ್ ಗನ್. ನೂರಾರು ವರ್ಷಗಳ ಹಿಂದೆ ಫೋಟೋಗಳಿಲ್ಲದ ಕಾಲದಲ್ಲಿ ತಮ್ಮ ಚಿತ್ರಗಳನ್ನು ರಚಿಸುವ ಕಲಾವಿದರ ಮುಂದೆ ಕೂರುವಾಗ ಕೈಗಳನ್ನು ವೇಸ್ಟ್ ಕೋಟ್ ಒಳಗೆ ಇಟ್ಟುಕೊಳ್ಳುವ ಅಭ್ಯಾಸವಿತ್ತು.

ಶ್ರಗ್ ಎಂಬುದು ಎರಡೂ ಭುಜಗಳನ್ನು ಮೇಲೆತ್ತಿ ತಲೆಯಲುಗಿಸಿ ತಮಗೆ ತಿಳಿಯದು ಎನ್ನುವ ಸೂಚನೆ ನೀಡುವ ಭಾವ ಸೂಚಕ ಕ್ರಿಯೆ. ಇದು

ಸಾಮಾನ್ಯವಾಗಿ ವಿದ್ಯಾರ್ಥಿಗಳಲ್ಲಿ ಮತ್ತು ಮಿತ್ರರ ನಡುವೆ ಬಳಕೆಯಾಗುತ್ತದೆ. ಗ್ಯಾಂಗ್ ಸಿಗ್ನಲ್ ತಮ್ಮ ಗುಂಪನ್ನು ಪ್ರತಿನಿಧಿಸುವ ಚಿತ್ರಗಳನ್ನು ಮೈಮೇಲೆ ಹಚ್ಚೆ ಹಾಕಿಕೊಳ್ಳುವ ವಿಧಾನ.

ವಿಶ್ವದಲ್ಲಿ ನಮಸ್ಕಾರ

ವಿಶ್ವದೆಲ್ಲೆಡೆ ಜನ ತಮ್ಮ ಆತ್ಮೀಯರಿಗೆ, ಹಿರಿಯರಿಗೆ ಗೌರವ ಸಲ್ಲಿಸುವ ವಿಧಿ ವಿಧಾನಗಳು ಬೇರೆಯಾದರೂ ಉದ್ದೇಶ ಒಂದೇ ಆಗಿರುತ್ತದೆ. ಅವರು ಬಳಸುವ ಪದಗಳೂ ಬೇರೆಯಾಗಿರುತ್ತವೆ. ಅಲ್ಬೇನಿಯಾದಲ್ಲಿ ಮಿರೆದಿತಾ, ಅರಾಬಿಕ್ ಭಾಷೆಯಲ್ಲಿ ಅಹಲಾನ್, ಆರ್ಮೇನಿಯಾದಲ್ಲಿ ಪರೆವ್, ಬಲ್ಗೇರಿಯಾದಲ್ಲಿ ಜ಼ದ್ರಾವೆಯ್, ಕ್ಯಾಂಟೋನೀಸ್ ಭಾಷೆಯಲ್ಲಿ ನೆಯ್ ಹೋ, ಡ್ಯಾನಿಶ್ ಜನ ಗೊದ್ದಾಗ್ ಎಂದರೆ, ಡಚ್ಚರು ಗೊಯದೆ ದಾಗ್ ಎನ್ನುತ್ತಾರೆ. ಆಂಗ್ಲರು ಹಲ್ಲೋ ಎಂದರೆ ಫ಼ಿನ್ನಿಶ್ ಜನ ಹೈ ಎನ್ನುತ್ತಾರೆ. ಫ಼್ರೆಂಚರು ಬೋನ್ಜೌರ್ ಎಂದು ಉಚ್ಚರಿಸುತ್ತಾರೆ.

ಜರ್ಮನರು ಗುಟೆನ್ ತಾಗ್ ಎಂದೂ ಗ್ರೀಕರು ಗಿಯಾಸೌ ಎಂದೂ, ಹವಾಯ್ ಜನ ಅಲೋಹಾ ಎಂದು ಗೌರವಿಸುತ್ತಾರೆ. ಹೀಬ್ರೂ ಭಾಷೆಯಲ್ಲಿ ಶಾಲೋಂ ಎಂದರೆ ನಮಸ್ಕಾರ ಎಂದರ್ಥ. ಹಂಗೇರಿಯಾದ ಜನ ಜೋ ನಪೋತ್, ಐರಿಶ್ ಜನ ದಿಯಾ ಧುಇತ್ ಎಂದೂ ಇಟಾಲಿಯನರು ಸಲ್ವೆ ಎಂದೂ ಹೇಳುತ್ತಾರೆ. ಜಪಾನಿ ಭಾಷೆಯಲ್ಲಿ ಕೋನ್ ನಿಚಿವಾ ಎಂದರೆ ನಮಸ್ಕಾರ ಎಂದರ್ಥ. ಕೊರಿಯಾದಲ್ಲಿ ಆನ್ ನ್ಯೋಂಗ್ ಹ ಸೆ ಯೋ ಎನ್ನುತ್ತಾರೆ. ಪೋರ್ತುಗೀಸರು ಓಲಾ ಎಂಬ ಪದ ಬಳಸುತ್ತರೆ. ರೋಮನರಿಗೆ ಬುನಾ ಜ಼ಿಉವ ಎಂಬ ಪದ ಗೌರವ ಸೂಚಕ. ಸ್ಪಾನಿಶ್ ಜನ ಹೋಲಾ ಎಂದೂ, ಸ್ವೀಡಿಶ್ ಜನ ಹೆಜ್ ಎಂದೂ, ಥಾಯ್ ಜನ ಸಾ ವತ್ ದೀ ಎಂದೂ, ಟರ್ಕಿಯ ಜನ ಮೆರಹಾಬಾ ಅಥವಾ ಸೆಲಂ ಎನ್ನುತ್ತಾರೆ. ಉಕ್ರೇನಿಯಾದ ಜನಕ್ಕೆ ವಿತಯು ಎಂಬುದು ನಮಸ್ಕಾರದ ಸಮಾನಾಂತರ ಪದ. ವಿಯೆತ್ನಾಮಿನಲ್ಲಿ ಕ್ಸಿನ್ ಚಾವೊ ಎಂದು ಹೇಳುತ್ತಾ ವಂದಿಸುತ್ತಾರೆ.

ಕನ್ನಡ ನಾಡಿನ ಜನ ಇತರರನ್ನು ವಂದಿಸಲು ಮುಂದಿರುವವರ ವಯಸ್ಸಿಗನುಗುಣವಾಗಿ ಅಣ್ಣಾ, ಅಕ್ಕ, ತಮ್ಮ, ತಂಗಿ ಎಂಬ ಸಂಬಂಧ ಸೂಚಕ ಪದಗಳನ್ನು ಬಳಸುತ್ತಾರೆ. ವಚನಕಾರರು ಶತಮಾನಗಳ ಹಿಂದೆಯೇ ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ ಎಂದು ತಿಳಿಸಿ ಸನ್ಮಾರ್ಗ ಎಲ್ಲಿದೆ ಎಂದು



ತೋರಿಸಿದ್ದಾರೆ. ಪಡ್ಡೆಗಳ ಮಚ್ಚಾ ಎಂಬ ಪದ ಸ್ನೇಹ ಸೂಚಕವೇ ಆಗಿದೆ. ನಾವು ಇತರರನ್ನು ಹೇಗೆ ವಂದಿಸುತ್ತೇವೆ ಎಂಬುದು ನಮ್ಮ ಯೋಗ್ಯತೆಯ ಸೂಚಕವೇ ಆಗಿದೆ.

ಹಸ್ತಗಳೆಂಬ ಅಸ್ತ್ರ


ಕೈಗಳು ಮಾನವನಿಗೆ ಪ್ರಕೃತಿ ನೀಡಿರುವ ವರ. ಉಳಿದ ಜೀವಿಗಳಿಗಿಲ್ಲದ ಅನುಕೂಲ ಮಾನವನಿಗೆ ಲಭ್ಯವಾಗಿದೆ. ವಿಜ್ಞಾನದ ಪ್ರಕಾರ ಪ್ರತಿಯೊಬ್ಬ ಮಾನವನ ಬೆರಳ ರೇಖೆಗಳು ಭಿನ್ನವಾಗಿದ್ದು ಅವುಗಳಿಂದ ಮಾನವರ ಗುರುತು ಪತ್ತೆ ಹಚ್ಚಬಹುದು ಎನ್ನುತ್ತಾರೆ. ಭಾರತೀಯ ಹಸ್ತ ಸಾಮುದ್ರಿಕಾ ಶಾಸ್ತ್ರ ಮಾನವನ ಹಸ್ತದ ಮತ್ತು ಬೆರಳುಗಳ ಗೆರೆಗಳು ಆತನ ಭೂತ–ಭವಿಷ್ಯವನ್ನು ಸೂಚಿಸುತ್ತವೆ ಎಂದು ಹೇಳುತ್ತದೆ.

ಹಸ್ತದಲ್ಲಿ ತೋರು ಬೆರಳು ಗುರು ಗ್ರಹವನ್ನು, ಮಧ್ಯದ ಬೆರಳು ಶನಿ ಗ್ರಹವನ್ನೂ, ಉಂಗುರದ ಬೆರಳು ಸೂರ್ಯನನ್ನು, ಕಿರು ಬೆರಳು ಬುಧ ಗ್ರಹವನ್ನು ಪ್ರತಿನಿಧಿಸುತ್ತವೆ ಎಂದು ಸಮುದ್ರಿಕಾ ಶಾಸ್ತ್ರ ಹೇಳುತ್ತದೆ. ಆ ಬೆರಳುಗಳ ಕೆಳಗಿನ ಸಣ್ಣ ಉಬ್ಬುಗಳು ಆಯಾಯ ಗ್ರಹಗಳ ಸ್ಥಾನ ಸೂಚಿಸುತ್ತವೆ ಎನ್ನಲಾಗುತ್ತದೆ. ಜೊತೆಗೆ ಹೃದಯ, ತಲೆ, ದೃಷ್ಟಿಗಳನ್ನೂ ಕೆಲವು ರೇಖೆಗಳು ಪ್ರತಿನಿಧಿಸುತ್ತಿದ್ದು ಅವುಗಳ ಪರಿಶೀಲನೆಯಿಂದ ವ್ಯಕ್ತಿಯ ಭವಿಷ್ಯ ನಿರ್ಧಾರವಾಗುತ್ತದೆ ಎಂದು ಹೇಳಲಾಗುತ್ತದೆ.

ಇಷ್ಟೆಲ್ಲಾ ಭೂತ–ಭವಿಷ್ಯಗಳನ್ನು ಹೊತ್ತ ಹಸ್ತದಿಂದ ಹೊರ ಸೂಸುವ ಪ್ರಭಾ ವಲಯ ಮನುಷ್ಯನ ಶಕ್ತಿಯ ಪ್ರತೀಕ ಎಂದು ವಿಜ್ಞಾನ ಹೇಳುತ್ತದೆ. ಇಂತಹ ಸಂದರ್ಭಗಳಲ್ಲಿ ಕೈಗಳನ್ನು ಬಳಸಿ ವಂದಿಸುವ ಬೆರಳುಗಳ ಸಂಜ್ಞೆ ಮಾಡುವ ಕ್ರಿಯೆ ಗಮನಾರ್ಹವಾಗಿವೆ. ಭಾರತದ ಸಂಗೀತಗಾರರು ತಮ್ಮ ಕೈಗಳನ್ನು ಬಳಸಿ ತಾಳ ಹಾಕುವ ಕ್ರಿಯೆ ತನ್ಮಯತೆಯನ್ನು ತೋರಿಸುತ್ತದೆ. ಬೆರಳುಗಳಲ್ಲಿ ಚಿಟಿಕೆ ಹಾಕುವುದು ಖುಷಿಯ ಸೂಚಕ.

ಮೂಕ ಸಂಜ್ಞೆಗಳು

ಮೂಕರಿಗಾಗಿ ಸಂಜ್ಞಾ ಕ್ರಿಯೆಗಳಿದ್ದು ಇವನ್ನು ಅವರಿಗೆ ಕಲಿಸಲಾಗುತ್ತದೆ. ಇದನ್ನು ಚಿರೋನೋಮಿಯಾ ಎನ್ನುತ್ತಾರೆ. ಇದೊಂದು ಭಾಷೆಯಾಗಿಯೇ ಬೆಳೆದು ಬಂದಿದೆ. 1996 ರಲ್ಲಿ ತೆರೆಗೆ ಬಂದಿದ್ದ ನಾನಾ ಪಾಟೆಕರ್ ಅಭಿನಯದ ಹಿಂದಿ ಚಿತ್ರ ಖಾಮೋಷಿ ಇಬ್ಬರು ಮೂಕ ದಂಪತಿಗಳು ತಮ್ಮ ಪುತ್ರಿ ಸಂಗೀತಗಾರ್ತಿಯಾಗುವ ಅದ್ಭುತವನ್ನು ಕಾಣುವ ಸುಂದರ ಚಿತ್ರ. ❖



‘ಬಹುಮುಖಿ ಕಥನ’ ಲೇಖನಗಳ ಬಗ್ಗೆ ಅಭಿಪ್ರಾಯಗಳು :

ಯುದ್ಧಕಲೆ

ಯುದ್ಧರಂಗದಲ್ಲೂ ಸಹ management skill, enterpreunership, SWOT ತಂತ್ರ ಚೆನ್ನಾಗಿ ಮೂಡಿ ಬಂದಿದೆ. ವಿಷಯ ಸಂಗ್ರಹಣೆ ಚೆನ್ನಾಗಿದೆ.

ಜೆ.ಆರ್. ರಾಮಲಿಂಗೇಗೌಡ

ನಿವೃತ್ತ ಅಪರ ಆಯುಕ್ತರು

ಮೈಸೂರು.

ನಾಥ ಪಂಥ

ಯಾವುದೇ ಧರ್ಮ, ಆಚರಣೆಯ ಬಗ್ಗೆ ಬರೆಯುವ ಲೇಖಕರು ಪೂರ್ವ ಸಿದ್ಧತೆಯಿಲ್ಲದೆ ಬರೆಯುವುದು ತಪ್ಪು. ನಾಥಪಂಥದ ಬಗ್ಗೆ ಸಂಪೂರ್ಣ ವಿವರವನ್ನು ಸ್ವಲ್ಪವೂ ತಪ್ಪಿಲ್ಲದೆ ಚಿತ್ರಿಸಿದ್ದೀರಿ. ನಮ್ಮ ಸಂಘದ ಎಲ್ಲಾ ಸದಸ್ಯರ ಪರವಾಗಿ ತಮಗೆ ಅಭಿನಂದನೆಗಳು. ನಮ್ಮ ಒಂದು ಕಾರ್ಯಕ್ರಮದಲ್ಲಿ ತಾವು ಪಾಲ್ಗೊಳ್ಳಲು ಕೋರುತ್ತೇವೆ.

ಸಿದ್ದನಾಥ ಪು. ಬಾವಲಿ (ರಾವಳ),

ಅಖಿಲಭಾರತ ನಾಥಪಂಥ ರಾವಳಧರ್ಮ ಪ್ರಚಾರ ಸಮಿತಿ,

ಹಣಗಿ ಓಣಿ, ಹಳೇ ಹುಬ್ಬಳ್ಳಿ.

ಸರ್ಕಸ್: ದಶಾವತಾರ

ಸರ್ಕಸ್ ಕಲೆ ನಶಿಸಿ ಹೋಗುತ್ತಿರುವ ಸಂದರ್ಭದಲ್ಲಿ ಸಕಾಲಿಕ ಲೇಖನ. ಸರ್ಕಸ್ ನೋವುಗಳನ್ನು ಯಶಸ್ವಿಯಾಗಿ ಕಟ್ಟಿಕೊಟ್ಟಿದ್ದೀರಿ, ಅಭಿನಂದನೆಗಳು.

ಆರ್. ಆರ್. ಶೆಟ್ಟಿ

ಸರ್ಕಸ್ ಇವೆಂಟ್ ಮ್ಯಾನೇಜರ್

ಭಟ್ಕಳ

ಡಿ.ಎಸ್.ಲಿಂಗರಾಜು ಅವರ ಕೃತಿಗಳ ಅವಲೋಕನ

‘ಮಾಯಾಲೋಕಕ್ಕೊಂದು ಪಯಣ’ ಕುರಿತು :

ಡಿ.ಎಸ್.ಲಿಂಗರಾಜು ವೃತ್ತಿಯಿಂದ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಉಪ ಆಯುಕ್ತರಾಗಿದ್ದರೂ ಪ್ರವೃತ್ತಿಯಿಂದ ಪ್ರವಾಸಪ್ರಿಯ ಬರಹಗಾರ. ಪ್ರವಾಸಿ ಸಾಹಿತ್ಯ ಕನ್ನಡದಲ್ಲಿ ಹೆಚ್ಚು ಕೃಷಿ ನಡೆಯದ ಒಂದು ಅಪರೂಪದ ಪ್ರಕಾರ. ಈ ಕ್ಷೇತ್ರದಲ್ಲಿ ಲಿಂಗರಾಜು ಅವರ ಸಾಧನೆ ಗಮನಾರ್ಹವಾದುದು. ಈಶಾನ್ಯ ರಾಜ್ಯಗಳು, ಶ್ರೀಲಂಕಾ, ಮೈನ್ಮಾರ್, ಬಾಂಗ್ಲಾದೇಶ ಸೇರಿದಂತೆ ಭಾರತದ ಅನೇಕ ರಾಜ್ಯಗಳ ಹಾಗೂ ವಿದೇಶಗಳ ಪರಿಚಯಾತ್ಮಕ ಪ್ರವಾಸಿ ಮಾಹಿತಿ ನೀಡುವಲ್ಲಿ ಪರಿಣತರಾದ ಲಿಂಗರಾಜು ಅವರದ್ದು ಪ್ರವಾಸಪ್ರಿಯ ಮನಸ್ಸು ‘ಕೋಶ ಓದು, ದೇಶ ನೋಡು’ ಎಂಬ ನಾಣ್ಣುಡಿಯಂತೆ ಅಪರಿಚಿತ ಸ್ಥಳಗಳಲ್ಲಿ ಪ್ರವಾಸ ಮಾಡುವವರಿಗೆ ಇವರ ಪತ್ರಿಕಾ ಬರಹಗಳು ಮಾಹಿತಿಯ ಕೋಶಗಳಾಗಿವೆ.

ಹಿಮಾಲಯದ ರುದ್ರ ರಮಣೀಯ ಅನುಭವಗಳನ್ನು ಹಂಚಿಕೊಂಡವರು ಅನೇಕರಿದ್ದಾರೆ. ಆದರೆ ಹಿಮಾಲಯದ ಭವ್ಯತೆ, ರೋಚಕತೆಗಳಿಗೆ ಬೆರಗಾದವರ ‘ಕಾಣ್ಕೆ’ಗಳು ಒಬ್ಬರಿಗಿಂತ ಒಬ್ಬರದು ಭಿನ್ನ. ಅದೊಂದು ಕೊನೆಯಿಲ್ಲದ ವಿಸ್ಮಯಗಳ ಸೇತು!

ಕೈಲಾಸ ಮಾನಸ ಸರೋವರ ಪ್ರವಾಸವಂತೂ ಅನೇಕ ಸವಾಲುಗಳಿಂದ ಕೂಡಿದ ಸಾಹಸಯಾತ್ರೆ ಎಂಬುದರಲ್ಲಿ ಎರಡು ಮಾತಿಲ್ಲ. ಆಧ್ಯಾತ್ಮಿಕಗಳಿಗೆ, ಆಸಕ್ತರಿಗೆ ಒಂದು ಬಗೆಯಾದರೆ, ಪ್ರಕೃತಿಪ್ರಿಯರಿಗೆ ಕೊನೆಯಿಲ್ಲದ ರೋಮಾಂಚನಗಳ ರಸಯಾತ್ರೆ. ಹೆಜ್ಜೆ–ಹೆಜ್ಜೆಗೂ ಸಾವಿನೊಂದಿಗೆ ಸರಸವಾಡುತ್ತಾ ಸಾಗುವ ಈ ಯಾತ್ರೆಯು ಆತಂಕ, ಅನಿಶ್ಚಿತತೆ, ಖಿನ್ನತೆ, ಅನಿರೀಕ್ಷಿತಗಳಿಂದ ಕೂಡಿದ ‘ಮಾಯಾಲೋಕಕ್ಕೊಂದು ಪಯಣ’ ವಂತೂ ರೋಚಕ ಅನುಭವಗಳ, ಸ್ವಲ್ಪ ಎಚ್ಚರ ತಪ್ಪಿದ್ದರೂ ಕೈಲಾಸ ‘ಕೊನೆಯ ಪಯಣ’ವೂ ಆಗಿಬಿಡುವ ಅಪಾಯಗಳಿಂದ ಕೂಡಿದ ಅನುಭವ ಕಥನವನ್ನು ಲಿಂಗರಾಜು ಅವರು ಇಲ್ಲಿ ಹೃದ್ಯವಾಗಿ ಬಿಡಿಸಿಟ್ಟಿದ್ದಾರೆ.

ಕೈಲಾಸ ಮಾಸನ ಸರೋವರ ಯಾತ್ರಿಗಳಿಗಂತೂ ಇದೊಂದು ಮಾರ್ಗದರ್ಶಕ ಕೈಪಿಡಿಯಾಗಿದೆ.

– ಡಾ. ಮೀರಾಸಾಬಿಹಳ್ಳಿ ಶಿವಣ್ಣ:

ಯಾವುದೇ ಒಂದು travelogue ಓದುಗನ ಮನಸ್ಸನ್ನು ಅರಳಿಸುವ ಕೆಲಸ ಮಾಡಿಸಬೇಕು. ಎಲ್ಲ ಓದುಗರೂ ಪರಸ್ಥಳಗಳಿಗೆ ಭೇಟಿ ನೀಡಲು ಸಾಧ್ಯವಾಗುವುದಿಲ್ಲ. ಲಿಂಗರಾಜು ಅವರು ಕೇವಲ ಪರಸ್ಥಳಗಳನ್ನು ತೋರಿಸುವ ಕ್ಯಾಮರಾ ಆಗದೆ ಜನಜೀವನದ ಅಂತರಂಗವನ್ನು ದರ್ಶಿಸುವ ಕೆಲಸ ಮಾಡಿದ್ದಾರೆ. ಆ ಕಾರಣದಿಂದಲೇ ನಮ್ಮ ದೃಷ್ಟಿ ವಿಶಾಲವಾಗುತ್ತದೆ. ಕೈಲಾಸ ಪರ್ವತ ಪ್ರದೇಶಗಳಲ್ಲಿ ನಿತ್ಯಜೀವನದ ಹೋರಾಟದಲ್ಲಿ ಸಿಲುಕಿ ಅಹನ್ಯಹನಿ ದುಡಿಯುತ್ತಿರುವ ಹಲವು ಜೀವಿಗಳು ನಮ್ಮ ಮನಸ್ಸಿನಲ್ಲಿ ಉಳಿಯುವಂತೆ ಲಿಂಗರಾಜು ಮಾಡಿದ್ದಾರೆ. ಸಾಹಿತ್ಯದ ಗೆಲುವೆಂದರೆ ಇದೆ ಅಲ್ಲವೆ?

– ಡಾ. ಸಿ. ನಾಗಣ್ಣ

'ಮಾತೃದೇವತೆಗಳು–ಮಹಾಶಕ್ತಿ ಪೀಠಗಳು' ಕುರಿತು :

ಈಗಾಗಲೇ ನಮ್ಮ ನೆರೆಹೊರೆಯ ಅನೇಕ ದೇಶಗಳ ಸಂಸ್ಕೃತಿಯನ್ನು ಪತ್ರಿಕೆಗಳಲ್ಲಿ ಪರಿಚಯಿಸಿರುವ ಅವರ ಬರವಣಿಗೆ ದೇಶ ಪರ್ಯಟನೆ ಮಾಡುವವರಿಗೆ ಮಾಹಿತಿಯ ಗಣಿಗಳಾಗಿವೆ. ಚಾರಣಪ್ರಿಯರೂ ದೇಶಸುತ್ತುವ ಹವ್ಯಾಸ ಉಳ್ಳವರು ಆದ ಅವರು ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಸಂಸ್ಕೃತಿಪ್ರಿಯ ಕವಿಯ ಒಳನೋಟಗಳಿಂದ ಬರೆದಿರುವ 'ಮಾಯಲೋಕಕ್ಕೊಂದು ಪಯಣ' ಕನ್ನಡ ಚಾರಣ ಸಾಹಿತ್ಯಕ್ಕೆ ನೀಡಿದ ಗಟ್ಟಿ ಕೊಡುಗೆಯಾಗಿದೆ.

ಪ್ರಸ್ತುತ 'ಮಾತೃದೇವತೆಗಳು–ಮಹಾಶಕ್ತಿ ಪೀಠಗಳು' ಅವರ ವ್ಯಾಪಕ– ಆಳ ಅಧ್ಯಯನಕ್ಕೆ ಸಾಕ್ಷಿಯಾಗಿದೆ. ಮಾತೃ ದೇವತೆಗಳ ಉಗಮ, ವಿಕಾಸವನ್ನು ವಿವರಿಸುತ್ತಾ ಅವು ಮುಂದೆ ಶಕ್ತಿ ಪೀಠಗಳಾಗಿ ಬೆಳೆದ ಬಗೆಯನ್ನು ವಿವರಿಸಿದ್ದಾರೆ. ಭಾರತದ ಎಲ್ಲಾ ರಾಜ್ಯಗಳಲ್ಲಿ ಹರಡಿಹೋಗಿರುವ ಶಕ್ತಿ ಪೀಠಗಳ ವಿವರವಾದ ಮಾಹಿತಿ ನಮ್ಮನ್ನು ವಿಸ್ಮಿತರನ್ನಾಗಿ ಮಾಡುತ್ತದೆ. ಹಾಗೂ ಬಾಂಗ್ಲಾ, ನೇಪಾಳ, ಪಾಕಿಸ್ತಾನ, ಟಿಬೆಟ್, ಶ್ರೀಲಂಕಾ ದೇಶಗಳಲ್ಲಿರುವ ಶಕ್ತಿ ಪೀಠಗಳ ಬಗ್ಗೆಯೂ ಅಪೂರ್ವವಾದ ಮಾಹಿತಿಗಳು ಇಲ್ಲಿವೆ. ಸಂಸ್ಕೃತಿಯ ಅಧ್ಯಯನಕ್ಕೆ ಈ ಕೃತಿ ಅರ್ಥಪೂರ್ಣ ಸೇರ್ಪಡೆಯಾಗಿದೆ.

– ಡಾ. ಮೀರಾಸಾಬಿಹಳ್ಳಿ ಶಿವಣ್ಣ

'ಸಾವು' ಕುರಿತು :

'ಸಾವು – ಒಂದು ಹುಡುಕಾಟ' ತುಂಬಾ ಅಪರೂಪದ ಬರಹ. ಬದುಕಿನ ಅಂತ್ಯದ ನಂತರ ಸಾವು ಎಂಬುದು ಎಲ್ಲರಿಗೂ ಖಚಿತವಾಗಿ ಗೊತ್ತಿದ್ದರೂ, ಸಾವಿನ ನಂತರ ಏನು ಎಂಬುದು ಯಾರಿಗೂ ಗೊತ್ತಿಲ್ಲ. ಅದೊಂದು ಚಿದಂಬರ ರಹಸ್ಯ. ಮನುಷ್ಯ ತನ್ನ ಕಲ್ಪನಾ ಶಕ್ತಿಯಿಂದ ಸಾವಿನ ನಂತರ ಪ್ರಪಂಚದ ಬಗ್ಗೆ ಅನೇಕ ಬಗೆಯ ಊಹೆಗಳನ್ನು ಮಾಡಿದ್ದಾನೆ. ಇದು ಪ್ರಪಂಚಾದ್ಯಂತ ಅನೇಕ ಸಮುದಾಯಗಳಲ್ಲಿ ಅನೇಕ ನಾಗರಿಕತೆಗಳಲ್ಲಿ ತುಂಬಾ ಭಿನ್ನವಾಗಿದ್ದು ಆಚರಣೆಗಳು, ನಂಬಿಕೆಗಳು, ವೈವಿಧ್ಯಮಯವಾಗಿವೆ. ಸಹಜ ಸಾವು, ಆತ್ಮಹತ್ಯೆ, ಆತ್ಮಾರ್ಪಣೆಗಳ ಮೂಲಕ ಸತ್ತವರ ಆತ್ಮ ತೃಪ್ತಗೊಳ್ಳಲು ಅನುಸರಿಸುವ ಕ್ರಮಗಳು ವಿಶಿಷ್ಟವಾಗಿವೆ.

ಸಾವನ್ನು ಕುರಿತ ವೈಜ್ಞಾನಿಕ ವಿವರಣೆಯೊಂದಿಗೆ ಪ್ರಾರಂಭವಾಗುವ ಸಾವನ್ನು ಕುರಿತ ಕಥನವನ್ನು ಧರ್ಮಗ್ರಂಥ, ಪುರಾಣಗಳಲ್ಲಿ ಹೇಗೆ ವಿಶ್ಲೇಷಿಸಲಾಗಿದೆ ಎಂಬುದರ ವಿಸ್ತೃತ ಚರ್ಚೆಯನ್ನು ಮಾಡುವ ಈ ಕೃತಿ ಎಲ್ಲ ಧರ್ಮ ಮತ್ತು ನಾಗರಿಕತೆಗಳಲ್ಲಿನ ಅಂಶಗಳನ್ನು ಮರುಶೋಧಿಸುತ್ತದೆ.

– ಡಾ. ಮೀರಾಸಾಬಿಹಳ್ಳಿ ಶಿವಣ್ಣ

ವಿಶ್ವದರ್ಶನ ಮಾಲೆ

ಸಿವಿಜಿ ಪಬ್ಲಿಕೇಷನ್ಸ್ ಪ್ರಕಟಿಸಿರುವ ವಿಶ್ವದರ್ಶನ ಮಾಲಿಕೆಯ–ಕೃತಿಗಳಾದ ಡಿ.ಎಸ್. ಲಿಂಗರಾಜು ಅವರ **ವಿದೇಶ ವಿಹಾರ, ದೇಶ ಸಂಚಾರ, ರಷ್ಯಾ ಸುತ್ತಮುತ್ತ ಮತ್ತು ಅಪೂರ್ವ ಅರಬ್** ಕೃತಿಗಳು ಬೃಹತ್ ಗ್ರಂಥಗಳ ಸ್ವರೂಪವುಳ್ಳವುಗಳು ಅಲ್ಲ, ಕೈಪಿಡಿಯ ಸ್ವರೂಪದವೂ ಅಲ್ಲ. ಈ ಕೃತಿಗಳ ರಚನೆಗೆ ಒಂದು ಉದ್ದೇಶವಿದೆ. ಪ್ರವಾಸಿಗಳಿಗೆ ಪ್ರವಾಸಿ ತಾಣಗಳನ್ನು ಆಸಕ್ತಿದಾಯಕವಾಗಿ ಪರಿಚಯಿಸುವುದು ಮತ್ತು ಒಂದು ದೇಶದ ಸಮಗ್ರತೆಯನ್ನು ಅದರ ಎಲ್ಲ ಮುಖ್ಯ ವಿವರಗಳೊಂದಿಗೆ ಸರಳವಾಗಿ ಪರಿಚಯಿಸುವುದು. ಆ ದೇಶಗಳ ಸಾಂಸ್ಕೃತಿಕ ಪರಿಸರವನ್ನು ವಿವರಿಸುವ ಕೆಲಸವನ್ನು ಈ ಕೃತಿಗಳು ನಿರ್ವಹಿಸುತ್ತವೆ. ಅವು ವರ್ತಮಾನಕ್ಕೆ ಅಗತ್ಯವಾದ, ಎಲ್ಲರೂ ಓದಬಹುದಾದ ಕೃತಿಗಳಾಗಿವೆ. ಕೃತಿಗಳಲ್ಲಿ ಎರಡು ವಿಧಗಳಿವೆ. 1. ನೋಡಬಹುದಾದ ಕೃತಿಗಳು 2. ಓದಬಹುದಾದ ಕೃತಿಗಳು. ಲಿಂಗರಾಜು ಅವರು ಕೃತಿಗಳು ಓದಬಹುದಾದ ಕೃತಿಗಳಾಗಿಯೂ, ಓದಿಸಿಕೊಳ್ಳುವ ಕೃತಿಗಳಾಗಿಯೂ ಗಮನಸೆಳೆಯುತ್ತವೆ. ಈ ಕೃತಿಗಳಲ್ಲಿ ಪರಿಚಯಿಸಿರುವ ದೇಶಗಳ ಬಗ್ಗೆ ಒಂದು ವಿಶಿಷ್ಟ ಸಾಂಸ್ಕೃತಿಕ ತಿಳುವಳಿಕೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ. ಸಿಂಗಾಪುರ, ಲಾವೋಸ್, ಮಲೇಶಿಯಾ, ವಿಯೆತ್ನಾಂ, ಇಂಡೋನೇಷ್ಯಾ, ರಷ್ಯಾ, ತಜಕಿಸ್ಥಾನ, ಉಜ್ಬೇಕಿಸ್ಥಾನ, ಅರಬ್ (ಕತಾರ್, ಕುವೈತ್, ಯು.ಎ.ಇ., ಸಿರಿಯಾ) ರಾಷ್ಟ್ರಗಳು ನಡೆಸಿದ ಹೋರಾಟಗಳು, ಕಟ್ಟಿಕೊಂಡ ಅಸ್ಮಿತೆಗಳು, ಮಾಡಿದ ಸಾಧನೆಗಳು ಮತ್ತು ಸಫಲತೆಗಳನ್ನು ಈ ಕೃತಿಗಳು ನಿರೂಪಿಸುತ್ತವೆ.

'ದೇಶ–ವಿದೇಶಗಳನ್ನು ತಾವೇ ಕಣ್ಣಾರೆ ಕಾಣದಿದ್ದರೂ ಅಂತರಜಾಲ ಮತ್ತು ಅನೇಕ ಪುಸ್ತಕಗಳ ಮೂಲಕ ದೊರೆಯುವ ಮಾಹಿತಿಯನ್ನು ಯಾವುದು ಉಚಿತ, ಯಾವುದು ಅನುಚಿತ ಎಂದು ತೀರ್ಮಾನಿಸಿ ಅದರ ಮಾಹಿತಿಯನ್ನು ನೀಡುವ ಮಾರ್ಗದರ್ಶಕ ಕೈಪಿಡಿಗಳು ಇಂಗ್ಲಿಷ್‌ನಲ್ಲಿ ಬೇಕಾದಷ್ಟು ಸಿಗುತ್ತವೆ. ಆದರೆ ಕನ್ನಡದಲ್ಲಿ ಈ ಮಾಹಿತಿ ದೊರೆಯುವುದು ದುರ್ಲಭವೆಂದೇ ಹೇಳಬೇಕು. ಆದರೆ ಈ ವಿಷಯದಲ್ಲಿ ಅಪೂರ್ವ ಪ್ರಾವೀಣ್ಯತೆಯನ್ನು ಪಡೆದಿರುವ ಬೆರಳೆಣಿಕೆಯ ಲೇಖಕರಲ್ಲಿ ಡಿ.ಎಸ್. ಲಿಂಗರಾಜು ಅಗ್ರಗಣ್ಯರು' ಎಂಬ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರ 'ಮುನ್ನುಡಿ'ಯ ಮಾತುಗಳು ಅರ್ಥಪೂರ್ಣವಾಗಿವೆ. ಈ ಬಗೆಯ ಬರವಣಿಗೆಗಳು ಹೆಚ್ಚು ಶ್ರಮವನ್ನು ಬೇಡುತ್ತವೆ. ಆ ಎಲ್ಲ ಮಾಹಿತಿಯ ವಿವರಗಳನ್ನು ಒಂದು ಅನುಕ್ರಮದಲ್ಲಿ ಕಟ್ಟಿಕೊಡುವುದು ಕೂಡ ಒಂದು ಸೃಜನಶೀಲ ತಿಳುವಳಿಕೆಯೇ ಆಗಿರುತ್ತದೆ.

ಈ ಕೃತಿಗಳು ಮನುಷ್ಯ ಏನನ್ನು ಸಾಧಿಸಿದ್ದಾನೆ, ಏನನ್ನು ಉಳಿಸಿಹೋಗಿದ್ದಾನೆ, ಅದರಲ್ಲಿ ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು, ಯಾವುದನ್ನು ನೋಡಬೇಕು, ಯಾವುದನ್ನು ಬಿಡಬೇಕು, ಯಾವುದನ್ನು ಉಳಿಸಿಕೊಳ್ಳಬೇಕು; ಒಂದು ದೇಶದ ಅಭಿವೃದ್ಧಿ ದೃಷ್ಟಿಯಿಂದ ಯಾವುದು ಮುಖ್ಯ ಎಂಬ ತಾತ್ವಿಕ ತಿರುಳನ್ನು ಒಳಗೊಂಡಿವೆ. ತಾತ್ವಿಕತೆಯನ್ನೇ ಸರಳವಾಗಿ, ಮಾಹಿತಿಯ ರೂಪದಲ್ಲಿ ಅದರ ಒಟ್ಟು ಸಾಂಸ್ಕೃತಿಕ ಪರಿಸರವನ್ನು ನಿರೂಪಿಸುತ್ತವೆ. ಸೃಜನಶೀಲತೆಯ ಸ್ಪರ್ಶ ಇಲ್ಲಿನ ಬರವಣಿಗೆಗಳಿಗೆ ಇರುವುದರಿಂದ ಈ ಕೃತಿಗಳು ಮಾಹಿತಿ ಕೈಪಿಡಿಯ ಮಿತಿಯಿಂದ ದೂರ ಸರಿದಿವೆ. ಸೃಜನಶೀಲತೆಯ ಎಳೆ ಈ ನಾಲ್ಕು ಪುಸ್ತಕಗಳ ಬರವಣಿಗೆಗೆ ದಕ್ಕಿರುವುದರಿಂದ ಈ ಕೃತಿಗಳ ಬರವಣಿಗೆಯಲ್ಲಿ ಒಂದು ವಿಶಿಷ್ಟ ಏಕಸೂತ್ರತೆ ಸಾಧ್ಯವಾಗಿದೆ. ದೇಶಗಳ ಸ್ವರೂಪ, ಅದರೊಳಗೆ ರಾಜ್ಯಗಳ ಸ್ವರೂಪ, ಅದರೊಳಗೆ ವಿಸ್ತರಿಸಿರುವ ಸಾಂಸ್ಕೃತಿಕ ಅನನ್ಯತೆಗಳನ್ನು, ಅಸ್ಮಿತೆಗಳನ್ನೂ ವಿವರಿಸಲಾಗಿದೆ. ಹೀಗಾಗಿ ಈ ಕೃತಿಗಳಿಗೆ ಜೀವಕಳೆ ಬಂದಿದೆ. ಬರವಣಿಗೆ ಏಕತಾನತೆಯಿಂದಲೂ ಹೊರಬಂದಿದೆ. ವಿಷಯಗಳ ವೈವಿಧ್ಯಮಯ ನಿರೂಪಣೆಯಿಂದಾಗಿ ಬರವಣಿಗೆಗೆ ಓದಿಸಿಕೊಳ್ಳುವ ಗುಣ ದಕ್ಕಿದೆ.

ನಮ್ಮ ನೆರೆಹೊರೆಯವರ ಬಗ್ಗೆ, ನಮ್ಮ ಆತ್ಮೀಯರ ಬಗ್ಗೆ, ಇನ್ನೊಬ್ಬರಿಗೆ ತಿಳಿಸಿ ಹೇಳುವಂತೆ ದೇಶ ವಿದೇಶಗಳನ್ನು ಈ ಕೃತಿಗಳಲ್ಲಿ ಪರಿಚಯ ಮಾಡಿಕೊಡಲಾಗಿದೆ. ಈ ಕೃತಿಗಳಲ್ಲಿ ಅಪ್ಪಟ ಭಾರತೀಯ ಮನಸ್ಸೊಂದು ಸ್ವೀಕರಣಭಾವದ ನೆಲೆಯಲ್ಲಿ ನೋಡುವ ನೋಟಕ್ರಮವಿದೆ. ಹಾಗಾಗಿ ಈ ಪುಸ್ತಕಗಳು ನಮಗೆ ಹತ್ತಿರವಾಗುತ್ತವೆ. ದೇಶವಿದೇಶಗಳ ಬಗ್ಗೆ ಆತ್ಮೀಯ ಭಾವ ಉಂಟಾಗುತ್ತದೆ. ವಿಷಯದ ವಿವರಗಳಲ್ಲಿ ಕ್ಲೀಷೆಯಿಲ್ಲ, ಕ್ಲೀಷೆಯಾಗಬಹುದಾಗಿದ್ದ ವಿವರಗಳನ್ನು ಸರಳವಾಗಿ ನಿರೂಪಿಸಲಾಗಿದೆ. ಈ ನಾಲ್ಕೂ ಪುಸ್ತಕಗಳು ಸದಭಿರುಚಿಯನ್ನು ಹೊಂದಿದ ಕೃತಿಗಳಾಗಿವೆ. ಸಾಂಸ್ಕೃತಿಕ ಕುತೂಹಲಗಳನ್ನು ಉದ್ದಿಪನಗೊಳಿಸುವಲ್ಲಿ ಈ ಕೃತಿಗಳು ಸಫಲವಾಗಿವೆ. ಇಲ್ಲಿನ ಮಾಹಿತಿಗಳು ವಿದೇಶಗಳ ಬಗ್ಗೆ ಒಂದು ಸ್ಪಷ್ಟ ತಿಳುವಳಿಕೆಯನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿವೆ.

– ಪ್ರೊ. ಡಿ. ಅಂಜನಪ್ಪ ಚಳ್ಳಕೆರೆ